ಶನಿವಾರ, ಏಪ್ರಿಲ್ 1, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 90 | ಪುಟ 16 + 4
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಪಿಸಿಒಡಿ/ ಪಿಸಿಒಎಸ್ ಸಮಸ್ಯೆಗಳಿಗೆ ಕ್ರಮಬದ್ಧ ಆಹಾರ ಸೇವನೆಯಲ್ಲಿದೆ ಪರಿಹಾರ..!

ಪ್ರಜಾ ಮತ ಜನತಂತ್ರದ ಹಬ್ಬ
'ಡಬಲ್ ಎಂಜಿನ್ ಸರ್ಕಾರ ರಾಜ್ಯಕ್ಕೆ ಟ್ರಬಲ್ ಎಂಜಿನ್ ಆಗಿದೆ'

ಇಂದೋರ್ ದುರಂತ: ಸಾವಿನ ಸಂಖ್ಯೆ 36ಕ್ಕೆ 13

15 ದಿನದಲ್ಲೇ ಟೋಲ್ ದರ ಹೆಚ್ಚಳ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,991 ▲	17,359 ▲	₹61,600 (ಬೆಂಗಳೂರು)	₹73,500 (ಬೆಂಗಳೂರು)	82.17 ▲

ಅಭ್ಯರ್ಥಿ ಆಯ್ಕೆಗೆ ಮತದಾನ • 18,000 ಮಂದಿ ಭಾಗಿ

ಬಿಜೆಪಿ ಶಾಸಕರ ಬಲ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವುದೇ ಚುನಾವಣೆ ಸಂದರ್ಭದಲ್ಲಿ ರಾಜಕೀಯ ಪಕ್ಷದ ಕಚೇರಿಯಲ್ಲೊ, ರೆಸಾರ್ಟ್ ಅಥವಾ ಹೊಟೇಲ್‌ನಲ್ಲಿ ಕುಳಿತು ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸುವುದು ವಾಡಿಕೆ. ಆದರೆ, ಬಿಜೆಪಿ ದೇಶದಲ್ಲಿ ಇದೇ ಮೊದಲ ಬಾರಿಗೆ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಲು ಕಾರ್ಯಕರ್ತರು ಮತ್ತು ಪದಾಧಿಕಾರಿಗಳ ಮೂಲಕ ಚುನಾವಣೆ ಮಾದರಿಯಲ್ಲಿ ಅಭಿಪ್ರಾಯ ಸಂಗ್ರಹಿಸಿದೆ.

ರಾಜ್ಯದ 39 ಸಂಘಟನಾತ್ಮಕ ಜಿಲ್ಲೆಗಳ 224 ವಿಧಾನಸಭಾ ಕ್ಷೇತ್ರಗಳಿಗೆ ಟಿಕೆಟ್ ಆಕಾಂಕ್ಷಿಗಳ ಬಗ್ಗೆ 18,000 ಜನರಿಂದ ಶುಕ್ರವಾರ ಮತ ಚಲಾವಣೆ ಮೂಲಕ ಅಭಿಪ್ರಾಯ ಸಂಗ್ರಹಿಸಲಾಯಿತು.

'ಅಭ್ಯರ್ಥಿಗಳ ಆಯ್ಕೆಯಲ್ಲೂ ಕಾರ್ಯಕರ್ತರ ಪಾಲ್ಗೊಳ್ಳುವಿಕೆ ಮತ್ತು ಪ್ರಜಾಸತ್ತಾತ್ಮಕ ವಿಧಾನ ಖಾತರಿ ಪಡಿಸುವ ಹೊಸ ವಿಧಾನ ಇದಾಗಿದೆ. ಅಭ್ಯರ್ಥಿಗಳ ಆಯ್ಕೆಗೆ ಇದೊಂದು ಪಾರದರ್ಶಕ ಪ್ರಕ್ರಿಯೆ. ಪ್ರಾಯೋಗಿಕವಾಗಿ ಕರ್ನಾಟಕದಲ್ಲಿ ಈ ವಿಧಾನ ಅನುಸರಿಸಲಾಗಿದೆ. ಮುಂದೆ ಇತರ ರಾಜ್ಯಗಳಿಗೂ ಅನ್ವಯಿಸುತ್ತೇವೆ' ಎಂದು ಬಿಜೆಪಿಯ ನಾಯಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

> ಅಭಿಪ್ರಾಯ ಸಂಗ್ರಹದ ಮಾನದಂಡವನ್ನು ಆಧಾರವಾಗಿಟ್ಟು ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಇದಕ್ಕಾಗಿ ಜಿಲ್ಲೆಗಳಿಗೆ ತಂಡಗಳನ್ನು ಕಳುಹಿಸಲಾಗಿತ್ತು
> **ನಳಿನ್ ಕುಮಾರ್ ಕಟೀಲ್**
> ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ಚುನಾವಣಾ ವಿಧಾನ ಹೇಗಿತ್ತು?: ಪ್ರತಿ ಜಿಲ್ಲೆಗೂ ರಾಜ್ಯ ಮಟ್ಟದ ಮೂವರು ನಾಯಕರನ್ನು ಒಳಗೊಂಡ ತಂಡವನ್ನು ರಚಿಸಲಾಗಿತ್ತು. ಈ ತಂಡವು ಅಭಿಪ್ರಾಯ ಸಂಗ್ರಹದ (ಚುನಾವಣೆ) ಉಸ್ತುವಾರಿ ವಹಿಸಿತ್ತು. ಟಿಕೆಟ್ ಆಕಾಂಕ್ಷಿಗಳ ಪಟ್ಟಿ ಇದ್ದರೂ, ಮತ ಪತ್ರದಲ್ಲಿ ಯಾರ ಹೆಸರೂ ನಮೂದಿಸಿರಲಿಲ್ಲ. ಖಾಲಿ ಇತ್ತು. ಕಾರ್ಯಕರ್ತರು, ಪದಾಧಿಕಾರಿಗಳಿಗೇ ತಮ್ಮ ಇಚ್ಛೆಯ ಹೆಸರುಗಳನ್ನು ನಮೂದಿಸಲು ಅವಕಾಶ ನೀಡಲಾಗಿತ್ತು. ಮೊದಲ ಆದ್ಯತೆ, ಎರಡನೇ ಆದ್ಯತೆ, ಮೂರನೇ ಆದ್ಯತೆಯಾಗಿ ಮೂರು ಹೆಸರುಗಳನ್ನು ಸೂಚಿಸಬಹುದಾಗಿತ್ತು ಎಂದು ಅವರು ಹೇಳಿದರು.

8ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 8

ಕಾಂಗ್ರೆಸ್‌ಗೆ 39 ಕ್ಷೇತ್ರ ಕಗ್ಗಂಟು

ಬೆಂಗಳೂರು: ಎರಡನೇ ಹಂತದಲ್ಲಿ 60 ಕ್ಷೇತ್ರಗಳಿಗೆ ಒಂದೇ ಹೆಸರನ್ನು ಅಂತಿಮಗೊಳಿಸಲು ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಗಾಗಿ ನೇಮಿಸಿರುವ 'ಸ್ಕ್ರೀನಿಂಗ್ ಸಮಿತಿ' ಯಶಸ್ವಿಯಾಗಿದೆ. 39 ಕ್ಷೇತ್ರಗಳಲ್ಲಿನ ಪೈಪೋಟಿಯಿಂದಾಗಿ ಅಭ್ಯರ್ಥಿಗಳ ಆಯ್ಕೆ ಕಗ್ಗಂಟಾಗಿ ಪರಿಣಮಿಸಿದೆ.

ಮೊದಲ ಹಂತದಲ್ಲಿ 124 ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಕಾಂಗ್ರೆಸ್ ಪ್ರಕಟಿಸಿತ್ತು. ಬಾಕಿ ಉಳಿದಿರುವ 100 ಕ್ಷೇತ್ರಗಳ ಪೈಕಿ ಪಾಂಡವಪುರ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಯನ್ನು ಕಣಕ್ಕಿಳಿಸದೇ ರೈತ ಸಂಘದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಅವರನ್ನು ಬೆಂಬಲಿಸಲು ನಿರ್ಧರಿಸಲಾಗಿದೆ.

99 ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಗಾಗಿ ಸ್ಕ್ರೀನಿಂಗ್ ಕಮಿಟಿ ಅಧ್ಯಕ್ಷರಾದ ಮೋಹನ್ ಪ್ರಕಾಶ್ ನೇತೃತ್ವದ ಸಮಿತಿ ಎರಡು ಬಾರಿ ಸಭೆ ನಡೆಸಿದೆ. ಸೋಮವಾರ ನಡೆದ ಸಭೆಯಲ್ಲಿ 37 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರುಗಳನ್ನು ಅಂತಿಮಗೊಳಿಸಲಾಗಿತ್ತು. ಗುರುವಾರ ಮಧ್ಯಾಹ್ನ 3 ಗಂಟೆಗೆ ಆರಂಭವಾದ ಸಭೆ ಬೆಳಗಿನ ಜಾವ 4 ಗಂಟೆಯವರೆಗೂ ನಡೆದಿದೆ.

ಒಟ್ಟು 60 ಕ್ಷೇತ್ರಗಳಿಗೆ ತಲಾ ಒಬ್ಬ ಆಕಾಂಕ್ಷಿಯ ಹೆಸರನ್ನು ಮಾತ್ರ ಶಿಫಾರಸು ಮಾಡಲು ಸಭೆಯಲ್ಲಿ ಸಹಮತ ಮೂಡಿದೆ. ಉಳಿದಂತೆ 30ಕ್ಕೂ ಹೆಚ್ಚು ಕ್ಷೇತ್ರಗಳಿಗೆ ತಲಾ ಇಬ್ಬರ ಹೆಸರು ಶಿಫಾರಸು ಮಾಡಲಾಗಿದೆ. ಐದರಿಂದ ಏಳು ಕ್ಷೇತ್ರಗಳಿಗೆ ನಾಲ್ಕರಿಂದ ಐದು ಮಂದಿಯ ಹೆಸರುಗಳನ್ನು ಶಿಫಾರಸು ಮಾಡುವ ತೀರ್ಮಾನವನ್ನು ಸಮಿತಿ ಕೈಗೊಂಡಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಸಹಮತ ಮೂಡಿಸಲು ಯತ್ನ: ಒಂದಕ್ಕಿಂತ ಹೆಚ್ಚು ಆಕಾಂಕ್ಷಿಗಳು ಟಿಕೆಟ್‌ಗೆ ಪೈಪೋಟಿ ನಡೆಸುತ್ತಿರುವ ಕ್ಷೇತ್ರಗಳಲ್ಲೂ ಸಹಮತ ಮೂಡಿಸುವ ಪ್ರಯತ್ನ ಕಾಂಗ್ರೆಸ್ ನಾಯಕರಿಂದ ನಡೆಯುತ್ತಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಟಿಕೆಟ್ ಆಕಾಂಕ್ಷಿಗಳ ಜತೆ ಸಮಾಲೋಚನೆ ನಡೆಸಿ, ಮನವೊಲಿಕೆ ಪ್ರಯತ್ನ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

8ನೇ ಪುಟ ನೋಡಿ

ಐಪಿಎಲ್ ರಂಗು

ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ 16ನೇ ಆವೃತ್ತಿಯ ಉದ್ಘಾಟನೆ ಸಮಾರಂಭದಲ್ಲಿ ಚಿತ್ರನಟಿ ರಶ್ಮಿಕಾ ಮಂದಣ್ಣ ಹಾಗೂ ಸಹಕಲಾವಿದರು ನರ್ತಿಸಿದರು

–ಎಎಫ್‌ಪಿ ಚಿತ್ರ

ಸುದ್ದಿ 14

ಸಣ್ಣ ಉಳಿತಾಯ: ಬಡ್ಡಿ ಹೆಚ್ಚಳ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಏಪ್ರಿಲ್–ಜೂನ್ ತ್ರೈಮಾಸಿಕಕ್ಕೆ ಅನ್ವಯವಾಗುವಂತೆ, ಅಂಚೆ ಕಚೇರಿ ಉಳಿತಾಯ ಯೋಜನೆಗಳ ಬಡ್ಡಿ ದರವನ್ನು ಶೇಕಡ 0.70ವರೆಗೆ ಹೆಚ್ಚಿಸಿದೆ. ಹಿಂದಿನ ತ್ರೈಮಾಸಿಕದಲ್ಲಿಯೂ ಕೆಲವು ಸಣ್ಣ ಉಳಿತಾಯ ಯೋಜನೆಗಳ ಬಡ್ಡಿ ದರ ಹೆಚ್ಚಿಸಲಾಗಿತ್ತು.

12

ಚಿನಕುರಳಿ

ಪ್ರಕಾಶ್ ಶೆಟ್ಟಿ

ಶಿಕಾರಿಪುರದಿಂದಲೇ ವಿಜಯೇಂದ್ರ ಸ್ಪರ್ಧೆ: ಯಡಿಯೂರಪ್ಪ

ಬೆಂಗಳೂರು: 'ನನ್ನ ಪುತ್ರ ವಿಜಯೇಂದ್ರ ಅವರು ಮೈಸೂರಿನ ವರುಣಾ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ. ಶಿಕಾರಿಪುರದಿಂದಲೇ ಸ್ಪರ್ಧಿಸುತ್ತಾರೆ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

8

ಶಾಸಕ ಸ್ಥಾನಕ್ಕೆ ಎ.ಟಿ.ರಾಮಸ್ವಾಮಿ, ಎನ್‌. ವೈ.ಗೋಪಾಲಕೃಷ್ಣ ರಾಜೀನಾಮೆ

ಬೆಂಗಳೂರು/ಶಿರಸಿ: ಜೆಡಿಎಸ್‌ನ ಅರಕಲಗೂಡು ಶಾಸಕ ಎ.ಟಿ.ರಾಮಸ್ವಾಮಿ ಮತ್ತು ಬಿಜೆಪಿಯ ಕೂಡ್ಲಿಗಿ ಶಾಸಕ ಎನ್.ವೈ.ಗೋಪಾಲಕೃಷ್ಣ ಅವರು ಶುಕ್ರವಾರ ತಮ್ಮ ಶಾಸಕ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ.

ಗೋಪಾಲಕೃಷ್ಣ ಅವರು ಶಿರಸಿಯಲ್ಲಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆಯವರನ್ನು ಭೇಟಿ ಮಾಡಿ ರಾಜೀನಾಮೆ ಪತ್ರ ಸಲ್ಲಿಸಿದರೆ, ರಾಮಸ್ವಾಮಿ ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಅವರಿಗೆ ರಾಜೀನಾಮೆ ಪತ್ರ ನೀಡಿದರು. ಗೋಪಾಲಕೃಷ್ಣ ಅವರು ಕಾಂಗ್ರೆಸ್ ಪಕ್ಷ ಸೇರುವುದು ಖಚಿತವಾಗಿದೆ.

ರಾಮಸ್ವಾಮಿ



ಗೋಪಾಲಕೃಷ್ಣ

8ನೇ ಪುಟ ನೋಡಿ

ಬೆಂಗಳೂರಿನಲ್ಲಿ ಕೃತ್ಯ: ನಾಲ್ವರ ಬಂಧನ

ಚಲಿಸುತ್ತಿದ್ದ ಕಾರಿನಲ್ಲಿ ಸಾಮೂಹಿಕ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನೇಹಿತನ ಜೊತೆ ಉದ್ಯಾನದಲ್ಲಿ ಕುಳಿತಿದ್ದ ಯುವತಿಯನ್ನು ಅಪಹರಿಸಿ ಚಲಿಸುತ್ತಿದ್ದ ಕಾರಿನಲ್ಲಿ ಸಾಮೂಹಿಕ ಅತ್ಯಾಚಾರ ನಡೆಸಿದ ಸಂಬಂಧ ನಾಲ್ವರು ಆರೋಪಿಗಳನ್ನು ಕೋರಮಂಗಲ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬಂಧಿತರನ್ನು ಸತೀಶ್, ವಿಜಯ್, ಶ್ರೀಧರ್ ಹಾಗೂ ಕಿರಣ್ ಎಂದು ಗುರುತಿಸಲಾಗಿದೆ. ಇವರಲ್ಲಿ ಇಬ್ಬರು ಕಚೇರಿಯೊಂದರಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾರೆ. ಒಬ್ಬ ಕಾಲ್ ಸೆಂಟರ್ ಉದ್ಯೋಗಿ. ಮತ್ತೊಬ್ಬ ಎಲೆಕ್ಟ್ರಿಷಿಯನ್ ಆಗಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಗಸ್ತು ತಿರುಗದ ಪೊಲೀಸರು: ಆರೋಪ

'ಕೋರಮಂಗಲ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪೊಲೀಸರು ಹೆಚ್ಚು ಗಸ್ತು ತಿರುಗುತ್ತಿಲ್ಲ. ಇದರಿಂದಾಗಿ ಮೇಲಿಂದ ಮೇಲೆ ಅಪರಾಧಗಳು ಸಂಭವಿಸುತ್ತಿವೆ' ಎಂದು ಸ್ಥಳೀಯರು ದೂರಿದರು.

'ಉದ್ಯಾನ, ಸಾರ್ವಜನಿಕ ಸ್ಥಳ ಹಾಗೂ ಇತರೆಡೆ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ. ಈ ಬಗ್ಗೆ ಪೊಲೀಸರಿಗೂ ದೂರು ನೀಡಲಾಗುತ್ತಿದೆ. ದೂರು ನೀಡಿದ ದಿನವಷ್ಟೇ ಪೊಲೀಸರು ಗಸ್ತು ತಿರುಗುತ್ತಾರೆ. ನಂತರ, ಮೌನವಾಗುತ್ತಾರೆ. ಪೊಲೀಸರ ಈ ವರ್ತನೆಯು ಅಪರಾಧಿಗಳಿಗೆ ಅನುಕೂಲ ಮಾಡಿಕೊಟ್ಟಿದೆ. ಸ್ಥಳೀಯರು ಭಯದಲ್ಲಿ ವಾಸಿಸುತ್ತಿದ್ದಾರೆ' ಎಂದು ಆರೋಪಿಸಿದರು.

13ನೇ ಪುಟ ನೋಡಿ

ಶುದ್ಧವಾದ ನೈಸರ್ಗಿಕವನ್ನು ಅನುಭವಿಸಿ

ORGANIC HARVEST™

ಮೊಟ್ಟ ಮೊದಲ ಬಾರಿಗೆ#

100% ಅಮೆರಿಕನ್ ಸರ್ಟಿಫೈಡ್ ಆರ್ಗ್ಯಾನಿಕ್*

ಬ್ರೈಟನಿಂಗ್ ಫೇಸ್ ಕ್ರೀಮ್

ನಿಮ್ಮ ನೈಸರ್ಗಿಕ ಕ್ರೀಮ್ ಎಷ್ಟು ನೈಸರ್ಗಿಕವಾಗಿದೆ?

ನಿಮಗಿದು ಗೊತ್ತೇ? ನೀವು ಯಾವುದು ನೈಸರ್ಗಿಕವಾಗಿದೆ ಎಂದು ತಿಳಿದಿರುವಿರೋ, ಅದು ವಾಸ್ತವದಲ್ಲಿ ನೈಸರ್ಗಿಕವಾಗಿಲ್ಲದಿರಬಹುದು?

"ನೈಸರ್ಗಿಕ ಉತ್ಪನ್ನಗಳಿಗೆ" ಯಾವುದೇ ಪ್ರಮಾಣಿತ ಮಾರ್ಗಸೂಚಿಗಳು ಅಥವಾ ಆದೇಶಗಳು ಇಲ್ಲದಿದ್ದಾಗ, ಅವುಗಳಲ್ಲಿ ವಾಸ್ತವವಾಗಿ ನೈಸರ್ಗಿಕ ವಸ್ತುಗಳ ಸಣ್ಣ ಪ್ರಮಾಣವಿರಬಹುದು, ಆದರೆ ಉಳಿದ ಫಾರ್ಮುಲಾದಲ್ಲಿ ನೀವು ಚಿಂತಿಸುವ ಕೆಮಿಕಲ್ಸ್ ಇರಬಹುದು.

ಆರ್ಗ್ಯಾನಿಕ್ ಹಾರ್ವೆಸ್ಟ್ ನಲ್ಲಿ, ನಮ್ಮ ಉತ್ಪನ್ನಗಳನ್ನು ನಿಖರತೆಯೊಂದಿಗೆ ಪರಿಪೂರ್ಣವಾಗಿ ವಿನ್ಯಾಸಗೊಳಿಸಲಾಗಿದೆ.

ಎಲ್ಲಾ ಇತರ ಉತ್ಪನ್ನಗಳು ಜಾಗತಿಕವಾಗಿ ವಿಶ್ವಾಸಾರ್ಹವಾಗಿರುವ, ಸ್ವತಂತ್ರ ಮಾನದಂಡವಾಗಿರುವ **USDA** ಯಿಂದ **100%** ಸಾವಯವ ಎಂದು ಪ್ರಮಾಣೀಕೃತವಾಗಿವೆ, ಅಂದರೆ ನಮ್ಮ ಪದಾರ್ಥಗಳು ನೈಸರ್ಗಿಕ ಅಥವಾ ಸಾವಯವ ಮೂಲಗಳಿಂದ ಬಂದಿರುವಂತಹವು ಎಂದರ್ಥ.

*USDA ಯಿಂದ ಪ್ರಮಾಣಿಕೃತಾಗಿದೆ. #ಆರ್ಗ್ಯಾನಿಕ್ ಹಾರ್ವೆಸ್ಟ್ ನಿಂದ ^ನಿಯಮ ಮತ್ತು ಷರತ್ತು ಅನ್ವಯ

ನಿಮ್ಮ ಉಚಿತ ಟ್ರಯಲ್ ಕಿಟ್^ ಅನ್ನು ಕ್ಲೇಮ್ ಮಾಡಲು ನಿಮ್ಮ ಆ್ಯಪ್ ಅಥವಾ ವೆಬ್‌ಸೈಟ್‌ನಲ್ಲಿ OHFCFREE ಕೋಡ್ ಅನ್ನು ಬಳಸಿ

ಡೌನ್‌ಲೋಡ್ ಮಾಡಿ
Organic Harvest App

ಇಲ್ಲಿ ಸಹ ಲಭ್ಯವಿದೆ
amazon | NYKAA.COM | Flipkart | Myntra | ನಿಮ್ಮ ಹತ್ತಿರದ ಎಲ್ಲಾ ಪ್ರಮುಖ ಅಂಗಡಿಗಳಲ್ಲಿ ಸಹ ಲಭ್ಯವಿದೆ

ಜಮೀರ್ ಪ್ರಕರಣ: ಆದೇಶ ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: 'ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ದಾಖಲಿಸಿರುವ ಎಫ್‌ಐಆರ್‌ಗೆ ತಡೆ ನೀಡಬೇಕು' ಎಂದು ಕೋರಿ ಶಾಸಕ ಬಿ.ಝಡ್ ಜಮೀರ್ ಅಹ್ಮದ್ ಖಾನ್ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದ ಆದೇಶವನ್ನು ಹೈಕೋರ್ಟ್ ಕಾಯ್ದಿರಿಸಿದೆ.

ಈ ಕುರಿತು ಜಮೀರ್ ಅಹ್ಮದ್ ಸಲ್ಲಿಸಿರುವ ಮಧ್ಯಂತರ ಅರ್ಜಿಯ ವಾದ-ಪ್ರತಿವಾದ ಆಲಿಸಿದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಆದೇಶ ಕಾಯ್ದಿರಿಸಿರುವುದಾಗಿ ಶುಕ್ರವಾರ ಪ್ರಕಟಿಸಿತು.

ವಿಚಾರಣೆ ವೇಳೆ ಜಮೀರ್ ಪರ ವಕೀಲ ಇಸ್ಮಾಯಿಲ್ ಜಬೀವುಲ್ಲಾ ಅವರು, 'ಅಕ್ರಮ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸುವ ಮುನ್ನ ತನಿಖಾ ಸಂಸ್ಥೆ ಪ್ರಾಥಮಿಕ ವಿಚಾರಣೆ ನಡೆಸುವುದು ಕಡ್ಡಾಯ. ಆದರೆ, ಈ ಪ್ರಕರಣದಲ್ಲಿ ಅರ್ಜಿದಾರರ ವಿರುದ್ಧ ಎಸಿಬಿ ನೇರವಾಗಿ ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಂಡಿದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

'ಅರ್ಜಿದಾರರು ಆದಾಯ ಮೀರಿ ಅಕ್ರಮವಾಗಿ ಆಸ್ತಿ ಸಂಪಾದನೆ ಮಾಡಿದ್ದಾರೆ ಎಂದು ಆರೋಪಿಸಿ ಜಾರಿ ನಿರ್ದೇಶನಾಲಯ (ಇಡಿ) ವರದಿ ಸಲ್ಲಿಸಿತ್ತು. ಆ ವರದಿ ಆಧರಿಸಿ ಎಸಿಬಿ ಎಫ್‌ಐಆರ್ ದಾಖಲಿಸಿದೆ. ಇದು ಕಾನೂನು ಬಾಹಿರ ಕ್ರಮ. ಆದ್ದರಿಂದ, ಎಸಿಬಿ ದಾಖಲಿಸಿರುವ ಎಫ್‌ಐಆರ್‌ಗೆ ತಡೆ ನೀಡಬೇಕು' ಎಂದು ಕೋರಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಲೋಕಾಯುಕ್ತ ಪರ ವಕೀಲ ಬಿ.ಬಿ. ಪಾಟೀಲ ಅವರು, 'ಅಕ್ರಮವಾಗಿ ಆಸ್ತಿ ಗಳಿಸಿದ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸುವ ಮುನ್ನ ಪ್ರಾಥಮಿಕ ವಿಚಾರಣೆ ನಡೆಸುವ ಅಗತ್ಯವೇನೂ ಇಲ್ಲ. ಹಾಗಾಗಿ, ಎಸಿಬಿಯು ಅರ್ಜಿದಾರರ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಕ್ರಮ ಕಾನೂನುಬದ್ಧವಾಗಿದೆ. ಆದ್ದರಿಂದ, ತಡೆ ನೀಡಬಾರದು' ಎಂದು ಕೋರಿದರು.

ಪ್ರಕರಣವೇನು?: ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಜಮೀರ್ ಅಹ್ಮದ್ ಮನೆಯ ಮೇಲೆ ದಾಳಿ ನಡೆಸಿದ್ದ ಎಸಿಬಿ, 2022ರ ಮೇನಲ್ಲಿ ಎಫ್‌ಐಆರ್ ದಾಖಲಿಸಿತ್ತು. 'ಜಮೀರ್, ಆದಾಯ ಮೀರಿ ₹ 87 ಕೋಟಿ ಹೆಚ್ಚುವರಿ ಆಸ್ತಿ ಗಳಿಸಿರುವ ಅಂಶ ದಾಳಿ ವೇಳೆ ಪತ್ತೆಯಾಗಿದೆ' ಎಂದು ಆರೋಪಿಸಿತ್ತು.

ಈ ಕುರಿತಂತೆ ಜಮೀರ್ ಹೈಕೋರ್ಟ್ ಮೆಟ್ಟಿಲೇರಿದ್ದು, ಎಫ್‌ಐಆರ್ ರದ್ದುಪಡಿಸುವಂತೆ ಕೋರಿದ್ದಾರೆ. ಎಸಿಬಿ ರಚನೆಯನ್ನು ಹೈಕೋರ್ಟ್ ರದ್ದುಪಡಿಸಿರುವ ಹಿನ್ನೆಲೆಯಲ್ಲಿ ಎಸಿಬಿ ದಾಖಲಿಸಿದ ಪ್ರಕರಣಗಳನ್ನು ಈಗ ಲೋಕಾಯುಕ್ತ ಸಂಸ್ಥೆ ಮುಂದುವರಿಸುತ್ತಿದೆ.

ವಿದ್ಯಾರ್ಥಿಗಳ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್‌ಗೆ ಆರು ವಿದ್ಯಾರ್ಥಿಗಳನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

ವಿವಿಧ ಸಮಸ್ಯೆಗಳು, ಬೇಡಿಕೆಗಳ ಬಗ್ಗೆ ವಿದ್ಯಾವಿಷಯಕ ಪರಿಷತ್‌ನಲ್ಲಿ ಗಮನ ಸೆಳೆಯಲು ವಿದ್ಯಾರ್ಥಿಗಳ ಪ್ರತಿನಿಧಿಗಳು ಕೂಡ ಇರಬೇಕೆಂಬ ಸರ್ಕಾರದ ಆದೇಶದ ಅನುಸಾರ ವಿಶ್ವವಿದ್ಯಾಲಯವು ಈ ನೇಮಕಾತಿ ಮಾಡಿದೆ.

ವಿವಿಧ ವಿಭಾಗಗಳಿಂದ ತಲಾ ಒಬ್ಬ ವಿದ್ಯಾರ್ಥಿಯನ್ನು ನಾಮನಿರ್ದೇಶನ ಮಾಡಲಾಗಿದೆ. ಪದವಿ ವಿಭಾಗದಿಂದ ರಾಮನಗರ ಪ್ರಥಮ ದರ್ಜೆ ಕಾಲೇಜಿನ ಬಿಎ ದ್ವಿತೀಯ ಸೆಮಿಸ್ಟರ್ ವಿದ್ಯಾರ್ಥಿ ಬಿ.ಎಂ. ಅಂಕೇಶ್, ಸ್ನಾತಕೋತ್ತರ ವಿಭಾಗದಿಂದ ಜ್ಞಾನಭಾರತಿ ಕ್ಯಾಂಪಸ್‌ನ ವಿಶ್ವವಿದ್ಯಾಲಯ ಕಾನೂನು ಕಾಲೇಜಿನ ಎಲ್‌ಎಲ್‌ಎಂ ಎರಡನೇ ವರ್ಷದ ವಿದ್ಯಾರ್ಥಿ ಆರ್. ನರೇಂದ್ರ ಪ್ರಕಾಶ್, ಸಂಶೋಧನಾ ವಿಭಾಗದಿಂದ ಪಿಎಚ್‌.ಡಿ. ವಿದ್ಯಾರ್ಥಿ ಎನ್. ವಿನ್ಸಿ, ಎನ್‌ಸಿಸಿ ವಿಭಾಗದಿಂದ ಎಂಬಿಎ ಎರಡನೇ ವರ್ಷದ ಮೊಹಮದ್ ಆಸಿಫ್, ಎನ್‌ಎಸ್‌ಎಸ್ ವಿಭಾಗದಿಂದ ಎಂ.ಎಸ್ಸಿ. ಮೂರನೇ ಸೆಮಿಸ್ಟರ್‌ನ ಎನ್. ವೀಕ್ಷಿತ್ ಮತ್ತು ಕ್ರೀಡಾ ವಿಭಾಗದಿಂದ ಎಂಬಿಎ ಮೂರನೇ ಸೆಮಿಸ್ಟರ್‌ನ ಡಿ.ದರ್ಶನ್ ಅವರನ್ನು ಮುಂದಿನ ಎರಡು ವರ್ಷಗಳ ಅವಧಿಗೆ ಅನ್ವಯಿಸುವಂತೆ ಸದಸ್ಯರನ್ನಾಗಿ ನೇಮಿಸಲಾಗಿದೆ.

ಶ್ರೀರಾಮನವಮಿ ಅಂಗವಾಗಿ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಶ್ರೀರಾಮ ವೇಣುಗೋಪಾಲ ಸ್ವಾಮಿ ಬ್ರಹ್ಮರಥೋತ್ಸವ ಶುಕ್ರವಾರ ಸಂಭ್ರಮದಿಂದ ನೆರವೇರಿತು –ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ಸಂಚಾರ ಬಂದ್: ಚಾಲಕರ ಪರದಾಟ

ವೇಣುಗೋಪಾಲಸ್ವಾಮಿ ರಥೋತ್ಸವ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ಗಾಳಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶ್ರೀರಾಮನವಮಿ ಅಂಗವಾಗಿ ಶುಕ್ರವಾರ ಶ್ರೀರಾಮ ವೇಣುಗೋಪಾಲಸ್ವಾಮಿ ಬ್ರಹ್ಮರಥೋತ್ಸವವು ಸಂಭ್ರಮದಿಂದ ನೆರವೇರಿತು.

ರಥೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಕಣ್ತುಂಬಿಕೊಂಡರು. ಕಲಾ ತಂಡಗಳು ಜಾತ್ರೆಯ ಮೆರುಗು ಹೆಚ್ಚಿಸಿದ್ದವು. ಬ್ಯಾಟರಾಯನಪುರದ ಸುತ್ತಮುತ್ತಲ ಬಡಾವಣೆಯ ಭಕ್ತರು ಜಾತ್ರೆಯಲ್ಲಿ ಪಾಲ್ಗೊಂಡಿದ್ದರು. ಗುರುವಾರವೂ ವಿವಿಧ ಧಾರ್ಮಿಕ ಕಾರ್ಯಗಳು ನಡೆದಿದ್ದವು. ಜಾತ್ರೆ ಅಂಗವಾಗಿ ಪಾನಕ, ಮಜ್ಜಿಗೆ ವಿತರಣೆ ಮಾಡಲಾಯಿತು.

ರಥೋತ್ಸವದ ಹಿನ್ನೆಲೆಯಲ್ಲಿ ಮೈಸೂರು ರಸ್ತೆಯಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿತ್ತು. ವಾಹನ ಸವಾರರು ನಗರದ ಒಳಕ್ಕೆ ಬರಲು ಪರದಾಡಿದರು.

ಶುಕ್ರವಾರ ಬೆಳಿಗ್ಗೆ 8ರಿಂದಲೇ ಮೈಸೂರು ರಸ್ತೆಯ ಮೂಲಕ ನಗರದ ಒಳ ಹಾಗೂ ಹೊರಹೋಗುವ ವಾಹನಗಳಿಗೆ ಪರ್ಯಾಯ ಮಾರ್ಗ ಕಲ್ಪಿಸಲಾಗಿತ್ತು. ಈ ಮಾರ್ಗಗಳು ಕಿರಿದಾಗಿದ್ದರಿಂದ ವಾಹನಗಳು ಮುಂದೆ ಸಾಗಲು ಸಾಧ್ಯವಾಗದೇ ಚಾಲಕರು ಪರದಾಡಿದರು. ಕೆಲವು ನಿಮಿಷಗಳ ಕಾಲ ವಾಹನಗಳು ನಿಂತಲ್ಲೇ ನಿಂತಿದ್ದವು. ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳೂ ಸಂಚಾರ ದಟ್ಟಣೆಯಲ್ಲಿ ಸಿಲುಕಿದ್ದವು.

ದೀಪಾಂಜಲಿನಗರ, ಕೆಂಗೇರಿ, ನಾಯಂಡಹಳ್ಳಿ, ಬಾಪೂಜಿ ನಗರ ಸೇರಿದಂತೆ ಸುತ್ತಮುತ್ತಲ ಪ್ರದೇಶದ ಜನರು ಮೆಜೆಸ್ಟಿಕ್ ಬಳಿಗೆ ಬರಲು ಪರ್ಯಾಯ ಮಾರ್ಗ ಬಳಸಿದರು. ಶಾರದ ಪೀಠದ ಶೃಂಗೇರಿ ಶಂಕರಮಠ ಶಾರದಾ ರಥೋತ್ಸವವು ಶುಕ್ರವಾರ ಸಂಭ್ರಮದಿಂದ ನೆರವೇರಿತು. ಸುತ್ತಮುತ್ತಲ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

ಬೆಂಗಳೂರಿನ ಶಾರದಾಪೀಠ, ಶೃಂಗೇರಿ ಶಂಕರಮಠ ಶಾರದಾ ರಥೋತ್ಸವ ಇಂದು ನೆರವೇರಿತು. – ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ನೀರಿಗಾಗಿ ನಡಿಗೆ ಇಂದು

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಿಶ್ವಜಲ ದಿನ ಹಾಗೂ ಪ್ರಜಾವಾಣಿ@75 ಅಂಗವಾಗಿ 'ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್' ವತಿಯಿಂದ ಏ.1ರ ಶನಿವಾರ ಬೆಳಿಗ್ಗೆ 6.30ಕ್ಕೆ 'ನೀರಿಗಾಗಿ ನಡಿಗೆ' ಆಯೋಜಿಸಲಾಗಿದೆ.

ನಗರ ಪೊಲೀಸ್ ಕಮಿಷನರ್ ಪ್ರತಾಪ ರೆಡ್ಡಿ, ಸಂಚಾರ ವಿಭಾಗದ ವಿಶೇಷ ಕಮಿಷನರ್ ಎಂ.ಎ. ಸಲೀಂ ಹಾಗೂ ಚಲನಚಿತ್ರ ನಟ ರಿಷಿ ಅವರು ಮಹಾತ್ಮಗಾಂಧಿ ರಸ್ತೆಯ ಟ್ರಿನಿಟಿ ವೃತ್ತದಲ್ಲಿ ಆರಂಭವಾಗುವ ವಾಕಥಾನ್‌ಗೆ ಚಾಲನೆ ನೀಡಲಿದ್ದಾರೆ.

ಕಬ್ಬನ್ ಪಾರ್ಕ್‌ನ ಪ್ರೆಸ್‌ಕ್ಲಬ್ ಆವರಣದಲ್ಲಿ ವಾಕಥಾನ್ ಮುಕ್ತಾಯಗೊಳ್ಳಲಿದ್ದು, ಪಿಇಎಸ್ ವಿವಿ ಕುಲಪತಿ ಎಂ.ಆರ್. ದೊರೆಸ್ವಾಮಿ, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ಪ್ರಮಾಣಪತ್ರ ವಿತರಿಸಲಿದ್ದಾರೆ.

ಸಿಬಿಐ ತನಿಖೆ ಪ್ರಶ್ನಿಸಿದ ಡಿ.ಕೆ ಶಿವಕುಮಾರ್ ರಿಟ್ ಅರ್ಜಿ

ವಿಚಾರಣೆ ನನೆಗುದಿ: ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಕನಕಪುರ ಶಾಸಕ ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆ ನಡೆಸಲು ರಾಜ್ಯ ಸರ್ಕಾರ ನೀಡಿದ್ದ ಅನುಮತಿ ಪ್ರಶ್ನಿಸಲಾದ ರಿಟ್ ಅರ್ಜಿಗೆ ಮುಕ್ತಿ ನೀಡದೆ ಮುಗುಮ್ಮಾಗಿ ಇರಿಸಲಾಗಿದೆ' ಎಂದು ಹೈಕೋರ್ಟ್, ರಾಜ್ಯ ಪ್ರಾಸಿಕ್ಯೂಷನ್ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಸಿಬಿಐ ತನಿಖೆಗೆ ಅನುಮತಿ ನೀಡಲಾದ ಅಧಿಸೂಚನೆ ಪ್ರಶ್ನಿಸಿ ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣ'ಗಳ ವಿಚಾರಣೆ ನಡೆಸುವ ಹೈಕೋರ್ಟ್‌ನ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಪ್ರಾಸಿಕ್ಯೂಷನ್ ಪರ ಹಾಜರಿದ್ದ ಎಸ್‌ಪಿಪಿ-2, ವಿ.ಎಸ್. ಹೆಗಡೆ, 'ರಿಟ್ ಅರ್ಜಿಯ ತಿದ್ದುಪಡಿ ಪ್ರತಿ ಇನ್ನೂ ನಮ್ಮ ಕೈಸೇರಿಲ್ಲ. ವಿಧಾನಸಭೆಗೆ ಚುನಾವಣೆ ಬೇರೆ ಘೋಷಣೆಯಾಗಿದೆ. ಈ ಸಮಯದಲ್ಲಿ ಅಧಿಕಾರಿ ವರ್ಗ ಸಂವಹನಕ್ಕೆ ದಕ್ಕುವುದು ದುರ್ಲಭ. ಈ ಪ್ರಕರಣದಲ್ಲಿ ಹೆಚ್ಚಿನ ಕಾನೂನಾತ್ಮಕ ಅಧ್ಯಯನ ನಡೆಸಬೇಕಾದ ಅವಶ್ಯಕತೆ ಇದೆ. ಅಡ್ವೊಕೇಟ್ ಜನರಲ್ ಅವರಿಂದಲೂ ಸಾಕಷ್ಟು ವಿವರಣೆ ಪಡೆಯಬೇಕಿದೆ. ಹೀಗಾಗಿ, ಆಕ್ಷೇಪಣೆ ಸಲ್ಲಿಸಲು ಕನಿಷ್ಠ ನಾಲ್ಕು ವಾರಗಳಾದರೂ ಸಮಯ ನೀಡಿ' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಆದರೆ, ಇದನ್ನು ಒಪ್ಪದ ನ್ಯಾಯಪೀಠ, 'ನೀವು ಬರೀ ಸಮಯವನ್ನು ಕೇಳುತ್ತಿದ್ದೀರಿ. ಈ ಅರ್ಜಿಯ ಪ್ರಗತಿಗಾಗಿ ಕೋರ್ಟೇ ಶ್ರಮಿಸಬೇಕಾದೆಯಲ್ಲಾ, ಬೇರೊಂದು ಪೀಠದಲ್ಲಿದ್ದ ಈ ಅರ್ಜಿಯನ್ನು ಇಲ್ಲೇ ವಿಚಾರಣೆ ನಡೆಸುವಂತೆ ಶಿವಕುಮಾರ್ ಪರ ವಕೀಲರು ಕೋರಿದ ಹಿನ್ನೆಲೆಯಲ್ಲಿ ಇಲ್ಲಿಗೆ ತರಿಸಿಕೊಳ್ಳಲಾಗಿದೆ. ಆದರೆ, ಮತ್ತೊಂದು ನ್ಯಾಯಪೀಠದಲ್ಲಿದ್ದಾಗ ರಾಜ್ಯ ಪ್ರಾಸಿಕ್ಯೂಷನ್ ಏಕೆ ಸುಮ್ಮನಿತ್ತು? ಸಿಬಿಐ ನೋಡಿದರೆ ಬೇಗ ಬೇಗ ವಿಚಾರಣೆ ನಡೆಸುವಂತೆ ಕೋರುತ್ತಿದೆ. ನೀವು ನೋಡಿದರೆ ಕಾಲ ತಳ್ಳುತ್ತಿದ್ದೀರಿ. ನಿಮಗೆ ಯಾಕೆ ಸಮಯ ಕೊಡಬೇಕು' ಎಂದು ಪ್ರಶ್ನಿಸಿತು.

ಅಂತೆಯೇ, ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಉದಯ ಹೊಳ್ಳ ಅವರಿಗೂ, 'ಹೊಳ್ಳ ಅವರೇ ನೀವೇಕೆ ಸುಮ್ಮನಿದ್ದೀರಿ' ಎಂದು ಕೆಣಕಿತು. ಇದಕ್ಕೆ ಹೊಳ್ಳ ಅವರು, 'ಸ್ವಾಮಿ ರಾಜ್ಯ ಪ್ರಾಸಿಕ್ಯೂಷನ್, ಪ್ರತಿ ಬಾರಿಯೂ ಆಕ್ಷೇಪಣೆ ಸಲ್ಲಿಸಲು ಸಮಯ ಬೇಕು ಎಂದು ಇಷ್ಟು ದಿನಗಳ ಕಾಲ ನೂಕುತ್ತಲೇ ಬಂದಿದೆ' ಎಂದು ತಮ್ಮ ನಡೆಯನ್ನು ಸಮರ್ಥಿಸಿಕೊಂಡರು.

ಅಂತಿಮವಾಗಿ ನ್ಯಾಯಪೀಠವು, ಎರಡು ದಿನಗಳ ಸಮಯ ಕೊಡಲು ಮುಂದಾಯಿತಾದರೂ ಕಡೆಗೆ ಏಪ್ರಿಲ್ 6ಕ್ಕೆ ವಿಚಾರಣೆ ನಿಗದಿಪಡಿಸಿ ಆದೇಶಿಸಿತು. ಇದೇ ವೇಳೆ, ಮತ್ತೊಂದು ಪ್ರಕರಣದಲ್ಲಿ ಸಿಬಿಐ ತನಿಖೆಗೆ ನೀಡಿರುವ ಮಧ್ಯಂತರ ತಡೆ ಆದೇಶವನ್ನು, ಶಿವಕುಮಾರ್ ಪರ ಹಿರಿಯ ವಕೀಲ ಸಿ.ಎಚ್. ಜಾಧವ್ ಅವರ ಕೋರಿಕೆಯ ಮೇರೆಗೆ ಮುಂದಿನ ವಿಚಾರಣೆವರೆಗೂ ವಿಸ್ತರಿಸಿತು. ಸಿಬಿಐ ಪರ ಪಿ.ಪ್ರಸನ್ನಕುಮಾರ್ ಹಾಜರಿದ್ದರು.

ಪ್ರಕರಣವೇನು?: 'ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಕಲಂ 13 (2), 13 (1)(ಇ) ಅಡಿಯಲ್ಲಿ ಸಿಬಿಐ 2020ರ ಅಕ್ಟೋಬರ್ 3ರಂದು ಪ್ರಕರಣ ದಾಖಲಿಸಿದೆ. 'ಸಿಬಿಐ ದಾಖಲಿಸಿರುವ ಈ ಎಫ್‌ಐಆರ್ ಕಾನೂನು ಬಾಹಿರವಾಗಿದ್ದು ಇದನ್ನು ರದ್ದುಗೊಳಿಸಬೇಕು' ಎಂದು ಕೋರಿ ಶಿವಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಸಿಬಿಐ ತನಿಖೆಗೆ ಹೈಕೋರ್ಟ್ 2023ರ ಫೆಬ್ರುವರಿ 10ರಂದು ಮಧ್ಯಂತರ ತಡೆ ನೀಡಿತ್ತು.

ಸಿಬಿಐ ತನಿಖೆಗೆ ಆದೇಶಿಸಲಾಗಿದ್ದ ಅಧಿಸೂಚನೆಯನ್ನು ಪ್ರಶ್ನಿಸಿ ಡಿ.ಕೆ. ಶಿವಕುಮಾರ್ ಸಂಬಂಧಿ ನಾಗರಬಾವಿ ನಿವಾಸಿ ಶಶಿಕುಮಾರ್ ಶಿವಣ್ಣ ಎಂಬುವರು 2020ರ ಜೂನ್‌ನಲ್ಲಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಇದನ್ನು ಏಕಸದಸ್ಯ ನ್ಯಾಯಪೀಠ ತಿರಸ್ಕರಿಸಿತ್ತು. ಈ ಆದೇಶ ಪ್ರಶ್ನಿಸಲಾದ ಮೇಲ್ಮನವಿಯನ್ನು ವಿಭಾಗೀಯ ನ್ಯಾಯಪೀಠವೂ ತಿರಸ್ಕರಿಸುವ ಮೂಲಕ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಎತ್ತಿ ಹಿಡಿದಿತ್ತು.

ಶಿವಕುಮಾರ್ ಅವರು ತಮ್ಮ ಮತ್ತೊಂದು ಅರ್ಜಿಯನ್ನು ಇದೇ ನ್ಯಾಯಪೀಠಕ್ಕೆ ವರ್ಗಾಯಿಸಬೇಕು ಎಂಬ ಕೋರಿಕೆಗೆ ಸಿಬಿಐ ಈ ಮೊದಲು ಬಲವಾಗಿ ಆಕ್ಷೇಪಿಸಿತ್ತು. 'ಈಗಾಗಲೇ, ಇಂತಹುದೇ ಪ್ರಾರ್ಥನೆಯನ್ನು ಹೊಂದಿದ ಶಿವಕುಮಾರ್ ಸಂಬಂಧಿಯ ಅರ್ಜಿ ವಿಭಾಗೀಯ ನ್ಯಾಯಪೀಠದಲ್ಲಿ ಬಿದ್ದು ಹೋಗಿರುವ ಕಾರಣ ಈಗ ಶಿವಕುಮಾರ್ ಸ್ವತಃ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸುವ ಅವಶ್ಯಕತೆ ಇಲ್ಲ' ಎಂದು ವಾದ ಮಂಡಿಸಿತ್ತು. ಆದರೆ, ಈ ಆಕ್ಷೇಪಣೆಯನ್ನು ಮಾನ್ಯ ಮಾಡದ ನ್ಯಾಯಮೂರ್ತಿ ಕೆ.ನಟರಾಜನ್ ಅವರು, 'ಆ ಅರ್ಜಿಯೂ ಇಲ್ಲಿಯೇ ವಿಚಾರಣೆ ನಡೆಯಲಿ' ಎಂದು ಅರ್ಜಿದಾರರ ಕೋರಿಕೆಯನ್ನು ಮನ್ನಿಸಿ ವರ್ಗಾವಣೆಗೆ ನಿರ್ದೇಶನ ನೀಡಿದ್ದರು.

ಪುಸ್ತಕ ಬಿಡುಗಡೆ

ಕರ್ನಾಟಕ ಚಿತ್ರಕಲಾ ಪರಿಷತ್ತು ನಗರದಲ್ಲಿ ಶುಕ್ರವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಅಶ್ರಫಿ ಎಸ್. ಭಗತ್ ಅವರ 'ನ್ಯಾವಿಗೇಟಿಂಗ್ ಕಲ್ಚರ್ ಥ್ರೂ ಫಾರ್ಮಲ್ ಏಸ್ತೆಟಿಕ್ಸ್' ಪುಸ್ತಕವನ್ನು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಬಿಡುಗಡೆ ಮಾಡಿದರು. ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, ಡಾಟ್ ಸ್ಕೂಲ್ ಆಫ್ ಡಿಸೈನ್ ಅಧ್ಯಕ್ಷ ಆರ್.ರಾಮನಾಥ್, ಕಲಾವಿದರಾದ ಆರ್.ಬಿ. ಭಾಸ್ಕರನ್ ಮತ್ತು ಎಂ.ಎಸ್. ಮೂರ್ತಿ ಇದ್ದಾರೆ. -ಪ್ರಜಾವಾಣಿ ಚಿತ್ರ

ಇಂದು 10 ಕಿ.ಮೀ ಮ್ಯಾರಥಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫರ್ಮೇಶನ್ ಟೆಕ್ನಾಲಜಿಯಿಂದ ಶನಿವಾರ ಮ್ಯಾರಥಾನ್ ಆಯೋಜಿಸಲಾಗಿದೆ. ಬೆಳಿಗ್ಗೆ 10ಕ್ಕೆ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಮ್ಯಾರಥಾನ್‌ಗೆ ಚಾಲನೆ ಸಿಗಲಿದೆ. ಬೆಳ್ಳಿಹಬ್ಬದ ಅಂಗವಾಗಿ 10 ಕಿ.ಮೀ ಮ್ಯಾರಥಾನ್ ಆಯೋಜಿಸಲಾಗಿದೆ.

ಎಲೆಕ್ಟ್ರಾನಿಕ್ ಸಿಟಿ ಸುತ್ತಮುತ್ತಲ ಸರ್ಕಾರಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ವ್ಯವಸ್ಥೆ ಮಾಡಲು ದೇಣಿಗೆ ಸಂಗ್ರಹಿಸಲು ಮೈಲ್ಸ್ ಫಾರ್ ಮಿಲ್ಸ್ ಘೋಷಣೆ ಅಡಿ ಮ್ಯಾರಥಾನ್ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮಹಿಳೆಯರಿಗೆ ಕಥಾ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ. ಅನುಪಮಾ ನಿರಂಜನ ಅವರ ಜನ್ಮದಿನದ ಅಂಗವಾಗಿ ಉದಯೋನ್ಮುಖ ಕಥೆಗಾರ್ತಿಯರಿಗೆ ಕಥಾಸ್ಪರ್ಧೆಯನ್ನು ಕನ್ನಡ ಸಂಘರ್ಷ ಸಮಿತಿಯು ಆಯೋಜಿಸಿದೆ.

ಇದುವರೆಗೆ ಒಂದೂ ಕಥಾ ಸಂಕಲನ ಪ್ರಕಟಿಸದೆ ಇರುವವರು ಮಾತ್ರ ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಕಥೆಯು ಸ್ವಂತ ರಚನೆಯಾಗಿದ್ದು, ಮಹಿಳಾ ಕೇಂದ್ರಿತ ಕಥಾವಸ್ತು ಆಗಿರಬೇಕು. ಸ್ಪರ್ಧೆಗೆ ಕಳುಹಿಸುವ ಕಥೆಯು ಈ ಮೊದಲು ಎಲ್ಲೂ ಪ್ರಕಟವಾಗಿರಬಾರದು. 1200 ಪದಗಳನ್ನು ಮೀರದ, ಅಥವಾ ಎ4 ಅಳತೆಯ ಕಾಗದದಲ್ಲಿ 5 ಪುಟಗಳು ಮೀರದಂತೆ ಹಾಳೆಯ ಒಂದೇ ಮಗ್ಗುಲಲ್ಲಿ ಕನ್ನಡದಲ್ಲಿ ಬರೆಯಬಹುದು ಅಥವಾ ಡಿಟಿಪಿ ಮಾಡಿಸಿ ಏಪ್ರಿಲ್ 30ರ ಒಳಗೆ ತಲುವಂತೆ ಕಳುಹಿಸಿಬೇಕು ಎಂದು ಸಮಿತಿ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಥಮ ಬಹುಮಾನ ₹2,500, ದ್ವಿತೀಯ ₹2,000 ಹಾಗೂ ತೃತೀಯ ₹1,500 ನೀಡಲಾಗುವುದು. ಕಥೆಯನ್ನು 'ಎ.ಎಸ್. ನಾಗರಾಜಸ್ವಾಮಿ, ಅಧ್ಯಕ್ಷ, ಕನ್ನಡ ಸಂಘರ್ಷ ಸಮಿತಿ, ನಂ.3, 1ನೇ ತಿರುವು, 1ನೇ ಮುಖ್ಯರಸ್ತೆ, ಅನ್ನಪೂರ್ಣೇಶ್ವರಿ ಬಡಾವಣೆ, ಬೆಂಗಳೂರು-560 056' ಕಳುಹಿಸಬೇಕು. ಮಾಹಿತಿಗೆ: 9739001410

ನೂತನ ಡಿಪ್ಲೊಮಾ ಕೋರ್ಸ್

ಬೆಂಗಳೂರು: ಸೌಲಭ್ಯ ನಿರ್ವಹಣೆ ವಿಷಯದ ಅಡಿ ಮೊದಲ ಬಾರಿಗೆ ರಾಮಯ್ಯ ವಿಶ್ವವಿದ್ಯಾಲಯದಲ್ಲಿ ಪಿ.ಜಿ ಡಿಪ್ಲೊಮಾ ಕೋರ್ಸ್ ಆರಂಭಿಸಲಾಗಿದೆ.

ವಿ.ವಿಯ ಅಪ್ಲೈಡ್ ಸೈನ್ಸ್ ವಿಭಾಗವು ಶೆವರನ್ ಕ್ಲೀನ್ ಫಿಕ್ಸ್ ಅಕಾಡೆಮಿಯ ಸಹಯೋಗದಲ್ಲಿ ಈ ಕೋರ್ಸ್ ಆರಂಭಿಸುತ್ತಿದೆ. ಜನರ ಜೀವನಮಟ್ಟ ಹಾಗೂ ಅಭಿವೃದ್ಧಿ ಸುಧಾರಣೆಯ ಉದ್ದೇಶದಿಂದ ಈ ಕೋರ್ಸ್ ಆರಂಭಿಸಲಾಗುತ್ತಿದೆ. ಜಿಡಿಪಿ ನಿರ್ಧರಿಸುವಲ್ಲಿ ಸೇವಾ ವಲಯವು ತನ್ನದೇ ಪಾತ್ರ ವಹಿಸುತ್ತಿದೆ. ವಿಮಾನಯಾನ, ಆರೋಗ್ಯ ಕ್ಷೇತ್ರ, ಅತಿಥಿ ಸತ್ಕಾರ, ಶಾಪಿಂಗ್ ಮಾಲ್, ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಕ್ಷೇತ್ರ, ರಿಯಲ್ ಎಸ್ಟೇಟ್ ಸೇರಿದಂತೆ ನಾನಾ ಕ್ಷೇತ್ರಗಳಲ್ಲಿ ಸೇವಾ ನಿರ್ವಹಣೆ ಹುದ್ದೆಗಳಿವೆ. 11 ತಿಂಗಳ ಕೋರ್ಸ್‌ನಲ್ಲಿ ಕೌಶಲ ತರಬೇತಿ ನೀಡಲಾಗುವುದು. ಹೋಟೆಲ್ ಮ್ಯಾನೇಜ್‌ಮೆಂಟ್, ಎಂಜಿನಿಯರಿಂಗ್, ವಿಜ್ಞಾನ ಕಲಿತ ವಿದ್ಯಾರ್ಥಿಗಳು ಈ ಪಿಜಿ ಕೋರ್ಸ್‌ಗೆ ಪ್ರವೇಶ ಪಡೆಯಬಹುದು. ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ಸಲ್ಲಿಕೆಗೆ https://hospitality.msruas.ac.in ವೀಕ್ಷಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕಾರಾಗೃಹಗಳಿಗೆ 43 ನಕಲಿ ಕಂಪ್ಯೂಟರ್ ಪೂರೈಕೆ

ಬೆಂಗಳೂರು: ರಾಜ್ಯದ ಹಲವು ಕಾರಾಗೃಹಗಳಿಗೆ ನಕಲಿ ಕಂಪನಿಯ ಹೆಸರಿನಲ್ಲಿ ಕಂಪ್ಯೂಟರ್‌ಗಳನ್ನು ಪೂರೈಕೆ ಮಾಡಿ ಸರ್ಕಾರಕ್ಕೆ ವಂಚಿಸಲಾಗಿದ್ದು, ಈ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ಎಸ್ಪಿ ಪ್ರದೀಪ್ ಗುಂಟಿ ಅವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ವಾಗ್ಮಿನಾ ಎಂಟರ್‌ಪ್ರೈಸಸ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ರಾಜ್ಯದ ಹಲವು ಕಾರಾಗೃಹಗಳಿಗೆ ಕಂಪ್ಯೂಟರ್ ಹಾಗೂ ಇತರೆ ಉಪಕರಣಗಳ ಅಗತ್ಯವಿತ್ತು. ಅವುಗಳನ್ನು ಖರೀದಿಸಲು 2022ರಲ್ಲಿ ಟೆಂಡರ್ ಕರೆಯಲಾಗಿತ್ತು. ಕಡಿಮೆ ದರ ಪಟ್ಟಿ ನೀಡಿದ್ದ ವಾಗ್ಮಿನಾ ಎಂಟರ್‌ಪ್ರೈಸಸ್ ಕಂಪನಿಗೆ 125 ಕಂಪ್ಯೂಟರ್ ಪೂರೈಸಲು ಗುತ್ತಿಗೆ ನೀಡಲಾಗಿತ್ತು. ಅದಕ್ಕಾಗಿ ₹ 92.81 ಲಕ್ಷವನ್ನು ಪಾವತಿಸಲಾಗಿತ್ತು' ಎಂದು ಮೂಲಗಳು ಹೇಳಿವೆ.

'ಎಚ್‌ಎಲ್‌ಬಿಎಸ್ ಕಂಪನಿಯದ್ದು ಎನ್ನಲಾದ 125 ಕಂಪ್ಯೂಟರ್‌ಗಳನ್ನು ರಾಜ್ಯದ 37 ಕಾರಾಗೃಹಗಳಿಗೆ ಪೂರೈಸಲಾಗಿತ್ತು. ಇತ್ತೀಚೆಗೆ ಲೆಕ್ಕ ತಪಾಸಣೆ ನಡೆಸುವಾಗ 43 ಕಂಪ್ಯೂಟರ್‌ಗಳು ಎಚ್‌ಎಲ್‌ಬಿಎಸ್ ಕಂಪನಿಗೆ ಸೇರಿದ್ದಲ್ಲವೆಂಬುದು ಗೊತ್ತಾಗಿದೆ. ನಕಲಿ ಕಂಪನಿಯ ಕಂಪ್ಯೂಟರ್‌ಗಳನ್ನು ವಾಗ್ಮಿನಾ ಎಂಟರ್‌ಪ್ರೈಸಸ್‌ನವರು ಪೂರೈಕೆ ಮಾಡಿರುವುದು ಪತ್ತೆಯಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

7 ಕಂಪ್ಯೂಟರ್ ನಿಷ್ಕ್ರಿಯ: '43 ನಕಲಿ ಕಂಪನಿಯ ಕಂಪ್ಯೂಟರ್‌ಗಳ ಪೈಕಿ 7 ಕಂಪ್ಯೂಟರ್‌ಗಳು ಸಂಪೂರ್ಣ ನಿಷ್ಕ್ರಿಯವಾಗಿವೆ. ಯಾವುದೇ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ ಎಂಬುದಾಗಿ ಎಸ್ಪಿಯವರು ದೂರಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಕಲಿ ಕಂಪನಿಯ ಕಂಪ್ಯೂಟರ್‌ಗಳನ್ನು ಪೂರೈಕೆ ಮಾಡಿ ಸರ್ಕಾರವನ್ನು ವಂಚಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ವಾಗ್ಮಿನಾ ಎಂಟರ್‌ಪ್ರೈಸಸ್ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ದೊರಕದ ಭೂ ಪರಿಹಾರ; ರಸ್ತೆ ವಿಸ್ತರಣೆಗೆ ತಡೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಪರಿಹಾರ ನೀಡದೆ ಭೂಸ್ವಾಧೀನಕ್ಕಾಗಿ ಪದ್ಮಶ್ರೀ ಶಿಕ್ಷಣ ಸಂಸ್ಥೆಯ ಅಂಗಳಕ್ಕೆ ಹೋಗಿದ್ದ ಬಿಡಿಎ ಅಧಿಕಾರಿಗಳು ವಾಪಸ್ಸಾದರು.

ಸೂಲಿಕೆರೆ ಪಂಚಾಯಿತಿ ವ್ಯಾಪ್ತಿಯ ಹೊಸಬೈರೋಹಳ್ಳಿ ಗ್ರಾಮದಲ್ಲಿ ಪದ್ಮಶ್ರೀ ಶಿಕ್ಷಣ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಮಾಗಡಿ ರಸ್ತೆ – ಮೈಸೂರು ರಸ್ತೆ ನಿರ್ಮಾಣಕ್ಕಾಗಿ ಕಾಲೇಜಿನ ಕೆಲ ಪ್ರದೇಶವನ್ನು ಭೂಸ್ವಾಧೀನ ಪಡಿಸಿಕೊಳ್ಳಲು 2013ರಲ್ಲಿ ಗುರುತು ಮಾಡಲಾಗಿತ್ತು. ಪೊಲೀಸರ ನೆರವಿನೊಂದಿಗೆ ಜೆಸಿಬಿಯೊಡನೆ ಸ್ಥಳಕ್ಕೆ ಆಗಮಿಸಿದ ಬಿಡಿಎ ಅಧಿಕಾರಿಗಳು ರಸ್ತೆ ವಿಸ್ತರಣೆಗೆ ಮುಂದಾಗಿದ್ದರು.

'ಬಿಡಿಎ ಈವರೆಗೆ ನೀಡಿರುವ ತಿಳಿವಳಿಕೆ ಪತ್ರಗಳಲ್ಲಿ ದೋಷವಿದೆ. ಸ್ವಾಧೀನಗೊಳ್ಳಲಿರುವ ಭೂಮಿಯ ಅಳತೆಯಲ್ಲಿ ವ್ಯತ್ಯಾಸವಿದೆ' ಎಂದು ದೂರಿದ್ದ ಕಾಲೇಜು ಆಡಳಿತ ಮಂಡಳಿ ಭೂ ಪರಿಹಾರ ದೊರಕುವವರೆಗೆ ಯಾವುದೇ ರಸ್ತೆ ಅಭಿವೃದ್ಧಿ ಕೈಗೊಳ್ಳದಂತೆ ಆಗ್ರಹಿಸಿತ್ತು. ಈ ಹಿನ್ನೆಲೆಯಲ್ಲಿ ಬಿಡಿಎ ಅಧಿಕಾರಿಗಳು ಸ್ವಾಧೀನ ಪ್ರಕ್ರಿಯೆ ಕೈಬಿಟ್ಟು ಹೊರ ನಡೆದಿದ್ದಾರೆ.

ಬಿಡಿಎ ಎಇಇ ಅಶೋಕ್ ಪ್ರತಿಕ್ರಿಯಿಸಿ, ರಸ್ತೆ ವಿಸ್ತರಣೆ ಕಾಮಗಾರಿ ಚಾಲ್ತಿಯಲ್ಲಿದೆ. ಉರುಳಿಸಿರುವ ಗೋಡೆಯನ್ನು ಮತ್ತೆ ನಿರ್ಮಾಣ ಮಾಡಿಲ್ಲ ಎಂದು ಹೇಳಿದರು.

ಪದ್ಮಶ್ರೀ ಕಾಲೇಜು ಬಳಿ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ತೊಡಗಿರುವ ಬಿಡಿಎ ಸಿಬ್ಬಂದಿ ಮತ್ತು ಪೊಲೀಸರು

ಕೃಷ್ಣಯ್ಯ ಶೆಟ್ಟಿ ಮನವಿ ತಿರಸ್ಕರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: '₹3.25 ಕೋಟಿ ಬ್ಯಾಂಕ್ ಸಾಲದ ವಂಚನೆ ಪ್ರಕರಣದ ದೋಷಾರೋಪಣಾ ಪಟ್ಟಿಯಿಂದ ನನ್ನನ್ನು ಕೈಬಿಡಬೇಕು' ಎಂದು ಮಾಜಿ ಸಚಿವ ಎಸ್.ಎನ್.ಕೃಷ್ಣಯ್ಯ ಶೆಟ್ಟಿ ಸಲ್ಲಿಸಿದ್ದ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ಈ ಕುರಿತಂತೆ ಎಸ್.ಎನ್.ಕೃಷ್ಣಯ್ಯ ಶೆಟ್ಟಿ ಸಲ್ಲಿಸಿದ್ದ ಕ್ರಿಮಿನಲ್ ಪುನರ್ ಪುನರಾವಲೋಕನಾ ಅರ್ಜಿಯ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರು ಕಲಬುರಗಿ ಪೀಠದಿಂದ ಶುಕ್ರವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಪ್ರಕಟಿಸಿದರು.

'ಮೆಸರ್ಸ್ ಬಾಲಾಜಿ ಕೃಪ ಎಂಟರ್‌ಪ್ರೈಸಸ್ ಮಾಲೀಕತ್ವ ಹೊಂದಿದ್ದ ಕೃಷ್ಣಯ್ಯ ಶೆಟ್ಟಿ ನಾಲ್ಕು ವರ್ಷಗಳ ಅವಧಿಯಲ್ಲಿ ಲೇ ಔಟ್ ನಿರ್ಮಾಣಕ್ಕಾಗಿ ಬ್ಯಾಂಕ್‌ನಿಂದ ಪಡೆದಿದ್ದ ಸಾಲ ₹ 7.17 ಕೋಟಿಗೂ ಹೆಚ್ಚಿದ್ದು, ಇದರಲ್ಲಿ ಅವರು ₹ 3.25 ಕೋಟಿ ಸಾಲವನ್ನು ಇನ್ನೂ ತೀರಿಸಿಲ್ಲ' ಎಂದು ಸಿಬಿಐ ಈ ಪ್ರಕರಣ ದಾಖಲಿಸಿತ್ತು. ಹೈಕೋರ್ಟ್‌ನ ಈ ತೀರ್ಪಿನಿಂದಾಗಿ, ಕೃಷ್ಣಯ್ಯ ಶೆಟ್ಟಿ ಸಿಬಿಐ ವಿಚಾರಣಾ ನ್ಯಾಯಾಲಯದಲ್ಲಿ ಖುದ್ದು ಹಾಜರಾಗಿ ವಿಚಾರಣೆ ಎದುರಿಸಬೇಕಾಗಿದೆ.

ಪ್ರಕರಣವೇನು?: 'ಬೆಂಗಳೂರು ಉತ್ತರ ತಾಲ್ಲೂಕಿನ ನಾಗವಾರ ಗ್ರಾಮದ ಸರ್ವೆ ನಂಬರ್ 98ರಲ್ಲಿ 3 ಎಕರೆಗೂ ಹೆಚ್ಚಿನ ಜಾಗದಲ್ಲಿ ಲೇ ಔಟ್ ನಿರ್ಮಾಣಕ್ಕಾಗಿ ಸಾಲ ಪಡೆಯಲಾಗಿತ್ತು. ಈ ಪ್ರದೇಶದಲ್ಲಿ ಗೃಹ ನಿರ್ಮಾಣ ಯೋಜನೆಗೆ ಕೃಷ್ಣಯ್ಯ ಶೆಟ್ಟಿ ಬಾಲಾಜಿ ಎಂಟರ್‌ಪ್ರೈಸಸ್ ಹೆಸರಿನಲ್ಲಿ 2003ರಿಂದ 2008ರವರೆಗೆ ಚಾಲ್ತಿ ಖಾತೆಯಲ್ಲಿ ಎಸ್‌ಬಿಎಂನಿಂದ ಸಾಲ ಪಡೆದಿದ್ದಾರೆ. ಇದಕ್ಕಾಗಿ ಅವರು ಖೊಟ್ಟಿ ದಾಖಲೆ ಸೃಷ್ಟಿಸಿದ್ದಾರೆ' ಎಂದು ಸಿಬಿಐ ಆರೋಪಿಸಿತ್ತು.

'ಲೇ ಔಟ್ ನಿರ್ಮಾಣಕ್ಕೆ ಅವರು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಯೋಜನಾ ಮಂಜೂರಾತಿ ಪಡೆದಿಲ್ಲ. ಬೆಸ್ಕಾಂ ಮತ್ತು ಬೆಂಗಳೂರು ಜಲಮಂಡಳಿಯಿಂದ ನಿರಾಕ್ಷೇಪಣಾ ಪತ್ರವನ್ನೂ ಪಡೆದಿಲ್ಲ. ಅಂತೆಯೇ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಅಭಿವೃದ್ಧಿ ಶುಲ್ಕವನ್ನೂ ಪಾವತಿ ಮಾಡಿರುವುದಿಲ್ಲ' ಎಂದು ಸಿಬಿಐ ಬಲವಾಗಿ ಆಕ್ಷೇಪಿಸಿತ್ತು. ಸಿಬಿಐ ಪರ ಪಿ.ಪ್ರಸನ್ನಕುಮಾರ್ ವಾದ ಮಂಡಿಸಿದ್ದರು.

ಬಿಬಿಎಂಪಿ ಸಿಬ್ಬಂದಿಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ

'ಹೊಸ ಕೆಲಸವಿಲ್ಲ, ಚುನಾವಣೆ ಕೆಲಸ ಮಾಡಬಹುದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಎಂಜಿನಿಯರ್ ಸೇರಿದಂತೆ ಯಾವ ಸಿಬ್ಬಂದಿಗೂ ಚುನಾವಣೆ ಕೆಲಸ ಹೆಚ್ಚುವರಿಯಾಗುವುದಿಲ್ಲ. ಹೊಸ ಕಾಮಗಾರಿಗಳು ಆರಂಭವಾಗದಿರುವುದರಿಂದ ಆ ಸಮಯವನ್ನು ಚುನಾವಣೆ ಕೆಲಸಕ್ಕೆ ನೀಡಬಹುದು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ವಿಧಾನಸಭೆ ಚುನಾವಣೆ ನೀತಿ ಸಂಹಿತೆ ಜಾರಿಯಾಗಿರುವುದರಿಂದ ಹೊಸ ಟೆಂಡರ್, ಹೊಸ ಕಾರ್ಯಾದೇಶ, ಹೊಸದಾಗಿ ಕೆಲಸ ಆರಂಭಿಸುವಂತಿಲ್ಲ. ಹೀಗಾಗಿ, ಇದಕ್ಕಾಗಿ ಎಂಜಿನಿಯರ್‌ಗಳು ಸಾಕಷ್ಟು ಸಮಯವನ್ನು ನೀಡುತ್ತಿದ್ದರು. ಇದೀಗ ಆ ಕೆಲಸ ಇಲ್ಲದಿರುವುದರಿಂದ ಈಗಿರುವ ಕೆಲಸ ಜೊತೆಗೇ ಚುನಾವಣೆ ಕೆಲಸವನ್ನೂ ಮಾಡಬಹುದು ಎಂದು ಸುದ್ದಿಗಾರರಿಗೆ ಶುಕ್ರವಾರ ತಿಳಿಸಿದರು.

ಚುನಾವಣೆ ನೀತಿ ಸಂಹಿತೆ ನಿರ್ವಹಣೆಯ ಜವಾಬ್ದಾರಿಯನ್ನು ಈ ಹಿಂದೆ ಎಂಜಿನಿಯರ್‌ಗಳಿಗೆ ನೀಡಲಾಗುತ್ತಿತ್ತು. ಕಾಮಗಾರಿ ಕೆಲಸ ಮಾಡುವುದೂ ಅವರೇ, ನೀತಿ ಸಂಹಿತೆ ನಿರ್ವಹಣೆ ಅವರದ್ದೇ ಆದರೆ ಸರಿಯಾಗುವುದಿಲ್ಲ ಎಂದು ಈ ಬಾರಿ ಕೆಎಎಸ್ ಮಟ್ಟದ ಅಧಿಕಾರಿಗಳಿಗೆ ಜವಾಬ್ದಾರಿ ನೀಡಲಾಗಿದೆ ಎಂದರು.

ರಾಜಕಾಲುವೆ ವಿಭಾಗದ ಯಾವ ಸಿಬ್ಬಂದಿಗೂ ಚುನಾವಣೆ ಕೆಲಸ ನೀಡಲಾಗಿಲ್ಲ. ಹೀಗಾಗಿ ಅವರು ಮಳೆ ಸಂದರ್ಭದಲ್ಲಿ ನೀರು ಸರಾಗವಾಗಿ ಹರಿಯುವ ಕೆಲಸ ನಿರ್ವಹಿಸಲಿದ್ದಾರೆ. ರಾಜಕಾಲುವೆ ನಿರ್ಮಾಣ ಕಾರ್ಯವೂ ತುರ್ತಾಗಿ ಆಗಲಿದೆ ಎಂದು ತಿಳಿಸಿದರು.

'ಮಾಹಿತಿ ಸಂಗ್ರಹಿಸಿದರೆ ಕ್ರಮ'

'ಯಾವುದೇ ಪಕ್ಷ, ಅಭ್ಯರ್ಥಿ ಸೇರಿದಂತೆ ಯಾರೂ ನಾಗರಿಕರ ಮಾಹಿತಿ ಸಂಗ್ರಹಿಸಲು ಅವಕಾಶ ಇಲ್ಲ. ಇಂತಹ ಕೆಲಸ ಮಾಡಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ತಿಳಿಸಿದರು.

'ನಗರದ ವಿಧಾನಸಭೆ ಕ್ಷೇತ್ರಗಳಲ್ಲಿ ಯಾವುದೇ ಸ್ಥಳದಲ್ಲಿ ಸಂಸ್ಥೆ, ಕಂಪನಿ ಒಳಗೊಂಡಂತೆ ಯಾರೂ ನಾಗರಿಕರಿಂದ ಮೊಬೈಲ್ ಸಂಖ್ಯೆ ಸೇರಿ ಯಾವ ಮಾಹಿತಿಯನ್ನೂ ಸಂಗ್ರಹಿಸುವಂತಿಲ್ಲ. ಮಹದೇವಪುರ ವ್ಯಾಪ್ತಿಯಲ್ಲಿ ಇಂತಹ ಪ್ರಕರಣವಾಗಿರುವ ಮಾಹಿತಿ ಇದ್ದು, ಜಿಲ್ಲಾಧಿಕಾರಿಯವರು ಕ್ರಮ ಕೈಗೊಳ್ಳುತ್ತಾರೆ' ಎಂದು ಹೇಳಿದರು.

ಆರೋಗ್ಯ ಸಂಸ್ಥೆಗಳು ನಡೆಸಿದ ಸಮೀಕ್ಷೆಯಲ್ಲಿ ದೃಢ

ಇ–ಸಿಗರೇಟ್: ಬಹಿರಂಗ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಂಬಾಕು ಉತ್ಪನ್ನಗಳ ಮಾರಾಟ ಮಳಿಗೆಗಳಲ್ಲಿ ನಿಷೇಧಿತ ಇ-ಸಿಗರೇಟ್‌ಗಳು ಸುಲಭವಾಗಿ ಲಭ್ಯವಾಗುತ್ತಿವೆ. ವಯೋಮಾನದ ಪರಿಶೀಲನೆ ಇಲ್ಲದೆಯೇ ಮಾರಾಟ ಮಾಡಲಾಗುತ್ತಿದೆ' ಎನ್ನುವುದು ಖಾಸಗಿ ಸಂಸ್ಥೆಗಳು ನಡೆಸಿದ ಸಂಶೋಧನೆಗಳಿಂದ ದೃಢಪಟ್ಟಿದೆ.

ಹೆಲ್ತ್ ಅಸೋಸಿಯೇಷನ್ ಆಫ್ ಇಂಡಿಯಾ, ವಾಯ್ಸ್, ನಡ್ಡಾ ಇಂಡಿಯಾ, ನ್ಯಾಷನಲ್ ಲಾ ಸ್ಕೂಲ್ ಯೂನಿವರ್ಸಿಟಿ ಇಂಡಿಯಾ, ಬೆಂಗಳೂರು ಮತ್ತು ಕರ್ನಾಟಕ ನೋ ಫಾರ್ ಟೊಬ್ಯಾಕೊ ಎಂಬ ಸಂಸ್ಥೆಗಳು ಕರ್ನಾಟಕ, ನವದೆಹಲಿ, ಅಸ್ಸಾಂ, ಗೋವಾ, ಹರಿಯಾಣ, ಉತ್ತರ ಪ್ರದೇಶ ಹಾಗೂ ತೆಲಂಗಾಣದಲ್ಲಿ ಇ-ಸಿಗರೇಟ್ ಲಭ್ಯತೆ ಬಗ್ಗೆ ಸಮೀಕ್ಷೆ ನಡೆಸಿವೆ.

'ಕೇಂದ್ರ ಸರ್ಕಾರವು ಇ-ಸಿಗರೇಟ್ ನಿಷೇಧಿಸಿದ ನಂತರವೂ ಅಡೆತಡೆಯಿಲ್ಲದೆ ಇ-ಸಿಗರೇಟ್‌ಗಳನ್ನು ಮಾರಾಟ ಮಾಡಲಾಗುತ್ತಿದೆ. 18 ವರ್ಷದೊಳಗಿನವರಿಗೂ ಇ-ಸಿಗರೇಟ್ ಲಭ್ಯವಾಗುತ್ತಿದೆ. ಪುರಾವೆಗಳನ್ನು ಆನ್‌ಲೈನ್ ಮತ್ತು ಆಫ್‌ಲೈನ್ ವಿಧಾನದ ಮೂಲಕ ಸಂಗ್ರಹಿಸಲಾಗಿದೆ. ಕ್ಷೇತ್ರ ಸಮೀಕ್ಷೆ ನಡೆಸಿದವರು ಇ-ಸಿಗರೇಟ್‌ಗಳ ಲಭ್ಯತೆ, ವಯೋಮಾನದ ಪರಿಶೀಲನೆ, ಇ-ಸಿಗರೇಟ್ ನಿಷೇಧದ ಕುರಿತು ಮಾರಾಟಗಾರರಲ್ಲಿ ಇರುವ ತಿಳುವಳಿಕೆಯ ಬಗ್ಗೆ ಪರಿಶೀಲಿಸಿದ್ದಾರೆ' ಎಂದು ಕರ್ನಾಟಕ ನೋ ಫಾರ್ ಟೊಬ್ಯಾಕೊ ಸಂಸ್ಥೆಯ ಸಂಯೋಜಕ ಜಿತಿನ್ ಚಂದ್ರನ್ ಅವರು ತಿಳಿಸಿದ್ದಾರೆ.

'ಆನ್‌ಲೈನ್‌ನಲ್ಲಿ ಬೇಡಿಕೆ ಸಲ್ಲಿಸಿದ 1-2 ದಿನಗಳಲ್ಲೇ ಗ್ರಾಹಕರಿಗೆ ಇ-ಸಿಗರೇಟ್ ತಲುಪಿಸಲಾಗುತ್ತಿದೆ. ಶಿಕ್ಷಣ ಸಂಸ್ಥೆಗಳ ಸಮೀಪದಲ್ಲಿರುವ ತಂಬಾಕು ಮಳಿಗೆಗಳಲ್ಲಿಯೂ ಇ-ಸಿಗರೇಟ್ ಲಭ್ಯವಾಗುತ್ತಿದೆ. ಕೆಲವು ತಂಬಾಕು ಮಾರಾಟಗಾರರು ಇ-ಸಿಗರೇಟ್‌ಗಳನ್ನು ಮಾರುತ್ತಿಲ್ಲವಾದರೂ ಬೇಡಿಕೆಯನುಸಾರ ಮನೆ ಬಾಗಿಲಿಗೆ ತಲುಪಿಸುವ ಭರವಸೆ ನೀಡಲಾಗುತ್ತಿದೆ. ಬಹುತೇಕ ಮಾರಾಟಗಾರರಿಗೆ ಇ-ಸಿಗರೇಟ್ ನಿಷೇಧದ ಬಗ್ಗೆ ತಿಳಿವಳಿಕೆ ಇಲ್ಲವಾಗಿದ್ದು, ಬಹಿರಂಗವಾಗಿ ಮಾರಾಟ ಮಾಡುತ್ತಿದ್ದಾರೆ' ಎಂದು ರಾಜ್ಯ ಸರ್ಕಾರದ ತಂಬಾಕು ನಿಯಂತ್ರಣ ಉನ್ನತ ಮಟ್ಟದ ಸಮಿತಿ ಸದಸ್ಯ ಡಾ. ವಿಶಾಲ್ ರಾವ್ ಹೇಳಿದ್ದಾರೆ.

ವಯೋಮಾನ ಪರಿಶೀಲನೆ: 'ಕೆಲವು ವೆಬ್‌ಸೈಟ್‌ಗಳ ಮೂಲಕ ಆನ್‌ಲೈನ್‌ನಲ್ಲಿ ಬೇಡಿಕೆ ಸಲ್ಲಿಸುವಾಗ 18 ವರ್ಷ ಅಥವಾ ಅದನ್ನು ಮೀರಿದವರೇ ಎಂಬ ಬಗ್ಗೆ ಪರಿಶೀಲಿಸಲು ಗುರುತು ಹಾಕುವ ವಿಧಾನವನ್ನು ಅನುಸರಿಸಲಾಗುತ್ತಿದೆ. ಮಾರಾಟವಾಗುತ್ತಿರುವ ಇ-ಸಿಗರೇಟ್‌ಗಳಲ್ಲಿ ಹೆಚ್ಚಿನವು ಚೀನಾದಲ್ಲಿ ತಯಾರಾಗುತ್ತಿವೆ' ಎಂದು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾದ ಪ್ರಾಧ್ಯಾಪಕ ಡಾ. ಅಶೋಕ್ ಪಾಟೀಲ್ ತಿಳಿಸಿದ್ದಾರೆ.

'2023ರ ಮಾರ್ಚ್ ತಿಂಗಳು ಬೆಂಗಳೂರಿನಲ್ಲಿ ₹ 8.9 ಲಕ್ಷಕ್ಕೂ ಅಧಿಕ ಮೌಲ್ಯದ ಇ-ಸಿಗರೇಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಇ-ಸಿಗರೇಟ್ ಆರೋಗ್ಯಕ್ಕೆ ಅಪಾಯಕಾರಿ ಎಂಬ ಕಾರಣಕ್ಕೆ ಭಾರತದಲ್ಲಿ ಇದನ್ನು ನಿಷೇಧಿಸಲಾಗಿದೆ. ಇ-ಸಿಗರೇಟ್‌ಗಳು ಉಸಿರಾಟ ಹಾಗೂ ಹೃದಯ ಸಂಬಂಧಿ ಕಾಯಿಲೆಗಳಿಗೆ ದಾರಿ ಮಾಡಿಕೊಡುತ್ತವೆ. ಇ-ಸಿಗರೇಟ್ ಮಾರಾಟ ಮಾಡುವ ಸ್ಥಳಗಳ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸೂಕ್ತ ಮಾಹಿತಿ ನೀಡಬೇಕು' ಎಂದು ತಂಬಾಕು ಮುಕ್ತ ಕರ್ನಾಟಕ ಒಕ್ಕೂಟದ ಅಧ್ಯಕ್ಷ ಡಾ. ರಮೇಶ್ ಬಿಳಿಮಗ್ಗ ಹೇಳಿದ್ದಾರೆ.

ಸುಧಾ ಓದಿರಿ

ಚಿಕ್ಕರಾಯಪ್ಪ ಆಸ್ತಿ ಮುಟ್ಟುಗೋಲು

ಬೆಂಗಳೂರು: ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಟಿ.ಎನ್. ಚಿಕ್ಕರಾಯಪ್ಪ ಅವರಿಗೆ ಸೇರಿದ ₹1.10 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ(ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ದಾಖಲಿಸಿದ್ದ ಎಫ್‌ಐಆರ್ ಆಧರಿಸಿ ಇ.ಡಿ ಅಧಿಕಾರಿಗಳು ತನಿಖೆ ಆರಂಭಿಸಿದ್ದರು. ಭ್ರಷ್ಟಾಚಾರ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಎಸಿಬಿ ಅಧಿಕಾರಿಗಳು, ಚಿಕ್ಕರಾಯಪ್ಪ ಮತ್ತು ಇತರ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

'ಚಿಕ್ಕರಾಯಪ್ಪ ಅವರು ಸರ್ಕಾರಿ ಸೇವೆಯಲ್ಲಿದ್ದಾಗ ಇತರ ಆರೋಪಿಗಳ ಸಹಾಯದಿಂದ ₹5.33 ಕೋಟಿ ಮೌಲ್ಯದ ಆಸ್ತಿ ಸಂಪಾದಿಸಿದ್ದರು. ಅವರು ಅದಾಯ ಮೀರಿ ಶೇ 304.93ರಷ್ಟು ಆಸ್ತಿ ಸಂಪಾದನೆ ಮಾಡಿದ್ದರು. ಪರಿಚಿತರ ಹೆಸರಿನಲ್ಲಿ ಸ್ಥಿರಾಸ್ತಿ ಸಂಪಾದಿಸಿ ನಂತರ ಅದನ್ನು ತಮ್ಮ ಕುಟುಂಬ ಸದಸ್ಯರ ಹೆಸರಿಗೆ ವರ್ಗಾವಣೆ ಮಾಡಿಸಿರುವುದು ಪತ್ತೆಯಾಗಿದೆ. ಹೆಚ್ಚಿನ ತನಿಖೆ ಪ್ರಗತಿಯಲ್ಲಿದೆ' ಎಂದು ಇ.ಡಿ ತಿಳಿಸಿದೆ.

ಸುದ್ದಿ 2 ನಿಮಿಷ

ಐಪಿಎಲ್: ರಾತ್ರಿ 1.30ರ ತನಕ ಮೆಟ್ರೊ ರೈಲು ಕಾರ್ಯಾಚರಣೆ

ಬೆಂಗಳೂರು: ಐಪಿಎಲ್ ಪಂದ್ಯಾವಳಿ ನಗರದಲ್ಲಿ ನಡೆಯುವ ದಿನಗಳಂದು ಮಧ್ಯರಾತ್ರಿ 1.30ರ ತನಕ ಮೆಟ್ರೊ ರೈಲುಗಳ ಕಾರ್ಯಾಚರಣೆ ಮಾಡಲು ಬೆಂಗಳೂರು ಮೆಟ್ರೊ ರೈಲು ನಿಗಮ(ಬಿಎಂಆರ್‌ಸಿಎಲ್) ನಿರ್ಧರಿಸಿದೆ.

ಏಪ್ರಿಲ್ 2, 10, 17, 26 ಮತ್ತು ಮೇ 21ರಂದು ಬೆಂಗಳೂರಿನಲ್ಲಿ ಪಂದ್ಯಾವಳಿಗಳು ಆಯೋಜನೆಗೊಂಡಿವೆ. ಬೈಯಪ್ಪನಹಳ್ಳಿ–ಕೆಂಗೇರಿ, ನಾಗಸಂದ್ರ–ರೇಷ್ಮೆ ಸಂಸ್ಥೆ ಮಾರ್ಗಗಳ ರೈಲುಗಳ ಸಂಚಾರ ಅವಧಿ ವಿಸ್ತರಿಸಲಾಗಿದೆ. ಕೊನೆಯ ನಿಲ್ದಾಣಗಳಿಂದ(ಬೈಯಪ್ಪನಹಳ್ಳಿ, ಕೆಂಗೇರಿ, ನಾಗಸಂದ್ರ, ರೇಷ್ಮೆ ಸಂಸ್ಥೆ) ರಾತ್ರಿ 1 ಗಂಟೆಗೆ ಕೊನೆಯ ರೈಲುಗಳು ಹೊರಡಲಿವೆ.

ಮೆಜೆಸ್ಟಿಕ್ ನಾಡಪ್ರಭು ಕೆಂಪೇಗೌಡ ನಿಲ್ದಾಣದಿಂದ ನಾಲ್ಕೂ ರೈಲುಗಳು 1.30 ಗಂಟೆಗೆ ಕೊನೆಯ ನಿಲ್ದಾಣಗಳತ್ತ ಹೊರಡಲಿವೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ವಿಸ್ತರಿತ ಅವಧಿಯಲ್ಲಿ ಪ್ರಯಾಣಿಸಲು ಟೋಕನ್, ಕ್ಯೂಆರ್ ಕೋಡ್ ಟಿಕೆಟ್ ಮತ್ತು ಸ್ಮಾರ್ಟ್ ಕಾರ್ಡ್‌ಗಳನ್ನು ಬಳಸಬಹುದು. ಪಂದ್ಯಾವಳಿ ಮುಗಿದ ಬಳಿಕ ಪ್ರಯಾಣಿಕರು ತ್ವರಿತವಾಗಿ ಪ್ರಯಾಣಿಸಲು ಅನುಕೂಲ ಆಗುವಂತೆ ವಾಪಸ್ ಪ್ರಯಾಣಕ್ಕೆ ಪೇಪರ್ ಟಿಕೆಟ್‌ಗಳನ್ನು ಖರೀದಿಸಬಹುದು.

ಎಲ್ಲಾ ನಿಲ್ದಾಣಗಳಲ್ಲಿ ಮಧ್ಯಾಹ್ನ 3.30 ಗಂಟೆಯಿಂದ ಪೇಪರ್ ಟಿಕೆಟ್ ಲಭ್ಯ ಇರಲಿವೆ. ₹50 ದರದ ಪೇಪರ್ ಟಿಕೆಟ್‌ಗಳನ್ನು ಕಬ್ಬನ್ ಪಾರ್ಕ್ ಮತ್ತು ಎಂ.ಜಿ.ರಸ್ತೆ ನಿಲ್ದಾಣಗಳಿಂದ ರಾತ್ರಿ 8 ಗಂಟೆಯ ಬಳಿಕ ಬಳಕೆ ಮಾಡಬಹುದಾಗಿದೆ ಎಂದು ವಿವರಿಸಿದೆ.

ವೈಟ್‌ಫೀಲ್ಡ್–ಕೆ.ಆರ್.ಪುರ ನಡುವಿನ ಹೊಸ ಮಾರ್ಗಕ್ಕೆ ಈ ವಿಸ್ತರಿತ ಅವಧಿ ಅನ್ವಯವಾಗುವುದಿಲ್ಲ. ಎಂದಿನಂತೆ ರಾತ್ರಿ 11 ಗಂಟೆಗೆ ಈ ಎರಡೂ ನಿಲ್ದಾಣಗಳಿಂದ ಕೊನೆಯ ರೈಲುಗಳು ಹೊರಡಲಿವೆ ಎಂದು ಸ್ಪಷ್ಟಪಡಿಸಿದೆ.

ಬಿಜೆಪಿ ಮುಖಂಡನ ಮನೆಯಲ್ಲಿ 504 ಕುಕ್ಕರ್ ಜಪ್ತಿ

ಬೆಂಗಳೂರು: ಬಿಟಿಎಂ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡ ಅನಿಲ್ ಶೆಟ್ಟಿ ಮನೆ ಮೇಲೆ ಚುನಾವಣಾಧಿಕಾರಿ ತಂಡ ದಾಳಿ ಮಾಡಿದ್ದು, 504 ಕುಕ್ಕರ್ ಜಪ್ತಿ ಮಾಡಿದೆ.

'ಕೋರಮಂಗಲ 4ನೇ ಹಂತದಲ್ಲಿರುವ ಅನಿಲ್ ಶೆಟ್ಟಿ ಮನೆಯಲ್ಲಿ ಕುಕ್ಕರ್ ಸಂಗ್ರಹಿಸಿದ್ದ ಬಗ್ಗೆ ಮಾಹಿತಿ ಬಂದಿತ್ತು. ಮತದಾರರ ನೋಂದಣಾಧಿಕಾರಿ ವರಲಕ್ಷ್ಮಮ್ಮ ನೇತೃತ್ವದ ತಂಡ ಮಾರ್ಚ್ 28ರಂದು ದಾಳಿ ಮಾಡಿದೆ' ಎಂದು ಪೊಲೀಸರು ಹೇಳಿದರು.

'ಮನೆಯ ನೆಲ ಮಹಡಿ ಕೊಠಡಿಯಲ್ಲಿ 10 ಕುಕ್ಕರ್ ಹಾಗೂ 2ನೇ ಮಹಡಿಯ ಕೊಠಡಿಯಲ್ಲಿ 494 ಕುಕ್ಕರ್‌ಗಳು ಪತ್ತೆಯಾಗಿವೆ. ದಾಳಿ ವೇಳೆ ಅನಿಲ್ ಶೆಟ್ಟಿ ಮನೆಯಲ್ಲಿ ಇರಲಿಲ್ಲ. ಮತದಾರರಿಗೆ ಹಂಚಲೆಂದು ಕುಕ್ಕರ್ ಸಂಗ್ರಹಿಸಿಟ್ಟಿದ್ದು ಗೊತ್ತಾಗಿದೆ. ಈ ಬಗ್ಗೆ ಕೋರಮಂಗಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದರು.

ಸರ್ಜಾಪುರ ರಸ್ತೆಯ ದೊಡ್ಡಕನ್ನೆಲ್ಲಿಯಲ್ಲಿ ಶ್ರೀರಾಮನವಮಿ ಅಂಗವಾಗಿ ತಿರುಮಲಸ್ವಾಮಿ ಬ್ರಹ್ಮರಥೋತ್ಸವ ಸಂಭ್ರಮದಿಂದ ನೆರವೇರಿತು

Venues in Bangalore

- Infantry Road: Safina Plaza, No.84/85 - 01
- Jayanagar: Premchandra Kalyana Mahal, 2nd Block, (Near Ashoka Pillar) - 11
- Koramangala: Apoorva International, #35A, Raheja Arcade, Opp Star Box - 95
- Basavanagudi: Amolak Apparels, #104, Bull Temple Road, Near Ramakrishna Ashram - 19

Org. by: Surya Agency Pvt. Ltd.

HARSHA INSTITUTIONS

OWN HOSPITAL HARSHA HOSPITAL

116th Birthday Wishes Dr. Shri Shri Shri Shivakumara Swamiji's

JOURNEY TOWARDS BETTERMENT

COURSES OFFERED

BBA
B.Com
BCA
ADD-ON PROGRAMS
Logistics and supply chain Management
Travel and tourism Managements
Healthcare Management
Digital Marketing
Data Analytics
International Business

BBA
Aviation

B.Com
Logistics & Chain Management

B.Sc
Forensic Science

BCA
Cloud Computing
Artificial Intelligence
Cyber Security

BHA
Bachelor of Hospital Administration

D PHARMACY
B PHARMACY

ALLIED HEALTH SCIENCES (B.Sc)
Imaging Technology
Perfusion Technology
Renal Dialysis
Optometry
Operation & Anesthesia Theatre Technology
Medical Laboratory Technology
Emergency Medicine

PARAMEDICAL (DIPLOMA)
Medical Laboratory Technology
X-Ray Technology
Operation & Anesthesia Theatre Technology
Dialysis Technology
Ophthalmic Technology

GNM
B.SC NURSING
PB B.SC NURSING
M.SC NURSING
Community
Psychiatry
Paediatrics
OBG
Medical & Surgical

MBA
HR
Finance
Aviation
Marketing
Startups & SMES
Business Analytics
International Business
Healthcare Management
Banking Finance & Insurance
Logistics & Supply Chain Management

MCA
Cyber Security
Artificial Intelligence
Cloud Computing
Data Analytics

BPT
Bachelor of Physiotherapy

MPT
Master of Physiotherapy

FOR ADMISSIONS: +91 94480 40825
www.harshainstitutions.com

No. 193/4, Ramaiah Harsha Hospital Campus, Sondekoppa Circle, NH 4, Nelamangala, Bangalore - 562 123, Karnataka, India

ಕೆನರು ಬ್ಯಾಂಕ್ केनरा बैंक Canara Bank

Premises & Estate Section, G A Wing, Head Office, No. 112, J C Road, Bangalore-560002

NOTICE FOR INSTALLATION AND DISMANTLING OF LIFT

Fresh tenders are invited for :

1. Supply and installation of 8 passenger service lift by dismantling existing old 8 passenger service lift at Sahyadri Apartments, Mysuru Road, Bengaluru 560026.
2. Supply and installation of 6 passenger service lift by dismantling existing old 6 passenger service lift at Kamadhenu Apartment, Kingston Road, Richmond Town, Bengaluru 560025.

For further details and other terms and conditions, please visit Bank's website **https://canarabank.com/tenders.aspx.** For any clarifications **contact 080-22238819/22297695 extn 219/214. Last date for submission of tender form is 21.04.2023, 3:00 PM.**

Further, all addendum/corrigendum including modification if any, will be hosted at the Bank's website only.

Place : Bengaluru, Date : 01.04.2023 — Sd/- Asst. General Manager

ವೈಮಾಂತರಿಕ ಅಭಿವೃದ್ಧಿ ಸಂಸ್ಥೆ

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ

ರಕ್ಷಣಾ ಸಚಿವಾಲಯ, ಭಾರತ ಸರ್ಕಾರ

ನ್ಯೂ ತಿಪ್ಪಸಂದ್ರ ಅಂಚೆ, ಬೆಂಗಳೂರು 560 075

ದೂರವಾಣಿ ಸಂ.: 080–25057049/7095/7036

ವೈಮಾಂತರಿಕ ಅಭಿವೃದ್ಧಿ ಸಂಸ್ಥೆ (ಎಡಿಇ), ಬೆಂಗಳೂರು ಇವರಿಗೆ ಸಂಶೋಧನಾ ವ್ಯಕ್ತಿಗಳ ಆಯ್ಕೆ ಪ್ರಕ್ರಿಯೆ: ರಿಸರ್ಚ್ ಅಸೋಸಿಯೇಟ್ (ಆರ್‌ಎ) ಮತ್ತು ಜೂನಿಯರ್ ರಿಸರ್ಚ್ ಫೆಲೋ (ಜೆಆರ್‌ಎಫ್)

ಎಡಿಇ, ಬೆಂಗಳೂರು ಇಲ್ಲಿರುವ ಕೆಳಕಂಡ ಖಾಲಿಹುದ್ದೆಗಳಿಗೆ ಕೆಳಗಿನ ದಿನಾಂಕಗಳಂದು ರಿಸರ್ಚ್ ಅಸೋಸಿಯೇಟ್ (ಆರ್‌ಎ) ಮತ್ತು ಜೂನಿಯರ್ ರಿಸರ್ಚ್ ಫೆಲೋ (ಜೆಆರ್‌ಎಫ್) ಎಂಬ ರಿಸರ್ಚ್ ಫೆಲೋಶಿಪ್ ನೀಡಲು ಆಯ್ಕೆ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ.

ಕ್ರ. ಸಂ.	ಫೆಲೋಶಿಪ್ ಹೆಸರು	ಶಿಸ್ತು	ಅಗತ್ಯ ವಿದ್ಯಾರ್ಹತೆ	ಖಾಲಿಹುದ್ದೆಗಳ ಸಂಖ್ಯೆ	ಸ್ಕ್ರೀನಿಂಗ್ ಟೆಸ್ಟ್ ಮತ್ತು ಸಂದರ್ಶನದ ದಿನಾಂಕ
1	ರಿಸರ್ಚ್ ಅಸೋಸಿಯೇಟ್ (ಆರ್‌ಎ)	ಏರೋನಾಟಿಕಲ್/ ಮೆಕ್ಯಾನಿಕಲ್ ಇಂಜಿನಿಯರಿಂಗ್	ಏರೋನಾಟಿಕಲ್/ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಪಿಹೆಚ್.ಡಿ ಪಡೆದಿರಬೇಕು ಮತ್ತು ಕಾಂಪೋಸಿಟ್ ಮಟೀರಿಯಲ್ ಆಧರಿತ ಸ್ಟ್ರಕ್ಚರಲ್ ಡಿಸೈನ್ ಹಾಗೂ ಅನಲೈಸಿಸ್, ಹೊಸ ಸಿಮುಲೇಶನ್ ಟೆಕ್ನಿಕ್ ಬಳಸಿಕೊಂಡು ಏರ್‌ಫ್ರೇಮ್ ಡಿಸೈನ್ ಆಪ್ಟಿಮೈಸೇಶನ್, ಸ್ಟ್ರಕ್ಚರಲ್ ಡಿಸೈನ್ ಪ್ರಾಸೆಸ್‌ನಲ್ಲಿ ಆಟೋಮೇಶನ್ ಪರಿಣಿತಿ ಹೊಂದಿರಬೇಕು. (ಅಥವಾ) ಏರೋನಾಟಿಕಲ್/ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಪ್ರಥಮ ದರ್ಜೆ ಎಂ.ಇ/ಎಂ.ಟೆಕ್ ಪಡೆದಿರಬೇಕು ಮತ್ತು ಮೂರು ವರ್ಷಗಳ ಸಂಶೋಧನೆ, ಭೋದನೆ ಅಥವಾ ವಿನ್ಯಾಸ ಮತ್ತು ಅಭಿವೃದ್ಧಿಯಲ್ಲಿ ಅನುಭವ ಹೊಂದಿರಬೇಕು, ಎಂ.ಇ/ಎಂ.ಟೆಕ್ ನಂತರ, ಸೈನ್ಸ್ ಸೈಟೇಶನ್ ಇಂಡೆಕ್ಸ್ಡ್ ಜರ್ನಲ್‌ನಲ್ಲಿ ಕನಿಷ್ಠ ಒಂದು ಸಂಶೋಧನಾ ಪತ್ರಿಕೆ ಪ್ರಕಟಿಸಿರಬೇಕು. ಅಪೇಕ್ಷಣೀಯ: ಕಾಂಪೋಸಿಟ್ ಮಟೀರಿಯಲ್ ಆಧರಿತ ಸ್ಟ್ರಕ್ಚರಲ್ ಡಿಸೈನ್ ಹಾಗೂ ಅನಲೈಸಿಸ್, ಹೊಸ ಸಿಮುಲೇಶನ್ ಟೆಕ್ನಿಕ್ ಬಳಸಿಕೊಂಡು ಏರ್‌ಫ್ರೇಮ್ ಡಿಸೈನ್ ಆಪ್ಟಿಮೈಸೇಶನ್, ಸ್ಟ್ರಕ್ಚರಲ್ ಡಿಸೈನ್ ಪ್ರಾಸೆಸ್‌ನಲ್ಲಿ ಆಟೋಮೇಶನ್ ಜ್ಞಾನ ಹೊಂದಿರಬೇಕು.	01 (ಒಂದು)	11 ಮೇ 2023 (ಗುರುವಾರ) ಸಂದರ್ಶನ ಮಾತ್ರ
2		ಇಲೆಕ್ಟ್ರಾನಿಕ್ಸ್	ಇಲೆಕ್ಟ್ರಾನಿಕ್ಸ್/ಮೈಕ್ರೊವೇವ್ಸ್‌ನಲ್ಲಿ ಪಿಹೆಚ್.ಡಿ ಪಡೆದಿರಬೇಕು ಮತ್ತು ಡಿಸೈನಿಂಗ್ ಮತ್ತು ಇಎಎಸ್‌ಎ ಆಂಟೆನ್ನಾ/ಲೋ ಆಬ್ಸರ್ವೆಬಲ್ ಟೆಕ್ನಾಲಜಿಗಳಿಗೆ ಸಂಬಂಧಿತ ಪರಣಿತಿ ಹೊಂದಿರಬೇಕು. (ಅಥವಾ) ಇಲೆಕ್ಟ್ರಾನಿಕ್ಸ್, ಕಮ್ಯುನಿಕೇಶನ್, ಮೈಕ್ರೊವೇವ್ಸ್ ಮತ್ತು ಆರ್‌ಎಫ್ ಸಂಬಂಧಿತ ಯಾವುದೇ ಡಿಸಿಪ್ಲಿನ್‌ನಲ್ಲಿ ಪ್ರಥಮ ದರ್ಜೆಯಲ್ಲಿ ಎಂ.ಇ/ಎಂ.ಟೆಕ್ ಪಡೆದಿರಬೇಕು ಮತ್ತು ಮೂರು ವರ್ಷಗಳ ಸಂಶೋಧನಾ, ಭೋದನಾ ಅಥವಾ ವಿನ್ಯಾಸ ಮತ್ತು ಅಭಿವೃದ್ಧಿಯಲ್ಲಿ ಅನುಭವ ಹೊಂದಿರಬೇಕು ಹಾಗೂ ಎಂ.ಇ/ಎಂ.ಟೆಕ್ ನಂತರ ಸೈನ್ಸ್ ಸೈಟೇಶನ್ ಇಂಡೆಕ್ಸ್ಡ್ ಜರ್ನಲ್‌ನಲ್ಲಿ ಕನಿಷ್ಠ ಒಂದು ಸಂಶೋಧನಾ ಪತ್ರಿಕೆ ಪ್ರಕಟಿಸಿರಬೇಕು. ಅಪೇಕ್ಷಣೀಯ: ಎಫ್‌ಎಸ್‌ಎಸ್ ಇಎಂ ಡಿಸೈನ್, ಸಿಮುಲೇಶನ್ ಮತ್ತು ಮಾಡೆಲಿಂಗ್, ರಡಾರ್ ಅಬ್ಸಾರ್ಬರ್ಸ್, ರಾಡೋಮ್ಸ್ ಮತ್ತು ಎಇಎಸ್‌ಎ ಆಂಟೆನ್ನಾಗಳಲ್ಲಿ ಜ್ಞಾನ ಹೊಂದಿರಬೇಕು.	01 (ಒಂದು)	11 ಮೇ 2023 (ಗುರುವಾರ) ಸಂದರ್ಶನ ಮಾತ್ರ
3	ಜೂನಿಯರ್ ರಿಸರ್ಚ್ ಅಸೋಸಿಯೇಟ್ (ಜೆಆರ್‌ಎಫ್)	ಇಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಇಂಜಿನಿಯರಿಂಗ್	ಪ್ರಥಮ ದರ್ಜೆಯಲ್ಲಿ ಬಿ.ಇ/ಬಿ.ಟೆಕ್ ಪಡೆದಿರಬೇಕು ಜೊತೆಗೆ ಅಧಿಕೃತ ಗೇಟ್ ಸ್ಕೋರ್ ಹೊಂದಿರಬೇಕು. (ಅಥವಾ) ಬಿ.ಇ/ಬಿ.ಟೆಕ್ ಮತ್ತು ಎಂ.ಇ/ಎಂ.ಟೆಕ್ ಎರಡೂ ಹಂತಗಳಲ್ಲೂ ಪ್ರಥಮ ದರ್ಜೆ ಹೊಂದಿರಬೇಕು	02 (ಎರಡು)	09 ಮೇ 2023 (ಮಂಗಳವಾರ) ಮತ್ತು 10 ಮೇ 2023* (ಬುಧವಾರ)
4		ಏರೋನಾಟಿಕಲ್ ಇಂಜಿನಿಯರಿಂಗ್		02 (ಎರಡು)	

ಸೂಚನೆ: 09 ಮೇ 2023 ರಂದು (ಒಂದು ದಿನ) ಜೆಆರ್‌ಎಫ್ ಖಾಲಿಹುದ್ದೆಗಳಿಗೆ ಮಾತ್ರ ಸ್ಕ್ರೀನಿಂಗ್ ಪರೀಕ್ಷೆ ಕೈಗೊಳ್ಳಬಹುದಾಗಿರುತ್ತದೆ.

***ಆಯ್ಕೆಗೊಂಡಿರುವ ಅಭ್ಯರ್ಥಿಗಳ ಸಂಖ್ಯೆಯ ಆಧಾರದಲ್ಲಿ, ಮಾರನೇಯ ದಿನವೂ ಕೂಡ (10 ಮೇ 2023, ಬುಧವಾರ) ಸಂದರ್ಶನ ಮುಂದುವರಿಯಬಹುದಾಗಿರುತ್ತದೆ.**

ಫೆಲೋಶಿಪ್ ಸಂಭಾವನೆ:

ಆರ್‌ಎ: ಮಾಸಿಕ ರೂ.54,000/– ಜೊತೆಗ ಅನ್ವಯಿಕ ಹೆಚ್‌ಆರ್‌ಎ

ಜೆಆರ್‌ಎಫ್: ಮಾಸಿಕ ರೂ.31,000/– ಜೊತೆಗ ಅನ್ವಯಿಕ ಹೆಚ್‌ಆರ್‌ಎ

ಹೆಚ್ಚಿನ ವಿವರಗಳಿಗಾಗಿ ಭೇಟಿ ಕೊಡಿ https://www.rac.gov.in

CBC 10301/11/0209/2223 — ಸಹಿ/– ನಿರ್ದೇಶಕರು

ಒಳಮೀಸಲಾತಿ ಜಾರಿ ಮಾಡಿ ಸಾಮಾಜಿಕ ನ್ಯಾಯ ನೀಡಿದ
ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಜಿ
ಹಾಗೂ ಕೇಂದ್ರ ಸಚಿವರಾದ ಶ್ರೀ ಅಮಿತ್ ಶಾ ಜೀ ಮತ್ತು
ರಾಜ್ಯದ ಮುಖ್ಯ ಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ
ಹಾಗೂ ಸಚಿವ ಸಂಪುಟದ ಎಲ್ಲ ಸದಸ್ಯರಿಗೂ
ಹಾಗೂ ಸಮುದಾಯದ ಮುಖಂಡರಿಗೂ
ಹೃದಯಪೂರ್ವಕ ಧನ್ಯವಾದಗಳು
ಕರ್ನಾಟಕ ಮಾದಿಗ ಸಮುದಾಯ
ವತಿಯಿಂದ
ಹೃದಯಪೂರ್ವಕ ಅಭಿನಂದನೆಗಳು
ಹಾಗೂ ಧನ್ಯವಾದಗಳು
ಪ್ರಕಟಣೆ: ಮಾದಿಗ ಮಹಾಸಭಾ, ಬೆಂಗಳೂರು

ಮಹಾರಾಷ್ಟ್ರ ಹಾಗೂ ತೆಲಂಗಾಣದ ಆರೋಪಿಗಳು ರೈಲಿನಲ್ಲಿ ಬೆಂಗಳೂರಿಗೆ ತರುತ್ತಿದ್ದ ಗಾಂಜಾ

ಯಶವಂತಪುರ ರೈಲು ನಿಲ್ದಾಣ

ಮುಂಬೈ, ಆಂಧ್ರದಿಂದ ಬಂದು ಚಿನ್ನಾಭರಣ ಕಳವು; ರೈಲುಗಳಲ್ಲಿ ಗಾಂಜಾ ಸಾಗಣೆ ಸರಾಗ

ನಗರದ ರೈಲು ನಿಲ್ದಾಣ: 'ಅಸುರಕ್ಷತೆ' ತಾಣ

• ಆದಿತ್ಯ ಕೆ.ಎ.

ಬೆಂಗಳೂರು: ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆ.ಎಸ್.ಆರ್), ಯಶವಂತಪುರ, ಕೆಂಗೇರಿ, ಬೈಯಪ್ಪನಹಳ್ಳಿ ರೈಲು ನಿಲ್ದಾಣಗಳು ಪ್ರಯಾಣಿಕರ ಪಾಲಿಗೆ 'ಅಸುರಕ್ಷತೆಯ ತಾಣ'ಗಳಾಗಿವೆ.

ರೈಲು ಪ್ರಯಾಣಿಕರ ಚಿನ್ನಾಭರಣ, ಮೊಬೈಲ್ ಸೇರಿದಂತೆ ಬೆಲೆಬಾಳುವ ವಸ್ತುಗಳು ಕಳ್ಳರ ಪಾಲಾಗುತ್ತಿವೆ. ರೈಲುಗಳ ಮೂಲಕ ನಗರಕ್ಕೆ ಹೊರರಾಜ್ಯದಿಂದ ಗಾಂಜಾ ಸರಾಗವಾಗಿ ಪೂರೈಕೆಯಾಗುತ್ತಿದೆ. ರೈಲುಗಳಲ್ಲಿ ಪ್ರಯಾಣ ಮಾಡಲು ಪ್ರಯಾಣಿಕರೇ ಭಯ ಪಡುವ ಸ್ಥಿತಿ ಬಂದಿದೆ.

ಬರೀ ಕಳವು ಪ್ರಕರಣಗಳು ಮಾತ್ರವಲ್ಲ. ಹೊರ ಪ್ರದೇಶದಲ್ಲಿ ಕೊಲೆ ಮಾಡಿ ಮೃತದೇಹಗಳನ್ನು ತಂದು ರೈಲು ನಿಲ್ದಾಣಗಳ ಪ್ಲಾಸ್ಟಿಕ್ ಡ್ರಮ್‌ಗಳಿಗೆ ಹಾಕಿ ಹೋಗುತ್ತಿರುವ ಘಟನೆಗಳೂ ನಡೆಯುತ್ತಿವೆ. ರೈಲು ನಿಲ್ದಾಣದಲ್ಲಿ ಇತ್ತೀಚೆಗೆ ಇಬ್ಬರು ಮಹಿಳೆಯರ ಮೃತದೇಹ ಪತ್ತೆಯಾಗಿದ್ದವು.

ತಮನ್ನಾ ಎಂಬ ಮಹಿಳೆಯನ್ನು ಕೊಲೆ ಮಾಡಿ, ಬೈಯಪ್ಪನಹಳ್ಳಿ ರೈಲು ನಿಲ್ದಾಣದ ಮೂಲಕ ಬಿಹಾರಕ್ಕೆ ಸಾಗಿಸಲು ಡ್ರಮ್ ಸಹಿತ ಆರೋಪಿಗಳು ಬಂದಿದ್ದರು. ಮೃತದೇಹ, ಡ್ರಮ್ ಅನ್ನು ನಿಲ್ದಾಣದಲ್ಲೇ ಬಿಟ್ಟು ತೆರಳಿದ್ದರು. ಅಷ್ಟು ಸುಲಭವಾಗಿ ದುಷ್ಕರ್ಮಿಗಳು ಮೃತದೇಹ ತಂದು ಹಾಕಿದ್ದರಿಂದ ಭದ್ರತೆಯ ಪ್ರಶ್ನೆ ಎದುರಾಗಿದೆ. ತಪಾಸಣೆ ನಡೆಸದೇ ಒಳಗೆ ಪ್ರವೇಶ ಕಲ್ಪಿಸಲಾಗುತ್ತಿದೆ. ಯಾರು ಬೇಕಾದರೂ ಬಂದು ಹೋಗುವ ಸ್ಥಿತಿಯಿದೆ.

ಕೆಎಸ್‌ಆರ್ ಹಾಗೂ ಯಶವಂತಪುರ ರೈಲು ನಿಲ್ದಾಣಕ್ಕೆ ಆಂಧ್ರಪ್ರದೇಶ ಹಾಗೂ ಮುಂಬೈನಿಂದ ಬರುವ ಕಳ್ಳರು ಚಿನ್ನಾಭರಣ, ಮೊಬೈಲ್ ದೋಚುತ್ತಿದ್ದಾರೆ. ಮುಂಬೈನ ಅನ್ವರ್ ಹುಸೇನ್ ಶೇಖ್ ಎಂಬಾತನನ್ನು ಮೂರು ದಿನಗಳ ಹಿಂದಷ್ಟೇ ರೈಲ್ವೆ ಪೊಲೀಸರು ಬಂಧಿಸಿದ್ದರು. ಆತ ಒಂದು ವರ್ಷದ ಅವಧಿಯಲ್ಲಿ ರೈಲ್ವೆ ಪ್ರಯಾಣಿಕರಿಂದ ₹ 23 ಲಕ್ಷ ಮೌಲ್ಯದ ಚಿನ್ನಾಭರಣ ಕಸಿದು ಪರಾರಿಯಾಗಿದ್ದ ಎಂದು ರೈಲ್ವೆ ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಮೆಜೆಸ್ಟಿಕ್ ಬಳಿಯ ಲಾಡ್ಜ್‌ವೊಂದರಲ್ಲಿ ಹುಸೇನ್ ಒಂದು ತಿಂಗಳು ವಾಸ್ತವ್ಯ ಮಾಡುತ್ತಿದ್ದ. ಎರಡು ದಿನಕ್ಕೊಮ್ಮೆ ಕೆಎಸ್‌ಆರ್ ರೈಲು ನಿಲ್ದಾಣಕ್ಕೆ ತೆರಳಿ ಪ್ರಯಾಣಿಕರಿಂದ ಬೆಲೆಬಾಳುವ ವಸ್ತುಗಳನ್ನು ಕಸಿದು ನಾಪತ್ತೆಯಾಗುತ್ತಿದ್ದ. ನಿಲ್ದಾಣದಲ್ಲಿ ಸಿಸಿಟಿವಿ ಕ್ಯಾಮೆರಾಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಹೀಗಾಗಿ ಆರೋಪಿ ಪತ್ತೆಯೂ ಸವಾಲಾಗಿತ್ತು. ಕದ್ದ ವಸ್ತುಗಳನ್ನು ಮುಂಬೈನ ಗುಡ್ಡುರಾಮಧನಿ ಸೋನಿ ಎಂಬಾತನಿಗೆ ಮಾರಾಟ ಮಾಡುತ್ತಿದ್ದ.

ಸಂಜೆ ಬಳಿಕ ನೂಕುನುಗ್ಗಲು: 'ಎರಡೂ ನಿಲ್ದಾಣಗಳಲ್ಲಿ ಸಂಜೆ ಸಮಯದಲ್ಲಿ ಹೆಚ್ಚಿನ ರೈಲು ಬರುತ್ತವೆ. ಆ ವೇಳೆಯಲ್ಲಿ ನೂಕುನುಗ್ಗಲು ಉಂಟಾಗುತ್ತಿದೆ. ಈ ಸಮಯ ನೋಡಿಕೊಂಡು ದುಷ್ಕರ್ಮಿಗಳು ಕೃತ್ಯ ಎಸಗುತ್ತಿದ್ದಾರೆ. ಸ್ಲೀಪರ್ ಕೋಚ್‌ಗಳಲ್ಲಿ ಹೆಚ್ಚಿನ ಕಳವು ಪ್ರಕರಣಗಳು ಪತ್ತೆಯಾಗುತ್ತಿವೆ. ಬೆಂಗಳೂರು ಮೂಲಕ ಹೊರಡುವ ರೈಲುಗಳಲ್ಲಿ 2020ರಲ್ಲಿ 600, 2021ರಲ್ಲಿ 710 ಹಾಗೂ ಕಳೆದ ವರ್ಷ 900 ವಿವಿಧ ರೀತಿಯ ಪ್ರಕರಣಗಳು ಪತ್ತೆಯಾಗಿದ್ದವು' ಎಂದು ರೈಲ್ವೆ ಪೊಲೀಸ್ ಮೂಲಗಳು ತಿಳಿಸಿವೆ.

ಪ್ಯಾಸೆಂಜರ್ ರೈಲುಗಳಲ್ಲಿ ಮದ್ಯ ವ್ಯಸನಿಗಳ ಕಾಟ, ಬೋಗಿಗಳಲ್ಲೇ ಇಸ್ಪೀಟ್ ಆಡುವುದು ನಡೆಯುತ್ತಿವೆ ಎಂದು ಪ್ರಯಾಣಿಕರು ಅಳಲು ತೋಡಿಕೊಳ್ಳುತ್ತಾರೆ. ಇದರಿಂದ ಮಹಿಳೆಯರು, ಮಕ್ಕಳು ಆತಂಕದಿಂದ ಪ್ರಯಾಣಿಸುವಂತಾಗಿದೆ ಎಂದು ಸವಿತಾ ದೂರಿದರು.

ಕೂಡಿಗೇಹಳ್ಳಿ, ಲೊಟ್ಟೆಗೊಲ್ಲಹಳ್ಳಿ, ಚಿನ್ನಸಂದ್ರ, ಚಿಕ್ಕಬಾಣಾವರ, ವೈಟ್‌ಫೀಲ್ಡ್, ಕೆ.ಆರ್.ಪುರ, ಬಾಣಸವಾಡಿ ನಿಲ್ದಾಣದಲ್ಲಿ ಪ್ರಯಾಣಿಕರ ಮೊಬೈಲ್ ಕಳವು ಪ್ರಕರಣಗಳು ಹೆಚ್ಚುತ್ತಿವೆ. ಅಲ್ಲದೆ ಆ ಪ್ರದೇಶದಲ್ಲಿ ಸಂಚರಿಸುವ ರೈಲುಗಳ ಬಾಗಿಲು ಬಳಿಯಲ್ಲಿ ನಿಂತಿದ್ದ ಪ್ರಯಾಣಿಕರತ್ತ ದುಷ್ಕರ್ಮಿಗಳು ಕಲ್ಲು ಎಸೆದು, ಮೊಬೈಲ್ ಬಿದ್ದ ತಕ್ಷಣ ಅದನ್ನು ಹೊತ್ತೊಯ್ಯುತ್ತಿದ್ದಾರೆ. ವಂದೇ ಭಾರತ್ ರೈಲಿಗೆ ಕಲ್ಲು ಎಸೆದ ಪ್ರಕರಣದ ನಂತರ ಆ ಸ್ಥಳಗಳಲ್ಲಿ ಕಾವಲಿಗೆ ಸಿಬ್ಬಂದಿ ನಿಯೋಜಿಸಲಾಗಿದೆ. ಸದ್ಯಕ್ಕೆ ಕಲ್ಲೆ ಎಸೆಯುವ ಕೃತ್ಯಗಳು ಕಡಿಮೆಯಾಗಿವೆ ಎಂದು ರೈಲ್ವೆ ಪೊಲೀಸರು ಹೇಳುತ್ತಾರೆ.

ಕೆಟ್ಟುಹೋದ ಬ್ಯಾಗೇಜ್ ಸ್ಕ್ಯಾನರ್

ಕೆ.ಎಸ್.ಆರ್ ನಿಲ್ದಾಣದಲ್ಲಿ ಬ್ಯಾಗೇಜ್ ಸ್ಕ್ಯಾನರ್ ಕೆಟ್ಟುಹೋಗಿ ಬಹಳ ದಿನಗಳು ಕಳೆದಿವೆ. ಪ್ರಯಾಣಿಕರು ತರುವ ಲಗೇಜ್ ಅನ್ನು ಪರಿಶೀಲನೆ ಮಾಡುತ್ತಿಲ್ಲ. 'ಬ್ಯಾಗೇಜ್ ಸ್ಕ್ಯಾನರ್ ಅನ್ನು ದುರಸ್ತಿ ಪಡಿಸುವಂತೆ ನೈರುತ್ಯ ರೈಲ್ವೆ ಇಲಾಖೆ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಜತೆಗೆ, ಮೂರು ನಿಲ್ದಾಣಗಳಲ್ಲೂ ಸಿಸಿಟಿವಿ ಕ್ಯಾಮೆರಾ ಹೆಚ್ಚಿಸುವಂತೆ ಪತ್ರದಲ್ಲಿ ಕೋರಲಾಗಿದೆ. ರೈಲುಗಳು ಚಲಿಸುವ ವೇಳೆ ರೈಲ್ವೆ ರಕ್ಷಣಾ ಪೊಲೀಸರು ಭದ್ರತೆ ಕೊಡಬೇಕು. ಪ್ರಯಾಣಿಕರು, ನಿದ್ರೆಗೆ ಜಾರಿದ ವೇಳೆ ವಸ್ತುಗಳನ್ನು ಕಳವು ಮಾಡಲಾಗುತ್ತಿದೆ' ಎಂದು ರೈಲ್ವೆ ವಿಭಾಗದ ಎಸ್‌ಪಿ ಎಸ್. ಕೆ.ಸೌಮ್ಯಲತಾ 'ಪ್ರಜಾವಾಣಿ'ಗೆ ತಿಳಿಸಿದರು.

ತಪಾಸಣೆಯೇ ಇಲ್ಲ!

ವರ್ಷದಿಂದ ಈಚೆಗೆ ಯಶವಂತಪುರ ರೈಲು ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಿದೆ. ಹೊಸ ರೈಲುಗಳೂ ಈ ನಿಲ್ದಾಣದಿಂದಲೇ ಹೊರಡುತ್ತಿವೆ. ಜತೆಗೆ, ಮೆಟ್ರೊ ಸಂಪರ್ಕದ ಕಾರಣಕ್ಕೆ ದಟ್ಟಣೆ ಹೆಚ್ಚಿದೆ. ದಿನದ 24 ಗಂಟೆಯೂ ಪ್ರಯಾಣಿಕರು ಇರುತ್ತಾರೆ. ಇಲ್ಲಿ ಯಾವುದೇ ತಪಾಸಣೆ ನಡೆಸುತ್ತಿಲ್ಲ. 'ಯಾರು ಒಳ ಬರುತ್ತಾರೆ. ಯಾರು ಹೊರ ಹೋಗುತ್ತಾರೆ ಎಂಬುದೇ ತಿಳಿಯುವುದಿಲ್ಲ' ಎಂದು ಪ್ರಯಾಣಿಕರು ಆತಂಕ ವ್ಯಕ್ತಪಡಿಸುತ್ತಾರೆ.

ಪ್ರಜಾವಾಣಿ ವಿಶೇಷ

ಸುದ್ದಿ 2 ನಿಮಿಷ

ದೇಶದ ಶೇ 40 ಗ್ರಾಮಗಳಿಂದ ಒಡಿಎಫ್ ಪ್ಲಸ್ ಗುರಿ ಸಾಧನೆ

ನವದೆಹಲಿ (ಪಿಟಿಐ): 'ಕಳೆದ ಒಂದು ವರ್ಷದಲ್ಲಿ ದೇಶದಲ್ಲಿ ಇಲ್ಲಿಯವರೆಗೂ ಶೇ 40ರಷ್ಟು ಗ್ರಾಮಗಳು ಒಡಿಎಫ್ ಪ್ಲಸ್ (ಬಯಲು ಶೌಚ ಮುಕ್ತ) ವರ್ಗಕ್ಕೆ ಸೇರಿವೆ ಎಂದು ಘೋಷಿಸಲಾಗಿದೆ. ಶೇ 33ರಷ್ಟು ಗ್ರಾಮಗಳು ಈ ಗುರಿಯನ್ನು ಸಾಧಿಸುವತ್ತ ಮುನ್ನಡೆಯುತ್ತಿವೆ' ಎಂದು ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರು ಶುಕ್ರವಾರ ತಿಳಿಸಿದರು.



'ಮುಂದಿನ ಆರ್ಥಿಕ ವರ್ಷದ ವೇಳೆಗೆ 50 ಸಾವಿರಕ್ಕೂ ಹೆಚ್ಚು ಗ್ರಾಮಗಳನ್ನು ಒಡಿಎಫ್ ಪ್ಲಸ್ ವರ್ಗಕ್ಕೆ ಸೇರಿಸುವ ಗುರಿಯನ್ನು ಹೊಂದಲಾಗಿದೆ' ಎಂದು ಅವರು ಪತ್ರಕರ್ತರಿಗೆ ತಿಳಿಸಿದರು.

'ಈ ಗುರಿ ಸಾಧಿಸುವಲ್ಲಿ ಮಾಡುವಲ್ಲಿ ತೆಲಂಗಾಣ (ಶೇ 100), ತಮಿಳುನಾಡು (ಶೇ 95) ಹಾಗೂ ಕರ್ನಾಟಕ (ಶೇ 93.5) ರಾಜ್ಯಗಳು ಅತ್ಯುತ್ತಮ ಸಾಧನೆ ಮಾಡಿವೆ' ಎಂದು ವಿವರಿಸಿದರು.

ಬಯಲು ಶೌಚ ಮುಕ್ತ ಸ್ಥಿತಿಯನ್ನು ಉಳಿಸಿಕೊಳ್ಳುವ, ಸಮರ್ಪಕವಾಗಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯನ್ನು ಮಾಡುವ ಹಾಗೂ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವ ರಾಜ್ಯಗಳಿಗೆ ಒಡಿಎಫ್-ಪ್ಲಸ್ ಸ್ಥಾನವನ್ನು ನೀಡಲಾಗುತ್ತದೆ.

ಲಿಪ್‌ಸ್ಟಿಕ್ ಹಚ್ಚಿಕೊಳ್ಳುವ ಗಂಡ: ಠಾಣೆ ಮೆಟ್ಟಿಲೇರಿದ ಪತ್ನಿ

ಬೆಂಗಳೂರು: 'ನನ್ನ ಗಂಡ ಲಿಪ್‌ಸ್ಟಿಕ್ ಹಚ್ಚಿಕೊಳ್ಳುತ್ತಾರೆ. ಹೆಂಗಸರ ಒಳಉಡುಪು ತೊಟ್ಟುಕೊಂಡು ವಿಚಿತ್ರವಾಗಿ ವರ್ತಿಸುತ್ತಾರೆ. ದಿನದಿಂದ ದಿನಕ್ಕೆ ಅವರ ವರ್ತನೆ ಬದಲಾಗಿದ್ದು, ಇದನ್ನು ಪ್ರಶ್ನಿಸಿದ್ದಕ್ಕೆ ಕಿರುಕುಳ ನೀಡುತ್ತಿದ್ದಾರೆ' ಎಂದು ಆರೋಪಿಸಿ ಮಹಿಳೆಯೊಬ್ಬರು ಕುಮಾರಸ್ವಾಮಿ ಲೇಔಟ್ ಠಾಣೆಗೆ ದೂರು ನೀಡಿದ್ದಾರೆ.

'ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ 25 ವರ್ಷದ ಮಹಿಳೆ ದೂರು ನೀಡಿದ್ದಾರೆ. ವರದಕ್ಷಿಣೆಗಾಗಿ ಪೀಡಿಸಿ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿರುವ ಆರೋಪದಡಿ ಪತಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ದೂರಿನ ವಿವರ: 'ವೈವಾಹಿಕ ಜಾಲತಾಣದ ಮೂಲಕ ಪರಿಚಯವಾಗಿ ಮದುವೆಯಾಗಿದ್ದೆ. ಮೊದಲ ದಿನದಿಂದಲೂ ವಿಚಿತ್ರವಾಗಿ ವರ್ತಿಸುತ್ತಿರುವ ಪತಿ, ತಮಗೆ ಪುರುಷರೆಂದರೆ ಇಷ್ಟವೆಂದು ಕೂಗಾಡುತ್ತಾರೆ. ಅದನ್ನು ಪ್ರಶ್ನಿಸಿದರೆ, ಮನೆ ಬಿಟ್ಟು ಹೋಗುವಂತೆ ಹಾಗೂ ವರದಕ್ಷಿಣೆ ತರುವಂತೆ ಪೀಡಿಸುತ್ತಾರೆ. ಹಲವು ಬಾರಿ ಹಲ್ಲೆ ಸಹ ಮಾಡಿದ್ದಾರೆ' ಎಂದು ದೂರಿನಲ್ಲಿ ಮಹಿಳೆ ಉಲ್ಲೇಖಿಸಿದ್ದಾರೆ.

ಲಂಚ: ಇಬ್ಬರು ಐ.ಟಿ ಅಧಿಕಾರಿಗಳಿಗೆ 4 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆರಿಗೆಗೆ ಸಂಬಂಧಿಸಿದ ಪ್ರಕರಣವೊಂದನ್ನು ಕೈಬಿಡಲು ವ್ಯಕ್ತಿಯೊಬ್ಬರಿಂದ ₹ 2.5 ಲಕ್ಷ ಲಂಚ ಪಡೆದಿದ್ದ ಪ್ರಕರಣದಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಾದ ಅಭಿಷೇಕ್ ತ್ರಿಪಾಠಿ ಮತ್ತು ಅಲೋಕ್ ತಿವಾರಿ ಎಂಬುವವರಿಗೆ ಧಾರವಾಡದ ಸಿಬಿಐ ವಿಶೇಷ ನ್ಯಾಯಾಲಯ ತಲಾ ನಾಲ್ಕು ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ ತಲಾ ₹ 1.10 ಲಕ್ಷ ದಂಡ ವಿಧಿಸಿದೆ.

ಬೆಳಗಾವಿ ಮತ್ತು ವಿಜಯಪುರದಲ್ಲಿ ಕರ್ತವ್ಯಕ್ಕೆ ನಿಯೋಜಿತರಾಗಿದ್ದ ಅಭಿಷೇಕ್ ಹಾಗೂ ಅಲೋಕ್ ಮೂಲದಲ್ಲಿ ಕಡಿತ ಮಾಡಿದ ತೆರಿಗೆಯ (ಟಿಡಿಎಸ್) ಪಾವತಿ ವಿಳಂಬ ಮಾಡಿದ ಆರೋಪದ ಮೇಲೆ ಈ ಅಧಿಕಾರಿಗಳು ಉದ್ದಿಮೆಯೊಂದರ ಮಾಲೀಕರಿಗೆ ನೋಟಿಸ್ ಜಾರಿ ಮಾಡಿದ್ದರು. ಈ ಸಂಬಂಧ ಅಧಿಕಾರಿಗಳನ್ನು ಭೇಟಿ ಮಾಡಿದಾಗ ಪ್ರಕರಣ ಕೈಬಿಡಲು ₹ 4 ಲಕ್ಷ ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದರು. ನಂತರ ಚೌಕಾಸಿ ಮಾಡಿದಾಗ ₹ 2.5 ಲಕ್ಷ ನೀಡಿದರೆ ಪ್ರಕರಣ ಕೈಬಿಡುವ ಭರವಸೆ ನೀಡಿದ್ದರು. ಲಂಚದ ಬೇಡಿಕೆ ಕುರಿತು ಉದ್ಯಮಿ ಸಿಬಿಐಗೆ ದೂರು ನೀಡಿದ್ದರು.

2016ರ ಏಪ್ರಿಲ್‌ನಲ್ಲಿ ಲಂಚ ಪಡೆಯುತ್ತಿದ್ದಾಗ ಇಬ್ಬರೂ ಅಧಿಕಾರಿಗಳನ್ನು ಸಿಬಿಐ ಅಧಿಕಾರಿಗಳು ಬಂಧಿಸಿದ್ದರು. ಆರೋಪಿಗಳ ಪರವಾಗಿ ಲಂಚದ ಹಣ ಪಡೆದಿದ್ದ ವಾಹನ ಚಾಲಕ ಸುನಿಲ್ ಜಾಧವ್ ಎಂಬುವವರನ್ನೂ ಬಂಧಿಸಲಾಗಿತ್ತು. ಪ್ರಕರಣದ ತನಿಖೆ ನಡೆಸಿದ್ದ ಸಿಬಿಐ ಅಧಿಕಾರಿಗಳು, ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ಪೂರ್ಣಗೊಳಿಸಿ ಗುರುವಾರ ತೀರ್ಮಾನ ಪ್ರಕಟಿಸಿದ ಧಾರವಾಡದ ಸಿಬಿಐ ಪ್ರಕರಣಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎನ್. ಸುಬ್ರಮಣ್ಯ, 'ಲಂಚ ಪ್ರಕರಣದಲ್ಲಿ ಅಭಿಷೇಕ್ ತ್ರಿಪಾಠಿ ಮತ್ತು ಅಲೋಕ್ ತಿವಾರಿ ವಿರುದ್ಧದ ಆರೋಪಗಳು ಸಾಬೀತಾಗಿವೆ' ಎಂದರು.

ವಾಹನ ಚಾಲಕ ಸುನಿಲ್ ಜಾಧವ್ ಅವರನ್ನು ಆರೋಪ ಮುಕ್ತಗೊಳಿಸಿ ಆದೇಶ ಹೊರಡಿಸಿದರು. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಅಡಿಯಲ್ಲಿ ಇಬ್ಬರೂ ಅಪರಾಧಿಗಳಿಗೆ ತಲಾ ನಾಲ್ಕು ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ತಲಾ ₹ 1.10 ಲಕ್ಷ ದಂಡ ವಿಧಿಸಿದರು.

ದಂಡ ಪಾವತಿಗೆ ತಪ್ಪಿದಲ್ಲಿ ಇಬ್ಬರಿಗೂ ಹೆಚ್ಚುವರಿಯಾಗಿ ತಲಾ ನಾಲ್ಕು ತಿಂಗಳ ಕಠಿಣ ಜೈಲು ಶಿಕ್ಷೆ ವಿಧಿಸುವಂತೆ ಆದೇಶ ನೀಡಿದರು.

ಪಿಎಸ್‌ಐ ಸೇರಿ ಮೂವರು ಅಮಾನತು

ಬೆಂಗಳೂರು: ವ್ಯಕ್ತಿಯೊಬ್ಬರನ್ನು ಅಕ್ರಮವಾಗಿ ಬಂಧಿಸಿ 36 ಗಂಟೆ ಠಾಣೆಯಲ್ಲಿರಿಸಿ ಕರ್ತವ್ಯ ಲೋಪ ಎಸಗಿದ್ದ ಆರೋಪದಡಿ ಪುಲಿಕೇಶಿನಗರ ಠಾಣೆಯ ಪಿಎಸ್‌ಐ ಸೇರಿದಂತೆ ಮೂವರು ಪೊಲೀಸರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಪಿಎಸ್‌ಐ ರುಮಾನ್ ಪಾಷಾ, ಕಾನ್‌ಸ್ಟೆಬಲ್‌ಗಳಾದ ಲೇಪಾಕ್ಷಪ್ಪ ಹಾಗೂ ಲಕ್ಷ್ಮಣ್ ಅಮಾನತ್ತಾದವರು.

'ಅಕ್ರಮ ಬಂಧನ ಸಂಬಂಧ ಸಂತ್ರಸ್ತ ಕೊಂಡಪ್ಪ ಎಂಬುವವರು ದೂರು ನೀಡಿದ್ದರು. ಪ್ರಾಥಮಿಕ ತನಿಖೆ ನಡೆಸಿದ್ದ ಪಶ್ಚಿಮ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ ಅವರು ಆರೋಪಿತ ಪೊಲೀಸರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ. ಮೂವರ ವಿರುದ್ಧ ಇಲಾಖೆ ವಿಚಾರಣೆಗೂ ಸೂಚಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕಮಿಷನ್ ಆಸೆಗೆ ಸಂಧಾನ: 'ದೂರುದಾರ ಕೊಂಡಪ್ಪ, ರೈಸ್ ಪುಲ್ಲಿಂಗ್ ದಂಧೆಯಲ್ಲಿ ತೊಡಗಿದ್ದರೆಂಬ ಮಾಹಿತಿ ಇದೆ. ವ್ಯಕ್ತಿಯೊಬ್ಬರನ್ನು ವಂಚಿಸಿ ₹ 15 ಲಕ್ಷ ಪಡೆದಿದ್ದರು. ಹಣ ಕಳೆದುಕೊಂಡಿದ್ದ ವ್ಯಕ್ತಿ, ಠಾಣೆ ಮೆಟ್ಟಿಲೇರಿದ್ದರು. ಸಂಧಾನದ ಮೂಲಕ ಹಣ ವಾಪಸು ಕೊಡಿಸುವುದಾಗಿ ಪಿಎಸ್‌ಐ ರುಮಾನ್ ಪಾಷಾ ಹಾಗೂ ಸಿಬ್ಬಂದಿ ಹೇಳಿದ್ದರು. ಅದಕ್ಕಾಗಿ ಕಮಿಷನ್ ನೀಡುವಂತೆ ಬೇಡಿಕೆ ಇರಿಸಿದ್ದರು' ಎಂದು ಮೂಲಗಳು ತಿಳಿಸಿವೆ.

'ಕೊಂಡಪ್ಪ ಅವರನ್ನು ಅಕ್ರಮವಾಗಿ ಬಂಧಿಸಿದ್ದ ಪಿಎಸ್‌ಐ, 36 ಗಂಟೆ ಠಾಣೆಯಲ್ಲಿ ಕೂರಿಸಿದ್ದರು. ಪ್ರಕರಣ ದಾಖಲಿಸುವ ಬೆದರಿಕೆಯೊಡ್ಡಿ ಕೊಂಡಪ್ಪ ಅವರಿಂದ ₹ 15 ಲಕ್ಷವನ್ನು ವ್ಯಕ್ತಿಗೆ ವಾಪಸು ಕೊಡಿಸಿದ್ದರು. ಅದರಲ್ಲಿ ಪಿಎಸ್‌ಐ ಹಾಗೂ ಇತರರು ಕಮಿಷನ್ ಪಡೆದಿರುವ ಆರೋಪವಿದೆ.

ಈ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಶಿಕ್ಷಕಿ ಅನುಮಾನಾಸ್ಪದ ಸಾವು

ಬೆಂಗಳೂರು: ಸುಬ್ರಹ್ಮಣ್ಯಪುರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ರಶ್ಮಿ (32) ಎಂಬುವವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ನೇಣು ಬಿಗಿದ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ.

'ಮಂಡ್ಯದ ರಶ್ಮಿ ಅವರು ನಗರದ ಖಾಸಗಿ ಶಾಲೆಯಲ್ಲಿ ಶಿಕ್ಷಕಿ ಆಗಿದ್ದರು. ಅವರ ಸಾವಿಗೆ ಪತಿ ಅರವಿಂದ್ ಹಾಗೂ ಇತರರು ಕಾರಣವೆಂದು ಆರೋಪಿಸಿ ಪೋಷಕರು ದೂರು ನೀಡಿದ್ದಾರೆ. ಅದರನ್ವಯ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶ್ರೀರಂಗಪಟ್ಟಣದ ಅರವಿಂದ್, ಬೆಂಗಳೂರಿನ ಖಾಸಗಿ ಕಂಪನಿ ಉದ್ಯೋಗಿ. 10 ವರ್ಷಗಳ ಹಿಂದೆ ಅವರನ್ನು ರಶ್ಮಿ ಮದುವೆಯಾಗಿದ್ದರು. 5 ವರ್ಷದ ಮಗುವಿನ ಜೊತೆ ದಂಪತಿ ವಾಸವಿದ್ದರು. ಮನೆಯಲ್ಲಿ ಯಾರೂ ಇಲ್ಲದ ವೇಳೆಯಲ್ಲಿ ನೇಣು ಹಾಕಿಕೊಂಡು ರಶ್ಮಿ ಆತ್ಮಹತ್ಯೆ ಮಾಡಿಕೊಂಡಿರುವ ಅನುಮಾನವಿದೆ. ಪತಿ ಹಾಗೂ ಅವರ ಮನೆಯವರು ಕಿರುಕುಳ ನೀಡಿರುವ ಆರೋಪವಿದೆ' ಎಂದು ಮೂಲಗಳು ತಿಳಿಸಿವೆ.

ಜಲಮಂಡಳಿ ಫೋನ್ ಇನ್ ಇಂದು

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಇದೇ ಏಪ್ರಿಲ್ 1ರಂದು ಬೆಳಿಗ್ಗೆ 9ರಿಂದ 10.30ರವರೆಗೆ ನೇರ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಂಡಿದೆ.

ಜಲಮಂಡಳಿ ಅಧ್ಯಕ್ಷ ಎನ್. ಜಯರಾಂ ಅವರು ಅಹವಾಲು ಆಲಿಸಲಿದ್ದಾರೆ.

ಸಾರ್ವಜನಿಕರು ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆಗಳಿಂದ ತ್ಯಾಜ್ಯ ನೀರು, ಜಲಮಾಪನ ಹಾಗೂ ನೀರಿನ ಬಿಲ್ ಸಮಸ್ಯೆಯ ಬಗ್ಗೆ ಮಾತನಾಡಿ ಕುಂದು–ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಜಲಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ಮಾಹಿತಿ ನೀಡಿದ್ದಾರೆ.

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆ ತಿಳಿಸಿ ದೂರನ್ನು ನೀಡಬಹುದು. ದೂರವಾಣಿ ಸಂಖ್ಯೆ: 080-22945119.

ಆನೆ ದಂತ ಸಾಗಣೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಸಂಚಾರಿ ದಳ ಹಾಗೂ ಅಪರಾಧ ನಿಯಂತ್ರಣದ ಬೆಂಗಳೂರು ಘಟಕದ ಸಿಬ್ಬಂದಿಯ ಜಂಟಿ ಕಾರ್ಯಾಚರಣೆಯಲ್ಲಿ ರಾಮನಗರದ ಚರ್ಚ್ ರಸ್ತೆಯಲ್ಲಿ ಸ್ಕೂಟರ್‌ವೊಂದರಲ್ಲಿ ಆನೆ ದಂತ ಸಾಗಣೆ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಆನೆ ದಂತವನ್ನು ವಶಕ್ಕೆ ಪಡೆಯಲಾಗಿದೆ.

ರಾಮನಗರದ ಫೈಜುಲ್ಲಾ, ಕೌಸರ್, ನಿಜಾಮ್ ಖಾನ್ ಬಂಧಿತರು.

ಎಪಿಸಿಸಿಎಫ್ (ಜಾಗೃತ) ವಿಜಯರಂಜನ್ ಸಿಂಗ್ ಹಾಗೂ ಡಿಸಿಎಫ್ ಭಾಸ್ಕರ್ ಮಾರ್ಗದರ್ಶನದಲ್ಲಿ ಅರಣ್ಯಾಧಿಕಾರಿಗಳಾದ ಎಚ್.ಆರ್.ಚಿದಾನಂದ, ಅಮೃತ್ ಎ. ದೇಸಾಯಿ, ಸಿದ್ದರಾಜು ಟಿ., ಅಶ್ವಿನ್ ಎಂ.ಜೆ., ನಾಗೇಂದ್ರ, ರಾಧಾಕೃಷ್ಣ ಅವರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಹಗದೂರಿನ ರಾಮದೇವರ ಬ್ರಹ್ಮ ರಥೋತ್ಸವ ಅದ್ದೂರಿಯಾಗಿ ನಡೆಯಿತು.

ಶ್ರೀರಾಮದೇವರ ಬ್ರಹ್ಮ ರಥೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಶ್ರೀರಾಮನವಮಿ ಅಂಗವಾಗಿ ಮಹದೇವಪುರದ ವೈಟ್‌ಫೀಲ್ಡ್ ಸಮೀಪದ ಹಗದೂರಿನ ರಾಮದೇವರ ಬ್ರಹ್ಮ ರಥೋತ್ಸವ ಅದ್ದೂರಿಯಾಗಿ ನಡೆಯಿತು.

ರಥೋತ್ಸವಕ್ಕೆ ಶಾಸಕ ಅರವಿಂದ ಲಿಂಬಾವಳಿ ಚಾಲನೆ ನೀಡಿದರು. ರಥೋತ್ಸವದ ಅಂಗವಾಗಿ ದೇವರಿಗೆ ವಿಶೇಷ ಪೂಜೆ, ಬಗೆಬಗೆಯ ಹೂವಿನಿಂದ ಅಲಂಕಾರ ಮಾಡಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ದೇವರ ಮೆರವಣಿಗೆ ಮಾಡಲಾಯಿತು.

ಜಾತ್ರಾ ಮಹೋತ್ಸವದಲ್ಲಿ ಹಳ್ಳಿಕಾರ್ ಎತ್ತುಗಳಿಂದ ಮೆರವಣಿಗೆ ಹಾಗೂ ಡೊಳ್ಳು ಕುಣಿತ, ಗಾರುಡಿ ಗೊಂಬೆ, ವೀರಗಾಸೆ ಸೇರಿದಂತೆ ಕಲಾತಂಡಗಳ ನೃತ್ಯವು ನೆರೆದಿದ್ದವರನ್ನು ಆಕರ್ಷಿಸಿತು. ಹಗದೂರು ಕಾಲೊನಿ, ಇಮ್ಮಡಿಹಳ್ಳಿ, ವಿನಾಯಕನಗರ, ಚನ್ನಸಂದ್ರ, ನಾಗೊಂಡನಹಳ್ಳಿ ಸೇರಿದಂತೆ ಹಗದೂರು ಸುತ್ತಮುತ್ತಲಿನ ಭಕ್ತಾದಿಗಳು ಬ್ರಹ್ಮರಥೋತ್ಸವದಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾದರು. ಶ್ರೀರಾಮ ಸೇವಾ ಸಮಿತಿ ವತಿಯಿಂದ ಭಕ್ತಾದಿಗಳಿಗೆ ಅನ್ನದಾಸೋಹ ಏರ್ಪಡಿಲಾಗಿತ್ತು.

ಮುಳಬಾಗಿಲು ಶಾಸಕ ಎಚ್. ನಾಗೇಶ್, ವಿಧಾನ ಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ, ಶ್ರೀರಾಮ ಸೇವಾ ಸಮಿತಿ ಸದಸ್ಯರು ಹಾಗೂ ಹಗದೂರು ಗ್ರಾಮಸ್ಥರು ಭಾಗವಹಿಸಿದ್ದರು.

ಗಾಂಜಾ ನೀಡುವಂತೆ ಪೀಡಿಸಿದ್ದಕ್ಕೆ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ನ್ಯೂ ತರಗುಪೇಟೆಯಲ್ಲಿ ನಡೆದಿದ್ದ ರಮೇಶ್ ಎಂಬುವವರ ಕೊಲೆ ಪ್ರಕರಣ ಸಂಬಂಧ ಇಬ್ಬರು ಆರೋಪಿಗಳನ್ನು ವಿ.ವಿ.ಪುರ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ಶ್ರೀನಿವಾಸ್ ಹಾಗೂ ಸತೀಶ್ ಬಂಧಿತರು. ಇವರಿಬ್ಬರು ನ್ಯೂ ತರಗುಪೇಟೆಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. ನೇಪಾಳದ ರಮೇಶ್ ಅವರನ್ನು ಕೊಲೆ ಮಾಡಿ ಪರಾರಿಯಾಗಿದ್ದರು. ಪ್ರತ್ಯಕ್ಷದರ್ಶಿಗಳ ಹೇಳಿಕೆ ಹಾಗೂ ತಾಂತ್ರಿಕ ಪುರಾವೆ ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ'

ಮಾರುಕಟ್ಟೆಗೆ ಬಂದಿದ್ದ ರಮೇಶ್: 'ನೇಪಾಳದ ರಮೇಶ್, ಸಂಬಂಧಿ ರತನ್ ಎಂಬುವರ ಜೊತೆ ತೋಟದ ಕೆಲಸ ಮಾಡುತ್ತಿದ್ದರು. ತೋಟಕ್ಕೆ ಬೇಕಾದ ಸಲಕರಣೆಗಳನ್ನು ಖರೀದಿಸಲು ಸ್ನೇಹಿತನ ಜೊತೆ ಮಾರುಕಟ್ಟೆಗೆ ಬಂದಿದ್ದರು'

'ಸಲಕರಣೆ ಖರೀದಿಸಿದ ನಂತರ ಸ್ನೇಹಿತನ ಜೊತೆ ಬಾರ್‌ಗೆ ಹೋಗಿದ್ದ ರಮೇಶ್ ಮದ್ಯ ಕುಡಿದಿದ್ದರು. ಅದೇ ಬಾರ್‌ನಲ್ಲಿ ಕುಳಿತಿದ್ದ ಆರೋಪಿಗಳು, ಗಾಂಜಾ ಸೇದುತ್ತಿದ್ದರು. ಅದನ್ನು ನೋಡಿದ್ದ ರಮೇಶ್, ತಮಗೂ ಗಾಂಜಾ ಕೊಡುವಂತೆ ಕೇಳಿದ್ದರು. ಆದರೆ, ಆರೋಪಿಗಳು ಗಾಂಜಾ ಕೊಟ್ಟಿರಲಿಲ್ಲ.'

'ಗಾಂಜಾ ನೀಡಿದರೆ ₹500 ಕೊಡುವುದಾಗಿ ರಮೇಶ್ ಹೇಳಿದ್ದರು. ಅದಕ್ಕೂ ಆರೋಪಿಗಳು ಒಪ್ಪಿರಲಿಲ್ಲ. ಸುಮ್ಮನಾಗದ ರಮೇಶ್, ಗಾಂಜಾ ನೀಡುವಂತೆ ಪೀಡಿಸಲಾರಂಭಿಸಿದ್ದರು. ಮದ್ಯ ಹಾಗೂ ಗಾಂಜಾ ಅಮಲಿನಲ್ಲಿದ್ದ ಆರೋಪಿಗಳು, ಚೂರಾಗಿದ್ದ ಬಿಯರ್ ಬಾಟಲಿಯಿಂದ ಕುತ್ತಿಗೆಗೆ ಇರಿದು ರಮೇಶ್ ರನ್ನು ಕೊಂದಿದ್ದರು. ಕೊಲೆ ದೃಶ್ಯ ಸಿ.ಸಿ.ಟಿ.ವಿ ಯಲ್ಲೂ ಸೆರೆಯಾಗಿತ್ತು' ಎಂದು ಮೂಲಗಳು ಹೇಳಿವೆ.

ಬೈಕ್ ನಿಲುಗಡೆ ವಿಚಾರ: ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಎದುರು ಬೈಕ್ ನಿಲ್ಲಿಸುವ ವಿಚಾರವಾಗಿ ಮಾರಾಮಾರಿ ನಡೆದಿದ್ದು, ಜನಾರ್ದನ್ ಭಟ್ಟ(29) ಎಂಬುವವರನ್ನು ಉಸಿರುಗಟ್ಟಿಸಿ ಕೊಲೆ ಮಾಡಲಾಗಿದೆ.

ಜನಾರ್ದನ್ ಭಟ್ಟ

'ಯಲಹಂಕ ಠಾಣೆ ವ್ಯಾಪ್ತಿಯ ಶ್ರೀನಿವಾಸಪುರದ ಮನೆಯೊಂದರ ಮುಂದೆ ಈ ಕೊಲೆ ನಡೆದಿದೆ. ಆರೋಪಿಗಳು ಎನ್ನಲಾದ ಪಶ್ಚಿಮ ಬಂಗಾಳದ ಸುಲೇಮಾನ್ ಹಾಗೂ ರಿಜ್ವಾನ್ ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಉಡುಪಿಯ ಜನಾರ್ದನ್ ಟಿ.ವಿ ದುರಸ್ತಿ ಕೆಲಸ ಮಾಡುತ್ತಿದ್ದರು. ಒಂದೂವರೆ ವರ್ಷದಿಂದ ಶ್ರೀನಿವಾಸಪುರದ ಮನೆಯಲ್ಲಿ ವಾಸವಿದ್ದರು. ಹವಾನಿಯಂತ್ರಕ (ಎ.ಸಿ), ಫ್ರಿಜ್ ದುರಸ್ತಿ ಮಾಡುತ್ತಿದ್ದ ಸುಲೇಮಾನ್ ಹಾಗೂ ರಿಜ್ವಾನ್ ಸಹ ಅದೇ ಮನೆಯಲ್ಲಿ ನೆಲೆಸಿದ್ದರು. ಸಣ್ಣ ಪುಟ್ಟ ವಿಚಾರಕ್ಕೂ ಮೂವರೂ ಜಗಳ ಮಾಡಿ ಪರಸ್ಪರ ಹೊಡೆದಾಡುತ್ತಿದ್ದರು. ಈ ಬಗ್ಗೆ ಸ್ಥಳೀಯರು ಮಾಹಿತಿ ನೀಡಿದ್ದಾರೆ' ಎಂದು ಹೇಳಿದರು.

'ಮನೆ ಮುಂದೆ ಬೈಕ್ ನಿಲ್ಲಿಸುವ ವಿಚಾರವಾಗಿ ಮೂವರ ನಡುವೆ ಮಾರ್ಚ್ 29ರಂದು ರಾತ್ರಿ ಜಗಳ ಶುರುವಾಗಿತ್ತು. ಇದೇ ವೇಳೆಯೇ ರಿಜ್ವಾನ್ ಹಾಗೂ ಸುಲೇಮಾನ್, ಜನಾರ್ದನ್ ಮೇಲೆ ಹಲ್ಲೆ ಮಾಡಿದ್ದರು

ಕೈ– ಕಾಲುಗಳನ್ನು ವೈರ್‌ನಿಂದ ಕಟ್ಟಿ ಹಾಕಿ, ಬಾಯಿಗೆ ಬಟ್ಟೆ ತುರುಕಿದ್ದರು. ನಂತರ, ಉಸಿರುಗಟ್ಟಿಸಿ ಕೊಂದು ಆರೋಪಿಗಳು ಪರಾರಿಯಾಗಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದರು.

ನಗರದಲ್ಲಿ ಇಂದು

ರಾಮೋತ್ಸವ ವಿಶೇಷ

ಶ್ರೀರಾಮೋತ್ಸವ: ಶ್ರೀರಾಮತಾರಕ ಹೋಮ, ದೇವರನಾಮ: ಅರ್ಚನಾ ಭೋಜ್, ಭರತನಾಟ್ಯ: ನಟರಾಜ ನೃತ್ಯ ಅಕಾಡೆಮಿ ವಿದ್ಯಾರ್ಥಿಗಳು, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಸೇವಾ ಮಂಡಳಿ, ರಾಜಾಜಿನಗರ, ಬೆಳಿಗ್ಗೆ 10ರಿಂದ

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಸ್ಫೂರ್ತಿ ರಾವ್, ವೈಭವ್ ರಮಣಿ, ಅನಿರುದ್ಧ ಭಟ್, ಸಂಜೆ 4.30ರಿಂದ, ಸಂಗೀತ ಕಛೇರಿ: ಹರೀಶ್ ಶಿವರಾಮಕೃಷ್ಣನ್, ಅಂಬಿಕಾ ಪ್ರಸಾದ್, ರಾಜೇಶ್ ನಾಥ್, ಬಿ.ಆರ್. ರವಿಕುಮಾರ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, 'ಪ್ರಜಾವಾಣಿ', ಸ್ಥಳ: ಕೋಟೆ ಹೈಸ್ಕೂಲ್ ಆವರಣ, ಚಾಮರಾಜಪೇಟೆ, ಸಂಜೆ 6.45ರಿಂದ

ಶ್ರೀರಾಮೋತ್ಸವ ಕಾರ್ಯಕ್ರಮ: ಪವಮಾನ ಹೋಮ, ಜೇನುತುಪ್ಪ ಅಭಿಷೇಕ, ರಾಮಾಯಣ ಪಾರಾಯಣ, ಮಂಗಳಾರತಿ, ತೀರ್ಥಪ್ರಸಾದ ವಿತರಣೆ, ಬೆಳಿಗ್ಗೆ 8ರಿಂದ, ಗಾಯನ: ವಿದ್ಯಾಭೂಷಣ, ಆಯೋಜನೆ: ಸನಾತನ ಭಕ್ತ ಮಂಡಳಿ ಟ್ರಸ್ಟ್, ಸ್ಥಳ: ಕೋದಂಡರಾಮ ದೇವಸ್ಥಾನದ ರಸ್ತೆ, ವಿಜಯನಗರ, ಸಂಜೆ 6

ಶ್ರೀರಾಮೋತ್ಸವ: ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ, ಗಾಯನ: ಅನಿರುದ್ಧ ಐತಾಳ್, ತಬಲಾ: ಶ್ರೀದತ್ತ ಎಂ.ಜಿ., ಹಾರ್ಮೋನಿಯಂ: ತೇಜಸ್ ಕಾಟೋಟಿ, 'ಕೃಷ್ಣ ಕಾರುಣ್ಯ' ಪ್ರವಚನ ಮಾಲಿಕೆ: ಪಾವಗಡ ಪ್ರಕಾಶರಾವ್, 'ಸ್ತ್ರೀ ತಾಳ ತರಂಗ' ತಂಡದಿಂದ 'ಲಯರಾಗಸಮರ್ಪಣಂ', ಕೊಳಲು: ವಾಣಿ ಮಂಜುನಾಥ್, ವೀಣೆ: ವೈ.ಜಿ. ಶ್ರೀಲತಾ, ಮೃದಂಗ: ಲಕ್ಷ್ಮೀ ಪಿಳ್ಳೆ, ಮೋರ್ಚಿಂಗ್: ಭಾಗ್ಯಲಕ್ಷ್ಮಿ ಎಂ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶ್ರೀರಾಮಮಂದಿರಂ ಟ್ರಸ್ಟ್, ನರಸಿಂಹರಾಜ ಕಾಲೊನಿ, ಸಂಜೆ 4.30ರಿಂದ

ಶ್ರೀರಾಮ ನವಮಿ ಉತ್ಸವ: ಗಾಯನ: ಅನಾಹಿತ, ಅಪೂರ್ವ, ಪಿಟೀಲು: ಬಿ.ಕೆ. ರಘು, ಮೃದಂಗ: ಅಕ್ಷಯ್ ಆನಂದ್, ಖಂಜಿರ: ಅನಿಲ್ ಪರಾಸರ, ಆಯೋಜನೆ: ವೈಯಾಲಿ ಕಾವಲ್ ಎಕ್ಸ್‌ಟೆನ್ಷನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, ವೈಯಾಲಿ ಕಾವಲ್, ಸಂಜೆ 6.30

ಚೈತ್ರ ಸಂಗೀತೋತ್ಸವ: ಉದ್ಘಾಟನೆ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಎಚ್.ಎಸ್. ವೆಂಕಟೇಶಮೂರ್ತಿ, ಗುರು ಗೌರವ ಪ್ರಶಸ್ತಿ ಪ್ರದಾನ: ಮನು ಬಳಿಗಾರ್, ಪ್ರಶಸ್ತಿ ಪುರಸ್ಕೃತರು: ಪಂ.ಅನಿಂದೋ ಚಟರ್ಜಿ, ಮುಖ್ಯ ಅತಿಥಿ: ಪಂ. ಮೃತ್ಯುಂಜಯ ಶೆಟ್ಟರ್, ಆಯೋಜನೆ: ಸಂತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್ ಟ್ರಸ್ಟ್, ಸ್ಥಳ: ಶ್ರೀ ಶಿವರಾತ್ರೀಶ್ವರ ಕೇಂದ್ರ, ಜಯನಗರ 8ನೇ ಬಡಾವಣೆ, ಮಧ್ಯಾಹ್ನ2

ವೆಂಕಟೇಶಮೂರ್ತಿ

ರಾಮನವಮಿ ಕಾರ್ಯಕ್ರಮ: ಗಾಯನ: ಕೃತಿಕಾ ಶ್ರೀನಿವಾಸನ್, ಪಿಟೀಲು: ಹ್ರಿಷಿತಾ ಕೇದಗೆ, ಮೃದಂಗ: ಎಚ್.ಎಸ್. ಕೃಷ್ಣಮೂರ್ತಿ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಶ್ರೀರಂಜನಿ ಸಂತಾನಗೋಪಾಲನ್, ಪಿಟೀಲು: ಸಾಯಿ ರಕ್ಷಿತ್, ಮೃದಂಗ: ಡೆಲ್ಲಿ ಸಾಯಿರಾಮ್, ಘಟ: ಕಾರ್ತಿಕ್, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

ರಾಷ್ಟ್ರೀಯ ವಿಷ್ಣುಸಹಸ್ರನಾಮ ಮಹಾಮಹೋತ್ಸವ: ಅಧ್ಯಕ್ಷತೆ: ಅರಳುಮಲ್ಲಿಗೆ ಪಾರ್ಥಸಾರಥಿ, ಗ್ರಂಥ ಲೋಕಾರ್ಪಣೆ: ಕೆ.ಎಂ. ನಾಗರಾಜ್, ರಾಷ್ಟ್ರೀಯ ಅಭಿನಂದನಾ ಗೌರವ: ಎನ್. ಎಂ. ರತ್ನಯ್ಯ ಶೆಟ್ಟಿ, ವಿಷ್ಣುಸಹಸ್ರನಾಮ ಸಾಧಕರಿಗೆ ದೇವಾಲಯ ಗೌರವ: ಕ್ಯಾಪ್ಟನ್ ಮಣಿ ಕೆ.ವಿ., ಭಾನುಪ್ರಕಾಶ್, ಮಂಗಳಾ ಭಾಸ್ಕರ್, ರಮಾಕಾಂತ ಶೆಣೈ, ಬಿ.ಎಲ್. ರಮೇಶ್, ಎಂ.ಆರ್. ವೇಣುಗೋಪಾಲ್, ನಟರಾಜ ಶೆಟ್ಟಿ, ಆಯೋಜನೆ: ಶ್ರೀ ಕೋದಂಡರಾಮ ಸ್ವಾಮಿ ದೇವಸ್ಥಾನ, ಗ್ಲೋಬಲ್ ವಿಷ್ಣುಸಹಸ್ರನಾಮ ಸತ್ಸಂಗ ಫೆಡರೇಷನ್, ಸ್ಥಳ: ಕೋದಂಡರಾಮಸ್ವಾಮಿ ದೇವಸ್ಥಾನ, ಜಯನಗರ 2ನೇ ಬ್ಲಾಕ್, ಬೆಳಿಗ್ಗೆ 9.30

ಗುರುವಂದನಾ ಸಮಾರೋಪ: ಶಿವಕುಮಾರ ಸ್ವಾಮೀಜಿ ಅವರ 116ನೇ ಜನ್ಮದಿನೋತ್ಸವ, ಅಧ್ಯಕ್ಷತೆ: ಶಿವರುದ್ರ ಸ್ವಾಮೀಜಿ, ಪ್ರತಿಮೆಗೆ ಮಾಲಾರ್ಪಣೆ: ಎ.ಎಸ್. ಕಿರಣ್ ಕುಮಾರ್, ನುಡಿ ನಮನ: ವಿ. ಸೋಮಣ್ಣ, ಮುಖ್ಯ ಅತಿಥಿ: ಡಾ.ಸಿ.ಎನ್. ಮಂಜುನಾಥ್, ಉಪಸ್ಥಿತಿ: ಶೈಲಜಾ ಸೋಮಣ್ಣ, ಆಯೋಜನೆ: ವಿ. ಸೋಮಣ್ಣ ಪ್ರತಿಷ್ಠಾನ, ಸ್ಥಳ: ಜ್ಞಾನಸೌಧ, 3ನೇ ಮುಖ್ಯರಸ್ತೆ, ಕಲ್ಯಾಣ ನಗರ, ಬೆಳಿಗ್ಗೆ 10

ಪದವಿ ಪ್ರದಾನ ದಿನ: ಮುಖ್ಯ ಅತಿಥಿ: ಪ್ರವೀಣ್ ರೋಡ್ರಿಗಸ್, ಆಯೋಜನೆ ಹಾಗೂ ಸ್ಥಳ: ಸೇಂಟ್ ಜೋಸೆಫ್ಸ್ ಕಮ್ಯುನಿಟಿ ಕಾಲೇಜ್, ಬೆಳಿಗ್ಗೆ 10

'ಪರಂಪರೆ ಮತ್ತು ಅದರ ಪುನರುಜ್ಜೀವನ' ಹಾಗೂ 'ನಿರ್ಮಾಣ ಕೆಲಸಗಾರರ ಕೌಶಲಾಭಿವೃದ್ಧಿ' ವಿಷಯದ ಬಗ್ಗೆ ಚರ್ಚೆ: ಆಯೋಜನೆ ಹಾಗೂ ಸ್ಥಳ: ಆರ್ಟ್ ಆಫ್ ಲಿವಿಂಗ್ ಇಂಟರ್‌ನ್ಯಾಷನಲ್ ಸೆಂಟರ್, ಮಧ್ಯಾಹ್ನ 12

ವಿಶೇಷ ಪೂಜೆ:

ಆಯೋಜನೆ: ಧರ್ಮರಾಯಸ್ವಾಮಿ ಕರಗ ಶಕ್ತ್ಯೋತ್ಸವ, ಸ್ಥಳ: ಮುನೇಶ್ವರಸ್ವಾಮಿ ದೇವಸ್ಥಾನ, ಗವಿಪುರ ಗುಟ್ಟಹಳ್ಳಿ, ಮಧ್ಯಾಹ್ನ 12.30

ಬೆಂಗಳೂರು ಯಕ್ಷೋತ್ಸವ: ಉಪಸ್ಥಿತಿ: ಎಚ್.ಬಿ. ಪ್ರಭಾಕರ ಶಾಸ್ತ್ರಿ, ನ್ಯಾ.ಎಸ್. ವಿಶ್ವಜಿತ್ ಶೆಟ್ಟಿ, ನ್ಯಾ.ಕೆ. ರಾಜೇಶ್ ರೈ, ಎಂ. ಮೋಹನ್ ಆಳ್ವ, ಟಿ. ಶಾಮ್ ಭಟ್, ಯಕ್ಷಗಾನ: 'ಶ್ರೀರಾಮಕಾರುಣ್ಯ ಶೂರ್ಪನಖಾ ಮಾನಭಂಗ', ಪ್ರಸ್ತುತಿ: ಕೋದಂಡರಾಮ ಕೃಪಾಪೋಷಿತ ಯಕ್ಷಗಾನ ಮಂಡಳಿ, ಆಯೋಜನೆ: ಯಕ್ಷಗಾನಾಭಿಮಾನಿ ವಕೀಲರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 2

ಯಕ್ಷಗಾನ ತಾಳಮದ್ದಲೆ: ಪಾರ್ತಿಸುಬ್ಬ ವಿರಚಿತ 'ವಾಲಿ ಮೋಕ್ಷ', ಭಾಗವತರು: ಅನಂತ ಹೆಗಡೆ ದಂತಳಿಗೆ, ಮೃದಂಗ: ನರಸಿಂಹ ಭಟ್ಟ, ಚೆಂಡೆ: ಆದಿತ್ಯ ಕಾಶೈನ್, ಆಯೋಜನೆ: ಅಶ್ವಿನಿ ಕೃಷ್ಣಮೂರ್ತಿ, ಸ್ಥಳ: ಸೋಮೇಶ್ವರ ನಗರ, ಯಲಹಂಕ, ಸಂಜೆ 4

30ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಸಿಕ್ಕಿಲ್ ಗುರುಚರಣ್, ಪಿಟೀಲು: ವಿ. ಸಂಜೀವ್, ಮೃದಂಗ: ರಂಜಿನಿ ವೆಂಕಟೇಶ್, ಘಟ: ಓಂಕಾರ್ ರಾವ್, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 6.30

ಸಿಕ್ಕಿಲ್ ಗುರುಚರಣ್

ಗುರುವಿಗೆ ವಚನ ನುಡಿ ಪ್ರಣಾಮ: ಶಿವಕುಮಾರ ಸ್ವಾಮೀಜಿ ಅವರ 116ನೇ ಜಯಂತಿ, ಉದ್ಘಾಟನೆ: ಮುನಿರಾಜಪ್ಪ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಗೌರವ ಸಮರ್ಪಣೆ: ದರ್ಶಿನಿ ಮಂಜುನಾಥ್, ನುಡಿ ಪ್ರಣಾಮ: ಡಿ. ಚೆನ್ನಮಲ್ಲಯ್ಯ, ವಚನ ಪ್ರಣಾಮ: ಮೀನಾಕ್ಷಿ ಮೇಟಿ, ಟಿ.ಎಂ.ಜಾನಕಿ, ಜಿ.ಸಿ. ಸರ್ವಾಣಿ, ಪೂರ್ಣಿಕ ಆರಾಧ್ಯ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಬೆಳಕು, #533, 7ನೇ ಮುಖ್ಯರಸ್ತೆ, ಕೆಸಿಎಚ್‌ಎಸ್ ಲೇಔಟ್, ಕೆಂಚನಪುರ ಕ್ರಾಸ್, ಸಂಜೆ 5

ಗುರುವಂದನಾ ಮತ್ತು ಭಕ್ತಿ ಸಂಗೀತ ಕಾರ್ಯಕ್ರಮ: ಶಿವಕುಮಾರ ಸ್ವಾಮೀಜಿ ಅವರ 116ನೇ ಜಯಂತಿ ಪ್ರಯುಕ್ತ, ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಉದ್ಘಾಟನೆ: ನ್ಯಾ.ಎಂ.ಜಿ.ಎಸ್. ಕಮಲ್, ಮುಖ್ಯ ಅತಿಥಿಗಳು: ಮಹೇಶ ಜೋಶಿ, ಬಲವಂತರಾವ್ ಪಾಟೀಲ್, ಅಧ್ಯಕ್ಷತೆ: ಎಸ್. ದೇವದಾಸ್, ಆಯೋಜನೆ: ಗಾನಗಂಗಾ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5

ಮುತ್ಯಾಲಮ್ಮ ದೇವಿಯ ರಥೋತ್ಸವ: ಹೂವಿನ ಪಲ್ಲಕ್ಕಿ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ಟೆಂಪಲ್ ಟ್ರಸ್ಟ್, ಕೆ ಸ್ಟ್ರೀಟ್ ಸೆಪ್ಪಿಂಗ್ ರಸ್ತೆ, ಶಿವಾಜಿನಗರ, ಸಂಜೆ 7

ಸಂಕ್ಷಿಪ್ತ ಸುದ್ದಿ

ಡಿಸಿಸಿ ಬ್ಯಾಂಕ್‌ನಲ್ಲಿ ಐ.ಟಿ ಅಧಿಕಾರಿಗಳ ಪರಿಶೀಲನೆ

ಹಾಸನ: ಇಲ್ಲಿನ ಜಿಲ್ಲಾ ಡಿಸಿಸಿ ಬ್ಯಾಂಕ್ ಕಚೇರಿಯಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶುಕ್ರವಾರ ದಿಢೀರ್ ಭೇಟಿ ನೀಡಿ, ದಾಖಲೆಗಳ ಪರಿಶೀಲನೆ ನಡೆಸಿ, ಕೆಲವು ದಾಖಲೆಗಳನ್ನು ತಮ್ಮೊಂದಿಗೆ ಕೊಂಡೊಯ್ದರು. 'ಬೆಳಿಗ್ಗೆಯೇ ಬಂದ ಅಧಿಕಾರಿಗಳು ನಾಲ್ಕು ಗಂಟೆಗಳ ಕಾಲ ಪರಿಶೀಲನೆ ನಡೆಸಿದರು' ಎಂದು ತಿಳಿದು ಬಂದಿದೆ.

'ಇದೊಂದು ನಿರಂತರ ಪ್ರಕ್ರಿಯೆಯಾಗಿದ್ದು, ಆಗಾಗ ಪರಿಶೀಲನೆ ನಡೆಸಲಾಗುತ್ತದೆ. ಮಹತ್ವದ್ದೇನಿಲ್ಲ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈಚೆಗಷ್ಟೇ ಶಾಸಕ ಎ.ಟಿ. ರಾಮಸ್ವಾಮಿ ಅವರು, ಡಿಸಿಸಿ ಬ್ಯಾಂಕ್‌ನಲ್ಲಿ ಅವ್ಯವಹಾರ ನಡೆಯುತ್ತಿದೆ ಎಂದು ಆರೋಪಿಸಿದ್ದರು. ಅದಾದ ನಂತರವೇ ಅಧಿಕಾರಿಗಳು ಪರಿಶೀಲನೆ ನಡೆಸಿರುವುದು ಚರ್ಚೆಗೆ ಗ್ರಾಸವಾಗಿದೆ.

ಅಮೆರಿಕಕ್ಕೆ ವಲಸೆ: ಜೀವತೆತ್ತ ಭಾರತೀಯ ಕುಟುಂಬ

ಮಾಂಟ್ರಿಯಲ್ (ಎಎಫ್‌ಪಿ): ಕೆನಡಾದಿಂದ ಅಮೆರಿಕಕ್ಕೆ ದೋಣಿಯಲ್ಲಿ ಅಕ್ರಮವಾಗಿ ವಲಸೆ ಹೋಗಲು ಯತ್ನಿಸಿದ ವೇಳೆ ಭಾರತ ಮತ್ತು ರೊಮೇನಿಯಾದ ಆರು ಸದಸ್ಯರಿದ್ದ ಎರಡು ಕುಟುಂಬಗಳು ಗಡಿಯ ಸಮೀಪದ ಜವುಗು ಪ್ರದೇಶದಲ್ಲಿ ಶವವಾಗಿ ಪತ್ತೆಯಾಗಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಎರಡು ಕುಟುಂಬಗಳ ಆರು ಮಂದಿಯೂ ಕೆನಡಾದ ಪಾಸ್‌ಪೋರ್ಟ್‌ಗಳನ್ನು ಹೊಂದಿದ್ದರು. ಮೃತರಲ್ಲಿ ಒಂದು ಮಗು ಮತ್ತು ಐವರು ವಯಸ್ಕರು ಇದ್ದಾರೆ. ಮಳೆ, ಹಿಮಪಾತ ಹಾಗೂ ಭಾರಿ ಗಾಳಿಯಿಂದ ಕೂಡಿದ್ದ ಪ್ರತಿಕೂಲ ಹವಾಮಾನದಿಂದ ದೋಣಿಯು ಜವುಗಿನಲ್ಲಿ ಸಿಲುಕಿ, ಗುರುವಾರ ಈ ಅವಘಡ ಸಂಭವಿಸಿದೆ ಎಂದು ಸ್ಥಳೀಯ ಪೊಲೀಸ್ ಮುಖ್ಯಸ್ಥೆ ಅನ್ ಓಬ್ರಿನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಒತ್ತುವರಿ ತೆರವಿಗೆ ಸೂಚನೆ: ಮಹಿಳೆ ಆತ್ಮಹತ್ಯೆಗೆ ಯತ್ನ

ಉನ್ನಾವೊ (ಪಿಟಿಐ): ಹಸನ್‌ಗಂಜ್ ತಹಶೀಲು ವ್ಯಾಪ್ತಿಯ ಇಟ್ಕುಟಿ ಗ್ರಾಮದ ವಿಕ್ರಮ್ ಖೇಡಾ ಪ್ರದೇಶದಲ್ಲಿ ಸರ್ಕಾರಿ ಜಮೀನಿನ ಒತ್ತುವರಿ ತೆರವಿಗೆ ಬಂದಿದ್ದ ಕಂದಾಯ ಇಲಾಖೆ ತಂಡದ ಎದುರು ಮಹಿಳೆಯೊಬ್ಬರು ತನ್ನ ಮಕ್ಕಳೊಂದಿಗೆ ಸೀಮೆಎಣ್ಣೆ ಸುರಿದುಕೊಂಡು, ತಮ್ಮ ಗುಡಿಸಲಿಗೆ ಬೆಂಕಿ ಹಚ್ಚಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಅಜಯ್ ಎಂಬುವವರ ಮೇಲೆ ಒತ್ತುವರಿ ಕುರಿತು ದೂರುಗಳು ಬಂದಿದ್ದರಿಂದ ಇಲಾಖೆಯ ತಂಡ ಗುರುವಾರ ಗ್ರಾಮಕ್ಕೆ ತೆರಳಿ, ಒತ್ತುವರಿ ತೆರವುಗೊಳಿಸುವಂತೆ ಸೂಚನೆ ನೀಡಿ ಹಿಂದಿರುಗಿದ್ದರು. ನಂತರ ಮಹಿಳೆ ಗುಡಿಸಲಿಗೆ ಬೆಂಕಿ ಹಚ್ಚಿದ್ದು, ಸ್ಥಳೀಯರು ಅವಘಡ ತಪ್ಪಿಸಿದ್ದಾರೆ ಎಂದು ಕಂದಾಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ದಾಖಲೆ ಇಲ್ಲದೇ ₹14 ಲಕ್ಷ ಹಣ ಸಾಗಾಟ: ಮೂವರ ಬಂಧನ

ಭಟ್ಕಳ : ದಾಖಲೆ ಇಲ್ಲದೇ ₹14 ಲಕ್ಷಕ್ಕೂ ಅಧಿಕ ಹಣವನ್ನು ಕಾರಿನಲ್ಲಿ ಸಾಗಿಸುತ್ತಿದ್ದ ವೇಳೆ ಸರ್ಪನಕಟ್ಟೆ ಚೆಕ್‌ಪೋಸ್ಟ್ ಬಳಿ ಶಹರ ಠಾಣಾ ಪೊಲೀಸರು ತಪಾಸಣೆ ಮಾಡಿ ವಶಕ್ಕೆ ಪಡೆದಿದ್ದು, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಭಟ್ಕಳ ತಾಲ್ಲೂಕಿನ ಕಟಗಾರಕೊಪ್ಪ ನಿವಾಸಿ ಯಶ್ವಂತ ಗೊಂಡ, ಹೊನ್ನಾವರ ತಾಲ್ಲೂಕಿನ ಗುಣವಂತೆ ನಿವಾಸಿಗಳಾದ ನಾರಾಯಣ ಗೊಂಡ ಹಾಗೂ ರಾಘು ನಾಯ್ಕ ಬಂಧಿತರು.

ಮಹಾವೀರ ಜಯಂತಿ: 'ಅಹಿಂಸಾ ಓಟ' ನಾಳೆ

ಬೆಂಗಳೂರು: ಮಹಾವೀರ ಜಯಂತಿಯ ಅಂಗವಾಗಿ ಜೈನ್ ಇಂಟರ್ ನ್ಯಾಷನಲ್ ಟ್ರೇಡ್ ಆರ್ಗನೈಸೇಷನ್‌ನಿಂದ ಏಪ್ರಿಲ್ 2ರಂದು 'ಅಹಿಂಸಾ ಓಟ'ವನ್ನು ಹಮ್ಮಿಕೊಳ್ಳಲಾಗಿದೆ.

'ಏಪ್ರಿಲ್ 2ರಂದು ಸಂಜೆ 6.15ಕ್ಕೆ ನಗರದ ವಿಠಲ್ ಮಲ್ಯ ರಸ್ತೆಯಲ್ಲಿರುವ ಸೇಂಟ್ ಜೋಸೆಫ್ ಶಾಲೆಯ ಮೈದಾನದಿಂದ ಪ್ರಾರಂಭವಾಗುವ ಓಟಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಚಾಲನೆ ನೀಡಲಿದ್ದಾರೆ' ಎಂದು ಸುದ್ದಿಗೋಷ್ಠಿಯಲ್ಲಿ ದಿನೇಶ್ ಬೋಹ್ರಾ ತಿಳಿಸಿದರು.

'ವಿಶ್ವದಲ್ಲಿ ಮಹಾವೀರರ ತತ್ವ ಸಿದ್ಧಾಂತ ಮತ್ತು ಶಾಂತಿ–ಸೌಹಾರ್ದತೆ ಸ್ಥಾಪಿಸುವ ಉದ್ದೇಶದಿಂದ ಪ್ರಪಂಚದ 23 ದೇಶಗಳು ಸೇರಿದಂತೆ ದೇಶದ 58 ನಗರಗಳಲ್ಲಿ ಒಂದೇ ದಿನ ಈ ಅಹಿಂಸಾ ಓಟವನ್ನು ಹಮ್ಮಿಕೊಳ್ಳಲಾಗಿದೆ. ಇದರಲ್ಲಿ 10 ಕಿ.ಮೀ, 5 ಕಿ.ಮೀ ಮತ್ತು 3 ಕಿ.ಮೀ ಎಂಬ ಮೂರು ವಿಭಾಗಗಳಿವೆ. ಆಸಕ್ತರು ಏಪ್ರಿಲ್ 1ರೊಳಗೆ ನೋಂದಣಿ ಮಾಡಿಕೊಳ್ಳಬಹುದು' ಎಂದು ತಿಳಿಸಿದರು.

ಮಂಗಳೂರು: ಮೂರು ಟೋಲ್‌ಗಳ ದರ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಮಂಗಳೂರು: ತಲಪಾಡಿ, ಹೆಜಮಾಡಿ ಮತ್ತು ಗುಂಡ್ಮಿಯಲ್ಲಿರುವ ಮೂರು ಟೋಲ್ ಗೇಟ್‌ಗಳಲ್ಲಿ ಏ.1ರಿಂದ ಟೋಲ್ ಶುಲ್ಕ ಪರಿಷ್ಕರಿಸಲಾಗಿದೆ ಎಂದು ನವಯುಗ ಉಡುಪಿ ಟೋಲ್‌ವೇ ಪ್ರೈವೇಟ್ ಲಿಮಿಟೆಡ್ ತಿಳಿಸಿದೆ.

ಗುಂಡ್ಮಿ ಟೋಲ್ ಪ್ಲಾಜಾ: ಕಾರು, ಜೀಪ್ ವ್ಯಾನ್, ಲಘು ವಾಹನ ಗುಂಡ್ಮಿ ಟೋಲ್ ಪ್ಲಾಜಾದ ಏಕಮುಖ ಸಂಚಾರಕ್ಕೆ ₹60 ಮತ್ತು ₹85 (ಅದೇ ದಿನ ಹಿಂತಿರುಗಿದರೆ), ಮಾಸಿಕ ಪಾಸ್ ತಿಂಗಳಿಗೆ ಗರಿಷ್ಠ 50 ಬಾರಿಗೆ ₹1,930, ಎಲ್‌ಸಿವಿ ಮತ್ತು ಮಿನಿ ಬಸ್‌ಗಳಿಗೆ ಏಕಮುಖ ಸಂಚಾರ ದರ ₹95 ಮತ್ತು ಒಂದೇ ದಿನದ ರಿಟರ್ನ್‌ಗೆ ₹140, ಮಾಸಿಕ ಪಾಸ್ ₹3,120, ಬಸ್ ಮತ್ತು ಟ್ರಕ್‌ಗಳಿಗೆ ಏಕಮುಖ ಸಂಚಾರ ₹195 ಮತ್ತು ಅದೇ ದಿನ ಮರಳಿ ಬಂದರೆ ₹295 ಮಾಸಿಕ ಪಾಸ್‌ನ ಬೆಲೆ ₹6,540 ಆಗಿದೆ.

ತಲಪಾಡಿ ಟೋಲ್ ಪ್ಲಾಜಾ: ಕಾರು, ಜೀಪ್ ವ್ಯಾನ್ ಅಥವಾ ಲಘು ವಾಹನಗಳಿಗೆ ₹50 (ಒನ್-ವೇ) ಮತ್ತು ₹75 (ಅದೇ ದಿನ ಹಿಂದಿರುಗಿದರೆ), ಮಾಸಿಕ ಪಾಸ್ ಒಂದು ತಿಂಗಳಲ್ಲಿ ಗರಿಷ್ಠ 50 ಬಾರಿಗೆ ₹1720, ಎಲ್‌ಸಿವಿ ಮತ್ತು ಮಿನಿ ಬಸ್‌ಗಳಿಗೆ ಒಂದು ಮಾರ್ಗದ ದರ ₹80, ಅದೇ ದಿನ ಮರಳಿದರೆ ₹120, ಮಾಸಿಕ ಪಾಸ್ ₹2,655, ಬಸ್ ಮತ್ತು ಟ್ರಕ್‌ಗಳಿಗೆ ₹165 ಮತ್ತು ಅದೇ ದಿನ ಮರಳಿದರೆ ₹ 245, ಮಾಸಿಕ ಪಾಸ್ ಬೆಲೆ ₹5,420 ಆಗಿದೆ.

ಪ್ರಸಕ್ತ ಸಾಲಿನಲ್ಲಿ ಎಲ್ಲ 3 ಟೋಲ್ ಪ್ಲಾಜಾದಿಂದ 20 ಕಿ.ಮೀ ಅಂತರದಲ್ಲಿ ಸ್ಥಳೀಯ ವಾಣಿಜ್ಯೇತರ ವಾಹನಗಳಿಗೆ ಅನ್ವಯವಾಗುವ ಮಾಸಿಕ ಪಾಸಿನ ದರ ಪ್ರತಿ ಟೋಲ್ ಪ್ಲಾಜಾಕ್ಕೆ ತಿಂಗಳಿಗೆ ₹330 ಆಗಿದೆ ಎಂದು ಪ್ರಕಟಣೆ ತಿಳಿಸಿದೆ.

ಹೆಜಮಾಡಿ ಟೋಲ್ ಪ್ಲಾಜಾ

ಕಾರು, ಜೀಪ್, ವ್ಯಾನ್ ಅಥವಾ ಲಘು ವಾಹನಗಳಿಗೆ ₹50 (ಒನ್-ವೇ) ಮತ್ತು ₹75 (ಅದೇ ದಿನ ಹಿಂತಿರುಗಿದರೆ), ಮಾಸಿಕ ಪಾಸ್ ಒಂದು ತಿಂಗಳಲ್ಲಿ ಗರಿಷ್ಠ 50 ಬಾರಿಗೆ ₹1,640, ಎಲ್‌ಸಿವಿ ಮತ್ತು ಮಿನಿ ಬಸ್‌ಗಳಿಗೆ ಒಂದು ಮಾರ್ಗದ ದರ ₹80 ಮತ್ತುಅದೇ ದಿನ ಮರಳಿ ಬಂದರೆ ₹120, ಮಾಸಿಕ ಪಾಸ್ ₹2,655, ಬಸ್ ಮತ್ತು ಟ್ರಕ್‌ಗಳಿಗೆ ₹165 ಮತ್ತು ಅದೇ ದಿನ ಮರಳಿದರೆ ₹250, ಮಾಸಿಕ ಪಾಸ್ ಬೆಲೆ ₹5,560 ಆಗಿದೆ.

140 ಸ್ಥಾನಗಳಲ್ಲಿ ಬಿಜೆಪಿಗೆ ಗೆಲುವು: ಸಾರಿಗೆ ಸಚಿವ ಹೇಳಿಕೆ

ಮೀಸಲಾತಿ ಘೋಷಣೆಯಿಂದ ನಿದ್ದೆಗೆಟ್ಟ ಕಾಂಗ್ರೆಸ್: ಶ್ರೀರಾಮುಲು

ಪ್ರಜಾವಾಣಿ ವಾರ್ತೆ

ಹಾವೇರಿ: 'ರಾಜ್ಯದಲ್ಲಿ ಕಾಂಗ್ರೆಸ್ ದಿವಾಳಿ ಆಗಿದೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಹರಾಜಿಗೆ ಬರಲಿದೆ. ನಾವು ಬೊಮ್ಮಾಯಿ ನೇತೃತ್ವದಲ್ಲಿ ವಿಧಾನಸಭಾ ಚುನಾವಣೆಯನ್ನು ಎದುರಿಸಿ, 140 ಸ್ಥಾನಗಳನ್ನು ಗೆದ್ದು ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದೆ' ಎಂದು ಸಾರಿಗೆ ಸಚಿವ ಶ್ರೀರಾಮುಲು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿ, 'ಕಾಂಗ್ರೆಸ್ ಜನರಿಗೆ ಟೋಪಿ ಹಾಕೋದು, ಕಿವಿಯಲ್ಲಿ ಹೂ ಇಡೋದು, ಡೋಂಗಿ ಮಾತನಾಡೋದು ಮಾಡುತ್ತಾ ಇದೆ. ಮೀಸಲಾತಿ ಘೋಷಣೆ ಬಳಿಕ ಕಾಂಗ್ರೆಸ್ ನಿದ್ದೆಗೆಟ್ಟಿದೆ. ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಏನೇ ಸರ್ಕಸ್ ಮಾಡಿದರೂ ಬಿಜೆಪಿ ಗೆಲ್ಲಲಿದೆ' ಎಂದರು.

ಬಿಜೆಪಿ ಶಾಸಕರಿಗೆ ಡಿಕೆಶಿ ಗಾಳ ಹಾಕಿದ ವಿಚಾರಕ್ಕೆ ಪ್ರತಿಕ್ರಿಯಿಸಿ, ಕೆಪಿಸಿಸಿ ಅಧ್ಯಕ್ಷರಾಗಿ ನಮ್ಮ ಪಕ್ಷದ ಶಾಸಕರನ್ನು ಸೆಳೆಯುತ್ತಾರೆ ಅಂದರೆ, ಕಾಂಗ್ರೆಸ್‌ನವರಿಗೆ ಸೋಲಿನ ಭಯ ಕಾಡುತ್ತಿದೆ ಎಂದರ್ಥ. ಡಿಕೆಶಿ ಮಾತಿಗೆ ನಮ್ಮ ಪಕ್ಷದ ಶಾಸಕರು ಮರುಳಾಗಿ ಕಾಂಗ್ರೆಸ್ಸಿಗೆ ಹೋದರೆ ಮುಂದೆ ಪಶ್ಚಾತ್ತಾಪ ಪಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಬಿಜೆಪಿ- ಜೆಡಿಎಸ್ ಹೊಂದಾಣಿಕೆ ಮಾಡಿಕೊಂಡು ವರುಣಾದಲ್ಲಿ ನನ್ನನ್ನು ಸೋಲಿಸೋ ಪ್ರಯತ್ನ ಮಾಡ್ತಾ ಇದ್ದಾರೆ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿ, ಅದು ನಿಜವಾಗಿದ್ದರೆ ಸಿದ್ದರಾಮಯ್ಯ ಬಾದಾಮಿಯಲ್ಲಿ ಕೂಡ ಗೆಲ್ಲುತ್ತಾ ಇರಲಿಲ್ಲ. ಬಾದಾಮಿಯಲ್ಲಿ ಜೆಡಿಎಸ್‌ನಿಂದ ಬೇವಿನಮರದ ನಿಂತಿದ್ರು. ಅವರು 20 ಸಾವಿರಕ್ಕೂ ಹೆಚ್ಚು ಮತಗಳನ್ನು ಪಡೆದಿದ್ದರು. ಅವೆಲ್ಲವೂ ಬಿಜೆಪಿ ಮತಗಳೇ. ಆ ಮತಗಳು ನನಗೆ ಬಿದ್ದಿದ್ದರೆ ನಾನು ಗೆಲ್ಲುತ್ತಿದ್ದೆ. ಜೆಡಿಎಸ್ ಜತೆ ಹೊಂದಾಣಿಕೆ ಮಾಡಿಕೊಂಡಿದ್ರೆ, ಸಿದ್ದರಾಮಯ್ಯನವರ ಕತೆ ಅಂದೇ ಮುಗಿದು ಹೋಗುತ್ತಿತ್ತು ಎಂದು ತಿರುಗೇಟು ನೀಡಿದರು.

ಶಿಗ್ಗಾವಿಯಲ್ಲಿ ಸಿಎಂ ವಿರುದ್ಧ ವಿನಯ್ ಕುಲಕರ್ಣಿ ಸ್ಪರ್ಧೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಅದನ್ನು ಜನರು ತೀರ್ಮಾನ ಮಾಡುತ್ತಾರೆ. ಸಿಎಂ ಎರಡು ಕ್ಷೇತ್ರಗಳಲ್ಲಿ ಗೆಲ್ಲಬೇಕು ಎಂಬ ಬಗ್ಗೆ ಪಕ್ಷದಲ್ಲಿ ತೀರ್ಮಾನ ಆಗಿಲ್ಲ. ಇಷ್ಟೊಂದು ಅಭಿವೃದ್ಧಿ ಕೆಲಸಗಳನ್ನು ಮಾಡಿದ ಬೊಮ್ಮಾಯಿ ಅವರು ಶಿಗ್ಗಾವಿ ಕ್ಷೇತ್ರದಲ್ಲೇ ಸ್ಪರ್ಧಿಸುತ್ತಾರೆ. ಬೊಮ್ಮಾಯಿಯವರದ್ದು ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು. ಎಲ್ಲ ಸಮುದಾಯಗಳಿಗೆ ಮೀಸಲಾತಿ ನ್ಯಾಯ ಒದಗಿಸಿ ಸೈ ಎನಿಸಿಕೊಂಡಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಗೋಪಾಲಕೃಷ್ಣರ ರಾಜೀನಾಮೆ ನೋವು ತಂದಿದೆ'

ಶ್ರೀರಾಮುಲು

ಹಾವೇರಿ: 'ಕೂಡ್ಲಿಗಿ ಶಾಸಕ ಎನ್.ವೈ. ಗೋಪಾಲಕೃಷ್ಣ ರಾಜೀನಾಮೆ ನೀಡಿರುವುದು ನನಗೆ ಮತ್ತು ಕಾರ್ಯಕರ್ತರಿಗೆ ನೋವು ತಂದಿದೆ. ಅವರ ರಾಜೀನಾಮೆಯನ್ನು ನಿರೀಕ್ಷೆ ಮಾಡಿರಲಿಲ್ಲ. ಅವರ ಆತುರದ ನಿರ್ಧಾರ ಕಾರ್ಯಕರ್ತರ ಮೇಲೆ ಪರಿಣಾಮ ಬೀರುತ್ತದೆ' ಎಂದು ಸಾರಿಗೆ ಸಚಿವ ಶ್ರೀರಾಮುಲು ಹೇಳಿದರು.

ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿ, ಗೋಪಾಲಕೃಷ್ಣ ಅವರು ಬಿಜೆಪಿಯಲ್ಲಿ ಇದ್ದಿದ್ರೆ ಮತ್ತೆ ಗೆಲುವು ಸಾಧಿಸುತ್ತಿದ್ದರು. ರಾಜೀನಾಮೆ ಕೊಡುವ ಮೊದಲು ನನ್ನ ಜೊತೆ ಮಾತನಾಡಿಲ್ಲ. ನಮ್ಮ ಪಕ್ಷ ಕೂಡ್ಲಗಿ ಕ್ಷೇತ್ರದಲ್ಲಿ ಬಲಿಷ್ಠವಾಗಿದೆ. ಮತ್ತೆ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸುತ್ತೇವೆ ಎಂದರು.

ಟಾಸ್ಕ್ ಹೆಸರಿನಲ್ಲಿ ₹1.35 ಲಕ್ಷ ವಂಚನೆ

ಚಿಕ್ಕಬಳ್ಳಾಪುರ: ನಗರದ ವಾಪಸಂದ್ರದ ಶರೀಫುಲ್ಲಾ ಅವರಿಗೆ ಆನ್‌ಲೈನ್ ವಂಚಕರು ಟಾಸ್ಕ್ ಹೆಸರಿನಲ್ಲಿ ₹1.35 ಲಕ್ಷ ವಂಚಿಸಿದ್ದಾರೆ. ಈ ಬಗ್ಗೆ ಅವರು ಸಿ.ಇ.ಎನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

'ಜುನೇರ ಎಂಬ ಹೆಸರಿನಲ್ಲಿ ಟೆಲಿಗ್ರಾಂನಲ್ಲಿ ನನಗೆ ಸಂದೇಶ ಕಳುಹಿಸಿ ನೀವು ಕೆಲಸ ಹುಡುಕುತ್ತಿದ್ದೀರಾ ಎಂದು ಕೇಳಿ, ಪ್ರವಾಸಿ ಸ್ಥಳಗಳು, ಹೋಟೆಲ್‌ಗಳ ಫೀಡ್ ಬ್ಯಾಕ್ ಕೊಡುವ ಕೆಲಸ ನೀಡಿದರು. WWW.TOURRPBOOTS-11.COM ಅವರೇ ₹10 ಸಾವಿರ ಹೂಡಿಕೆ ಮಾಡಿ ನನಗೆ ಟಾಸ್ಕ್ ನೀಡಿದರು. ನಾನು ಅವರು ನೀಡಿದ್ದ ಟಾಸ್ಕ್ ಪೂರ್ಣಗೊಳಿಸಿದೆ. ಕಮಿಷನ್ ಸಹಬಂದಿತು. ಹೀಗೆ ಕಮಿಷನ್ ಆಸೆ ತೋರಿಸಿ ಒಟ್ಟು ₹1,35,736 ಹೂಡಿಕೆ ಮಾಡಿಸಿಕೊಂಡರು. ನನಗೆ ಕಮಿಷನ್ ಬಂದಂತೆ ವೆಬ್‌ಸೈಟ್‌ನಲ್ಲಿ ತೋರಿಸುತ್ತಿತ್ತು. ಆದರೆ ಡ್ರಾ ಮಾಡಲು ಸಾಧ್ಯವಿರಲಿಲ್ಲ' ಎಂದು ಅವರು ಹೇಳಿದರು.

ಮಹೇಶ ಜೋಶಿಗೆ ಬೆಂಗಳೂರು ನಗರ ಜಿಲ್ಲಾ ಕಸಾಪ ಅಧ್ಯಕ್ಷ ಪ್ರಕಾಶಮೂರ್ತಿ ಬಹಿರಂಗ ಪತ್ರ

'ಕುಸಿಯುತ್ತಿದೆ ಸಾಹಿತ್ಯ ಪರಿಷತ್ತಿನ ಘನತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಮ್ಮ ನಡೆ, ನುಡಿ ಹಾಗೂ ನಿಲುವುಗಳನ್ನು ಬದಲಾಯಿಸಿಕೊಳ್ಳುವ ಮೂಲಕ ದಿನದಿಂದ ದಿನಕ್ಕೆ ಕುಸಿಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಘನತೆಯನ್ನು ಎತ್ತಿ ಹಿಡಿಯಬೇಕು' ಎಂದು ಬೆಂಗಳೂರು ನಗರ ಜಿಲ್ಲಾ ಕಸಾಪ ಅಧ್ಯಕ್ಷ ಎಂ. ಪ್ರಕಾಶಮೂರ್ತಿ ಅವರು ಕಸಾಪ ರಾಜ್ಯ ಘಟಕದ ಅಧ್ಯಕ್ಷ ಮಹೇಶ ಜೋಶಿ ಅವರಿಗೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು 5 ಪುಟಗಳ ಬಹಿರಂಗ ಪತ್ರ ಬರೆದಿದ್ದಾರೆ. '108 ವರ್ಷಗಳಿಂದ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಾ ಬಂದಿರುವ ಪರಿಷತ್ತಿನ ಘನತೆ–ಗೌರವ ರಾಜ್ಯಾಧ್ಯಕ್ಷರಾದ ತಮ್ಮಿಂದ ಕುಸಿದು, ಮಣ್ಣುಪಾಲಾಗುತ್ತಿದೆ. ಪ್ರಾರಂಭದ ದಿನಗಳಿಂದಲೂ ತಮ್ಮ ನಡೆ, ನುಡಿ, ನಿಲುವುಗಳು ನಾಡಿನಾದ್ಯಂತ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ವಲಯಗಳಲ್ಲಿ ವ್ಯಾಪಕ ಟೀಕೆ ಮತ್ತು ವಿವಾದಗಳಿಗೆ ಗುರಿಯಾಗಿವೆ. ಅಲ್ಲದೆ, ಇಡೀ ಕಾರ್ಯಕಾರಿ ಸಮಿತಿಯೂ ತೀವ್ರ ನಿಂದನೆಗೆ ಒಳಗಾಗುತ್ತಿದೆ. 1915ರಿಂದ 2018ರವರೆಗೆ ಕಸಾಪ ನಿಬಂಧನೆಯನ್ನು 6 ಬಾರಿ ತಿದ್ದುಪಡಿ ಮಾಡಲಾಗಿತ್ತು. ಆದರೆ, ತಾವು 'ಆಮೂಲಾಗ್ರ, ಕ್ರಾಂತಿಕಾರಿ ಬದಲಾವಣೆ' ಎಂದು ತಿದ್ದುಪಡಿಗಳನ್ನು ಮಾಡಿರುವಿರಿ' ಎಂದು ಪ್ರಕಾಶಮೂರ್ತಿ ಬೇಸರಿಸಿದರು.

'ಸದಸ್ಯತ್ವದ ಅಮಾನತು, ಚುನಾಯಿತ ಕಾರ್ಯಕಾರಿ ಸಮಿತಿಗೆ ಕಟ್ಟುಪಾಡುಗಳ ಸುತ್ತೋಲೆ, ಹಣಕಾಸಿನ ನಿರ್ವಹಣೆ ಮುಂತಾದ ವಿಷಯಗಳ ಬಗ್ಗೆ ಕಾರ್ಯಕಾರಿ ಸಮಿತಿಯ ಚುನಾಯಿತ ಪ್ರತಿನಿಧಿಗಳೊಂದಿಗೆ ಚರ್ಚಿಸಿಲ್ಲ. ಚುನಾಯಿತ ಸದಸ್ಯರ ಸಲಹೆ, ಸೂಚನೆ, ಮನವಿಗಳನ್ನು ಪರಿಗಣಿಸದೇ, ರಾಜ್ಯಾಧ್ಯಕ್ಷರಾದ ತಮಗೇ ಪರಮಾಧಿಕಾರವಿದೆ ಎಂದು ಪ್ರತಿನಿಧಿಗಳ ಸ್ವಾಯತ್ತತೆಗಳೆಲ್ಲವನ್ನೂ ಹತ್ತಿಕ್ಕಿ, ಏಕಪಕ್ಷೀಯ ನಿರ್ಧಾರಗಳನ್ನು ಕೈಗೊಳ್ಳುತ್ತಾ ಬರಲಾಗಿದೆ. ಈ ಕ್ರಮವನ್ನು ನಿಲ್ಲಿಸಬೇಕು' ಎಂದಿದ್ದಾರೆ.

'ಶಿಶುನಾಳ ಷರೀಫರ ಗುರು ಗೋವಿಂದ ಭಟ್ಟರ ಮರಿಮೊಮ್ಮಗ ಎಂದೂ, ಮುಖ್ಯಮಂತ್ರಿ ನನಗೆ ಹೋಗೋ ಬಾರೊ ಗೆಳೆಯ ಎಂಬಿತ್ಯಾದಿ ಅನೇಕ ವೈಯಕ್ತಿಕ ವಿಚಾರಗಳನ್ನು ಕಾರ್ಯಕಾರಿ ಸಮಿತಿ ಸಭೆಗಳಲ್ಲಿ ಮಾತನಾಡುತ್ತಾ, ಸಮಯ ವ್ಯರ್ಥ ಮಾಡಲಾಗುತ್ತಿದೆ' ಎಂದು ಆರೋಪಿಸಿದ್ದಾರೆ.

'ಹಿಂದಿ ಹೇರಿಕೆಯ ತಂತ್ರ ಒಪ್ಪುವುದಿಲ್ಲ'

ಬೆಂಗಳೂರು: 'ನಂದಿನಿ ಮೊಸರಿನ ಪೊಟ್ಟಣದ ಮೇಲೆ 'ದಹಿ' ಹಿಂದಿ ಪದ ಬಳಸುವುದನ್ನು ಹಾಗೂ ಹಿಂದಿ ಹೇರಿಕೆಯ ತಂತ್ರವನ್ನು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಒಪ್ಪುವುದಿಲ್ಲ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಹೇಳಿದ್ದಾರೆ.

'ನಂದಿನಿ ಉತ್ಪನ್ನಗಳಿಂದಲೇ ಕನ್ನಡಿಗರ ಬೆಳಗು ಆರಂಭವಾಗುತ್ತದೆ. ಕೆಎಂಎಫ್ ಎನ್ನುವುದು ಕನ್ನಡ ನಾಡಿನ ಜನರ ಅವಿಭಾಜ್ಯ ಅಂಗ. ಹೀಗಿರುವಾಗ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಆದೇಶವನ್ನು ಯಾವುದೇ ಕಾರಣಕ್ಕೂ ಕನ್ನಡಿಗರು ಒಪ್ಪಲು ಸಾಧ್ಯವಿಲ್ಲ. ಇದು ಹಿಂದಿ ಹೇರಿಕೆಯ ತಂತ್ರವಾಗಿದೆ. ಇದನ್ನು ಕನ್ನಡಿಗರು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ. ಹಿಂದಿ ಹೇರಿಕೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ನಿರಂತರ ವಿರೋಧಿಸುತ್ತಾ ಬಂದಿದೆ' ಎಂದು ಅವರು ತಿಳಿಸಿದ್ದಾರೆ.

'ನಮ್ಮ ಮೆಟ್ರೊದಲ್ಲಿ ಹಿಂದಿ ನಾಮಫಲಕ ಅಳವಡಿಕೆ, ಕೇಂದ್ರ ಆಯೋಜಿಸುವ ಪರೀಕ್ಷೆಗಳಲ್ಲಿ ಕನ್ನಡಿಗರಿಗೆ ಅನ್ಯಾಯ, ಉದ್ಯೋಗದಲ್ಲಿ ತಾರತಮ್ಯ ಸೇರಿ ವಿವಿಧ ಸಂದರ್ಭದಲ್ಲಿ ಹೋರಾಟ ನಡೆಸಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಚಾಮರಾಜಪೇಟೆಯ ಕೋಟೆ ಹೈಸ್ಕೂಲ್ ಆವರಣದಲ್ಲಿ ಶ್ರೀರಾಮಸೇವಾ ಮಂಡಳಿಯು 'ಪ್ರಜಾವಾಣಿ' ಸಹಯೋಗದಲ್ಲಿ ಆಯೋಜಿಸಿರುವ 85ನೇ ಶ್ರೀರಾಮನವಮಿ ಸಂಗೀತೋತ್ಸವ'ದಲ್ಲಿ ಶುಕ್ರವಾರ ಅಂಭಿ ಸುಬ್ರಮಣಿಯಂ ಮತ್ತು ಪ್ರವೀಣ್ ಗೋಡ್ಖಿಂಡಿ ಜುಗಲ್ ಬಂದಿ ನಡೆಯಿತು –ಪ್ರಜಾವಾಣಿ ಚಿತ್ರ/ರಂಜು ಪಿ.

ಬಳ್ಳಾರಿ ರಸ್ತೆಯ ಬ್ಯಾಟರಾಯನಪುರದಲ್ಲಿ ಕೋದಂಡರಾಮಸ್ವಾಮಿಯವರ 74ನೇ ವರ್ಷದ ಬ್ರಹ್ಮರಥೋತ್ಸವ ಶುಕ್ರವಾರ ವಿಜೃಂಭಣೆಯಿಂದ ನಡೆಯಿತು.

ಕೋದಂಡರಾಮಸ್ವಾಮಿ ಬ್ರಹ್ಮರಥೋತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ಬಳ್ಳಾರಿ ರಸ್ತೆಯ ಬ್ಯಾಟರಾಯನಪುರದಲ್ಲಿ ಕೋದಂಡ ರಾಮ ಸ್ವಾಮಿ 74ನೇ ಬ್ರಹ್ಮರಥೋತ್ಸವ ಶುಕ್ರವಾರ ವಿಜೃಂಭಣೆಯಿಂದ ನೆರವೇರಿತು.

ಬೆಳಿಗ್ಗೆಯಿಂದಲೇ ಸ್ವಾಮಿಗೆ ಅಭಿಷೇಕ, ಅರ್ಚನೆ, ಮಹಾನಿವೇದನೆ, ಮಹಾಮಂಗಳಾರತಿ ಮತ್ತಿತರ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಸುತ್ತಮುತ್ತಲ ಗ್ರಾಮಗಳು, ಬೆಂಗಳೂರು ನಗರ ಸೇರಿ ವಿವಿಧ ಜಿಲ್ಲೆಗಳಿಂದ ಅಪಾರ ಸಂಖ್ಯೆಯಲ್ಲಿ ಆಗಮಿಸಿದ್ದ ಭಕ್ತರು ಸ್ವಾಮಿಯ ದರ್ಶನ ಪಡೆದರು.

ಬಾಳೆಹಣ್ಣು ಮತ್ತು ದವನದ ಸೊಪ್ಪನ್ನು ರಥದ ಮೇಲೆ ಎಸೆಯುವ ಮೂಲಕ ತಮ್ಮ ಹರಕೆ ತೀರಿಸಿದರು. ಕೋಸಂಬರಿ, ಪಾನಕ ಮತ್ತು ಮಜ್ಜಿಗೆ ವಿತರಣೆಯ ಜೊತೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಅಮೃತ್‌ಪಾಲ್ ಪತ್ತೆಗೆ ಅಡಗುತಾಣಗಳಲ್ಲಿ ಶೋಧ

ಹೋಶಿಯಾರ್‌ಪುರ, ಪಂಜಾಬ್ (ಪಿಟಿಐ): ಸಿಖ್ ಮೂಲಭೂತವಾದಿ ಪ್ರಚಾರಕ ಅಮೃತಪಾಲ್ ಸಿಂಗ್ ಪತ್ತೆಗಾಗಿ ಕಾರ್ಯಾಚರಣೆ ಮುಂದುವರಿದಿದ್ದು, ಮೂರು ದಿನಗಳ ಹಿಂದೆ ಶಂಕಿತ ವ್ಯಕ್ತಿಗಳು ತಮ್ಮ ಕಾರುಗಳನ್ನು ಬಿಟ್ಟು ಪರಾರಿಯಾಗಿರುವ ಹಿನ್ನೆಲೆಯಲ್ಲಿ ಡೇರೆಗಳು ಮತ್ತು ಅಡಗುತಾಣಗಳಲ್ಲಿ ಪಂಜಾಬ್ ಪೊಲೀಸರು ಶೋಧ ನಡೆಸಿದರು.

ಪ್ರಮುಖ ಸ್ಥಳಗಳಲ್ಲಿ ಬ್ಯಾರಿಕೇಡ್ ಹಾಕಲಾಗಿದೆ. ಮರ್ನಾಯನ್ ಮತ್ತು ಸಮೀಪದ ಹಳ್ಳಿಗಳಲ್ಲಿ ಎಲ್ಲಾ ವಾಹನಗಳ ತಪಾಸಣೆ ನಡೆಯುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಧಿಕಾರಿಗಳು ಡೇರೆಗಳು, ವಸತಿ ಸ್ಥಳಗಳು, ಕೊಳವೆ ಬಾವಿಗಳ ಬಳಿ ಸ್ಥಾಪಿಸಲಾದ ಸಣ್ಣ ಕೊಠಡಿಗಳು, ಪ್ರಾಣಿಗಳಿಗೆ ಆಶ್ರಯ ನೀಡಿರುವ ಸ್ಥಳಗಳನ್ನೂ ಶೋಧಿಸುತ್ತಿದ್ದಾರೆ.

ಚುಟುಕು ಸುದ್ದಿ

ಕರಾಚಿಯಲ್ಲಿ ಕಾಲ್ತುಳಿತ: 12 ಸಾವು

ಕರಾಚಿ (ಪಿಟಿಐ): 'ರಂಜಾನ್ ಪ್ರಯುಕ್ತ ಇಲ್ಲಿ ತೆರೆಯಲಾಗಿದ್ದ ಪಡಿತರ ವಿತರಣೆ ಕೇಂದ್ರದ ಬಳಿ ಶುಕ್ರವಾರ ಕಾಲ್ತುಳಿತ ಸಂಭವಿಸಿದ್ದು, ಮಹಿಳೆ ಮತ್ತು ಮಕ್ಕಳು ಸೇರಿ ಕನಿಷ್ಠ 12 ಮಂದಿ ಮೃತಪಟ್ಟಿದ್ದಾರೆ. ಹಲವರು ಗಾಯಗೊಂಡಿದ್ದಾರೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಪಡಿತರ ಕೇಂದ್ರದ ಬಳಿ ವಿದ್ಯುತ್ ತಂತಿಯೊಂದು ಇತ್ತು. ಅದನ್ನು ತುಳಿದು ಇಬ್ಬರು ಅಸುನೀಗಿದ್ದಾರೆ. ಇದನ್ನು ಕಂಡು ಗಾಬರಿಗೊಂಡ ಜನರು ದಿಕ್ಕೆಟ್ಟು ಓಡಿದ್ದಾರೆ. ಈ ವೇಳೆ ಕಾಲ್ತುಳಿತ ಸಂಭವಿಸಿದೆ. ತಳ್ಳಾಟದಿಂದಾಗಿ ಕೆಲವರು ಚರಂಡಿಗೂ ಬಿದ್ದಿದ್ದಾರೆ' ಎಂದು ತಿಳಿಸಿದ್ದಾರೆ.

ರಾಮದೇವರ ರಥೋತ್ಸವ ಸಂಪನ್ನ

ರಾಮನಗರ: ನಗರದ ಜನರ ಆರಾಧ್ಯ ದೈವ ಶ್ರೀರಾಮ ದೇವರ ಬ್ರಹ್ಮ ರಥೋತ್ಸವವು ಶುಕ್ರವಾರ ವಿಜೃಂಭಣೆಯಿಂದ ನೆರವೇರಿತು.

ಛತ್ರದ ಬೀದಿಯಲ್ಲಿ ಇರುವ ಶ್ರೀರಾಮ ದೇವರ ರಥೋತ್ಸವವು ಪ್ರತಿ ವರ್ಷ ರಾಮನವಮಿಯ ಮಾರನೆ ದಿನ ನಡೆಯುತ್ತ ಬಂದಿದೆ. ಅಂತೆಯೇ ಶುಕ್ರವಾರ ನಡೆದ ರಥೋತ್ಸವದಲ್ಲಿ ಜಿಲ್ಲೆ–ಹೊರ ಜಿಲ್ಲೆಗಳಿಂದ ಬಂದಿದ್ದ ಸಾವಿರಾರು ಭಕ್ತರು ಶ್ರೀರಾಮನ ಜೈಕಾರ ಕೂಗುತ್ತ ತೇರನ್ನು ಎಳೆದರು. ದೇಗುಲದಲ್ಲಿ ಸೀತಾ, ಲಕ್ಷ್ಮಣ ಸಮೇತ ಶ್ರೀರಾಮ ದೇವರ ಮೂರ್ತಿಗಳ ದರ್ಶನ ಪಡೆದರು.

ರಾಮನಗರದಲ್ಲಿ ಶ್ರೀರಾಮನಿಗೆ ಅಪಮಾನ ಆರೋಪ

ಬ್ಯಾನರ್ ವಿವಾದ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ರಾಮನಗರ: ಶ್ರೀರಾಮ ದೇವರ ರಥೋತ್ಸವದ ಹಿನ್ನೆಲೆಯಲ್ಲಿ ಇಲ್ಲಿನ ಐಜೂರು ವೃತ್ತದಲ್ಲಿ ಹಾಕಲಾಗಿದ್ದ ಬೃಹತ್ ಬ್ಯಾನರ್ ಅನ್ನು ತೆರವುಗೊಳಿಸಿ ಉಲ್ಟಾ ತಿರುಗಿಸುವ ಮೂಲಕ ಶ್ರೀರಾಮನಿಗೆ ಅಪಮಾನ ಮಾಡಲಾಗಿದೆ ಎಂದು ಆರೋಪಿಸಿ ವಿವಿಧ ಹಿಂದೂ ಸಂಘಟನೆಗಳ ಕಾರ್ಯಕರ್ತರು ಶುಕ್ರವಾರ ರಾತ್ರಿ ದಿಢೀರ್ ಪ್ರತಿಭಟನೆ ನಡೆಸಿದರು.

ಐಜೂರು ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಜಿಲ್ಲಾಡಳಿತ ಹಾಗೂ ನಗರಸಭೆ ಸಿಬ್ಬಂದಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭ ಸ್ಥಳದಲ್ಲಿದ್ದ ಪ್ರತಿಭಟನಾಕಾರರು ರಸ್ತೆ ತಡೆಗೆ ಮುಂದಾಗಿದ್ದು, ಪೊಲೀಸರ ಜೊತೆ ವಾಗ್ವಾದ ಸಹ ನಡೆಯಿತು.

' ಹಬ್ಬದ ಹಿನ್ನೆಲೆಯಲ್ಲಿ ಶುಭಾಶಯ ಕೋರಿ ಹಿಂದೂ ಜಾಗರಣ ವೇದಿಕೆ ವತಿಯಿಂದ ರಾಮನ ಭಾವಚಿತ್ರವುಳ್ಳ ಬ್ಯಾನರ್ ನಿಲ್ಲಿಸಲಾಗಿತ್ತು. ಆದರೆ ನೀತಿ ಸಂಹಿತೆ ನೆಪದಲ್ಲಿ ನಗರಸಭೆಯ ಸಿಬ್ಬಂದಿ ಬ್ಯಾನರ್ ಅನ್ನು ತೆರವುಗೊಳಿಸಿ ಉಲ್ಟಾ ತಿರುಗಿಸಿ ನಿಲ್ಲಿಸಿದ್ದಾರೆ. ಈ ಮೂಲಕ ಶ್ರೀರಾಮನಿಗೆ ಅಪಮಾನ ಮಾಡಿದ್ದಾರೆ' ಎಂದು ದೂರಿದರು. ಪ್ರತಿಭಟನಾಕಾರರ ಹಠಕ್ಕೆ ಮಣಿದ ಪೊಲೀಸರು ಬ್ಯಾನರ್ ಅನ್ನು ಸರಿಪಡಿಸಿ ನಿಲ್ಲಿಸಿದರು. ನಂತರ ರಾಮಭಕ್ತರು ಪ್ರತಿಭಟನೆ ಕೈಬಿಟ್ಟರು.

ಅಧಿಕಾರಿಗಳು ಹೇಳುವುದೇನು?: ' ಚುನಾವಣೆ ನೀತಿಸಂಹಿತೆ ಹಿನ್ನೆಲೆಯಲ್ಲಿ ಈ ರೀತಿಯ ಯಾವುದೇ ಕಟೌಟ್, ಬ್ಯಾನರ್ ಹಾಕುವ ಸಂಬಂಧಿಸಿದ ಚುನಾವಣಾ ಅಧಿಕಾರಿಗಳಿಂದ ಪೂರ್ವಾನುಮತಿ ಕಡ್ಡಾಯವಾಗಿದೆ. ಇದಕ್ಕೆ ಅನುಮತಿ ಪಡೆದಿರದ ಕಾರಣ ತೆರವುಗೊಳಿಸಿ ಬ್ಯಾನರ್ ಅನ್ನು ಅಲ್ಲಿಂದ ಒಯ್ಯಲು ನಮ್ಮ ಸಿಬ್ಬಂದಿ ಮುಂದಾದರು. ಆದರೆ ಅದಕ್ಕೆ ಕೆಲವು ಸಂಘಟನೆಗಳ ಮುಖಂಡರು ವಿರೋಧಿಸಿ, ನಾವು ಬ್ಯಾನರ್‌ಗೆ ಅನುಮತಿ ಪಡೆದ ನಂತರ ಕಟ್ಟುತ್ತೇವೆ. ಹೀಗಾಗಿ ಇದನ್ನು ಒಯ್ಯಬೇಡಿ ಎಂದರು. ನಂತರ ಅಲ್ಲಿಂದ ನಮ್ಮ ಸಿಬ್ಬಂದಿ ವಾಪಸ್ ಬಂದಿದ್ದಾರೆ. ನಾವು ದೇವರ ಬ್ಯಾನರ್ ಅನ್ನು ತಿರುಗಿಸಿ ನಿಲ್ಲಿಸಿಲ್ಲ' ಎಂದು ರಾಮನಗರ ನಗರಸಭೆ ಆಯುಕ್ತ ನಾಗೇಶ್ ತಿಳಿಸಿದರು.

ಐಜೂರು ವೃತ್ತದಲ್ಲಿ ಶುಕ್ರವಾರ ರಾತ್ರಿ ಶ್ರೀರಾಮ ದೇವರ ಬ್ಯಾನರ್ ಅನ್ನು ಸರಿಪಡಿಸಿ ಕಟ್ಟಲಾಯಿತು

ವಕೀಲರ ಸಂಘದಲ್ಲಿ ಸೀಮಂತ ಸಂಭ್ರಮ

ಪ್ರಜಾವಾಣಿ ವಾರ್ತೆ

ಪಿರಿಯಾಪಟ್ಟಣ: ಪಟ್ಟಣದ ವಕೀಲರ ಸಂಘದಲ್ಲಿ ಶುಕ್ರವಾರ ಸೀಮಂತ ಸಂಭ್ರಮ ಮನೆ ಮಾಡಿತ್ತು. ವಕೀಲೆ ಪಲ್ಲವಿ ಅವರಿಗೆ ನ್ಯಾಯಾಧೀಶರಾದ ಶ್ವೇತಾ ಹಾಗೂ ಸಂಘದ ಪ್ರಮುಖರು ಸೀಮಂತ ಕಾರ್ಯ ಮಾಡಿದರು.

ನಂತರ ಮಾತನಾಡಿದ ನ್ಯಾಯಧೀಶೆ, 'ಹೆರಿಗೆ ನೋವಿನ ಭಯ ಹೋಗಲಾಡಿಸಲು ಸೀಮಂತ ಕಾರ್ಯಕ್ರಮ ನೆರವಾಗುತ್ತದೆ' ಎಂದು ಹೇಳಿದರು.

'ತಾಯ್ತನದ ಸಂಭ್ರಮವನ್ನು ಹೆಚ್ಚಿಸಿ, ಪರಸ್ಪರ ಸ್ನೇಹ ಸೌಹಾರ್ದತೆ ಬೆಸೆಯುವಂಥ ಕಾರ್ಯಕ್ರಮ ಏರ್ಪಡಿಸಿರುವುದು ಶ್ಲಾಘನೀಯ. ಮಹಿಳಾ ವಕೀಲರ ಕಾರ್ಯ ಇತರ ವೃತ್ತಿಪರ ಸಮುದಾಯಕ್ಕೂ ಮಾದರಿ' ಎಂದು ನ್ಯಾಯಾಧೀಶ ಸಮೀವುಲ್ಲಾ ಅವರು ಹೇಳಿದರು.

ಅಭ್ಯರ್ಥಿಗಳ ಆಯ್ಕೆ-ಅಭಿಪ್ರಾಯ ಸಂಗ್ರಹ ಸಭೆಯಲ್ಲಿ ಶಿವಮೊಗ್ಗ ಕ್ಷೇತ್ರದ ಸಂಸದ

150 ಕ್ಷೇತ್ರದಲ್ಲಿ ಗೆಲ್ಲುವ ಗುರಿ: ರಾಘವೇಂದ್ರ

ಪ್ರಜಾವಾಣಿ ವಾರ್ತೆ

ಕೋಲಾರ: 'ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಬಿಜೆಪಿ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಬೇಕಿದೆ. ಈ ನಿಟ್ಟಿನಲ್ಲಿ 150 ಕ್ಷೇತ್ರಗಳನ್ನು ಗೆಲ್ಲುವ ಗುರಿಯೊಂದಿಗೆ ಚುನಾವಣೆ ಎದುರಿಸುತ್ತಿದ್ದೇವೆ' ಎಂದು ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ತಿಳಿಸಿದರು.

ನಗರದ ಹೊರವಲಯದ ರತ್ನಾ ಕನ್ವೆನ್ಷನ್ ಹಾಲ್‌ನಲ್ಲಿ ಶುಕ್ರವಾರ ಜಿಲ್ಲೆಯ ಆರು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆಗೆ ಪಕ್ಷದ ವಿವಿಧ ಘಟಕಗಳ ಪದಾಧಿಕಾರಿಗಳ ಅಭಿಪ್ರಾಯ ಸಂಗ್ರಹ ಸಭೆಯಲ್ಲಿ ಭಾಗವಹಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ಜಿಲ್ಲೆಯ ಆರೂ ಕ್ಷೇತ್ರಗಳಲ್ಲಿ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಗೆಲ್ಲಿಸಲು ತೀರ್ಮಾನಿಸಲಾಗಿದೆ. ಜಿಲ್ಲೆ ಹಿಂದುಳಿದಿದ್ದು, ಮುಂಬರುವ ದಿನಗಳಲ್ಲಿ ಬಿಜೆಪಿ ಶಾಸಕರು ಆಯ್ಕೆಯಾಗಿ ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲಿದ್ದಾರೆ' ಎಂದು ಅವರು ಹೇಳಿದರು.

'ಇಡೀ ಜಿಲ್ಲೆಯಲ್ಲಿ ಕಾಂಗ್ರೆಸ್ ವಿರೋಧಿ ಅಲೆ ಕಂಡುಬರುತ್ತಿದ್ದು, ಕಾಂಗ್ರೆಸ್ ಶಾಸಕರು ಮತ ಕೇಳುವ ನೈತಿಕತೆ ಕಳೆದುಕೊಂಡಿದ್ದಾರೆ. ಅಭಿವೃದ್ಧಿ ಕಡೆಗಣಿಸಿ ಸ್ವಹಿತಕ್ಕಾಗಿ ಶಾಸಕ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಹೀಗಾಗಿಯೇ, ಎಲ್ಲ ಕಡೆ ಬಿಜೆಪಿ ಗೆಲುವಿಗೆ ಪೂರಕ ವಾತಾವರಣವಿದೆ. ಜೆಡಿಎಸ್, ಕಾಂಗ್ರೆಸ್ ಪೈಪೋಟಿ ನೀಡಲಿವೆಯಾದರೂ ಜನರು ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ತರಲು ತೀರ್ಮಾನಿಸಿದ್ದು, ಆರೂ ಕ್ಷೇತ್ರಗಳಲ್ಲಿ ಪ್ರಬಲವಾಗಿ ಪೈಪೋಟಿ ನೀಡಲು ಸಜ್ಜಾಗಿದ್ದೇವೆ' ಎಂದರು.

'ಕಾಂಗ್ರೆಸ್ ದಿನದಿಂದ ದಿನಕ್ಕೆ ಜನರಿಂದ ಮರೆಯಾಗುತ್ತಿರುವ ಪಕ್ಷವಾಗಿದೆ. ಜನರ ಮಧ್ಯೆ ನೆನಪಿಗಾಗಿ ಅಲ್ಲೊಂದು ಇಲ್ಲೊಂದು ಕಾರ್ಯಕ್ರಮ ಮಾಡುತ್ತಿದ್ದಾರೆ. ಅವರು ರಾಹುಲ್ ಗಾಂಧಿಯಷ್ಟೇ ಅಲ್ಲ, ಯಾರನ್ನು ಕರೆಸಿ ಸಭೆ, ಸಮಾರಂಭ ಮಾಡಿಸಿದರೂ ಜನ ಮತ ಹಾಕುವುದಿಲ್ಲ' ಎಂದು ಹೇಳಿದರು.

ಅಭ್ಯರ್ಥಿ ಆಯ್ಕೆ–ಗುಪ್ತ ಮತದಾನ

ಸಂಸದ ಬಿ.ವೈ.ರಾಘವೇಂದ್ರ ನೇತೃತ್ವದಲ್ಲಿ ಜಿಲ್ಲೆಯ ಆರೂ ಕ್ಷೇತ್ರಗಳಿಗೆ ಬಿಜೆಪಿ ಅಭ್ಯರ್ಥಿಗಳ ಆಯ್ಕೆಗೆ ಪಕ್ಷದ ವಿವಿಧ ಘಟಕಗಳ ಪದಾಧಿಕಾರಿಗಳಿಂದ ಮತದಾನದ ಮೂಲಕ ಅಭಿಪ್ರಾಯ ಸಂಗ್ರಹಿಸಲಾಯಿತು. ಪ್ರತಿ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಆಯ್ಕೆಗಾಗಿ ಒಂದೊಂದೇ ಕ್ಷೇತ್ರದ ಪದಾಧಿಕಾರಿಗಳು ನಿಗದಿತ ಸಮಯದಲ್ಲಿ ಬಂದು ಗುಪ್ತ ಮತದಾನದಲ್ಲಿ ಪಾಲ್ಗೊಂಡರು.

ಸಂಜೆ 6 ಗಂಟೆ ನಂತರ ಕೋಲಾರ ಕ್ಷೇತ್ರದ ಅಭ್ಯರ್ಥಿಗಳ ಪರ ಮತದಾನ ನಡೆದಿದ್ದು, 240 ಮಂದಿ ಮತ ಚಲಾಯಿಸಿದರು ಎನ್ನಲಾಗಿದೆ. ಮತದಾನದಲ್ಲಿ ಟಿಕೆಟ್ ಆಕಾಂಕ್ಷಿಗಳಾದ ವರ್ತೂರು ಆರ್.ಪ್ರಕಾಶ್, ಓಂಶಕ್ತಿ ಚಲಪತಿ ಪಾಲ್ಗೊಂಡಿದ್ದರು. ಶನಿವಾರ ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಆಯೋಜಿಸಿರುವ ರಾಜ್ಯ ಕೋರ್ ಕಮಿಟಿ ಸಭೆಯಲ್ಲಿ ಅಭ್ಯರ್ಥಿಗಳ ಪಟ್ಟಿ ಚರ್ಚೆಯಾಗಿ ಅಂತಿಮವಾಗಿ ಹೈಕಮಾಂಡ್‌ಗೆ ಸಲ್ಲಿಕೆಯಾಗಲಿದೆ.

ಪ್ರಜಾ ಮತ ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

'ಜೆಡಿಎಸ್ ಅಧಿಕಾರಕ್ಕೆ'

ರಾಮನಗರ: ' ರಾಜ್ಯದಲ್ಲಿ ಈ ಬಾರಿ ಸ್ಪಷ್ಟ ಬಹುಮತದಿಂದ ಅಧಿಕಾರಕ್ಕೆ ಬರುತ್ತೇವೆ. ನಮಗೆ ಯಾರ ಬೆಂಬಲವೂ ಬೇಕಿಲ್ಲ' ಎಂದು ರಾಮನಗರ ವಿಧಾನ ಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಜೆಡಿಎಸ್ ಕಚೇರಿಯನ್ನು ಉದ್ಘಾಟಿಸಿದ ಮಾತನಾಡಿ, 'ಜೆಡಿಎಸ್ ಬಿಟ್ಟು ಯಾರೂ ಸರ್ಕಾರ ಮಾಡಲು ಆಗದು. ಹೀಗಾಗಿ ಅವರು ಹಾಗೆ ಹೇಳಿರಬಹುದು. ಆದರೆ ಯಾರು ಜೆಡಿಎಸ್ ಅನ್ನು ಸಂಪರ್ಕ ಮಾಡಲು ಬಯಸಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ' ಎಂದರು.

ಇಬ್ಬರು ಆರೋಪಿಗಳು ಪೊಲೀಸ್ ವಶಕ್ಕೆ

ಸ್ವಾಮೀಜಿ ವಿಡಿಯೊ ಚಿತ್ರೀಕರಿಸಿ ₹4 ಕೋಟಿಗೆ ಬ್ಲಾಕ್‌ಮೇಲ್

ಪ್ರಜಾವಾಣಿ ವಾರ್ತೆ

ರಾಮನಗರ: ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ ಬೆತ್ತಲಾಗಿದ್ದ ವಿಡಿಯೊ ಚಿತ್ರೀಕರಿಸಿ ಸ್ವಾಮೀಜಿಯೊಬ್ಬರಿಗೆ ₹4 ಕೋಟಿ ನೀಡುವಂತೆ ಬ್ಲಾಕ್‌ಮೇಲ್ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಇಲ್ಲಿನ ಗ್ರಾಮೀಣ ಠಾಣೆ ಪೊಲೀಸರು ಶುಕ್ರವಾರ ರಾತ್ರಿ ವಶಕ್ಕೆ ಪಡೆದಿದ್ದಾರೆ ಎನ್ನಲಾಗಿದೆ.

ರಾಮನಗರದ ಅರ್ಚಕರಹಳ್ಳಿಯ ಆದಿಚುಂಚನಗಿರಿ ಶಾಖಾ ಮಠದ ಕಿರಿಯ ಶ್ರೀಗಳಾದ ಕೃಪಾನಂದನಾಥ ಸ್ವಾಮೀಜಿ ತಮಗೆ ಬ್ಲಾಕ್‌ಮೇಲ್ ಕರೆಗಳು ಬರುತ್ತಿರುವ ಕುರಿತು ಮಾ.29ರಂದು ರಾಮನಗರ ಗ್ರಾಮೀಣ ಠಾಣೆಗೆ ದೂರು ನೀಡಿದ್ದರು.

ದೂರಿನಲ್ಲಿ ಏನಿದೆ?: ವಿಡಿಯೊ ಚಿತ್ರೀಕರಣಗೊಂಡ ಬಗೆ ಹಾಗೂ ನಂತರದಲ್ಲಿ ನಿರಂತರವಾಗಿ ಇಬ್ಬರು ವ್ಯಕ್ತಿಗಳು ಹಣಕ್ಕಾಗಿ ಒತ್ತಾಯಿಸುತ್ತಿದ್ದ ಕುರಿತು ಸ್ವಾಮೀಜಿ ದೂರಿನಲ್ಲಿ ವಿವರಿಸಿದ್ದಾರೆ.

'ಈಚೆಗೆ ನನಗೆ ಚರ್ಮದ ಅಲರ್ಜಿ ಆಗಿತ್ತು. ವೈದ್ಯರ ಸಲಹೆ ಮೇರೆಗೆ ದಿನ ಬೆಳಿಗ್ಗೆ ಹಾಗೂ ಸಂಜೆ ಮೈಗೆ ಔಷಧಿ ಹಚ್ಚಿಕೊಂಡು ಮಲಗುತ್ತಿದ್ದೆ. ಈ ವಿಚಾರ ತಿಳಿದವರು ನನ್ನ ಕೊಠಡಿಯಲ್ಲಿ ಮೊಬೈಲ್ ಇಟ್ಟು ನಾನು ಬೆತ್ತಲಾಗಿರುವ ಚಿತ್ರೀಕರಣ ಮಾಡಿದ್ದಾರೆ' ಎಂದು ತಿಳಿಸಿದ್ದಾರೆ.

'ಮಾ.20ರಂದು ಸಂಜೆ ರವಿಕುಮಾರ್ ಎಂಬ ವ್ಯಕ್ತಿ ಮಠದಲ್ಲಿನ ನನ್ನ ಕೊಠಡಿಗೆ ಬಂದು ನನ್ನ ವಿಡಿಯೊ ತೋರಿಸಿ ₹4 ಕೋಟಿಗೆ ಬೇಡಿಕೆ ಇಟ್ಟರು. ಕೇಳಿದಷ್ಟು ಹಣ ಕೊಡದೆ ಹೋದರೆ ₹4 ಲಕ್ಷ ಕೊಟ್ಟು ಇದೇ ವಿಡಿಯೊಗಳನ್ನು ಬೇಕಾದಂತೆ ಎಡಿಟ್ ಮಾಡಿಸಿ ಜಾಲತಾಣಗಳಲ್ಲಿ ಹರಿಬಿಡುವುದಾಗಿ ಬೆದರಿಕೆ ಹಾಕಿದರು. ನಂತರದಲ್ಲಿಯೂ ನಿರಂತರವಾಗಿ ಬ್ಲಾಕ್‌ಮೇಲ್ ಸಂದೇಶಗಳನ್ನು ಕಳುಹಿಸಿ ಬೆದರಿಕೆ ಒಡ್ಡಿದ್ದಾರೆ. ನನ್ನ ಕೊಠಡಿಗೆ ಆಗಾಗ್ಗೆ ಬರುತ್ತಿದ್ದ ಲಿಖಿತ್ ಎಂಬ ವ್ಯಕ್ತಿ ಈ ವಿಡಿಯೊ ಚಿತ್ರೀಕರಿಸಿರುವ ಸಾಧ್ಯತೆ ಇದೆ' ಎಂದು ದೂರಿನಲ್ಲಿ ವಿವರಿಸಿದ್ದಾರೆ.

ಪ್ರಜಾವಾಣಿ ಶನಿವಾರ, 1 ಏಪ್ರಿಲ್ 2023



ಬೇಲದ ಹಣ್ಣಿನಲ್ಲಿ ಸಾಕಷ್ಟು ಪೋಷಕಾಂಶ, ಖನಿಜಾಂಶಗಳಿವೆ. ಈ ಕಾರಣಕ್ಕಾಗಿಯೇ ಬೇಸಿಗೆಯಲ್ಲಿ ಬೇಲದ ಜೊತೆ ಬೆಲ್ಲ ಬೆರೆಸಿ ಸೇವಿಸುತ್ತಾರೆ. ದೇಹ ತಂಪಾಗಿಸುವ ಈ ಹಣ್ಣು ಹುಳಿ–ಸಿಹಿ ಮಿಶ್ರಿತ ರುಚಿ. ಈ ಹಣ್ಣಿನಿಂದ ಮಾಡಬಹುದಾದ ಸ್ವಾದಿಷ್ಟ ಖಾದ್ಯಗಳ ರೆಸಿಪಿಗಳನ್ನು ಪರಿಚಯಿಸಿದ್ದಾರೆ **ಸೌಖ್ಯ ಮೋಹನ್** ಮತ್ತು **ಪವಿತ್ರ ನವೀನ್**

ಬಲ್ಲವರೇ ಬಲ್ಲರು ಬೇಲದ ರುಚಿ

ನಳಪಾಕ

ಹಣ್ಣಿನ ಜಾಮ್

ಬೇಕಾಗುವ ಸಾಮಗ್ರಿ: ಬೇಲದ ಹಣ್ಣಿನ ಪಲ್ಪ್ ಒಂದು ಕಪ್, ಸಕ್ಕರೆ 2 ಕಪ್, ನೀರು ಅರ್ಧ ಕಪ್, ಏಲಕ್ಕಿ 4,

ಮಾಡುವ ವಿಧಾನ: ಮೊದಲಿಗೆ ಸಕ್ಕರೆ ಮತ್ತು ನೀರು ಹಾಕಿ ಕುದಿಯಲು ಬಿಡಿ. ಕುದಿ ಬಂದ ನಂತರ ಹಣ್ಣಿನ ಪಲ್ಪ್ ಹಾಕಿ. ಪಾಕ ಬರುವವರೆಗೂ ಕುದಿಸಿ. ಕೊನೆಯಲ್ಲಿ ಏಲಕ್ಕಿ ಪುಡಿ ಸೇರಿಸಿದರೆ ಬೇಲದ ಹಣ್ಣಿನ ಜಾಮ್ ಸವಿಯಲು ಸಿದ್ಧ.

ತಂಪಿಗೆ ಪಾನಕ

ಬೇಕಾಗುವ ಸಾಮಗ್ರಿ: ಬೇಲದ ಹಣ್ಣು 1, ಬೆಲ್ಲ , ಏಲಕ್ಕಿ ಪುಡಿ ಸ್ವಲ್ಪ, ನೀರು, ಚಿಟಿಕೆ ಉಪ್ಪು

ಮಾಡುವ ವಿಧಾನ: ಮೊದಲು ಹಣ್ಣಿನ ಪಲ್ಪ್ ತೆಗೆದುಕೊಳ್ಳಿ. ಅದಕ್ಕೆ ಸ್ವಲ್ಪ ನೀರು ಹಾಕಿ ಕಿವುಚಿ. ನಂತರ ಶೋಧಿಸಿ. ಉಪ್ಪು ಮತ್ತು ಸಿಹಿಗಾಗಿ ಬೆಲ್ಲ ಹಾಕಿ. ಚೆನ್ನಾಗಿ ಕದಡಿ. ಏಲಕ್ಕಿ ಪುಡಿ ಹಾಕಿ. ಅಗತ್ಯವಿರುವಷ್ಟು ತಣ್ಣನೆ ನೀರು ಹಾಕಿ. ಪಾನಕ ಕುಡಿಯಲು ಸಿದ್ಧ.

ಪುಳಿಯೋಗರೆ

ಬೇಕಾಗುವ ಸಾಮಗ್ರಿಗಳು: ಬೇಲದ ಹಣ್ಣು, ಉಪ್ಪು, ಒಣಮೆಣಸು ಉದುರಾದ ಅನ್ನ, ಒಣಮೆಣಸು ಆರು, ಉದ್ದಿನ ಬೇಳೆ 2 ಚಮಚ, ಕಡಲೇಬೇಳೆ 2 ಚಮಚ, ಕೊತ್ತಂಬರಿ ಬೀಜ 2 ಚಮಚ, ಜೀರಿಗೆ 2 ಚಮಚ, ಮೆಂತೆ , ಇಂಗು, ಅರಿಷಿಣ, ಕೊಬ್ಬರಿ ತುರಿ, ಕೊಬ್ಬರಿ ಎಣ್ಣೆ, ಒಗ್ಗರಣೆಗೆ ಎಣ್ಣೆ , ಶೇಂಗಾ, ಉದ್ದಿನ ಬೇಳೆ, ಕರಿಬೇವು.

ಮಾಡುವ ವಿಧಾನ: ಮೊದಲು ಎಲ್ಲಾ ಮಸಾಲ ಪದಾರ್ಥಗಳನ್ನು ಹುರಿದು ಪುಡಿಮಾಡಿಕೊಳ್ಳಿ. ಒಗ್ಗರಣೆಗೆ ಇಟ್ಟು ಉಳಿದ ವಸ್ತು ಹಾಕಿ. ಅದಕ್ಕೆ ಬೇಲದ ಹಣ್ಣನ್ನು ಕಿವುಚಿ ಹಾಕಿ. ಉಪ್ಪು ಹಾಕಿ, ಕುದಿಸಿ. ಆಮೇಲೆ ಮಸಾಲ ಪುಡಿ ಹಾಕಿ, ಕುದಿಸಿ, ಇಳಿಸಿ. ನಂತರ ಉದುರಾದ ಅನ್ನ ಹಾಕಿ ಕಲೆಸಿ. ಈಗ ಬೇಲದ ಹಣ್ಣಿನ ಪುಳಿಯೋಗರೆ ರೆಡಿ. ಹಣ್ಣಿನ ಹುಳಿ ಮತ್ತು ಸಿಹಿಯ ಪ್ರಮಾಣ ನೋಡಿಕೊಂಡು, ಬೇಕಾದರೆ ಸ್ವಲ್ಪ ಸೇರಿಸಿಕೊಳ್ಳಿ.

ರುಚಿಯಾದ ಚಟ್ನಿ

ಬೇಕಾಗುವ ಸಾಮಗ್ರಿ: ಬೇಲದ ಹಣ್ಣು ಅರ್ಧ, ಕೊತ್ತಂಬರಿ ಸೊಪ್ಪು ಒಂದು ಕಟ್ಟು, ತೆಂಗಿನ ಕಾಯಿ ಒಂದು ಕಪ್, ಉಪ್ಪು, ಒಣ ಮೆಣಸು,

ಮಾಡುವ ವಿಧಾನ: ಒಗ್ಗರಣೆಗೆ ಎಣ್ಣೆ, ಸಾಸಿವೆ, ಜೀರಿಗೆ ಕರಿಬೇವು, ಮೊದಲು ಒಣಮೆಣಸು ಮತ್ತು ಕೊತ್ತುಂಬರಿ ಸೊಪ್ಪನ್ನು ಸ್ವಲ್ಪ ಎಣ್ಣೆ ಹಾಕಿ ಹುರಿದುಕೊಳ್ಳಿ. ಅದಕ್ಕೆ ಉಳಿದ ಎಲ್ಲಾ ವಸ್ತುಗಳನ್ನು ಹಾಕಿ ನುಣ್ಣನೆ ರುಬ್ಬಿ, ಒಗ್ಗರಣೆ ಕೊಡಿ. ಈಗ ಸವಿಯಲು ಚಟ್ನಿ ಸಿದ್ದ. ಇದು ಹುಳಿ, ಸಿಹಿ ಮತ್ತು ಖಾರ ಮಿಶ್ರಿತವಾಗಿರುತ್ತದೆ.

ಪಿಸಿಒಡಿ/ ಪಿಸಿಒಎಸ್ ಸಮಸ್ಯೆಗೆ

ಆಹಾರ ಕ್ರಮದಲ್ಲಿದೆ ಪರಿಹಾರ

ಮಾನಸಿಕ ಒತ್ತಡ ನಿರ್ವಹಣೆ, ಸಮತೋಲಿತ ಆಹಾರ ಸೇವನೆ, ಜೀವನಶೈಲಿಯಲ್ಲಿ ಬದಲಾವಣೆಯಿಂದ ದೇಹದಲ್ಲಿ ಹಾರ್ಮೋನು ಪ್ರಮಾಣವನ್ನು ಸುಸ್ಥಿಯಲ್ಲಿಟ್ಟುಕೊಳ್ಳಬಹುದು. ಆ ಮೂಲಕ ಪಿಸಿಒಡಿ/ಪಿಸಿಒಎಸ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು.

ಪಲ್ಲವಿ ಇಡೂರು

ಶಿವಾನಿಗೆ(ಹೆಸರು ಬದಲಿಸಿದೆ) ಒಳ್ಳೆಯ ಕೆಲಸವಿದೆ. ಕೈತುಂಬ ಸಂಬಳವೂ ಇದೆ. ಆದರೆ ಮನೆಯ ವಾತಾವರಣ, ಕೌಟುಂಬಿಕ ಸಮಸ್ಯೆಗಳು ಆಕೆಯನ್ನು ಹೈರಾಣಾಗಿಸಿತ್ತು. ಮಾನಸಿಕ ಒತ್ತಡಕ್ಕೆ ಒಳಗಾದ ಆಕೆಗೆ ಪಿಸಿಒಡಿ (ಪಾಲಿಸಿಸ್ಟಿಕ್ ಒವೇರಿಯನ್ ಡಿಸೀಸ್) ಸಮಸ್ಯೆಯೂ ಬಾಧಿಸುತ್ತಿತ್ತು.

ಪರಿಹಾರಕ್ಕಾಗಿ ನನ್ನ ಬಳಿ ಬಂದ ಆಕೆಗೆ ಮೊದಲು, ಮಾನಸಿಕವಾಗಿ ಧೈರ್ಯ ತುಂಬಿದೆ. ಮನಸ್ಸು ಸ್ವಾಸ್ಥ್ಯವಾದ ಮೇಲೆ, ಸರಿಯಾದ ಆಹಾರ ಕ್ರಮ ಪಾಲಿಸಲು ತಿಳಿಸಿದೆ. ಶಿಸ್ತಿನ ಜೀವನ ಶೈಲಿಯ ಅಗತ್ಯವನ್ನು ತಿಳಿಸಿದೆ. ಇದನ್ನು ಕಟ್ಟುನಿಟ್ಟಾಗಿ ಪಾಲಿಸಿದ ಆಕೆಯ ಆರೋಗ್ಯ ಸುಧಾರಿಸಿತ್ತು. ಒಮ್ಮೆಲೆ ಈ ಸಮಸ್ಯೆ ಬಗೆಹರಿಯಲಿಲ್ಲ. ನಿರಂತರ ಸಂಪರ್ಕದಿಂದ ಅವರ ಮಾನಸಿಕ ಒತ್ತಡ ಹೇಗಿದೆ ಎಂಬುದನ್ನು ಅರಿತು, ಸಲಹೆ ನೀಡಿದೆ . ಸರಿಯಾದ ಆಹಾರ ಕ್ರಮ ಹಾಗೂ ಚಟುವಟಿಕೆಯ ಜೀವನ ಶೈಲಿ ಅನುಸರಿಸಿದ ಕಾರಣ ಅವರ ಆರೋಗ್ಯ ಸುಧಾರಿಸಿತು.

ಪಿಸಿಒಡಿ/ಪಿಸಿಒಎಸ್‌ಗೆ ಏನು ಕಾರಣ?

ಪಿಸಿಒಡಿ/ಪಿಸಿಒಎಸ್(ಪಾಲಿಸಿಸ್ಟಿಕ್ ಒವೇರಿಯನ್ ಡಿಸೀಸ್/ ಪಾಲಿಸ್ಟಿಕ್ ಒವೇರಿಯನ್ ಸಿಂಡ್ರೋಮ್) ಸಮಸ್ಯೆಗಳು ಹೆಣ್ಣು ಮಕ್ಕಳಲ್ಲಿ ದೇಹದ ತೂಕ ಹೆಚ್ಚಿಸುತ್ತದೆ. ಮಾತ್ರವಲ್ಲ, ಮಾನಸಿಕವಾಗಿ ಕುಗ್ಗಿಸಿಬಿಡುತ್ತದೆ. ಹುಡುಗಿಯ ಮುಖ ಹಾಗೂ ದೇಹ ತೂಕದಲ್ಲಾದ ಬದಲಾವಣೆ ಮದುವೆಗೂ ಅಡ್ಡಗಾಲಾದ ಉದಾಹರಣೆಗಳಿವೆ.

ಮಾನಸಿಕ ಒತ್ತಡಕ್ಕೆ ದೈಹಿಕ ಕಾರಣಗಳು ಉಂಟು. ದೇಹ ಸ್ರವಿಸುವ ಹಾರ್ಮೋನಿನಲ್ಲಿ ಉಂಟಾಗುವ ವ್ಯತ್ಯಯವು ದೇಹ ಹಾಗೂ ಮನಸ್ಸನ್ನು ಹಿಂಡಿ ಹೈರಾಣಾಗಿಸುತ್ತದೆ. ಅದರಲ್ಲಿಯೂ ಹೆಣ್ಣುಮಕ್ಕಳ ಆರೋಗ್ಯದಲ್ಲಿ ಹಾರ್ಮೋನ್‌ಗಳು ಪ್ರಮುಖ ಪಾತ್ರವಹಿಸುತ್ತವೆ. ಇವೆಲ್ಲವೂ ಪಿಸಿಒಡಿ/ಪಿಸಿಒಎಸ್ ಸಮಸ್ಯೆ ಉಲ್ಬಣಕ್ಕೆ ಮೂಲ ಕಾರಣಗಳು.

ಇದರ ಸಮಸ್ಯೆಗಳ ಲಕ್ಷಣ ಒಬ್ಬೊಬ್ಬರಿಗೆ ಒಂದೊಂದು ತರಹವಿರುತ್ತದೆ. ಬಹುತೇಕರಿಗೆ ತಮಗೇನಾಗುತ್ತಿದೆ ಎನ್ನುವುದರ ಅರಿವೂ ಇರುವುದಿಲ್ಲ. ಇದು ಹಾರ್ಮೋನ್‌ನ ಏರುಪೇರಿನಿಂದಾಗುವ ಸಮಸ್ಯೆಯಾದ್ದರಿಂದ ಅನೇಕ ಬಾರಿ ಮಾನಸಿಕ ಒತ್ತಡ ಹೆಚ್ಚುತ್ತದೆ. ಜತೆಗೆ ಅತಿಯಾಗಿ ತಿನ್ನಬೇಕೆಂಬ ತುಡಿತ (ಕ್ರೇವಿಂಗ್ಸ್) ಹೆಚ್ಚುತ್ತದೆ. ಇದು ಪಿಸಿಒಎಸ್ / ಪಿಸಿಒಡಿಯನ್ನು ಮತ್ತಷ್ಟು ಬಿಗಡಾಯಿಸುತ್ತದೆ. ಮನೆಯ ವಾತಾವರಣವೂ ಹದಗೆಡಲು ಕಾರಣವಾಗುತ್ತದೆ. ಇಂತಹ ಸಂದರ್ಭದಲ್ಲಿ ಮನೆ ಮಂದಿಗೂ ಏನೂ ತೋಚದೆ ಇದನ್ನು ಹೇಗೆ ನಿಭಾಯಿಸುವುದೆನ್ನುವುದೂ ತಿಳಿಯದೆ ಸಮಸ್ಯೆ ಇನ್ನಷ್ಟು ಬೆಳೆಯುತ್ತದೆ.

ಆಹಾರ ಕ್ರಮದಲ್ಲಿದೆ ಪರಿಹಾರ

ಪಿಸಿಒಎಸ್/ಪಿಸಿಒಡಿ ನಿಯಂತ್ರಿಸಲು ಮೊದಲು ಬೇಕಿರುವುದೇ ಆಹಾರ ಕ್ರಮ ಮತ್ತು ಜೀವನ ಶೈಲಿಯಲ್ಲಿ ಬದಲಾವಣೆ. ಆದರೆ ಇಲ್ಲಿ, ತಿನ್ನುವುದನ್ನೇ ಹೆಚ್ಚಿಸುವ ಲಕ್ಷಣ ಕಾಣಿಸಿಕೊಳ್ಳುವುದರಿಂದ ಇದು ಹಲವು ಸಮಸ್ಯೆಯನ್ನು ಸೃಷ್ಟಿಸಬಹುದು. ಈ ಸಮಸ್ಯೆಯ ಮೂಲ ಹುಡುಕಿ ಸರಿಪಡಿಸಿಕೊಳ್ಳುವುದು ಬಹಳ ಮುಖ್ಯ.

ಕ್ರೇವಿಂಗ್ಸ್‌ಗೆ ಮುಖ್ಯ ಕಾರಣಗಳನ್ನು ಹೀಗೆ ಪಟ್ಟಿ ಮಾಡಬಹುದು.

- ಸಾಮಾನ್ಯವಾಗಿ ರಕ್ತದಲ್ಲಿನ ಸಕ್ಕರೆಯ ಅಂಶದ ಅಸಮತೋಲನ
- ಆಹಾರದಲ್ಲಿ ಪ್ರೊಟೀನ್ ಅಂಶದ ಕೊರತೆ
- ದೇಹಕ್ಕೆ ಅಗತ್ಯ ಪೋಷಕಾಂಶಗಳು ಸರಿಯಾದ ಪ್ರಮಾಣದಲ್ಲಿ ಸೇರದೇ ಇರುವುದು
- ಅತಿ ಕಡಿಮೆ ಕ್ಯಾಲೊರಿ ಆಹಾರ ಸೇವಿಸುವುದು,
- ನಿದ್ದೆಯ ಏರುಪೇರು ಅಥವಾ ಅತಿ ಕಡಿಮೆ ನಿದ್ದೆ ಮಾಡುವುದು

ಈ ಎಲ್ಲ ಅಂಶಗಳು ಪಿಸಿಒಎಸ್ /ಪಿಸಿಒಡಿಯ ಸಮಸ್ಯೆಯನ್ನು ಹೆಚ್ಚಿಸುತ್ತವೆ.

ಕ್ರೇವಿಂಗ್ಸ್ ನಿಭಾಯಿಸುವುದು ಹೇಗೆ?

ನನ್ನಲ್ಲಿ ಬರುವ ಇಂತಹ ಅನೇಕ ಜನರಲ್ಲಿ(ಪ್ರಕರಣಗಳಲ್ಲಿ) ತಿನ್ನುವ ತುಡಿತವನ್ನು ನಿಭಾಯಿಸಲಾರದೆ ಅತಿ ಹೆಚ್ಚು ಸಿಹಿ ಅಥವಾ ಜಂಕ್ ಫುಡ್‌ಗಳನ್ನು ತಿನ್ನುವ ಅಭ್ಯಾಸ ರೂಢಿಸಿಕೊಂಡವರೇ ಹೆಚ್ಚು. ಇಂಥವರಿಗೆ 'ನೀವು ಮೊದಲು ಸಮತೋಲಿತ ಆಹಾರ ಸೇವಿಸುವುದನ್ನು ಅಭ್ಯಾಸ ಮಾಡಿ' ಎಂದು ಸಲಹೆ ನೀಡುತ್ತೇನೆ. ಅದಕ್ಕೆ ಅವರು, 'ಮೊದಲು ತಿನ್ನುವ ಚಟವನ್ನು ಹೇಗೆ ನಿಭಾಯಿಸುವುದು, ಅದರ ಬಗ್ಗೆ ತಿಳಿಸಿ' ಎಂದು ಕೇಳುತ್ತಾರೆ.

ಅತಿಯಾಗಿ ತಿನ್ನುವ ಚಟ ಕಡಿಮೆ ಮಾಡಲು ಹೀಗೆ ಮಾಡಬಹುದು; ಮೊದಲಿಗೆ ನಿಮ್ಮ ಆಹಾರದಲ್ಲಿ ಅದರಲ್ಲೂ ಬೆಳಗಿನ ಉಪಾಹಾರದಲ್ಲಿ ಅತಿ ಹೆಚ್ಚು ನಾರಿನಂಶವಿರುವ ಆಹಾರವಿರಲಿ. ಜೊತೆಗೆ ಯಾವುದಾದರೂ ಪ್ರೊಟೀನ್ ಅಂಶವಿರುವ ಆಹಾರವನ್ನೇ ಸೇವಿಸಿ. ಉದಾಹರಣೆಗೆ ಬೆಳಗಿನ ಉಪಹಾರದಲ್ಲಿ ಪ್ರೊಟೀನ್‌ಗಾಗಿ ಮೊಟ್ಟೆ, ಮೊಳಕೆ ಕಾಳುಗಳು, ಪನೀರ್, ಬ್ರೊಕೊಲಿಯಂತಹ ತರಕಾರಿಗಳನ್ನು ಆಯ್ಕೆ ಮಾಡಬಹುದು. ಇದರಿಂದ ತಕ್ಕಮಟ್ಟಿಗೆ ಅತಿಯಾಗಿ ಆಹಾರ ತಿನ್ನುವುದನ್ನು ನಿಭಾಯಿಸಬಹುದು.

ಆಹಾರದಲ್ಲಿ ಪ್ರೊಟೀನ್ ಮತ್ತು ನಾರಿನಂಶವಿರುವ ಪದಾರ್ಥಗಳನ್ನು ಸೇರಿಸುವುದರಿಂದ ಕ್ರಮೇಣ ರಕ್ತದಲ್ಲಿನ ಸಕ್ಕರೆಯ ಪ್ರಮಾಣವೂ ಸಮತೋಲನಕ್ಕೆ ಬರುತ್ತದೆ. ದೇಹಕ್ಕೆ ಸರಿಯಾದ ಪೋಷಕಾಂಶಗಳೂ ಲಭ್ಯವಾಗುತ್ತವೆ. ಈ ಅಂಶವೂ ತಿನ್ನುವ ತುಡಿತಕ್ಕೆ ಕಡಿವಾಣ ಹಾಕುತ್ತದೆ. ಸಮತೋಲಿತ ಆಹಾರ ಒಳ್ಳೆಯ ನಿದ್ದೆಗೂ ಸಹಕಾರಿ. ಕೇವಲ ಆಹಾರ ಕ್ರಮವನ್ನು ಸರಿಪಡಿಸಿಕೊಂಡರಷ್ಟೇ ಸಾಲದು, ಅದಕ್ಕೆ ತಕ್ಕಂತೆ ದೈಹಿಕ ಶ್ರಮವೂ ಅಗತ್ಯ. ಹಾಗಾಗಿ, ಆಹಾರದ ಜೊತೆಗೆ, ನಿತ್ಯ ನಡಿಗೆ ಮತ್ತು ವ್ಯಾಯಾಮಗಳನ್ನು ಅನುಸರಿಸಿ. ಆಹಾರ ಕ್ರಮದಿಂದ ದೇಹಕ್ಕೆ ಉತ್ತಮ ಪೋಷಕಾಂಶ ಸಿಕ್ಕರೆ, ದೇಹದ ಚಲನೆಯಿಂದ ರಕ್ತ ಸಂಚಾರ ಸಕ್ರಿಯವಾಗುತ್ತದೆ. ತಿಂದ ಆಹಾರ ಶಕ್ತಿಗಾಗಿ ವಿನಿಯೋಗಿಸಲ್ಪಟ್ಟು, ರಕ್ತದಲ್ಲಿನ ಸಕ್ಕರೆಯ ಪ್ರಮಾಣವನ್ನು ನಿಭಾಯಿಯಲು ಸಹಕಾರಿಯಾಗುತ್ತದೆ.

ಸುಸ್ಥಿತಿಯಲ್ಲಿರಲಿ ಹಾರ್ಮೋನ್ ಪ್ರಮಾಣ

ದೇಹಾರೋಗ್ಯವನ್ನು ಉತ್ತಮವಾಗಿಡಲು ಹಾಗೂ ದೇಹದಲ್ಲಿನ ಹಾರ್ಮೋನ್ ಪ್ರಮಾಣವನ್ನು ಸಮತೋಲನದಲ್ಲಿಡಲು ಜೀರ್ಣಾಂಗದಲ್ಲಿರುವ ಎಲ್ಲ ಸೂಕ್ಷ್ಮಾಣುಜೀವಿಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು. ಹೆಚ್ಚು ಹೆಚ್ಚು ಸಕ್ಕರೆಯ ಅಂಶದ ಆಹಾರವನ್ನು ದೇಹಕ್ಕೆ ಸೇರಿಸುವುದರಿಂದ ಅನಗತ್ಯ ಬ್ಯಾಕ್ಟೀರಿಯಾಗಳ ಬೆಳವಣಿಗೆಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಇದು ಮತ್ತೆ ಮತ್ತೆ ಸಕ್ಕರೆಯ ಅಂಶಗಳುಳ್ಳ ಆಹಾರವನ್ನು ತಿನ್ನುವಂತೆ ಉತ್ತೇಜಿಸುತ್ತದೆ.

ಹಾಗಾಗಿ, ಆಹಾರದಲ್ಲಿ ಸಕ್ಕರೆಯ ಪ್ರಮಾಣ ಕಡಿಮೆ ಮಾಡಿ. ಕಾರ್ಬೋಹೈಡ್ರೇಟ್‌ನ ಅಂಶವಿರುವ ಆಹಾರವನ್ನು ಕಡಿತಗೊಳಿಸಿ. ಇದರ ಬದಲಿಗೆ ಉತ್ತಮ ಬ್ಯಾಕ್ಟೀರಿಯಾಗಳ ಬೆಳವಣಿಗೆಗೆ ಅಗತ್ಯವಾದ ಮತ್ತು ನಮ್ಮ ಜೀರ್ಣಾಂಗ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿಡಲು ಸಹಕಾರಿಯಾಗುವ ಪ್ರೊಬಯೋಟಿಕ್ಸ್‌ವುಳ್ಳ ಮೊಸರು ಮತ್ತು ಹುದುಗುವಿಕೆಯ ಪ್ರಕ್ರಿಯೆಗೆ ಒಳಗಾದ ಆಹಾರಗಳು ಅಥವಾ ಫರ್ಮೆಂಟೆಡ್ ಆಹಾರಗಳನ್ನು ಸೇವಿಸುವುದು ಉತ್ತಮ. ಇದರ ಜೊತೆಗೆ, ಶುಂಠಿ, ಗ್ರೀನ್ ಟೀ, ಪಪ್ಪಾಯ, ಮೀನಿನ ಆಹಾರ ಪದಾರ್ಥಗಳನ್ನು ಸೇವಿಸಬಹುದು.

ದೇಹದಲ್ಲಿನ ಹಾರ್ಮೋನಿನ ಏರಿಳಿತವನ್ನು ನಿಭಾಯಿಸಲು ಕುಂಬಳ, ಅಗಸೆಯಂತಹ ವಿವಿಧ ಬೀಜಗಳು, ಮೊಳಕೆ ಕಾಳುಗಳು ಮತ್ತು ಹಣ್ಣುಗಳ ಸೇವನೆ ಅತ್ಯಗತ್ಯ. ಮುಖ್ಯವಾಗಿ ರಕ್ತದಲ್ಲಿನ ಸಕ್ಕರೆಯ ಪ್ರಮಾಣವನ್ನು ನಿಭಾಯಿಸಿದಲ್ಲಿ ಈ ಪಿಸಿಒಎಸ್/ ಪಿಸಿಒಡಿಯ ಲಕ್ಷಣಗಳು ನಿಧಾನವಾಗಿ ಕಡಿಮೆಯಾಗುತ್ತಾ ಬರುತ್ತದೆ.

ಸಮತೋಲಿತ ದೇಹತೂಕ

ಮದುವೆ ಹಾಗೂ ಮಕ್ಕಳಾದ ಮೇಲೆ ಹೆಣ್ಣುಮಕ್ಕಳ ದೇಹತೂಕದಲ್ಲಿ ಬದಲಾವಣೆಯಾಗುತ್ತದೆ. ಹಾಗಂತ ಸುಮ್ಮನಿರಬಾರದು. ದೇಹತೂಕ ಹೆಚ್ಚಾದಾಗ, ತೂಕ ಹೆಚ್ಚಾಗಿದ್ದಕ್ಕೆ ಕಾರಣವನ್ನು ತಿಳಿಯಲು ಪ್ರಯತ್ನಿಸಬೇಕು. ಪಿಸಿಒಎಸ್/ಪಿಸಿಒಡಿಯಿಂದ ದೇಹದ ತೂಕ ಹೆಚ್ಚುತ್ತದೆ. ದೇಹ ತೂಕ ಹೆಚ್ಚಲು ಇದೇ ಕಾರಣವಾದರೆ, ಮೊದಲು ತೂಕ ಕಡಿಮೆ ಮಾಡಿಕೊಳ್ಳಲು ಮೇಲೆ ತಿಳಿಸಿದ ಆಹಾರ ಕ್ರಮದ ಜೊತೆಗೆ ನಡಿಗೆ, ವ್ಯಾಯಾಮದಂತಹ ದೈಹಿಕ ಚಟುವಟಿಕೆಗಳನ್ನು ಅನುಸರಿಸಿ.

(ಲೇಖಕಿ ಆಹಾರತಜ್ಞೆ)

ಸಮತೂಕಕ್ಕೆ 'ಡಯೆಟ್' ರೆಸಿಪಿ

ಓಟ್ಸ್ ಪುಡ್ಡಿಂಗ್

ಬೇಕಾಗುವ ಸಾಮಗ್ರಿಗಳು: ಅರ್ಧ ಕಪ್ ರೋಲ್ಡ್ ಓಟ್ಸ್, ಒಂದು ಟೇಬಲ್ ಸ್ಪೂನ್ ಚಿಯಾ ಬೀಜಗಳು, ಕಾಲು ಕಪ್ ಹಾಲು ಅಥವಾ (ಕೊಬ್ಬರಿ ಹಾಲು), ಒಂದು ಟೇಬಲ್ ಸ್ಪೂನ್ ತುರಿದ ಕಾಯಿ, ಜೇನು ತುಪ್ಪ, ಚಕ್ಕೆ ಪುಡಿ, ಕಳಿತ ಬಾಳೆಹಣ್ಣು.

ಮಾಡುವ ವಿಧಾನ: ಕಳಿತ ಬಾಳೆಹಣ್ಣು ಬಿಟ್ಟು ಎಲ್ಲವನ್ನು ಹಾಲಿನಲ್ಲಿ ನೆನೆಸಿಡಿ. ನಂತರ ಅದನ್ನು ರಾತ್ರಿ ಇಡೀ ಫ್ರಿಜ್‌ನಲ್ಲಿಡಿ. ಬೆಳಿಗ್ಗೆ ಇದಕ್ಕೆ ಕಳಿತ ಬಾಳೆಹಣ್ಣನ್ನು ಹಾಕಿ, ಡ್ರೈಫ್ರೂಟ್ಸ್, ತಾಜಾ ಹಣ್ಣುಗಳನ್ನು ಮಿಕ್ಸ್ ಮಾಡಿ ತಿನ್ನಿ.

ಸ್ಮೂದಿ

ಬೇಕಾಗುವ ಸಾಮಗ್ರಿಗಳು : ಒಂದು ಚಮಚದಷ್ಟು ಕುಂಬಳಬೀಜ. ಆರು ಬಾದಾಮಿ ಬೀಜ. ಆರು ಒಣದ್ರಾಕ್ಷಿ. ಈ ಮೂರನ್ನೂ ನೆನೆಸಿಟ್ಟಿರಬೇಕು. ನಂತರ ಒಂದು ಲೋಟ ನೀರು. ಒಂದು ಚಮಚ ಕೊಕೊ ಪೌಡರ್, ಒಂದು ಬಾಳೆಹಣ್ಣು, ಒಂದು ಟೇಬಲ್ ಸ್ಪೂನ್ ಅಗಸೆ ಬೀಜ ತೆಗೆದುಕೊಳ್ಳಿ.

ಮಾಡುವ ವಿಧಾನ: ಮೇಲೆ ಹೇಳಿರುವ ಎಲ್ಲ ವಸ್ತುಗಳನ್ನು ಮಿಕ್ಸಿಗೆ ಹಾಕಿ ರುಬ್ಬಿಕೊಳ್ಳಿ. ಇದಕ್ಕೆ ಕತ್ತರಿಸಿದ ಬಾದಾಮಿ, ಕುಂಬಳಬೀಜವನ್ನು ಸೇರಿಸಿ. ಈಗ ಸ್ಮೂದಿ ಸವಿಯಲು ರೆಡಿ.

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

ಮನೋದೈಹಿಕ ಆರೋಗ್ಯ ಎಂದರೇನು?

ಏಪ್ರಿಲ್ 7, ವಿಶ್ವ ಆರೋಗ್ಯ ದಿನ. ಇದು 75ನೇ ವರ್ಷಾಚರಣೆಯ ಸಂಭ್ರಮವೂ ಹೌದು (ಅಮೃತ ಮಹೋತ್ಸವ). 'ಎಲ್ಲರಿಗೂ ಆರೋಗ್ಯ' – ಈ ಅಮೃತ ಮಹೋತ್ಸವ ವರ್ಷದ ಘೋಷವಾಕ್ಯ.

ಆರೋಗ್ಯ ಎಂದ ಕೂಡಲೇ ನಮಗೆ ನೆನಪಾಗುವುದು ದೈಹಿಕ ಕಾಯಿಲೆಗಳ ವಿಷಯ ಮಾತ್ರ ಅಲ್ಲವೇ? ಹಾಗೆಯೇ, ಮಾನಸಿಕ ಕಾಯಿಲೆಗಳನ್ನು ಬೇರೆಯಾಗಿ ಗುರುತಿಸಲಾಗುತ್ತದೆ ಮತ್ತು ಅದರ ಚಿಕಿತ್ಸೆಗಾಗಿ ಬೇರೆಯ ತಜ್ಞ ವೈದ್ಯರಿರುತ್ತಾರೆ.

ಹೀಗೆ ಆರೋಗ್ಯವನ್ನು ದೈಹಿಕ ಮತ್ತು ಮಾನಸಿಕ ಎಂದು ವಿಭಜಿಸಿ ಬೇರೆಬೇರೆಯಾಗಿ ಚಿಕಿತ್ಸೆ ನೀಡುವುದು ಎಷ್ಟು ಮಟ್ಟಿಗೆ ಸೂಕ್ತ ಎನ್ನುವದರ ಕುರಿತು ಸಾಕಷ್ಟು ಸಂಶೋಧನೆ ಚರ್ಚೆಗಳೆಲ್ಲವೂ ಕಳೆದ 15-20 ವರ್ಷಗಳಿಂದ ನಡೆಯುತ್ತಿದೆ. ಇದರ ಕುರಿತಾಗಿ ಸ್ಪಷ್ಟವಾದ ಅಂತಿಮ ನಿರ್ಧಾರಕ್ಕೆ ಬರಲು ಇನ್ನೂ ಸಾಧ್ಯವಾಗುತ್ತಿಲ್ಲ. ಆದರೂ ಮನಸ್ಸು ದೇಹಗಳನ್ನು ವಿಭಜಿಸಿ ನೋಡುವುದು ಸೂಕ್ತವಾಗಲಾರದು ಎನ್ನುವ ಅರಿವಂತೂ ಮೂಡುತ್ತಿದೆ.

ಇದಕ್ಕೊಂದು ಉದಾಹರಣೆ ಇಲ್ಲಿದೆ. ರಮೇಶ್ ಸುಮಾರು 40 ವರ್ಷದ ಗೃಹಸ್ಥ. ಕೃಷಿ ಆಧಾರಿತ ಎರಡು ಮಕ್ಕಳ ಸುಖೀ ಸಂಸಾರ. ಆರು ತಿಂಗಳಿನಿಂದ ಇದ್ದಕ್ಕಿದ್ದಂತೆ ಅವನಿಗೆ ಮೈನಡುಕ ಶುರುವಾಗುತ್ತಿತ್ತು. ಯಾವಾಗ, ಹೇಗೆ, ಏಕೆ ಎನ್ನುವ ಯಾವ ಪ್ರಶ್ನೆಗೂ ಸ್ಪಷ್ಟ ಉತ್ತರವಿರಲಿಲ್ಲ. ರಕ್ತ ಪರೀಕ್ಷೆಯಿಂದ ಹಿಡಿದು ಎಂಆರ್‌ಐವರೆಗೆ ಹತ್ತಾರು ಪರೀಕ್ಷೆಗಳನ್ನು ಮಾಡಿಸಿ, ಸಾಕಷ್ಟು ಔಷಧಿಗಳನ್ನು ಬಳಸಿ ಲಕ್ಷದ ಹತ್ತಿರ ಹಣ ವ್ಯಯಿಸಿದ ಮೇಲೂ ಅವನಿಗೆ ಪರಿಹಾರಗಳು ಸಿಗಲಿಲ್ಲ. ನನ್ನ ಬಳಿ ಬಂದಾಗ ಸಂಪೂರ್ಣ ಹತಾಶನಾಗಿ ಜೀವಿಸುವ ಉತ್ಸಾಹವನ್ನೇ ಕಳೆದುಕೊಂಡಿದ್ದ. ನನ್ನೊಡನೆ ಮಾತು ಶುರು ಮಾಡುವಾಗ ಅವನ ದೇಹ ನಡುಗಲಾರಂಬಿಸಿತ್ತು. ಆತನಿಗೆ ದೈಹಿಕ ಸೂಚನೆಗಳ ಮೂಲಕ ಮಾನಸಿಕ ಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಮತ್ತು ದೇಹ ಮನಸ್ಸುಗಳೆರಡನ್ನೂ ಒಟ್ಟಾಗಿ ನಿಭಾಯಿಸುವ ಅರಿವನ್ನು ಕೊಡಲು ಪ್ರಯತ್ನಿಸುತ್ತಾ ಹೋದೆ. ಒಂದೇ ತಿಂಗಳಿನಲ್ಲಿ ಆತ ಸಹಜ ಸ್ಥಿತಿಗೆ ಬಂದಿದ್ದ. ಇಂಥ ಹಲವು ಘಟನೆಗಳನ್ನು ಉದಾಹರಿಸಬಹುದು. ಹಾಗಿದ್ದರೂ ಇವುಗಳ ಆಧಾರದ ಮೇಲೆ ಎಲ್ಲಾ ದೈಹಿಕ ಕಾಯಿಲೆಗಳಿಗೆ ಮನೋಚಿಕಿತ್ಸೆಯಲ್ಲಿ ಪರಿಹಾರವಿದೆ ಎಂದು ತಿಳಿಯುವಂತಿಲ್ಲ. ಆದರೆ ದೇಹ ಮನಸ್ಸುಗಳನ್ನು ವಿಭಜಿಸಿ ಚಿಕಿತ್ಸೆ ನೀಡುವುದು ಅಷ್ಟೊಂದು ಪರಿಣಾಮಕಾರಿಯಾಗಲಾರದು ಎನ್ನುವುದಂತೂ ನಿಜ.

ಜನಸಾಮಾನ್ಯರು ದೇಹ ಮನಸ್ಸುಗಳನ್ನು ಒಟ್ಟಾಗಿ ತಿಳಿದುಕೊಳ್ಳಲು ಮನೆಗಳಲ್ಲೇ ಪ್ರಯತ್ನಿಸಬಹುದು. ಅಗತ್ಯವಿದ್ದಾಗ ವೈದ್ಯರನ್ನು ಸಂಪರ್ಕಿಸಲು ಮತ್ತು ಸಲಹೆ ಪಡೆಯಲು ಹಿಂಜರಿಯ ಬೇಕಿಲ್ಲ. ಆದರೆ ಕಾಯಿಲೆಗಳು ನಿಯಂತ್ರಣಕ್ಕೆ ಬರುತ್ತಿಲ್ಲ ಅಥವಾ ನಿರಂತರವಾಗಿ ಔಷಧಿಗಳ ಅವಲಂಬನೆಯ ಅಗತ್ಯವಿದೆ ಎಂದಾಗ ಎಚ್ಚರಗೊಳ್ಳಬೇಕು. ಎಲ್ಲಾ ಕಾಯಿಲೆಗಳ ಮೂಲ ಮನಸ್ಸೇ ಆಗಿರಬೇಕೆಂದೇನಿಲ್ಲ. ಆದರೆ ಮಾನಸಿಕ ಏರುಪೇರುಗಳು ಕೆಲವೊಂದು ದೈಹಿಕ ಕಾಯಿಲೆಗಳಿಗೆ ಕಾರಣವಾಗಬಹುದು ಅಥವಾ ಇರುವ ಕಾಯಿಲೆಗಳನ್ನು ಹೆಚ್ಚು ಮಾಡಬಹುದು. ನಮ್ಮ ನಮ್ಮ ದೇಹ ಮನಸ್ಸುಗಳೊಡನೆ ನಾವೇ ಸಂಪರ್ಕ ಬೆಳೆಸಿಕೊಂಡು ನಮ್ಮ ಆರೋಗ್ಯವನ್ನು ಹೆಚ್ಚು ಸಕ್ಷಮವಾಗಿ ನಿಭಾಯಿಸಬಹುದು. ಜೊತೆ ಜೊತೆಗೆ ಕೌಟುಂಬಿಕ ಸಂಬಂಧಗಳು ಮತ್ತು ಸಾಮಾಜಿಕ ಜೀವನವನ್ನು ಸುಧಾರಿಸಿಕೊಳ್ಳಬಹುದು. ದೇಹ ಮನಸ್ಸುಗಳನ್ನು ಒಟ್ಟಾಗಿ ತಿಳಿದುಕೊಳ್ಳಲು ಮನೆಗಳಲ್ಲೇ ಹೀಗೆ ಪ್ರಯತ್ನಿಸಬಹುದು;

1. ದಿನಕ್ಕೆ ಹದಿನೈದು ನಿಮಿಷ ಸಮಯವನ್ನಾದರೂ ನಮಗಾಗಿಯೇ ಮೀಸಲಿಡಬೇಕು. ಆಗ ಏನೂ ಮಾಡದೆ ಏಕಾಂತದಲ್ಲಿ ಬೆನ್ನುಹುರಿಯನ್ನು ನೇರವಾಗಿಟ್ಟು ಸುಮ್ಮನೆ ಕುಳಿತು ಉಸಿರಾಟವನ್ನು ಗಮನಿಸಿ. ದೇಹದ ಎಲ್ಲಾ ಅಂಗಾಗಗಳನ್ನು ಗಮನಿಸುತ್ತಾ ಅಲ್ಲಿಂದ ಬರುತ್ತಿರುವ ಸೂಚನೆಗಳನ್ನು ಗ್ರಹಿಸಿ. ಹಾಗೆಯೇ ನಿಮ್ಮೊಳಗೆ ಮೂಡುತ್ತಿರುವ ಯೋಚನೆಗಳು ಮತ್ತು ಭಾವನೆಗಳನ್ನು ಗುರುತಿಸಿ. ಯಾವುದೇ ರೀತಿಯ ವಿಮರ್ಶೆ, ಸರಿತಪ್ಪುಗಳ ನಿರ್ಣಯ, ಬದಲಾವಣೆಯ ಪ್ರಯತ್ನಗಳನ್ನು ಮಾಡಬೇಕಿಲ್ಲ. ಸುಮ್ಮನೆ ಗಮನಿಸುವುದನ್ನು ಅಭ್ಯಾಸ ಮಾಡಿದರೆ ನಮ್ಮ ದೈಹಿಕ ಮಾನಸಿಕ ಸ್ಥಿತಿಯ ಕುರಿತಾಗಿ ಸಾಕಷ್ಟು ಮಾಹಿತಿಗಳು ಸಿಗುತ್ತವೆ.
2. ದಿನದ ಅರ್ಧ ಗಂಟೆಯಾದರೂ ಕುಟುಂಬದವರೆಲ್ಲಾ ಒಟ್ಟಾಗಿ ಕಳೆಯಲೇಬೇಕು. ಎಲ್ಲರೂ ಆ ದಿನ ಅವರು ಅನುಭವಿಸಿದ ಸಂತೋಷ, ನೋವು ಅವಮಾನ, ಬೇಸರ, ಸಿಟ್ಟು ಮುಂತಾದವುಗಳ ಕುರಿತು ಮಾತನಾಡಬೇಕು. ಘಟನೆಯ ವಿವರಗಳಿಗಿಂತ ಭಾವನೆಗಳ ಕಡೆ ಹೆಚ್ಚು ಗಮನ ಹರಿಸಿ. ಯಾರು ಯಾರಿಗೂ ಸಹಾಯ ಮಾಡುವ ಅಗತ್ಯವಿಲ್ಲ. ಸುಮ್ಮನೆ ಇನ್ನೊಬ್ಬರ ಮನಸ್ಥಿತಿಯನ್ನು ಕೇಳುವ, ತಿಳಿಯುವ ಕುತೂಹಲವಿದ್ದರೆ ಸಾಕು. ಪರಿಹಾರಗಳು ತಾವಾಗಿಯೇ ರೂಪುಗೊಳ್ಳುತ್ತವೆ. ವಯಸ್ಕರು ಮಕ್ಕಳಿಗೆ ಉಪದೇಶ ಬುದ್ಧಿವಾದ ನೀತಿಪಾಠಗಳನ್ನು ಕಡ್ಡಾಯವಾಗಿ ಹೇಳಬಾರದು! ಮಕ್ಕಳ ಮನಸ್ಥಿತಿಯನ್ನು ಅರಿಯುವ ಪ್ರಯತ್ನವೇ ಸಂಬಂಧಗಳನ್ನು ಅದ್ಭುತವಾಗಿ ಸುಧಾರಿಸುತ್ತದೆ. ಈ ಅರ್ಧ ಗಂಟೆಯ ಸಮಯದಲ್ಲಿ ಮೊಬೈಲ್, ಟಿ.ವಿ ಮುಂತಾದವುಗಳನ್ನು ನಿಲ್ಲಿಸುವುದೂ ಕಡ್ಡಾಯವಾಗಲೇಬೇಕು. ಪೋಷಕರು ಇದಕ್ಕೆ ಮಾದರಿಯಾಗಬೇಕು.
3. ದೈಹಿಕ ಆರೋಗ್ಯ ನಿರೀಕ್ಷೆಯಂತೆ ಸುಧಾರಿಸುತ್ತಿಲ್ಲ ಅಥವಾ ದಿನದಿಂದ ದಿನಕ್ಕೆ ಹದಗೆಡುತ್ತಿದೆ ಎಂದಾದರೆ ಮನೋಚಿಕಿತ್ಸಕರ ಸಹಾಯ ಪಡೆಯಲು ಹಿಂಜರಿಯಬಾರದು. ಮಾನಸಿಕ ಸಮಸ್ಯೆಗಳು ದೌರ್ಬಲ್ಯವಲ್ಲ. ಅಥವಾ ಅದು ಅವಮಾನದ ವಿಚಾರವೂ ಆಗಬೇಕಿಲ್ಲ. ಏನೂ ಆಗಿಲ್ಲವೆಂದು ಇತರರನ್ನು ಅದಕ್ಕಿಂತ ಹೆಚ್ಚಾಗಿ ನಮ್ಮನ್ನು ನಾವೇ ನಂಬಿಸಿಕೊಂಡು ಮುಖವಾಡಗಳ ಮರೆಯಲ್ಲಿ ಬದುಕುವ ಪ್ರಯತ್ನದಿಂದ ಅಪಾಯಗಳು ಹೆಚ್ಚಾಗಬಹುದು. ಕಾನೂನಿನ ಸಮಸ್ಯೆಗಳಿಗೆ ವಕೀಲರಿಂದ, ದೈಹಿಕ ಸಮಸ್ಯೆಗಳಿಗೆ ವೈದ್ಯರಿಂದ ಅಥವಾ ಕರ ನಿರ್ವಹಣೆಯ ಬಗೆಗೆ ಲೆಕ್ಕಪರಿಶೋಧಕರಿಂದ ಸಹಾಯ ಪಡೆಯಬಹುದಾದರೆ ಮಾನಸಿಕ ವಿಷಯಗಳಲ್ಲಿ ಮನಃಶಾಸ್ತ್ರಜ್ಞ ರಿಂದ ಅಥವಾ ಮನೋಚಿಕಿತ್ಸಕರಿಂದ ಸಹಾಯ ಪಡೆಯುವುದರಲ್ಲಿ ಅವಮಾನವೇನಿರಲು ಸಾಧ್ಯ? ನಾವೆಲ್ಲ ದೇಹ ಬುದ್ಧಿ ಮನಸ್ಸುಗಳೆಲ್ಲವನ್ನೂ ವಿಭಜಿಸಿಕೊಳ್ಳದೆ ಜನಿಸಿದ್ದೇವೆ.

ಹಾಗಿದ್ದ ಮೇಲೆ ಸಮಗ್ರವಾಗಿಯೇ ಬದುಕನ್ನು ನಡೆಸಬೇಕೆಂಬುದೂ ಪ್ರಕೃತಿಯ ಆಶಯವಲ್ಲವೇ?



ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.



ಬೆಂಗಳೂರು–ಮೈಸೂರು ಹೆದ್ದಾರಿ: ಇಂದಿನಿಂದಲೇ ಪರಿಷ್ಕೃತ ದರ ಜಾರಿ • ವಿವಿಧ ಸಂಘಟನೆಗಳ ಆಕ್ಷೇಪ

15 ದಿನದಲ್ಲೇ ಟೋಲ್ ದರ ಹೆಚ್ಚಳ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯ ಟೋಲ್ ಆರಂಭಗೊಂಡ ಎರಡು ವಾರದಲ್ಲೇ ದರ ಏರಿಸಲಾಗಿದ್ದು, ಏಪ್ರಿಲ್ 1ರಿಂದಲೇ ಪರಿಷ್ಕೃತ ದರ ಜಾರಿಗೆ ಬರಲಿದೆ.

ಸರಾಸರಿ ಶೇ 22ರಷ್ಟು ದರ ಹೆಚ್ಚಳ ಮಾಡಲಾಗಿದೆ. ಕಾರು, ವ್ಯಾನ್, ಜೀಪ್‌ಗಳ ಏಕಮುಖ ಟೋಲ್ ದರವನ್ನು ₹135ರಿಂದ ₹165ಕ್ಕೆ ಏರಿಸಲಾಗಿದೆ. ದ್ವಿಮುಖ ಸಂಚಾರ ದರವು ₹205ರಿಂದ ₹250ಕ್ಕೆ ಏರಿಕೆಯಾಗಿದೆ. ಲಘು ವಾಹನಗಳು, ಮಿನಿ ಬಸ್‌ಗಳ ಏಕಮುಖ ಟೋಲ್ ₹220ರಿಂದ ₹270ಕ್ಕೆ ಹಾಗೂ ದ್ವಿಮುಖ ಸಂಚಾರಕ್ಕೆ ₹405 (₹75 ಹೆಚ್ಚಳ) ನಿಗದಿಯಾಗಿದೆ.

ಟ್ರಕ್, ಬಸ್, ಎರಡು ಆಕ್ಸೆಲ್ ವಾಹನಗಳ ಏಕಮುಖ ಟೋಲ್ ಬರೋಬ್ಬರಿ ₹565ಕ್ಕೆ ಏರಿಕೆ ಆಗಿದೆ (₹105 ಹೆಚ್ಚಳ). ದ್ವಿಮುಖ ಸಂಚಾರಕ್ಕೆ ₹850 ನಿಗದಿಪಡಿಸಲಾಗಿದೆ (₹ 160 ಹೆಚ್ಚಳ).

ಮೂರು ಆಕ್ಸೆಲ್ ವಾಣಿಜ್ಯ ವಾಹನಗಳ ಏಕಮುಖ ಸಂಚಾರ ದರವು ₹615 (₹115 ಏರಿಕೆ) ಹಾಗೂ ದ್ವಿಮುಖ ಸಂಚಾರಕ್ಕೆ ₹925 (₹225 ಹೆಚ್ಚಳಕ್ಕೆ) ಏರಿದೆ. ಭಾರಿ ವಾಹನಗಳ ಏಕಮುಖ ಟೋಲ್ ₹885 (₹165 ಹೆಚ್ಚಳ), ದ್ವಿಮುಖ ಸಂಚಾರಕ್ಕೆ ₹1,330 (₹250 ಹೆಚ್ಚಳ) ನಿಗದಿಯಾಗಿದೆ. ಏಳು ಅಥವಾ ಅದಕ್ಕಿಂತ ಹೆಚ್ಚಿನ ಆಕ್ಸೆಲ್ ವಾಹನಗಳ ದರವು ₹1,080 (₹200 ಹೆಚ್ಚಳ) ಹಾಗೂ ದ್ವಿಮುಖ ಸಂಚಾರಕ್ಕೆ ₹1,620 (₹305 ಏರಿಕೆ) ನಿಗದಿಯಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 12ರಂದು ಈ ಹೆದ್ದಾರಿಯನ್ನು ಉದ್ಘಾಟಿಸಿದ್ದರು. ಮಾರ್ಚ್ 14ರಿಂದ ಬೆಂಗಳೂರು ದಕ್ಷಿಣ ತಾಲ್ಲೂಕಿನ ಕಣಮಿಣಕಿ ಹಾಗೂ ರಾಮನಗರ ತಾಲ್ಲೂಕಿನ ಶೇಷಗಿರಿಹಳ್ಳಿ ಟೋಲ್ ಪ್ಲಾಜಾಗಳಲ್ಲಿ ಟೋಲ್ ಸಂಗ್ರಹ ಆರಂಭಗೊಂಡಿತ್ತು.

ವ್ಯಾಪಕ ವಿರೋಧ: ಟೋಲ್ ಹೆಚ್ಚಳಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ವಿರೋಧ ವ್ಯಕ್ತವಾಗಿದೆ. 'ಇನ್ನೂ ಸರ್ವಿಸ್ ರಸ್ತೆ ಕಾಮಗಾರಿಗಳು ನಡೆಯುತ್ತಲೇ ಇದೆ. ಹೀಗಿರುವಾಗ ಎರಡು ವಾರದಲ್ಲೇ ಟೋಲ್ ದರ ಏರಿಸಿದ್ದು ಸರಿಯಲ್ಲ. ಕೂಡಲೇ ಹೆದ್ದಾರಿ ಪ್ರಾಧಿಕಾರ ತನ್ನ ಆದೇಶ ಹಿಂಪಡೆಯಬೇಕು' ಎಂದು ವಿವಿಧ ಸಂಘಟನೆಗಳು ಒತ್ತಾಯಿಸಿವೆ.

ಟೋಲ್ ದರ ಏರಿಕೆ ಕುರಿತು ಹೆದ್ದಾರಿಯಲ್ಲಿ ಅಳವಡಿಸಿರುವ ಫಲಕ

ತಾತ್ಕಾಲಿಕ ತಡೆಗೆ ಪ್ರತಾಪ್ ಸಿಂಹ ಮನವಿ

ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ವೇ ಟೋಲ್ ದರ ಹೆಚ್ಚಳಕ್ಕೆ ತಾತ್ಕಾಲಿಕವಾಗಿ ತಡೆ ನೀಡುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಮನವಿ ಮಾಡಲಾಗಿದೆ ಎಂದು ಸಂಸದ ಪ್ರತಾಪಸಿಂಹ ಹೇಳಿದ್ದಾರೆ.

'ಒಪ್ಪಿಕೊಳ್ಳಲು ಕಷ್ಟವಾದರೂ ಹೊಸ ಹಣಕಾಸು ವರ್ಷ ಆರಂಭವಾಗಿರುವುದರಿಂದ ದೇಶದಾದ್ಯಂತ ಎಲ್ಲ ಟೋಲ್‌ಗಳಲ್ಲೂ ದರ ಹೆಚ್ಚಿದೆ' ಎಂದು ಶುಕ್ರವಾರ ಟ್ವೀಟ್‌ನಲ್ಲಿ ಅವರು ವಿಡಿಯೊ ಹಂಚಿಕೊಂಡಿದ್ದಾರೆ.

ಮುಸ್ಲಿಂ ಮೀಸಲು ರದ್ದು: ಪಿಐಎಲ್

ಬೆಂಗಳೂರು: ಮುಸ್ಲಿಮರಿಗೆ ಪ್ರವರ್ಗ 2ಬಿ ಅಡಿಯಲ್ಲಿ ನೀಡಲಾಗುತ್ತಿದ್ದ ಶೇ 4ರಷ್ಟು ಮೀಸಲಾತಿ ರದ್ದುಪಡಿಸಿರುವುದನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ.

ಈ ಸಂಬಂಧ ಬೆಂಗಳೂರಿನ ಸಾಮಾಜಿಕ ಕಾರ್ಯಕರ್ತ ಮೊಹಮ್ಮದ್ ಆರೀಫ್ ಜಮೀಲ್ ಈ ಅರ್ಜಿ ಸಲ್ಲಿಸಿದ್ದು, ಅರ್ಜಿದಾರರ ಪರ ವಕೀಲ ಆರ್. ಕೊತ್ವಾಲ್ ಅವರು ವಕಾಲತ್ತು ವಹಿಸಿದ್ದಾರೆ.

'ಮುಸ್ಲಿಮರ 2ಬಿ ಮೀಸಲಾತಿ ರದ್ದುಪಡಿಸಿ ಅವರನ್ನು ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ (ಇಡಬ್ಲ್ಯುಎಸ್) ಸೇರ್ಪಡೆ ಮಾಡಿ ರಾಜ್ಯ ಸರ್ಕಾರ 2023ರ ಮಾರ್ಚ್ 27ರಂದು ಹೊರಡಿಸಿರುವ ಆದೇಶ ರದ್ದುಪಡಿಸಬೇಕು. ಇದು ವಿಧಾನಸಭೆ ಚುನಾವಣೆಯನ್ನು ಗಮನದಲ್ಲಿ ಇರಿಸಿಕೊಂಡು ಮಾಡಿರುವ ರಾಜಕೀಯ ಪ್ರೇರಿತ ನಿರ್ಧಾರವಾಗಿದ್ದು, ಅರ್ಜಿ ಇತ್ಯರ್ಥಗೊಳ್ಳುವ ತನಕ ಆದೇಶದ ಜಾರಿಗೆ ಮಧ್ಯಂತರ ತಡೆ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಮೋದಿ, ಬೊಮ್ಮಾಯಿ ಭಾವಚಿತ್ರಕ್ಕೆ ಬೆಂಕಿ

ಬಂಜಾರ ಸಮಾಜದಿಂದ ಮತದಾನ ಬಹಿಷ್ಕಾರ ಎಚ್ಚರಿಕೆ

ಹೊಸಪೇಟೆ (ವಿಜಯನಗರ): ಪರಿಶಿಷ್ಟ ಜಾತಿ ಸಮುದಾಯಗಳಿಗೆ ಒಳ ಮೀಸಲಾತಿ ಜಾರಿಗೊಳಿಸುವ ಸರ್ಕಾರದ ತೀರ್ಮಾನ ವಿರೋಧಿಸಿ ಲಂಬಾಣಿ, ಭೋವಿ, ಕೊರಚ, ಕೊರಮ ಸಮುದಾಯದವರು ಶುಕ್ರವಾರ ಜಿಲ್ಲೆಯ ಹೂವಿನಹಡಗಲಿ ಪಟ್ಟಣ ಹಾಗೂ ಹರಪನಹಳ್ಳಿ ತಾಲ್ಲೂಕಿನ ಮಾಚಿಹಳ್ಳಿ ತಾಂಡಾದಲ್ಲಿ ಪ್ರತಿಭಟನೆ ನಡೆಸಿದರು.

ಹಡಗಲಿ ಪಟ್ಟಣದ ಲಾಲ್ ಬಹದ್ದೂರ್ ಶಾಸ್ತ್ರಿ ವೃತ್ತದಲ್ಲಿ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಸಾವಿರಾರು ಜನರು ರಸ್ತೆ ಮಾರ್ಗ ಬಂದ್ ಮಾಡಿ ಪ್ರತಿಭಟಿಸಿದರು. ದೂಪದಹಳ್ಳಿ ಮರಿಯ್ಮಮದೇವಿ ಮಠದ ಶಿವಪ್ರಕಾಶ್ ಮಹಾರಾಜ್ ಮಾತನಾಡಿ, 'ಒಳ ಮೀಸಲಾತಿ ನೆಪದಲ್ಲಿ ಸರ್ಕಾರ ಪರಿಶಿಷ್ಟರಲ್ಲಿ ಒಡಕು ಸೃಷ್ಟಿಸಿದೆ. ಸರ್ಕಾರ ಈ ತೀರ್ಮಾನ ಹಿಂಪಡೆಯದಿದ್ದರೆ ಎಲ್ಲ ಲಂಬಾಣಿ ತಾಂಡಾಗಳಲ್ಲಿ ಚುನಾವಣೆ ಬಹಿಷ್ಕರಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಮಾಚಿಹಳ್ಳಿ ತಾಂಡಾದಲ್ಲಿ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಎ. ನಾರಾಯಣಸ್ವಾಮಿ, ಸಚಿವರಾದ ಗೋವಿಂದ ಕಾರಜೋಳ, ಪ್ರಭು ಚೌಹಾಣ್, ಸಂಸದ ಉಮೇಶ ಜಾಧವ್ ಅವರ ಭಾವಚಿತ್ರಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಲಂಬಾಣಿ ಸಮುದಾಯ ಪ್ರತಿಭಟನೆ (ಕಲಬುರಗಿ ವರದಿ): ಒಳಮೀಸಲಾತಿ ಹಂಚಿಕೆ ನಿರ್ಣಯ ಖಂಡಿಸಿ ಬಂಜಾರ, ಭೋವಿ, ಕೊರಚ, ಕೊರಮ ಮುಂತಾದ ಸಮುದಾಯದ ಜನರು ಶುಕ್ರವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ಜಿಲ್ಲೆಯ ಸೇಡಂ ಪಟ್ಟಣದಲ್ಲಿ ಮೀಸಲಾತಿ ಸಂರಕ್ಷಣಾ ಸಮಿತಿ, ಗೋರಸೇನಾ ರಾಷ್ಟ್ರೀಯ ಸಂಘಟನೆ ಮತ್ತು ಭೋವಿ ಸಮಾಜದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಏಪ್ರಿಲ್ 4ರಂದು ಬಂಜಾರ ಸಂಘದ ಸಭೆ: ಅಖಿಲ ಭಾರತ ಬಂಜಾರ ಸೇವಾಸಂಘದ ಕಾರ್ಯಕಾರಣಿ ಸಮಿತಿ ಸಭೆ ಏ.4ರಂದು ಕೊಪ್ಪಳದಲ್ಲಿ ಆಯೋಜಿಸಲಾಗಿದೆ' ಎಂದು ಸಂಘದ ರಾಜ್ಯ ಉಪಾಧ್ಯಕ್ಷ ಭರತ ನಾಯ್ಕ ತಿಳಿಸಿದ್ದಾರೆ.

ಒಳಮೀಸಲಾತಿ ವರ್ಗೀಕರಣ ವಿರೋಧಿಸಿ ಮೀಸಲಾತಿ ಸಂರಕ್ಷಣಾ ಒಕ್ಕೂಟದವರು ಶುಕ್ರವಾರ ವಿಜಯನಗರ ಜಿಲ್ಲೆಯ ಹೂವಿನಹಡಗಲಿ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು

ತಾಂಡಾ ನಿವಾಸಿಗಳಿಂದ ಪ್ರತಿಭಟನೆ

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): 'ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಒಳಮೀಸಲಾತಿ ಶಿಫಾರಸು ಮಾಡಿರುವುದನ್ನು ಖಂಡಿಸಿ ತಾಲ್ಲೂಕಿನ ಹುಲ್ಲೂರು ತಾಂಡಾ ನಿವಾಸಿಗಳು ಬಿಜೆಪಿ ಅಭ್ಯರ್ಥಿಗಳು ತಾಂಡಾ ಪ್ರವೇಶಿಸುವುದಕ್ಕೆ ನಿರ್ಬಂಧ ವಿಧಿಸಿದ್ದಾರೆ.

ತಾಂಡಾದ ಮಾರುತೇಶ್ವರ ದೇವಸ್ಥಾನದಲ್ಲಿ ಶುಕ್ರವಾರ ಸಭೆ ನಡೆಸಿದ ತಾಂಡಾದ ನಿವಾಸಿಗಳು, ರಾಜ್ಯಬಿಜೆಪಿ ಸರ್ಕಾರ ಎಸ್.ಸಿ. ಸಮುದಾಯಕ್ಕೆ ಒಳಮೀಸಲಾತಿ ಕಲ್ಪಿಸಿ ಬಂಜಾರಾ, ಭೋವಿ, ಕೊರಚ, ಕೊರಮ ಜಾತಿಗಳಿಗೆ ಅನ್ಯಾಯ ಮಾಡಿದೆ. ಹೀಗಾಗಿ ನಮ್ಮ ಗ್ರಾಮಕ್ಕೆ ಬಿಜೆಪಿ ಅಭ್ಯರ್ಥಿಗಳು, ಬಿಜೆಪಿ ಮುಖಂಡರ ಪ್ರವೇಶ ನಿಷೇಧಿಸಲಾಗಿದೆ ಎಂದು ತಾಂಡಾ ಪ್ರಮುಖರು ತಿಳಿಸಿದ್ದಾರೆ.

'ಮೀಸಲಾತಿ: ಬಿಜೆಪಿಗೆ ತಿರುಗುಬಾಣ'

ಮಂಗಳೂರು: 'ಮುಸ್ಲಿಮರ 2ಬಿ ಮೀಸಲಾತಿಯನ್ನು ರದ್ದುಪಡಿಸಿದ ಬಿಜೆಪಿ ಸರ್ಕಾರ, ರಾಜ್ಯದಲ್ಲಿ ಅಶಾಂತಿ, ಗೊಂದಲ ಸೃಷ್ಟಿಸಲು ಹುನ್ನಾರ ರೂಪಿಸಿ, ನಂತರ ಅದನ್ನೇ ಚುನಾವಣಾ ಟ್ರಂಪ್‌ಕಾರ್ಡ್‌ಆಗಿ ಬಳಸಲು ಸಿದ್ಧತೆ ನಡೆಸಿತ್ತು. ಆದರೆ, ಮುಸ್ಲಿಂ ಸಮುದಾಯವು ಪ್ರತಿಭಟನೆಗೆ ಇಳಿಯದೆ ಕಾನೂನು ಹೋರಾಟಕ್ಕೆ ಮುಂದಾಗಿದ್ದು, ಇದು ಬಿಜೆಪಿಗೆ ತಿರುಗುಬಾಣವಾಗಲಿದೆ' ಎಂದು ವಿಧಾನಸಭೆ ವಿಪಕ್ಷದ ಉಪನಾಯಕ ಯು.ಟಿ. ಖಾದರ್ ಹೇಳಿದರು.

'ಮೀಸಲಾತಿ ರದ್ದತಿ ವಿರುದ್ಧ ಕಾನೂನು ಹೋರಾಟಕ್ಕೆ ಸಿದ್ಧತೆ ನಡೆಸಲಾಗುತ್ತಿದೆ. ಈ ಸಂಬಂಧ ಸಮುದಾಯದ ಮುಖಂಡರೊಂದಿಗೆ ಚರ್ಚಿಸಲಾಗಿದೆ. ಎಸ್ಸಿ, ಎಸ್ಟಿಗೆ ಮೀಸಲಾತಿ ಹೆಚ್ಚಿಸಿ ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ ಪ್ರಸ್ತಾವವೂ ಊರ್ಜಿತವಾಗುವ ಸಾಧ್ಯತೆ ಇಲ್ಲ. ಮೀಸಲಾತಿ ವ್ಯವಸ್ಥೆಯನ್ನೇ ತೆಗೆದು ಹಾಕುವ ಹಿಡನ್ ಅಜೆಂಡಾವನ್ನು ಬಿಜೆಪಿ ಹೊಂದಿದೆ' ಎಂದು ಆರೋಪಿಸಿದರು.

'ಶಿಸ್ತಿನ ಪಕ್ಷ ಎನಿಸಿಕೊಂಡ ಬಿಜೆಪಿ, ಅಭ್ಯರ್ಥಿಗಳ ಆಯ್ಕೆಗೆ ಆಂತರಿಕ ಚುಣಾವಣೆ ನಡೆಸುವ ಸ್ಥಿತಿಗೆ ತಲುಪಿರುವುದು ವಿಪರ್ಯಾಸ' ಎಂದು ಹೇಳಿದರು.

ಆಯುಷ್ಮಾನ್ ಕಾರ್ಡ್ ವಿತರಣೆ ಸ್ಥಗಿತ

ಬೆಂಗಳೂರು: ವಿಧಾನಸಭೆ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ 'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' ಕಾರ್ಡ್‌ಗಳ ವಿತರಣೆ ಪ್ರಕ್ರಿಯೆ ಸ್ಥಗಿತಗೊಳಿಸುವಂತೆ ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆ ಸುತ್ತೋಲೆ ಹೊರಡಿಸಿದೆ. ಆರೋಗ್ಯ ಕಾರ್ಡ್ ಸೇರಿ ಗುರುತಿನ ಚೀಟಿಗೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳನ್ನು ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಬೇಕು ಎಂದು ಹೇಳಲಾಗಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ಸುಗಮ

ಬೆಂಗಳೂರು: ರಾಜ್ಯದಾದ್ಯಂತ ಶುಕ್ರವಾರ ಆರಂಭವಾದ ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ಸುಗಮವಾಗಿ ನಡೆದವು.

ಕನ್ನಡ ಸೇರಿದಂತೆ ಪ್ರಥಮ ಭಾಷಾ ವಿಷಯಗಳ ಪರೀಕ್ಷೆ ಬರೆಯಲು 8,27,276 ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದರು. 12,550 ವಿದ್ಯಾರ್ಥಿಗಳು ಗೈರುಹಾಜರಾಗಿದ್ದು, 8,14,726 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದರು.

ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್, ಸಂಸ್ಕೃತ ಪರೀಕ್ಷೆಯನ್ನು ವಿದ್ಯಾರ್ಥಿಗಳು ಬರೆದರು. ಏ.3ರಂದು ಗಣಿತ ಪರೀಕ್ಷೆ ನಡೆಯಲಿದೆ.

ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿ ವಿದ್ಯಾರ್ಥಿಗಳ ಆರೋಗ್ಯ ಪರೀಕ್ಷಿಸಿದರು. ಸಿಸಿಟಿವಿ ಕ್ಯಾಮೆರಾ ಕಣ್ಗಾವಲು ಸೇರಿದಂತೆ ಪರೀಕ್ಷಾ ಕೇಂದ್ರಗಳಲ್ಲಿ ಬಿಗಿ ಭದ್ರತೆ ಕಲ್ಪಿಸಲಾಗಿತ್ತು.

ಹಾಲ್‌ಟಿಕೆಟ್ ಇಲ್ಲದೇ ಪರದಾಟ: ಬೆಂಗಳೂರು ದಕ್ಷಿಣದ ಖಾಸಗಿ ಅನುದಾನರಹಿತ ಶಾಲೆಯ 10 ವಿದ್ಯಾರ್ಥಿಗಳು ಹಾಲ್‌ಟಿಕೆಟ್ ದೊರಕದ ಕಾರಣ ಪರೀಕ್ಷೆ ಬರೆಯಲು ಪರದಾಡಿದರು.

ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಶಾಲೆಗೆ ಪಾವತಿಸಿದ್ದರೂ, ಶಾಲಾ ಆಡಳಿತ ಮಂಡಳಿ ಪರೀಕ್ಷಾ ಮಂಡಳಿಗೆ ಜಮೆ ಮಾಡಿರಲಿಲ್ಲ. ಹಾಗಾಗಿ, ಅವರಿಗೆ ಹಾಲ್ ಟಿಕೆಟ್ ಬಂದಿರಲಿಲ್ಲ. ವಿಷಯ ಗಮನಕ್ಕೆ ಬಂದ ನಂತರ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಟ್ಟಿತು.

ವಿದ್ಯಾರ್ಥಿಗಳನ್ನು ವಂಚಿಸಿದ ಶಾಲೆಗೆ ನೋಟಿಸ್ ನೀಡಿ, ಕ್ರಮ ಕೈಗೊಳ್ಳಲಾಗುವುದು ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದರು.

ನಿಧನ ವಾರ್ತೆ

ಪ್ರೊ.ಮಾಧವ ಕುಲಕರ್ಣಿ



ಮೈಸೂರು: ವಿಮರ್ಶಕ, ಕತೆ–ಕಾದಂಬರಿಕಾರ, ಇಲ್ಲಿನ ಮಹಾಜನ ಪದವಿ ಪೂರ್ವ ಕಾಲೇಜಿನ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕ ಮಾಧವ ಕುಲಕರ್ಣಿ (78) ಅನಾರೋಗ್ಯದಿಂದ ಬೆಂಗಳೂರಿನಲ್ಲಿ ಬುಧವಾರ ನಿಧನರಾದರು.

2021ರಲ್ಲಿ ಅವರಿಗೆ ಮಾಸ್ತಿ ಪುರಸ್ಕಾರ ಸಂದಿತ್ತು.

ಗದುಗಿನವರಾದ ಅವರು 40 ವರ್ಷ ಮೈಸೂರಿನಲ್ಲಿ ನೆಲೆಸಿದ್ದರು. 5 ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದರು. ಅಂತ್ಯಸಂಸ್ಕಾರ ಬೆಂಗಳೂರಿನಲ್ಲಿ ನಡೆಯಿತು. ಅವರಿಗೆ ಒಬ್ಬ ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ.

ರಾಜ್ಯದಲ್ಲಿ ಮೂರು ದಿನ ಗುಡುಗು ಸಹಿತ ಮಳೆ

ಬೆಂಗಳೂರು: ರಾಜ್ಯದ ದಕ್ಷಿಣ ಒಳನಾಡಿನ ವಿವಿಧ ಜಿಲ್ಲೆಗಳಲ್ಲಿ ಮೂರು ದಿನಗಳ ಕಾಲ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರು ನಗರ ಹಾಗೂ ಗ್ರಾಮಾಂತರ, ಮೈಸೂರು, ಕೋಲಾರ, ಕೊಡಗು, ಚಾಮರಾಜನಗರ, ಚಿಕ್ಕಬಳ್ಳಾಪುರ, ತುಮಕೂರು, ಮಂಡ್ಯ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆ ಸುರಿಯಲಿದೆ ಎಂದು ಸೂಚಿಸಿದೆ.

ಕರಾವಳಿ ಹಾಗೂ ಒಳನಾಡಿನ ಜಿಲ್ಲೆಗಳಲ್ಲಿ ಒಣಹವೆ ಮುಂದುವರಿಯಲಿದೆ. ಕಲಬುರಗಿ ಜಿಲ್ಲೆಯಲ್ಲಿ ಶುಕ್ರವಾರ ಗರಿಷ್ಠ ಉಷ್ಣಾಂಶ 38.7 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಬಾಗಲಕೋಟೆಯಲ್ಲಿ ಕನಿಷ್ಠ 14.2 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಬೆಂಗಳೂರಿನಲ್ಲಿ ಮುಂದಿನ ಮೂರು ದಿನಗಳ ಮಧ್ಯಾಹ್ನದ ಬಳಿಕ ಮೋಡ ಕವಿದ ವಾತಾವರಣ ಇರಲಿದೆ. ರಾತ್ರಿ ವೇಳೆ ಗುಡುಗು ಸಹಿತ ಮಳೆ ಸುರಿಯಲಿದೆ ಎಂದು ತಿಳಿಸಿದೆ.

ಗುರುವಾರ ಚಾಮರಾಜನಗರ ಜಿಲ್ಲೆಯಲ್ಲಿ 1 ಸೆಂ.ಮೀ ಮಳೆ ಸುರಿದಿದೆ. ಜತೆಗೆ, ದಕ್ಷಿಣ ಒಳನಾಡಿನ ಹಲವೆಡೆ ಸಾಧಾರಣ ಮಳೆಯಾಗಿದೆ.

ಬಹು ಮಾಧ್ಯಮ ಪ್ರಜಾವಾಣಿ 75 www.prajavani.net
ಇಂದು
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ಪ್ರಸಾರ

ಸೆಲೆಬ್ರಿಟಿ PREMIERE
ಉಪೇಂದ್ರ
ಚಿತ್ರನಟ
ಉಪ್ಪಿ 'ಪಾಲಿಟಿಕ್ಸ್'
ಬೆಳಿಗ್ಗೆ 10 ಕ್ಕೆ
Prajavani.net Prajavani Prajavani

ಪಾದಯಾತ್ರೆಗೆ ಮುಸ್ಲಿಮರ ನಿರ್ಧಾರ

ದಾವಣಗೆರೆ: ವಿಧಾನಸಭೆ ಚುನಾವಣೆ ನಂತರ ಅಸ್ತಿತ್ವಕ್ಕೆ ಬರುವ ಸರ್ಕಾರ ಮುಸ್ಲಿಮರಿಗೆ '2ಬಿ' ಮೀಸಲಾತಿ ಮುಂದುವರಿಸದಿದ್ದರೆ ಬೆಂಗಳೂರಿವರೆಗೆ ಬೃಹತ್ ಪಾದಯಾತ್ರೆ ನಡೆಸಲು ಮುಸ್ಲಿಂ ಸಮುದಾಯ ನಿರ್ಧರಿಸಿದೆ.

ತಂಜೀಮುಲ್–ಮುಸ್ಲಿಮೀನ್ ಫಂಡ್ ಅಸೋಸಿಯೇಷನ್ ಆಶ್ರಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿದ್ದ ಮುಸ್ಲಿಂ ಸಮುದಾಯದ ಮುಖಂಡರು ಹಾಗೂ ಧರ್ಮಗುರುಗಳು, '2ಬಿ' ಮೀಸಲಾತಿ ಸೌಲಭ್ಯವನ್ನು ಪುನರ್ ಸ್ಥಾಪಿಸುವವರೆಗೂ ಕಾನೂನು ಸಮರ ನಡೆಸುವ ನಿರ್ಣಯ ಕೈಗೊಂಡರು.

'2ಬಿ' ಮೀಸಲಾತಿಯನ್ನು ರದ್ದುಗೊಳಿಸಿರುವುದನ್ನು ಖಂಡಿಸಿ ಜಿಲ್ಲೆಯ ಹೊನ್ನಾಳಿ ಮತ್ತು ಹರಿಹರಗಳಲ್ಲೂ ಮುಸ್ಲಿಮರು ಪ್ರತಿಭಟನೆ ನಡೆಸಿದರು. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ತಾಲ್ಲೂಕು ಕಚೇರಿ ಎದುರು ಮುಸ್ಲಿಮರು ಅಂಜುಮಾನ್ ಇಸ್ಲಾಂ ಸಮಿತಿ ನೇತೃತ್ವದಲ್ಲಿ ಪ್ರತಿಭಟಿಸಿದರು.

ಕೆನರಾ ಬ್ಯಾಂಕ್ Canara Bank ಸಿಂಡಿಕೇಟ್ Syndicate
(ಭಾರತ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಭವನ ಮತ್ತು ಆಸ್ತಿ ವಿಭಾಗ, ವೃತ್ತ ಕಚೇರಿ, ಮಂಗಳೂರು, ಬಲ್ಮಠ ರಸ್ತೆ, ಮಂಗಳೂರು– 575001.
ಫೋನ್: 0824–2863322, ಇ–ಮೇಲ್: pecomlr@canarabank.com

ಟೆಂಡರ್ ಪ್ರಸ್ತಾವನೆಗಾಗಿ ಸೂಚನೆ

ಕಡೂರು, ಪಂಚನಹಳ್ಳಿಯಲ್ಲಿ ಶಾಖೆಯ ಕಟ್ಟಡ ನಿರ್ಮಾಣಕ್ಕೆ ಪ್ರಾಜೆಕ್ಟ್ ಆರ್ಕಿಟೆಕ್ಟ್ ಆಯ್ಕೆ

ಕರ್ನಾಟಕ– 577182, ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲೂಕು, ಪಂಚನಹಳ್ಳಿ ಗ್ರಾಮದಲ್ಲಿರುವ ಸೈಟ್ ನಂ. 7/2ಪಿ ರಲ್ಲಿ ಕೆನರಾ ಬ್ಯಾಂಕಿನ ಶಾಖಾ ಕಟ್ಟಡ ನಿರ್ಮಾಣಕ್ಕಾಗಿ ಸಮರ್ಥ ಪ್ರಾಜೆಕ್ಟ್ ಆರ್ಕಿಟೆಕ್ಟ್ ಸೇವೆಗಳನ್ನು ತೊಡಗಿಸಿಕೊಳ್ಳಲು ಪ್ರಸ್ತಾವನೆ.

ಟೆಂಡರ್ ಫಾರ್ಮ್‌ನ್ನು ನಮ್ಮ ಬ್ಯಾಂಕ್‌ನ ವೆಬ್‌ಸೈಟ್ www.canarabank.com ಮತ್ತು ಸಿಪಿಪಿ ಪೋರ್ಟಲ್: www.eprocure.gov.in. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 24.04.2023 ಸಂಜೆ 4.00 ಗಂಟೆ. ಮುಂದಿನ ಸಂವಹನ, ತಿದ್ದುಪಡಿ ಮತ್ತು ಬದಲಾವಣೆಗಳಿದ್ದಲ್ಲಿ ಬ್ಯಾಂಕ್‌ನ ವೆಬ್‌ಸೈಟ್ ನಲ್ಲಿ ಮಾತ್ರ ನೀಡಲಾಗುವುದು.

ಸ್ಥಳ: ಮಂಗಳೂರು, ದಿನಾಂಕ: 01.04.2023 ಸಹಿ/– ಉಪ ಮಹಾಪ್ರಬಂಧಕರು, ವೃತ್ತ ಕಚೇರಿ, ಮಂಗಳೂರು

ಕರ್ನಾಟಕ ಸರ್ಕಾರ – ಹಿಂದೂ ಧಾರ್ಮಿಕ ದತ್ತಿ ಇಲಾಖೆ
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು

ದೊಡ್ಡಜಾತ್ರಾ ಮಹೋತ್ಸವ – 2023

ಸ್ವಸ್ತಿ ಶ್ರೀ ವಿಜಾಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು 1945ಕ್ಕೆ ಸಲ್ಲುವ ಶ್ರೀಶೋಭಕೃತ್‌ನಾಮ ಸಂವತ್ಸರದ 2023ನೇ ಸಾಲಿನ ಶ್ರೀ ಗೌತಮ ಪಂಚಮಹಾ ರಥೋತ್ಸವ ಮತ್ತು ತೆಪ್ಪೋತ್ಸವ ವಿವರ
ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳು

1	ದಿ: 30–03–2023 ಗುರುವಾರ	ಸಂಜೆ : 7.00 ಗಂಟೆಗೆ	"ಶ್ರೀ ಶ್ರೀಕಂಠಮುಡಿ ಉತ್ಸವ"
3	ದಿ॥ 02–04–2023 ಭಾನುವಾರ	ಬೆಳಗ್ಗೆ 06–00 ರಿಂದ 06–40 ಗಂಟೆಯೊಳಗೆ	"ಶ್ರೀ ಮಹ್ಮಹಾಗೌತಮ ರಥಾರೋಹಣ"
4	ದಿ: 04–04–2023 ಮಂಗಳವಾರ	ಸಂಜೆ : 7.00 ಗಂಟೆಗೆ	"ಕಪಿಲಾ ನದಿಯಲ್ಲಿ ತೆಪ್ಪೋತ್ಸವ"

ಭಕ್ತ ಮಹಾಶಯರುಗಳಾದ ತಾವುಗಳು ಸಪರಿಹಾರ ಸಮೇತ ಸದರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶ್ರೀ ಶ್ರೀಪಾರ್ವತೀ ಸಮೇತ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸಿದೆ.
ರಥೋತ್ಸವದ ಆಚಾರ್ಯತ್ವ ಶ್ರೀ ಜೆ. ನಾಗಚಂದ್ರ ದೀಕ್ಷಿತ್, ಆಗಮಿಕರು, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು

ಸರ್ವರಿಗೂ ಆದರದ ಸುಸ್ವಾಗತ

ಜಗದೀಶ್ ಕುಮಾರ್ ಎಂ. ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು
ಕವಿತ ರಾಜಾರಾಂ ಕ.ಆ.ಸೇ.(ಆಯ್ಕೆ ಶ್ರೇಣಿ) ಆಡಳಿತಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು
ಡಾ॥ ರಾಜೇಂದ್ರ ಕೆ.ವಿ.ಭಾ.ಆ.ಸೇ. ಜಿಲ್ಲಾಧಿಕಾರಿ ಮೈಸೂರು ಜಿಲ್ಲೆ ಮೈಸೂರು
ಬಸವರಾಜೇಂದ್ರ ಹೆಚ್ ಭಾ.ಆ.ಸೇ. ಆಯುಕ್ತರು ಹಿಂದೂ ಧಾರ್ಮಿಕ ಸಂಸ್ಥೆಗಳು, ಮತ್ತು ಧರ್ಮದಾಯ ದತ್ತಿಗಳ ಇಲಾಖೆ, ಬೆಂಗಳೂರು

ಜಿಲ್ಲಾ ನಗರಾಭಿವೃದ್ಧಿಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.
DISTRICT URBAN DEVELOPMENT CELL, OFFICE OF THE DEPUTY COMMISSIONER HASSAN
ದೂ.ಸಂಖ್ಯೆ:08172–234839 E-mail: pdhassandudc@gmail.com www.hassandudc.mrc.gov.in
ನಂ:ಎಇಇ/ಡಿಯುಡಿಸಿ/ಇ.ಎಲ್.ಇ–2023/1,2,3&4/2023–24 ದಿನಾಂಕ: 30–03–2023

ಟೆಂಡರ್ ಪ್ರಕಟಣೆ

ಕರ್ನಾಟಕ ವಿಧಾನಸಭೆ ಚುನಾವಣೆ–2023 ಕ್ಕೆ ಅಗತ್ಯ ಸಾಮಗ್ರಿಗಳ ಸರಬರಾಜು, ಕೆಟರಿಂಗ್ ಸರ್ವಿಸ್, ವೀಡಿಯೋಗ್ರಾಫಿ, ಪ್ರಿಂಟಿಂಗ್ ಕೆಲಸಗಳಿಗೆ ಟೆಂಡರ್ ಕರೆಯುವ ಬಗ್ಗೆ ಮುಖ್ಯ ಚುನಾವಣಾಧಿಯವರಿಂದ ನಿರ್ದೇಶನವಿದ್ದು, ಈ ಕೆಳಗೆ ನಮೂದಿಸಿರುವ ಕೆಲಸಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅದ್ಯಾದೇಶ 1999 ಮತ್ತು ನಿಯಮಗಳು–2000ರಂತೆ ಅರ್ಹ ಸಂಸ್ಥೆಯವರಿಂದ ದ್ವಿ–ಲಕೋಟೆ ಪದ್ಧತಿಯಡಿ ಕೆ.ಸಿ.ಟೆಂಡರ್ ದಾಸ್ತಾವೇಜು ಮೂಲಕ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಅಹ್ವಾನಿಸಲಾಗಿದೆ. (ವಿವರ ಕೆಳಗಿನಂತಿದೆ.) ಟೆಂಡರ್‌ನ ವೇಳಾಪಟ್ಟಿ ವಿವರ ಕೆಳಗಿನಂತಿದೆ.

ಕ್ರ. ಸಂ	ಇ–ಪ್ರಕ್ಯೂರ್ ಮೆಂಟ್ ಸಂಖ್ಯೆ	ಕೆಲಸದ ವಿವರ	ಟೆಂಡರ್ ಮೊತ್ತ(ಜಿ.ಎಸ್.ಟಿ. ಸೇರಿಸಿ) (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ
1	ನಂ:ಎಇಇ/ಡಿಯುಡಿಸಿ/ಇ.ಎಲ್.ಇ–2023/1/2023–24	ಕರ್ನಾಟಕವಿಧಾನಸಭೆಯ ಚುನಾವಣೆ–2023 ಕ್ಕೆ ಕೆಟರಿಂಗ್ ಸರ್ವಿಸ್ ಒದಗಿಸುವ ಕೆಲಸ	ರೂ.178.75ಲಕ್ಷ	ರೂ.4.469 ಲಕ್ಷ
2	ನಂ:ಎಇಇ/ಡಿಯುಡಿಸಿ/ಇ.ಎಲ್.ಇ–2023/ 2/2023–24	ಕರ್ನಾಟಕ ವಿಧಾನಸಭೆಯ ಚುನಾವಣೆ–2023ಕ್ಕೆ ಚುನಾವಣಾ ಸಾಮಗ್ರಿಗಳನ್ನು ಒದಗಿಸುವ ಕೆಲಸ	ರೂ.48.23 ಲಕ್ಷ	ರೂ.1.21 ಲಕ್ಷ
3	ನಂ:ಎಇಇ/ಡಿಯುಡಿಸಿ/ಇ.ಎಲ್.ಇ–2023/ 3/2023–24	ಕರ್ನಾಟಕ ವಿಧಾನಸಭೆಯ ಚುನಾವಣೆ–2023ಕ್ಕೆ ಚುನಾವಣಾ ಮುದ್ರಣಾ ಕೆಲಸ	ರೂ.65.00 ಲಕ್ಷ	ರೂ.1.62 ಲಕ್ಷ
4	ನಂ:ಎಇಇ/ಡಿಯುಡಿಸಿ/ಇ.ಎಲ್.ಇ–2023/ 4/2023–24	ಕರ್ನಾಟಕ ವಿಧಾನಸಭೆಯ ಚುನಾವಣೆ–2023ಕ್ಕೆ ವೀಡಿಯೊ ಸಲಕರಣೆಯೊಂದಿಗೆ ವೀಡಿಯೋ ಗ್ರಾಫರ್ ಒದಗಿಸುವ ಕೆಲಸ	ರೂ.24.00 ಲಕ್ಷ	ರೂ.0.60 ಲಕ್ಷ

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 30–03–2023 ರಿಂದ 10–04–2023 ಸಂಜೆ:5–30 ಗಂಟೆ ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಅರ್ಹತೆಯ ಬಿಡ್): 12–04–2023 ಟೆಂಡರ್‌ನ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಪ್ರಚುರಪಡಿಸಲಾಗುವುದು. ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಹೆಚ್ಚಿನ ವಿವರಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ www.eproc.karnataka.gov.in ನಲ್ಲಿರುವ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಕೆಲಸದ ಕುರಿತು ಯಾವುದೇ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–ಎಂ.ಎಸ್.ಅರ್ಚನ ಭಾ.ಆ.ಸೇ., ಜಿಲ್ಲಾಧಿಕಾರಿ, ಹಾಸನ ಜಿಲ್ಲೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/1325/ಕೆಎಸ್‌ಎಂಸಿಎ/001/2023–24

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
ಇ–ಮೇಲ್:–eln.chitradurga@gmail.com
ಸಂ:ಚುನಾವಣೆ:ಸಿಆರ್–113/2022–23 ದಿನಾಂಕ: 29.03.2023

ಇ–ಟೆಂಡರ್ ಪ್ರಕಟಣೆ

ವಿಧಾನಸಭಾ ಸಾರ್ವತ್ರಿಕ ಚುನಾವಣೆ–2023ರ ಸಂಬಂಧ ಬಾಡಿಗೆ ಆಧಾರದ ವಾಹನಗಳನ್ನು ಸರಬರಾಜು ಮಾಡುವ ಸಂಬಂಧ ಟೆಂಡರ್ ಇ–ಪ್ರಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಪ್ರಕಟಣೆಯ ವಿವರಗಳು ಕೆಳಕಂಡಂತೆ ಇರುತ್ತದೆ.
(1) Commencement of download of e-Tender Form from website- https://eproc.Karnataka.gov.in:- 29-03-2023. (2) Last Date for Queries on or before:- 03-04-2023 till 5:00 p.m. (3) Pre-bid Meeting:- 01-04-2023 at 11:00 a.m. (4) Last Date for Uploading of Tender in e-procurement platform on or before:- 05-04-2023 till 7:30 p.m. (5) Opening of Technical Bid: 06-04-2023 till 7:30 p.m. (6) Date of Original Document Verification:- Will be done on the uploaded documents at e-portal. (7) Submission of Samples:- Not applicapable.(8) Opening of Financial Bid:- Will be intimated. (9) Approximate value of tender:- Rs. 2,35,20,000.00 (10) EMD:- Rs.1.00 Lakhs.
DIPR/CTA/KSMCA/1204/2022-23
ಸಹಿ/– ಅಪರ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಡಳಿತ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು – 560 065
ಫ್ಯಾಕ್ಸ್: [91–080]23332521, ದೂರವಾಣಿ: 23332521, 23330153[259]
ಸಂಖ್ಯೆ:ಆಕ/ಆರ್.ಟಿ./11/61/ಹೈ–ಕ/ಕ–ಕ/ಬೋಧಕರ ಹುದ್ದೆಗಳು/2022–23,
ದಿನಾಂಕ: 31–03–2023

ತಿದ್ದುಪಡಿ

ವಿಷಯ: ಹೈದರಾಬಾದ್ ಕರ್ನಾಟಕ/ಕಲ್ಯಾಣ–ಕರ್ನಾಟಕ ಬೋಧಕರ ಹುದ್ದೆಗಳಿಗೆ ನೇಮಕಾತಿ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ವಿವಿಧ ವಿಷಯಗಳ 15 ಸಹಾಯಕ ಪ್ರಾಧ್ಯಾಪಕರುಗಳ (ಬೋಧಕರ) ಹುದ್ದೆಗಳನ್ನು 371 (ಜೆ)ನ (ಕಲ್ಯಾಣ ಕರ್ನಾಟಕ) ಅಡಿಯಲ್ಲಿ ತುಂಬಲು ದಿನಾಂಕ 24–03–2023ರಂದು ನೇಮಕಾತಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಅಧಿಸೂಚನೆಯ ಮೊದಲ ಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಸಂಬಂಧಿಸಿದಂತೆ ಕ್ರಮ ಸಂಖ್ಯೆ 05 ಮತ್ತು 06ರ ಮಿಸಲಾತಿಯು ಸರ್ಕಾರಿ ಆದೇಶದ ದಿನಾಂಕ: 08–03–2023ರ ಪ್ರಕಾರ ಬದಲಾವಣೆಗೊಂಡಿರುವುದರಿಂದ ದಿನಾಂಕ 30–03–2023ರಂದು ತಿದ್ದುಪಡಿ ಅಧಿಸೂಚನೆಯನ್ನು ಪ್ರಕಟಿಸಲಾಗಿರುವುದು. ತಿದ್ದುಪಡಿಯ ಅಧಿಸೂಚನೆಯ ಪೂರ್ಣ ವಿವರಗಳನ್ನೊಳಗೊಂಡ ಮಾಹಿತಿಯು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಿಂದ (www.uasbangalore.edu.in) ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕಡೆಯ ದಿನಾಂಕ 02–05–2023 ಆಗಿರುತ್ತದೆ.

ಆದೇಶದ ಮೇರೆಗೆ
ಸಹಿ/– ಆಡಳಿತಾಧಿಕಾರಿಗಳು

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಡೆತನದ್ದು)
ಅಧೀಕ್ಷಕ ಇಂಜನೀಯರರ ಕಛೇರಿ, ಕೃಭಾಜನಿನಿ,
ಮುಏನೀ ವೃತ್ತ, ಬಸವನ ಬಾಗೇವಾಡಿ ಕ್ಯಾಂಪ್, ಆಲಮಟ್ಟಿ.
ಸಂ:ಕೃಭಾಜನಿನಿ/ಮುಏನೀವೃಅ/ಸಇಂ–4/ನೀಸಸ/2022–23/2631
ದಿನಾಂಕ: 28.03.2023

ಪತ್ರಿಕಾ ಪ್ರಕಟಣೆ

ವಿಷಯ: ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಮುಳವಾಡ ಏತ ನೀರಾವರಿ ವೃತ್ತದ ಅಡಿ ಬರುವ ಕಾಲುವೆ ಜಾಲಕ್ಕೆ 2022–23 ರ ಹಿಂಗಾರು ಹಂಗಾಮಿಗಾಗಿ ಕಾಲುವೆ ಜಾಲಕ್ಕೆ ನೀರು ಹರಿಸುವ ಅವಧಿಯನ್ನು ವಿಸ್ತರಿಸುವ ಕುರಿತು.
ಮುಳವಾಡ ಏತ ನೀರಾವರಿ ವೃತ್ತ, ಬ.ಬಾಗೇವಾಡಿ ಕ್ಯಾಂಪ್, ಆಲಮಟ್ಟಿ ಅಡಿ ಬರುವ ಮುಳವಾಡ ಏತ ನೀರಾವರಿ ಹಂತ–2 ರ ಪೂರ್ವ ಮತ್ತು ಪಶ್ಚಿಮ ಕಾಲುವೆ, ಸೊನ್ನ ಏತ ನೀರಾವರಿ, ರೊಳ್ಳಿ–ಮನ್ನಿಕೇರಿ ಏತ ನೀರಾವರಿ ಮತ್ತು ತೆಗ್ಗಿ–ಸಿದ್ದಾಪುರ ಏತ ನೀರಾವರಿ ಯೋಜನೆಗಳ ಜಾಲಕ್ಕೆ ಹಿಂಗಾರು ಹಂಗಾಮಿಗೆ ದಿನಾಂಕ: 12.12.2022 ರಿಂದ 30.03.2023 ರ ವರೆಗೆ 14 ದಿನ ಚಾಲೂ ಹಾಗೂ 10 ದಿನ ಬಂದ ಅನುಸರಿಸಿ ಒಟ್ಟು 119 ದಿನಗಳ ವರೆಗೆ ನೀರನ್ನು ಪೂರೈಸಲು ತೀರ್ಮಾನಿಸಿದಂತೆ ನೀರಾವರಿಗೆ ನೀರು ಪೂರೈಸಲಾಗುತ್ತಿದೆ.
ಕೃಷ್ಣಾ ಮೇಲ್ದಂಡೆ ಯೋಜನೆಯ ಅಚ್ಚುಕಟ್ಟು ಪ್ರದೇಶದ ರೈತರ, ವಿವಿಧ ರೈತ ಸಂಘಟನೆಗಳ, ಜನ ಪ್ರತಿ ನಿಧಿಗಳ ಹಾಗೂ ಸಮಿತಿಯ ಮುಖಂಡರುಗಳ ಕೋರಿಕೆಗೆ ಸ್ಪಂದಿಸಿ, ರೈತರಿಗೆ ಅನುಕೂಲ ಮಾಡುವ ಹಿತದೃಷ್ಟಿಯಿಂದ 2022–23 ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ರೈತರು ಹಾಲಿ ಬೆಳೆದು ನಿಂತಿರುವ ಲಘು ನೀರಾವರಿ ಬೆಳೆಗಳಾದ ಹತ್ತಿ, ತೊಗರಿ, ಮೆಣಸಿನಕಾಯಿ, ಶೇಂಗಾ, ಸಜ್ಜೆ ಇತ್ಯಾದಿ ಬೆಳೆಗಳಿಗೆ ಮಾತ್ರ ಉಪಯೋಗವಾಗುವಂತೆ ನಿಗಾವಹಿಸಲು ಬೆಳೆಗಳನ್ನು ಸಂರಕ್ಷಿಸಲು ಕೃಷ್ಣಾ ಮೇಲ್ದಂಡೆ ಯೋಜನಾ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶದಡಿಯಲ್ಲಿನ ಕಾಲುವೆಗಳಿಗೆ ದಿನಾಂಕ: 23.03.2023 ರಿಂದ 30.03.2023ರ ವರೆಗೆ ಸತತವಾಗಿ ನೀರು ಪೂರೈಸಿ, ದಿನಾಂಕ: 31.03.2023 ರಿಂದ 05.04.2023 ರವರೆಗೆ 6 ದಿನಗಳ ಬಂದ್ ಅನುಸರಿಸಿ, ಲಭ್ಯವಿರುವ ಹೆಚ್ಚುವರಿ 5.00 ಟಿ.ಎಂ.ಸಿ ನೀರನ್ನು ದಿನಾಂಕ: 06.04.2023 ರಿಂದ 10.04.2023ರ ವರೆಗೆ ಯೋಜನಾ ವ್ಯಾಪ್ತಿಯ ಕಾಲುವೆಗಳಲ್ಲಿ ಬೆಳೆದು ನಿಂತಿರುವ ಲಘು ನೀರಾವರಿ ಬೆಳೆಗಳಿಗೆ ಮಾತ್ರ ಉಪಯೋಗಿಸಲು ಮನವಿ ಮಾಡಲಾಗಿದೆ. ಎಲ್ಲಾ ರೈತ ಬಾಂಧವರು ನೀರನ್ನು ಮಿತವಾಗಿ ಬಳಸಿ, ಸಹಕರಿಸಬೇಕಾಗಿ ಮನವಿ.
"ಜೀವ ಜಲ ಅತೀ ಅಮೂಲ್ಯ ಅದನ್ನು ಪೋಲು ಮಾಡಬೇಡಿ – ಹಿತವಾಗಿ ಮಿತವಾಗಿ ಬಳಸಿ"
ಸಹಿ/– (ಜಗದೀಶ ಜಿ.ರಾಠೋಡ), ಅಧೀಕ್ಷಕ ಅಭಿಯಂತರರು, ಕೃಭಾಜನಿನಿ, ಮುಏನೀ ವೃತ್ತ, ಬ.ಬಾಗೇವಾಡಿ ಕ್ಯಾಂಪ್, ಆಲಮಟ್ಟಿ
ವಾಸಾಸಂಇ/ವಿಜಯಪುರ/1138/ಕೆಎಸ್‌ಎಂಸಿಎ/2022–23

ರಾಮನ ಮೂರ್ತಿಯ ತೊಡೆಯೇರಿದ ಬಿಜೆಪಿ ಶಾಸಕ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ನಗರದಲ್ಲಿ ಗುರುವಾರ ನಡೆದ ಶ್ರೀರಾಮನವಮಿಯ ಮೆರವಣಿಗೆಯಲ್ಲಿ ರಾಮನ ಉತ್ಸವ ಮೂರ್ತಿಯ ತೊಡೆಯ ಮೇಲೆ ಶಾಸಕ ಶರಣು ಸಲಗರ ನಿಂತಿದ್ದು ವ್ಯಾಪಕ ಚರ್ಚೆಗೆ ಮತ್ತು ಟೀಕೆಗೆ ಒಳಗಾಯಿತು.

ನಗರದ ಕಾಳಿ ಗಲ್ಲಿಯಿಂದ ಮೆರವಣಿಗೆ ಆರಂಭವಾದಾಗ, ಶರಣು ಸಲಗರ ಪ್ಲಾಸ್ಟರ್‌ನ ಎತ್ತರದ ಶ್ರೀರಾಮ ಮೂರ್ತಿಗೆ ಮಾಲಾರ್ಪಣೆ ಮಾಡಲು ತೊಡೆ ಮೇಲೆ ಏರಿ ನಿಂತರು. ನಂತರ ಅಲ್ಲಿಯೇ ನಿಂತು ಭಕ್ತರಿಗೆ ಕೈ ಜೋಡಿಸಿದರು. ಇದು ಟೀಕೆಗೆ ಕಾರಣವಾಯಿತು.

ಸಾಮಾಜಿಕ ಜಾಲತಾಣಗಳಲ್ಲಿ ಈ ಚಿತ್ರವನ್ನು ಅನೇಕರು ಹಂಚಿಕೊಂಡಿದ್ದು, ಬಿಜೆಪಿಯವರ ರಾಮಭಕ್ತಿ ಇದೇನಾ ಎಂದು ಪ್ರಶ್ನಿಸಿದ್ದಾರೆ.

ಕ್ಷಮೆಯಾಚನೆ: ಫೇಸ್‌ಬುಕ್ ಲೈವ್‌ನಲ್ಲಿ ಕ್ಷಮೆಯಾಚಿಸಿದ ಶರಣು ಸಲಗರ, 'ನಾನು ಅಪ್ಪಟ ರಾಮಭಕ್ತ, ಹಿಂದೂ ಕಾರ್ಯಕರ್ತ. ರಾಮನ ಮೇಲಿನ ಅತಿಯಾದ ಭಕ್ತಿ, ಪ್ರೀತಿಯಿಂದ ಮೂರ್ತಿಯ ತೊಡೆಯೇರಿ ಪುಷ್ಪಮಾಲೆ ಅರ್ಪಿಸಿ, ಆರತಿ ಬೆಳಗಿದೆ. ಇದಕ್ಕೆ ಕಾರ್ಯಕ್ರಮ ಸಮಿತಿ ಸದಸ್ಯರ ಅನುಮತಿ ಪಡೆದಿದ್ದೆ. ಕೆಳಗೆ ಇಳಿಯುವಾಗ ತೊಡೆಗೆ ಹಣೆ ಹಚ್ಚಿ ನಮಸ್ಕರಿಸಿದ್ದೆ. ನಮ್ಮ ಹಿತ ಶತ್ರುಗಳು, ಆಗದವರು ಅದನ್ನು ತೋರಿಸಿಲ್ಲ. ಆದರೂ ನಾನು ಪ್ರಮಾದಕ್ಕೆ ಪ್ರಾಮಾಣಿಕವಾಗಿ ಕ್ಷಮೆ ಕೋರುವೆ' ಎಂದರು.

ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಗುರುವಾರ ನಡೆದ ಮೆರವಣಿಗೆಯಲ್ಲಿ ಶ್ರೀರಾಮನ ಉತ್ಸವ ಮೂರ್ತಿಯ ತೊಡೆಯ ಮೇಲೆ ನಿಂತ ಶಾಸಕ ಶರಣು ಸಲಗರ ಭಕ್ತರಿಗೆ ನಮಸ್ಕರಿಸಿದರು

ಕೇಂದ್ರ ಚುನಾವಣಾ ಆಯೋಗಕ್ಕೆ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಪತ್ರ

ಟೆಂಡರ್ ಪ್ರಕ್ರಿಯೆ ಸ್ಥಗಿತಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಕೇಂದ್ರ ಸರ್ಕಾರದ ಅನುದಾನದಲ್ಲಿ ರಾಜ್ಯದಲ್ಲಿ ಕೈಗೆತ್ತಿಕೊಳ್ಳಲಿರುವ ₹ 20,000 ಕೋಟಿಗೂ ಹೆಚ್ಚು ಮೊತ್ತದ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯನ್ನು ತಕ್ಷಣ ಸ್ಥಗಿತಗೊಳಿಸುವಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕೇಂದ್ರ ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದಾರೆ.

ರಾಜ್ಯದ ಮುಖ್ಯ ಚುನಾವಣಾಧಿಕಾರಿಗಳ ಮೂಲಕ ಆಯೋಗಕ್ಕೆ ಶುಕ್ರವಾರ ಪತ್ರ ಬರೆದಿರುವ ಅವರು, 'ರಾಜ್ಯದ ಬಿಜೆಪಿ ಸರ್ಕಾರದ ವಿರುದ್ಧ ಕಾಮಗಾರಿಗಳಲ್ಲಿ ಶೇಕಡ 40ರಷ್ಟು ಲಂಚ ಪಡೆಯುತ್ತಿರುವ ಆರೋಪವಿದೆ. ಚುನಾವಣೆ ಸಮಯದಲ್ಲಿ ₹20,000 ಕೋಟಿಗೂ ಹೆಚ್ಚು ಮೊತ್ತದ ಕಾಮಗಾರಿಗಳ ಟೆಂಡರ್ ಅಂತಿಮಗೊಳಿಸಿ, ಅದರಿಂದ ಲಂಚ ಪಡೆದು ಚುನಾವಣೆಯಲ್ಲಿ ವೆಚ್ಚ ಮಾಡಲು ಪ್ರಯತ್ನಿಸಲಾಗುತ್ತಿದೆ. ಲೋಕೋಪಯೋಗಿ, ಜಲ ಸಂಪನ್ಮೂಲ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ರೈಲ್ವೆ ಸೇರಿ ಪ್ರಮುಖ ಇಲಾಖೆಗಳ ಟೆಂಡರ್ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸುವಂತೆ ನಿರ್ದೇಶನ ನೀಡಬೇಕು' ಎಂದಿದ್ದಾರೆ.

ಶಿರಾಡಿ ಘಾಟಿ ಹೆದ್ದಾರಿ ಕಾಮಗಾರಿ, ಹಲವು ರೈಲ್ವೆ ಮಾರ್ಗಗಳ ಕಾಮಗಾರಿಗಳು, ಹೆದ್ದಾರಿ ಕಾಮಗಾರಿಗಳು, ವಸತಿ ಯೋಜನೆಗಳು ಸೇರಿದಂತೆ ಬೃಹತ್ ಮೊತ್ತದ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ನಡೆಸದಂತೆ ನಿರ್ದೇಶನ ನೀಡಬೇಕು. ಟೆಂಡರ್ ಪ್ರಕ್ರಿಯೆ ಅಂತಿಮಗೊಳಿಸಿ ಕಮಿಷನ್ ಪಡೆದು ಅದನ್ನು ಚುನಾವಣೆಯಲ್ಲಿ ಬಳಕೆ ಮಾಡದಂತೆ ತಡೆಯಬೇಕು ಎಂದು ಮನವಿ ಮಾಡಿದ್ದಾರೆ.

'ಕಾಮಗಾರಿಗಳಲ್ಲಿ ಶೇ 40ರಷ್ಟು ಲಂಚ ಪಡೆಯಲಾಗುತ್ತಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅವರು ಪ್ರಧಾನಿ ನರೇಂದ್ರ ಮೋದಿಯವರಿಗೆ ಪತ್ರ ಬರೆದಿದ್ದರು. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಅಧ್ಯಕ್ಷರೂ ಆಗಿದ್ದ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ಲಂಚ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ. ಅವರ ಮನೆ ಹಾಗೂ ಕಚೇರಿಗಳಲ್ಲಿ ₹ 8 ಕೋಟಿಗೂ ಹೆಚ್ಚು ನಗದು ಪತ್ತೆಯಾಗಿದೆ. ಈ ಎಲ್ಲವನ್ನೂ ಪರಿಗಣಿಸಿ ಟೆಂಡರ್ ಪ್ರಕ್ರಿಯೆ ನಡೆಸದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

ಚುನಾವಣೆ ಸಮೀಪಿಸಿದಾಗಲೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬೃಹತ್ ಮೊತ್ತದ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಆರಂಭಿಸಿವೆ. ಅವುಗಳನ್ನು ಚುನಾವಣಾ ಉದ್ದೇಶಕ್ಕೆ ದುರ್ಬಳಕೆ ಮಾಡಿಕೊಳ್ಳುವ ಅನುಮಾನವಿದೆ. ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಯಲು ಅವಕಾಶ ಕಲ್ಪಿಸುವುದಕ್ಕಾಗಿ ಟೆಂಡರ್ ಪ್ರಕ್ರಿಯೆಯನ್ನು ತಡೆ ಹಿಡಿಯಬೇಕು ಎಂದು ಕೋರಿದ್ದಾರೆ.

ಅಧಿಕಾರಿಗಳ ವರ್ಗಾವಣೆಗೆ ಒತ್ತಾಯ

ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಉಪ ಮುಖ್ಯ ಚುನಾವಣಾಧಿಕಾರಿ ಹಾಗೂ ಜಂಟಿ ಮುಖ್ಯ ಚುನಾವಣಾಧಿಕಾರಿ ಹುದ್ದೆಗಳಲ್ಲಿ ಐದು ವರ್ಷಗಳಿಗಿಂತ ಹೆಚ್ಚು ಕಾಲದಿಂದ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳನ್ನು ತಕ್ಷಣವೇ ವರ್ಗಾವಣೆ ಮಾಡುವಂತೆ ಕೇಂದ್ರ ಚುನಾವಣಾ ಆಯೋಗವನ್ನು ಕಾಂಗ್ರೆಸ್ ಒತ್ತಾಯಿಸಿದೆ.

ಆಯೋಗಕ್ಕೆ ಪತ್ರ ಬರೆದಿರುವ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ, 'ದೀರ್ಘ ಕಾಲದಿಂದ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯಲ್ಲಿರುವ ಕೆಲವು ಅಧಿಕಾರಿಗಳು ಆಡಳಿತಾರೂಢ ಬಿಜೆಪಿ ಹಾಗೂ ಆರ್‌ಎಸ್‌ಎಸ್ ಜತೆ ನಿಕಟ ನಂಟು ಹೊಂದಿದ್ದಾರೆ. ಅವರು ಇತರ ಪಕ್ಷಗಳ ಮೇಲೆ ಹೊಂದಿರುವ ಪೂರ್ವಗ್ರಹವು ಚುನಾವಣಾ ಪ್ರಕ್ರಿಯೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ. ಆದ್ದರಿಂದ ಅವರನ್ನು ಮುಖ್ಯ ಚುನಾವಣಾಧಿಕಾರಿಯವರ ಕಚೇರಿಯಿಂದ ವರ್ಗಾವಣೆ ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

ಪತ್ರದಲ್ಲಿ ಕೆಲವು ಅಧಿಕಾರಿಗಳ ಹೆಸರುಗಳನ್ನೂ ಉಲ್ಲೇಖಿಸಿದ್ದಾರೆ.

ಮಾಜಿ ಸಚಿವ ಸೇರಿ 10 ಜನರ ವಿರುದ್ಧ ಪ್ರಕರಣ

ಮುದ್ದೇಬಿಹಾಳ: ಜೆಸಿಬಿಯಿಂದ ಅಗೆದು ಪರಿಶೀಲನೆ: ₹45.94 ಲಕ್ಷ ಮೌಲ್ಯದ 11 ಸಾವಿರ ಗೋಡೆ ಗಡಿಯಾರ ವಶ

ಪ್ರಜಾವಾಣಿ ವಾರ್ತೆ

ವಿಜಯಪುರ: ಮುದ್ದೇಬಿಹಾಳ ತಾಲ್ಲೂಕಿನ ಶ್ರೀಬಾಲಾಜಿ ಸಕ್ಕರೆ ಕಾರ್ಖಾನೆಯಲ್ಲಿ ಚುನಾವಣಾಧಿಕಾರಿಗಳು ಎರಡನೇ ಬಾರಿ ದಾಳಿ ನಡೆಸಿ ₹45.94 ಲಕ್ಷ ಮೌಲ್ಯದ ಒಟ್ಟು 11,080 ಗೋಡೆ ಗಡಿಯಾರಗಳನ್ನು ವಶಪಡಿಸಿಕೊಂಡಿದ್ದು, ಮಾಜಿ ಸಚಿವ ಎಸ್. ಆರ್.ಪಾಟೀಲ ಸೇರಿದಂತೆ 10 ಜನರ ವಿರುದ್ಧ ಶುಕ್ರವಾರ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಈ ಕುರಿತು ಮುದ್ದೇಬಿಹಾಳ ವಿಧಾನ ಸಭಾ ಮತಕ್ಷೇತ್ರದ ಎಫ್‌ಎಸ್‌ಟಿ 3ನೇ ತಂಡದ ಸದಸ್ಯ ಲೋಕೋಪಯೋಗಿ ಸಹಾಯಕ ಎಂಜಿನಿಯರ್ ರಾಜಶೇಖರ ಚವ್ಹಾಣ ನೀಡಿದ ದೂರಿನ ಮೇರೆಗೆ ಪಿಎಸ್‌ಐ ಆರೀಫ್ ಮುಷಾಪುರಿ ಅವರು, ಕಾರ್ಖಾನೆ ಅಧ್ಯಕ್ಷ ಹಣಮಂತಗೌಡ ಪಾಟೀಲ, ಕಾರ್ಖಾನೆ ವ್ಯವಸ್ಥಾಪಕ ನಿರ್ದೇಶಕ ವೆಂಕಟೇಶಗೌಡ ಪಾಟೀಲ, ಉಪಾಧ್ಯಕ್ಷ ರಾಜುಗೌಡ ಪಾಟೀಲ, ನಿರ್ದೇಶಕರಾದ ಡಾ.ಅಜೀತ ಕನಕರಡ್ಡಿ, ಎಚ್.ಎಲ್. ಪಾಟೀಲ, ಬೀಳಗಿ ಬಾಡಗಂಡಿ, ಕಾರ್ಖಾನೆ ಸಿಬ್ಬಂದಿ ಮಾರುತಿ ಗುರವ, ಶ್ರೀನಿವಾಸ ಅರಕೇರಿ, ಚಂದ್ರಶೇಖರ ತಮದಡ್ಡಿ, ಅಧಿಕ ಪಾಟೀಲ ಸೇರಿ 10 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಜೆಸಿಬಿಯಿಂದ ಅಗೆದು ಪರಿಶೀಲನೆ: 'ಮತದಾರರಿಗೆ ಹಂಚಿಕೆ ಮಾಡಲು ತಂದಿರುವ ಗೃಹೋಪಯೋಗಿ ವಸ್ತುಗಳನ್ನು ಅಲ್ಲಲ್ಲಿ ನೆಲದಲ್ಲಿ, ಬಗ್ಯಾಸಸ್ (ಕಬ್ಬಿನ ಸಿಪ್ಪೆ ನುರಿಸಿದ ನಂತರ ಸೃಷ್ಟಿಯಾಗುವ ಪೌಡರ್)ನಲ್ಲಿ ಮುಚ್ಚಿಡಲಾಗಿದೆ' ಎನ್ನುವ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿ ವಿಜಯ ಮಹಾಂತೇಶ ಪರಿಶೀಲನೆ ನಡೆಸಿದರು. ಆದರೆ ಈ ಕಾರ್ಯಾಚರಣೆ ವೇಳೆ ಯಾವುದೇ ವಸ್ತುಗಳು ಸಿಗಲಿಲ್ಲ.

ನಿರ್ದೇಶಕರ ಪತ್ರ: ಈ ನಡುವೆ ಬಾಗಲಕೋಟೆ ಜಿಲ್ಲೆ ಬಾಡಗಂಡಿಯ ಬೀಳಗಿ ಸಕ್ಕರೆ ಕಾರ್ಖಾನೆಯ ಪೂರ್ಣಾವಧಿ ನಿರ್ದೇಶಕ ಎಸ್.ಎಸ್.ಪಾಟೀಲ ಅವರು ಮಾ.30 ರಂದು ವಿಜಯಪುರ ಜಿಲ್ಲಾಧಿಕಾರಿಗೆ ಪತ್ರವೊಂದನ್ನು ಬರೆದು ಚುನಾವಣೆ ಮುಗಿದ ನಂತರ ಎಲ್ಲವನ್ನೂ ಬೀಳಗಿ ಸಕ್ಕರೆ ಕಾರ್ಖಾನೆಗೆ ಮರಳಿ ಕೊಡಬೇಕು ಎಂದು ಕೋರಿದ್ದಾರೆ.

ಮುದ್ದೇಬಿಹಾಳ ತಾಲ್ಲೂಕಿನ ಬಾಲಾಜಿ ಸಕ್ಕರೆ ಕಾರ್ಖಾನೆಯಲ್ಲಿರುವ ಬಗ್ಯಾಸಸ್ ಅನ್ನು ಜೆಸಿಬಿಯಿಂದ ಅಗೆದು ಪರಿಶೀಲಿಸಲಾಯಿತು

₹21 ಲಕ್ಷ ನಗದು, 55 ಎಲ್‌ಇಡಿ ಟಿವಿ ವಶ

ಬಾಗಲಕೋಟೆ: ಜಿಲ್ಲೆಯ ವಿವಿಧೆಡೆ ದಾಖಲೆಗಳಿಲ್ಲದೆ ಸಾಗಿಸುತ್ತಿದ್ದ ₹21 ಲಕ್ಷ ನಗದು ಹಾಗೂ 55 ಎಲ್‌ಇಡಿ ಟಿವಿ, 11 ಸೌಂಡ್ ಸಿಸ್ಟಮ್‌ಗಳನ್ನು ಶುಕ್ರವಾರ ವಶಪಡಿಸಿಕೊಳ್ಳಲಾಗಿದೆ.

ಜಿಲ್ಲೆಯ ಮುಧೋಳದಲ್ಲಿ ₹11 ಲಕ್ಷ, ಜಮಖಂಡಿಯಲ್ಲಿ ₹2.38 ಲಕ್ಷ ಹಾಗೂ ಬೀಳಗಿಯಲ್ಲಿ 7.63 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ.

ನಗರದ ರೈಲ್ವೆ ಗೇಟ್ ಬಳಿ ಹೈದರಾಬಾದ್‌ನಿಂದ ಬಾಗಲಕೋಟೆ ಮಾರ್ಗವಾಗಿ ಹೋಗುತ್ತಿದ್ದ ಕ್ಯಾಂಟರ್‌ನಲ್ಲಿ ಟಿವಿ ಹಾಗೂ ಸೌಂಡ್ ಸಿಸ್ಟಮ್‌ಗಳು ಪತ್ತೆಯಾಗಿವೆ. ಸೂಕ್ತ ದಾಖಲೆಗಳನ್ನು ನೀಡದ ಕಾರಣ ಅವುಗಳನ್ನು ವಶಕ್ಕೆ ಪಡೆಯಲಾಗಿದ್ದು, ಚಾಲಕನ ವಿಚಾರಣೆ ನಡೆಸಲಾಗುತ್ತಿದೆ. ಅಂದಾಜು ₹ 10 ಲಕ್ಷ ಮೌಲ್ಯದ್ದಾಗಬಹುದು ಎಂದು ಪೊಲೀಸರು ಅಂದಾಜಿಸಿದ್ದು ನಗರ ಠಾಣೆ ಪೊಲೀಸರು ಚಾಲಕನ ವಿಚಾರಣೆ ನಡೆಸುತ್ತಿದ್ದಾರೆ.

ದಾಖಲೆ ಇಲ್ಲದೆ ಸಾಗಿಸುತ್ತಿದ್ದ ₹ 5 ಲಕ್ಷ ವಶ: ಹೊಸಪೇಟೆ (ವರದಿ): ದಾಖಲೆ ಇಲ್ಲದೆ ಸಾಗಿಸುತ್ತಿದ್ದ ₹ 5.26 ಲಕ್ಷ ನಗದು ಹಣವನ್ನು ಕೂಡ್ಲಿಗಿ ತಾಲ್ಲೂಕಿನ ಕಾನಹೊಸಹಳ್ಳಿ ಸಮೀಪದ ರಾಷ್ಟ್ರೀಯ ಹೆದ್ದಾರಿ 50ರ ಬಳಿಯ ಚೆಕಪೋಸ್ಟ್‌ನಲ್ಲಿ ಚುನಾವಣಾ ಸಿಬ್ಬಂದಿ ಶುಕ್ರವಾರ ವಶಕ್ಕೆ ಪಡೆದಿದ್ದಾರೆ.

₹2 ಲಕ್ಷ ನಗದು , 300 ಶಾಲು ವಶ: (ಗದಗ ವರದಿ): ದಾಖಲೆ ಇಲ್ಲದೇ ಸಾಗಿಸುತ್ತಿದ್ದ ₹2 ಲಕ್ಷ ಹಣವನ್ನು ಗದಗ ಗ್ರಾಮಾಂತರ ಪೊಲೀಸರು ದುಂದೂರು ಚೆಕ್‌ಪೋಸ್ಟ್‌ನಲ್ಲಿ ಶುಕ್ರವಾರ ವಶಪಡಿಸಿಕೊಂಡಿದ್ದಾರೆ. ಮುಂಬೈನಿಂದ ತೋರಣಗಲ್‌ಗೆ ತೆರಳುತ್ತಿದ್ದ ಕಾರನ್ನು ತಪಾಸಣೆ ನಡೆಸಿದಾಗ ಹಣ ಪತ್ತೆಯಾಗಿದೆ.

ಗದಗ ನಗರದ ಜೆಟಿ ಎಂಜಿನಿಯರಿಂಗ್ ಕಾಲೇಜು ಬಳಿ ತೆರೆದಿರುವ ಚೆಕ್‌ಪೋಸ್ಟ್‌ನಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದ 300 ಶಾಲುಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

₹3.50 ಲಕ್ಷ ನಗದು ವಶ: (ರೋಣ ವರದಿ): ತಾಲ್ಲೂಕಿನ ಹಿರೇಹಾಳ ಚೆಕ್‌ಪೋಸ್ಟ್‌ನಲ್ಲಿ ಕಾರು ಹಾಗೂ ಬೈಕ್ ಮೂಲಕ ಸಾಗಿಸುತ್ತಿದ್ದ ದಾಖಲೆ ಇಲ್ಲದ ₹3.50 ಲಕ್ಷ ನಗದನ್ನು ಶುಕ್ರವಾರ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಪ್ರಕರಣ ದಾಖಲಿಸಿಕೊಳ್ಳಲಾಗಿದೆ. .

₹3.39 ಲಕ್ಷ ವಶ: (ಮುಂಡಗೋಡ ವರದಿ): ಸೂಕ್ತ ದಾಖಲೆ ಇಲ್ಲದೇ ಸ್ಕೂಟಿಯಲ್ಲಿ ವ್ಯಕ್ತಿಯೊಬ್ಬರು ಸಾಗಿಸುತ್ತಿದ್ದ ₹3.39 ಲಕ್ಷ ಹಣವನ್ನು ತಾಲ್ಲೂಕಿನ ಅಗಡಿ ಚೆಕ್ ಪೋಸ್ಟ್ ನಲ್ಲಿ ಶುಕ್ರವಾರ ವಶಪಡಿಸಿಕೊಳ್ಳಲಾಗಿದೆ.

ಸಿದ್ದಾಪುರ ತಾಲ್ಲೂಕಿನ ಚೆಕ್ ಪೋಸ್ಟ್ ನಲ್ಲಿ ವಾಹನ ತಪಾಸಣೆ ಮಾಡುವ ವೇಳೆ ದಾಖಲೆ ಇಲ್ಲದೇ ಜೋಗದಿಂದ - ತಾಳಗುಪ್ಪ ದ ಕಡೆಗೆ ಸ್ಕೂಟರ್‌ನಲ್ಲಿ ಸಾಗಿಸುತ್ತಿದ್ದ 1.10 ಲಕ್ಷ ನಗದು ಹಣವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಕೋಲಾರಕ್ಕೆ ರಾಹುಲ್ ಗಾಂಧಿ ಭೇಟಿ: ಏ. 9ಕ್ಕೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಕೋಲಾರ: ರಾಹುಲ್ ಗಾಂಧಿ ನೇತೃತ್ವದಡಿ ಕೋಲಾರದಲ್ಲಿ ಏ. 5ರಂದು ಕಾಂಗ್ರೆಸ್ ಹಮ್ಮಿಕೊಂಡಿದ್ದ 'ಸತ್ಯಮೇವ ಜಯತೇ' ಹೆಸರಿನ ಸಮಾವೇಶವನ್ನು ಏ. 9ಕ್ಕೆ ಮುಂದೂಡಲಾಗಿದೆ.

'ರಾಹುಲ್ ಕಾರ್ಯಕ್ರಮವನ್ನು 9ಕ್ಕೆ ನಿಗದಿಪಡಿಸಲಾಗಿದೆ. ಇನ್ನುಳಿದ ವಿಚಾರಗಳ ಬಗ್ಗೆ ಸದ್ಯದಲ್ಲೇ ಮಾಹಿತಿ ನೀಡಲಿದ್ದೇವೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ. ಲಕ್ಷ್ಮಿನಾರಾಯಣ ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

2019ರ ಲೋಕಸಭೆ ಚುನಾವಣೆ ವೇಳೆ ಕೋಲಾರದಲ್ಲಿ ನಡೆದ ಸಭೆಯಲ್ಲಿ ನೀಡಿದ್ದ ಹೇಳಿಕೆಯಿಂದ ರಾಹುಲ್ ಈಗ ಎರಡು ವರ್ಷ ಶಿಕ್ಷೆಗೆ ಗುರಿಯಾಗಿದ್ದು, ಸಂಸತ್ ಸದಸ್ಯ ಸ್ಥಾನದಿಂದ ಅನರ್ಹರಾಗಿದ್ದಾರೆ. ಹೀಗಾಗಿ, ಇಲ್ಲಿಂದಲೇ ಸಂವಿಧಾನ ರಕ್ಷಣೆ ಹೋರಾಟ ಆರಂಭಿಸಲು ಕಾಂಗ್ರೆಸ್ ತೀರ್ಮಾನಿಸಿದೆ.

ರಾಹುಲ್ ಗಾಂಧಿ

ಸಮಾವೇಶದ ಸಿದ್ಧತೆ ಪರಿಶೀಲನೆ ನಡೆಸಲು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಶನಿವಾರ ನಗರಕ್ಕೆ ಭೇಟಿ ನೀಡಲಿದ್ದಾರೆ. ಸ್ಥಳೀಯ ಮುಖಂಡರೊಂದಿಗೆ ಸಭೆ ನಡೆಸಲಿದ್ದಾರೆ.

ವರುಣಾ ಕ್ಷೇತ್ರದಲ್ಲಿ ಸ್ಪರ್ಧೆ ಘೋಷಣೆ ಬಳಿಕ ಕೋಲಾರ ಕ್ಷೇತ್ರಕ್ಕೆ ಸಿದ್ದರಾಮಯ್ಯ ಅವರ ಮೊದಲ ಭೇಟಿ ಇದಾಗಿದೆ.

9ಕ್ಕೆ ಬಂಡೀಪುರಕ್ಕೆ ಮೋದಿ?

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ದೇಶದಲ್ಲಿ ಹುಲಿಗಳ ಸಂರಕ್ಷಣೆಗಾಗಿ ಜಾರಿಗೊಳಿಸಲಾಗಿರುವ ಹುಲಿ ಯೋಜನೆಗೆ 50 ವರ್ಷಗಳಾಗಿರುವ ಸಂದರ್ಭದಲ್ಲಿ ಏಪ್ರಿಲ್ 9ರಂದು ಮೈಸೂರಿನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಭಾಗವಹಿಸಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಅಲ್ಲಿಂದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ.

ಬಂಡೀಪುರದ ಬಳಿ ಇರುವ ಮೇಲುಕಾಮನಹಳ್ಳಿಯಲ್ಲಿ ಹೆಲಿಪ್ಯಾಡ್ ನಿರ್ಮಿಸುವ ಸಂಬಂಧ ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಶುಕ್ರವಾರ ಸ್ಥಳ ಪರಿಶೀಲನೆ ನಡೆಸಿದ್ದಾರೆ.

ಬಂಡೀಪುರದಿಂದ ನೆರೆಯ ತಮಿಳುನಾಡಿನಲ್ಲಿರುವ ಮುಧುಮಲೆ ಹುಲಿಸಂರಕ್ಷಿತ ಪ್ರದೇಶಕ್ಕೂ ಮೋದಿ ಭೇಟಿ ನೀಡಲಿದ್ದಾರೆ ಎಂದು ಹೇಳಲಾಗುತ್ತಿದೆ. ಅಲ್ಲಿ, ಆಸ್ಕರ್‌ಗೆ ಆಯ್ಕೆಯಾಗಿದ್ದ 'ದಿ ಎಲಿಫೆಂಟ್ ವಿಸ್ಪರ್ಸ್' ಸಾಕ್ಷ್ಯಚಿತ್ರದಲ್ಲಿದ್ದ ಆನೆ ಮಾವುತ ಬೊಮ್ಮನ್ ದಂಪತಿಯನ್ನು ಭೇಟಿಯಾಗಲಿದ್ದಾರೆ. ಬಂಡೀಪುರದಲ್ಲಿ ಇತ್ತೀಚೆಗೆ ವಿದ್ಯುತ್ ತಗುಲಿ ಅಸ್ವಸ್ಥಗೊಂಡಿದ್ದ ಹೆಣ್ಣಾನೆಗೆ ಚಿಕಿತ್ಸೆ ನೀಡಿ, ಪ್ರಾಣ ಉಳಿಸಿದ ಸಿಬ್ಬಂದಿಯನ್ನೂ ಭೇಟಿ ಮಾಡಲಿದ್ದಾರೆ ಎಂದು ಹೇಳಲಾಗುತ್ತಿದೆ.

ಮೋದಿ

'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್, 'ಪ್ರಧಾನಿ ಭೇಟಿ ಬಗ್ಗೆ ಅಧಿಕೃತ ಮಾಹಿತಿ ಬಂದಿಲ್ಲ. ಮೈಸೂರಿಂದ ಬಂಡೀಪುರಕ್ಕೆ ಬರುವ ಸಾಧ್ಯತೆ ಇರುವುದರಿಂದ ಸಿದ್ಧತೆ ಮಾಡಲಾಗುತ್ತಿದೆ' ಎಂದಷ್ಟೇ ಹೇಳಿದರು.

ದೇವಸ್ಥಾನದ ಹುಂಡಿಗೆ ಹಾಕಲು ಒಯ್ಯುತ್ತಿದ್ದ ₹2 ಲಕ್ಷ ವಶ

ಕೊಟ್ಟಿಗೆಹಾರ (ಚಿಕ್ಕಮಗಳೂರು ಜಿಲ್ಲೆ): ದೇವಸ್ಥಾನದ ಹುಂಡಿಗೆ ಹಾಕಲು ತೆಗೆದುಕೊಂಡು ಹೊರಟಿದ್ದರು ಎನ್ನಲಾದ ₹ 2 ಲಕ್ಷ ನಗದನ್ನು ಚುನಾವಣಾಧಿಕಾರಿಗಳು ಶುಕ್ರವಾರ ವಶಪಡಿಸಿಕೊಂಡಿದ್ದಾರೆ.

'ಕೊಟ್ಟಿಗೆಹಾರ ಚೆಕ್‌ಪೋಸ್ಟ್‌ನಲ್ಲಿ ಪೊಲೀಸರು ವಾಹನ ತಪಾಸಣೆ ಮಾಡುತ್ತಿದ್ದ ವೇಳೆ ತುಮಕೂರಿನ ಪಾವಗಡದಿಂದ ಬಂದಿದ್ದ ಡಾ. ಶಶಿಕಿರಣ್ ಅವರ ಬಳಿ ದಾಖಲೆ ಇಲ್ಲದ ₹ 2 ಲಕ್ಷ ನಗದು ಪತ್ತೆಯಾಯಿತು. ಧರ್ಮಸ್ಥಳ ಹಾಗೂ ಕಟೀಲು ದೇವಸ್ಥಾನದ ಹುಂಡಿಗೆ ಹಾಕಲು ಹಣ ತೆಗೆದುಕೊಂಡು ಹೋಗುತ್ತಿರುವುದಾಗಿ ಅವರು ತಿಳಿಸಿದರು. ಸೂಕ್ತ ದಾಖಲೆ ಇಲ್ಲದ ಕಾರಣ, ಹಣವನ್ನು ವಶಕ್ಕೆ ಪಡೆದು, ವಾಹನವನ್ನು ಬಿಡಲಾಯಿತು' ಎಂದು ಮೂಲಗಳು ತಿಳಿಸಿವೆ.

₹ 18 ಲಕ್ಷ ವಶ (ನಂಜನಗೂಡು ವರದಿ): ಕಾರಿನಲ್ಲಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ ₹ 18 ಲಕ್ಷವನ್ನು ತಾಲ್ಲೂಕಿನ ತಾಂಡವಪುರ ಚೆಕ್ ಪೋಸ್ಟ್ ಬಳಿ ಶುಕ್ರವಾರ ಎಸ್‌ಎಸ್‌ಟಿ ತಂಡದ ಅಧಿಕಾರಿ ವಶಕ್ಕೆ ಪಡೆದರು. ಆಂಧ್ರದ ಅಶೋಕ್ ಹಣ ಸಾಗಿಸುತ್ತಿದ್ದವರು.

ಚೆಕ್‌ಪೋಸ್ಟ್‌ನಲ್ಲಿ ದಾಖಲೆಯಿಲ್ಲದ ₹ 1 ಕೋಟಿ ವಶಕ್ಕೆ

ಕಲಬುರಗಿ: ತಾಲ್ಲೂಕಿನ ಫರಹತಾಬಾದ್ ಚೆಕ್‌ಪೋಸ್ಟ್‌ನಲ್ಲಿ ತಪಾಸಣೆ ವೇಳೆ ಸೂಕ್ತ ದಾಖಲೆ ಇಲ್ಲದ ₹ 1 ಕೋಟಿ ನಗದನ್ನು ಗುರುವಾರ ರಾತ್ರಿ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಅಫಜಲಪುರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಫರಹತಾಬಾದ್‌ನಲ್ಲಿ ಚುನಾವಣಾ ಸಿಬ್ಬಂದಿ ಹಾಗೂ ಪೊಲೀಸರು ತಪಾಸಣೆ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ರವಿ ಮುಡಬೂಳ ಎಂಬುವರ ಕಾರಿನಲ್ಲಿ ಸಾಗಿಸುತ್ತಿದ್ದ ₹ 1 ಕೋಟಿ ಹಣ ಪತ್ತೆಯಾಯಿತು. ಯಾದಗಿರಿ ಜಿಲ್ಲೆಯ ಶಹಾಪುರದ ನಿವಾಸಿ ರವಿ ಬಳಿ ಹಣಕ್ಕೆ ಸೂಕ್ತ ದಾಖಲೆಗಳು ಇರಲಿಲ್ಲ. ಕಾರು ಕಲಬುರಗಿಯಿಂದ ಜೇವರ್ಗಿಯತ್ತ ಹೊರಟಿತ್ತು ಎಂದು ಜಿಲ್ಲಾಧಿಕಾರಿ ಯಶವಂತ ವಿ. ಗುರುಕರ್ ತಿಳಿಸಿದ್ದಾರೆ.

ಯಾದಗಿರಿ ಜಿಲ್ಲೆಯ ತಾಲ್ಲೂಕಿನ ಮುಡಬೂಳ ಚೆಕ್ ಪೋಸ್ಟ್ ಕೇಂದ್ರದ ಬಳಿ ದಾಖಲೆ ಇಲ್ಲದೆ ಕಾರಿನಲ್ಲಿ ಸಾಗಿಸಲಾಗುತ್ತಿದ್ದ 101 ಸೀರೆ ಹಾಗೂ ಕಾರನ್ನು ಭೀಮರಾಯನಗುಡಿ ಠಾಣೆ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಗುರುಮಠಕಲ್ ತಾಲ್ಲೂಕಿನ ಪುಟಪಾಕ ತೆಲಂಗಾಣ ಮತ್ತು ಕರ್ನಾಟಕ ಗಡಿ ಚೆಕ್‌ಪೋಸ್ಟ್ ಹತ್ತಿರ ದಾಖಲೆ ಇಲ್ಲದ ₹3.3 ಲಕ್ಷ ನಗದನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದು ಚುನಾವಣಾಧಿಕಾರಿ ಸಂತೋಷ ಪಾಟೀಲ ತಿಳಿಸಿದ್ದಾರೆ.

ಬಿಜೆಪಿ ಶಾಸಕರ ಬಲ ಪರೀಕ್ಷೆ

ಒಂದನೇ ಪುಟದಿಂದ...

ಮತ ಹಾಕಿದವರು ಯಾರು?: ಪ್ರತಿ ಜಿಲ್ಲೆಯ ಶಕ್ತಿ ಕೇಂದ್ರದ ಪ್ರಮುಖರು, ಮಹಾಶಕ್ತಿ ಕೇಂದ್ರದ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳು, ಮಂಡಲ ಕೋರ್ ಸಮಿತಿ ಸದಸ್ಯರು, ಮಂಡಲ ಪದಾಧಿಕಾರಿಗಳು, ಮಂಡಲ ಮೋರ್ಚಾಗಳ ಅಧ್ಯಕ್ಷರು, ಮಂಡಲದಲ್ಲಿರುವ ಜಿಲ್ಲೆ, ರಾಜ್ಯ, ಪ್ರಕೋಷ್ಠಗಳ ಸಂಚಾಲಕರು, ಮೋರ್ಚಾಗಳ ಜಿಲ್ಲಾ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಜಿ.ಪಂ, ತಾ.ಪಂ.ಗಳ ಹಾಲಿ ಮತ್ತು ಮಾಜಿ ಸದಸ್ಯರು, ಸ್ಥಳೀಯ ಸಂಸ್ಥೆಗಳ ಸದಸ್ಯರು, ಹಾಲಿ ಮತ್ತು ಮಾಜಿ ಶಾಸಕರು, ವಿಧಾನ ಪರಿಷತ್ ಸದಸ್ಯರು, ಹಾಲಿ ಮತ್ತು ಮಾಜಿ ಸಂಸದರು ಮತ ಚಲಾಯಿಸಿದ್ದಾರೆ ಎಂದು ಹೇಳಿದರು.

ಪ್ರತಿ ಜಿಲ್ಲೆಯಲ್ಲೂ ಸುಮಾರು 300 ರಿಂದ 350 ಮಂದಿ ತಮ್ಮ ಮತ ಚಲಾಯಿಸಿದ್ದಾರೆ. ಹಾಲಿ ಶಾಸಕರೇ ಇರಬೇಕೆ? ಹೊಸಬರನ್ನು ಆಯ್ಕೆ ಮಾಡಬೇಕೆ ಎಂಬುದು ಅಭಿಪ್ರಾಯ ಸಂಗ್ರಹದ ಮೂಲಕ ಸ್ಪಷ್ಟವಾಗುತ್ತದೆ. ಇವತ್ತಿನ ಚುನಾವಣೆಯ ಫಲಿತಾಂಶದ ಜತೆಗೆ ಪಕ್ಷ ಈಗಾಗಲೇ ನಡೆಸಿರುವ ವಿಧಾನ ಸಭಾ ಕ್ಷೇತ್ರವಾರು ಸಮೀಕ್ಷೆಯ ಫಲಿತಾಂಶವನ್ನೂ ತಾಳೆ ಹಾಕಿ ಅಂತಿಮ ಪಟ್ಟಿಯನ್ನು ತಯಾರಿಸಿ ಕೇಂದ್ರ ಚುನಾವಣಾ ಸಮಿತಿಗೆ ಕಳುಹಿಸಲಾಗುತ್ತದೆ. ಯಾವುದೇ ಕ್ಷೇತ್ರದಲ್ಲಿ ಒಬ್ಬ ಅಭ್ಯರ್ಥಿಗೆ ಅತ್ಯಧಿಕ ಮತ ಬಂದಿದ್ದರೆ, ಒಂದೇ ಹೆಸರು ಕಳಿಸಲಾಗುತ್ತದೆ. ಇಬ್ಬರು ಆಕಾಂಕ್ಷಿಗಳಿಗೆ ಮತಗಳು ಸಮಬಲವಾಗಿದ್ದರೆ, ಎರಡೂ ಹೆಸರುಗಳನ್ನು ಕಳುಹಿಸಲಾಗುತ್ತದೆ.

ನಗರದ ಹೊರ ವಲಯದ ರೆಸಾರ್ಟ್‌ವೊಂದರಲ್ಲಿ (ಏ.1 ಮತ್ತು 2) ಶನಿವಾರ ಮತ್ತು ಭಾನುವಾರ ನಡೆಯುವ ಜಿಲ್ಲಾ ಕೋರ್ ಕಮಿಟಿಗಳ ಸಭೆಯಲ್ಲಿ ಸಂಗ್ರಹಿತ ಮತವನ್ನು ವಿಶ್ಲೇಷಿಸಿ, ಪಟ್ಟಿಯನ್ನು ತಯಾರಿಸಲಾಗುತ್ತದೆ. ಏ. 4 ಮತ್ತು 5 ರಂದು ನಡೆಯುವ ರಾಜ್ಯ ಪ್ರಮುಖರ ಸಮಿತಿ ಸಭೆಯಲ್ಲಿ ಚರ್ಚಿಸಿ ಅಂತಿಮ ಪಟ್ಟಿ ಸಿದ್ಧಪಡಿಸಲಾಗುತ್ತದೆ.

ಏ.7 ರಂದು ದೆಹಲಿಯಲ್ಲಿ ಸಂಸದೀಯ ಮಂಡಳಿ ಸಭೆ ನಡೆಯಲಿದ್ದು, ಅಲ್ಲಿ ಪಟ್ಟಿಯನ್ನು ಅಂತಿಮಗೊಳಿಸಲಾಗುತ್ತದೆ. ಒಂದೇ ಪಟ್ಟಿಯಲ್ಲಿ ಎಲ್ಲ ಅಭ್ಯರ್ಥಿಗಳ ಹೆಸರೂ ಪ್ರಕಟವಾಗಲಿದೆ ಎಂದೂ ಮೂಲಗಳು ಹೇಳಿವೆ.

ಕಾಂಗ್ರೆಸ್‌ಗೆ 39 ಕ್ಷೇತ್ರ ಕಗ್ಗಂಟು

ಒಂದನೇ ಪುಟದಿಂದ...

ತೀವ್ರ ಪೈಪೋಟಿ ಇರುವ ಕೆಲವು ಕ್ಷೇತ್ರಗಳಲ್ಲಿ 2018ರ ವಿಧಾನಸಭಾ ಚುನಾವಣೆಯಲ್ಲಿ ಅಭ್ಯರ್ಥಿಗಳಾಗಿದ್ದವರಿಗೇ ಟಿಕೆಟ್ ನೀಡುವಂತೆ ಶಿಫಾರಸು ಮಾಡುವ ನಿರ್ಧಾರಕ್ಕೆ ಬರಲಾಗಿದೆ. ಟಿಕೆಟ್ ಕೈತಪ್ಪುವ ಭೀತಿಯಲ್ಲಿರುವ ಹಲವರು ಶುಕ್ರವಾರ ಕೂಡ ಪಕ್ಷದ ಪ್ರಮುಖ ನಾಯಕರನ್ನು ಭೇಟಿಮಾಡಿ ಒತ್ತಡ ಹೇರಿದ್ದಾರೆ.

ಏ.4ಕ್ಕೆ ಸಿಇಸಿ ಸಭೆ: 'ಸ್ಕ್ರೀನಿಂಗ್ ಸಮಿತಿ' ಶಿಫಾರಸು ಮಾಡಿರುವ ಪಟ್ಟಿಯನ್ನು ಕಾಂಗ್ರೆಸ್ ಕೇಂದ್ರೀಯ ಚುನಾವಣಾ ಸಮಿತಿ (ಸಿಇಸಿ) ಪರಿಶೀಲಿಸಿ, ಬಳಿಕ ಅಭ್ಯರ್ಥಿಗಳ ಆಯ್ಕೆಪಟ್ಟಿಯನ್ನು ಅಂತಿಮಗೊಳಿಸಲಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಏಪ್ರಿಲ್ 4ರಂದು ದೆಹಲಿಯಲ್ಲಿ ಸಿಇಸಿ ಸಭೆ ನಡೆಯಲಿದೆ.

ಶಾಸಕ ಸ್ಥಾನಕ್ಕೆ ಎ.ಟಿ.ರಾಮಸ್ವಾಮಿ, ಎನ್. ವೈ.ಗೋಪಾಲಕೃಷ್ಣ ರಾಜೀನಾಮೆ

ಒಂದನೇ ಪುಟದಿಂದ...

ರಾಮಸ್ವಾಮಿ ಯಾವ ಪಕ್ಷವನ್ನು ಸೇರುತ್ತೇನೆ ಎಂಬ ಗುಟ್ಟು ಬಿಟ್ಟುಕೊಟ್ಟಿಲ್ಲ. ಅದರೆ, ಅವರು ಕಾಂಗ್ರೆಸ್ ಅಥವಾ ಬಿಜೆಪಿ ಸೇರುವ ಸಾಧ್ಯತೆ ಇದೆ.

ಮನಿ ಪವರ್‌ಗೆ ಬಲಿಯಾದೆ: ರಾಜೀನಾಮೆ ನೀಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ರಾಮಸ್ವಾಮಿ, 'ನಾನು ಜೆಡಿಎಸ್ ಬಿಡಲಿಲ್ಲ. ಆದರೆ, ಮನಿ ಪವರ್ ಮುಂದೆ ಬಲಿಪಶುವಾದೆ. ಎಲ್ಲ ಪಕ್ಷಗಳಲ್ಲೂ ಲೋಪದೋಷಗಳಿವೆ. ಅಕ್ರಮಗಳನ್ನು ಎತ್ತಿ ಹಿಡಿಯುವುದೇ ತಪ್ಪು, ಶಾಪ ಎನ್ನುವುದಾದರೆ ಅದನ್ನು ಸವಾಲಾಗಿ ಸ್ವೀಕರಿಸುತ್ತೇನೆ' ಎಂದರು.

'ಶಾಸಕ ಸ್ಥಾನಕ್ಕೆ ಸಂತೋಷದಿಂದ ರಾಜೀನಾಮೆ ನೀಡಿದ್ದೇನೆ. ಸಭಾಧ್ಯಕ್ಷ ಕಾಗೇರಿಯವರು ಬೆಂಗಳೂರಿಗೆ ಬಂದ ಬಳಿಕ ರಾಜೀನಾಮೆ ಅಂಗೀಕಾರ ಮಾಡುವಂತೆ ಕೋರುತ್ತೇನೆ. ಶಾಸಕನಾಗಿ ಕೆಲಸ ಮಾಡಲು ಅವಕಾಶ ಕೊಟ್ಟಿದ್ದಕ್ಕೆ ಜೆಡಿಎಸ್ ನಾಯಕರಿಗೆ ಧನ್ಯವಾದ ಸಲ್ಲಿಸುತ್ತೇನೆ. ಇವತ್ತೇ ಶಾಸಕರ ಕೊಠಡಿಯನ್ನೂ ಬಿಟ್ಟುಕೊಡುತ್ತೇನೆ. ಎಲ್ಲ ಪಕ್ಷಗಳ ಜತೆಗೂ ಬಾಂಧವ್ಯ ಚೆನ್ನಾಗಿಯೇ ಇದೆ. ನನ್ನ ರಾಜಕೀಯ ವಿರೋಧಿಗಳಿಗೂ ಒಳ್ಳೆಯದಾಗಲಿ' ಎಂದು ಅವರು ಹೇಳಿದರು.

ಸಚಿವ ಸ್ಥಾನ ಸಿಗದ ನೋವು:ಎನ್.ವೈ

ಸುದ್ದಿಗಾರರ ಜತೆ ಮಾತನಾಡಿದ ಎನ್. ವೈ.ಗೋಪಾಲಕೃಷ್ಣ , 'ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ನನ್ನನ್ನು ಡೆಪ್ಯುಟಿ ಸ್ಪೀಕರ್ ಆಗಿ ಮಾಡಲಾಗಿತ್ತು. ಈ ವಿಚಾರವಾಗಿ ಧರ್ಮಸಿಂಗ್ ಅವರನ್ನು ಈಗಲೂ ನೆನಪಿಸಿಕೊಳ್ಳುತ್ತೇನೆ. ಎರಡು- ಮೂರು ಸಾರಿ ಗೆದ್ದವರಿಗೆ ಸಚಿವ ಸ್ಥಾನ ನೀಡುತ್ತಾರೆ. ಆದರೆ ನಾನು ಆರು ಬಾರಿ ಗೆದ್ದಿದ್ದರೂ ನನಗೇನೂ ಕೊಟ್ಟಿಲ್ಲ. ಈ ಹಿನ್ನೆಲೆಯಲ್ಲಿ ನನಗೆ ನೋವಿದೆ. ಇವರೂ ಕೊಡಲಿಲ್ಲ, ಅವರೂ ಕೊಡಲಿಲ್ಲ' ಎಂದು ನೋವು ತೋಡಿಕೊಂಡರು.

ಶಿಕಾರಿಪುರದಿಂದಲೇ ವಿಜಯೇಂದ್ರ ಸ್ಪರ್ಧೆ: ಯಡಿಯೂರಪ್ಪ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಪುತ್ರ ವಿಜಯೇಂದ್ರ ಅವರು ಮೈಸೂರಿನ ವರುಣಾ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ. ಶಿಕಾರಿಪುರದಿಂದಲೇ ಸ್ಪರ್ಧಿಸುತ್ತಾರೆ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಶುಕ್ರವಾರ ಬೆಳಿಗ್ಗೆ ಮೈಸೂರಿಗೆ ತೆರಳುವುದಕ್ಕೆ ಮುನ್ನ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ವರುಣಾ ಕ್ಷೇತ್ರದಿಂದ ವಿಜಯೇಂದ್ರ ಸ್ಪರ್ಧಿಸಬೇಕು ಎಂಬ ಒತ್ತಡ ಇದೆ. ಏನೇ ಒತ್ತಡ ಇದ್ದರೂ ಅವರು ಶಿಕಾರಿಪುರದಿಂದಲೇ ಸ್ಪರ್ಧಿಸುತ್ತಾರೆ. ಅಲ್ಲಿಂದಲೇ ಸ್ಪರ್ಧಿಸಬೇಕು ಎಂದು ಈ ಹಿಂದೆಯೇ ವಿಜಯೇಂದ್ರಗೂ ಹೇಳಿದ್ದೇನೆ. ಶಿಕಾರಿಪುರಕ್ಕೆ ಟಿಕೆಟ್ ನೀಡುವಂತೆ ಪಕ್ಷದ ವರಿಷ್ಠರಿಗೂ ಮನವಿ ಮಾಡುತ್ತೇನೆ' ಎಂದರು.

> **ತಮ್ಮನ್ನು ದೇಶಕ್ಕೆ ಪರಿಚಯಿಸಿದ ಶಿಕಾರಿಪುರ ಜನರ ಅಭಿಪ್ರಾಯದಂತೆ ಅಲ್ಲಿಯೇ ಸ್ಪರ್ಧಿಸುವಂತೆ ತಂದೆ ಯಡಿಯೂರಪ್ಪ ತಿಳಿಸಿದ್ದಾರೆ. ಏಪ್ರಿಲ್ 3ರಿಂದ ಮತ್ತೆ ಪ್ರಚಾರ ಆರಂಭಿಸಲಿದ್ದೇನೆ**
> **ಬಿ.ವೈ. ವಿಜಯೇಂದ್ರ,** ಉಪಾಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ವರುಣಾದಲ್ಲಿ ಟಿಕೆಟ್ ಘೋಷಿಸಿದ ಬೆನ್ನಲ್ಲೇ ವಿಜಯೇಂದ್ರ ಅವರ ಹೆಸರು ಮುನ್ನೆಲೆಗೆ ಬಂದಿತ್ತು. 2018ರಲ್ಲಿ ವಿಜಯೇಂದ್ರ ವರುಣಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದರು.

ಆದರೆ, ಬಿಜೆಪಿ ವರುಣಾ ಸೇರಿದಂತೆ ಎಲ್ಲೂ ಟಿಕೆಟ್ ನೀಡಿರಲಿಲ್ಲ. ಆ ಸಂದರ್ಭದಲ್ಲಿ ವರುಣಾದಿಂದ ಸ್ಪರ್ಧಿಸಬೇಕು ಎಂಬ ಒತ್ತಡ ಸ್ಥಳೀಯವಾಗಿ ಪಕ್ಷದ ಕಾರ್ಯಕರ್ತರಿಂದಲೂ ಕೇಳಿ ಬಂದಿತ್ತು.

ನಲಪಾಡ್ ವಿರುದ್ಧ ಪ್ರಕರಣ ದಾಖಲು

ಚಿಕ್ಕಮಗಳೂರು: ದ್ವೇಷ ಭಾಷಣ ಮಾಡಿದ ಆರೋಪದ ಮೇರೆಗೆ ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಮೊಹಮದ್ ಹ್ಯಾರಿಸ್ ನಲಪಾಡ್ ವಿರುದ್ಧ ಸಖರಾಯಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಮಾರ್ಚ್ 23ರಂದು ನಡೆದ ಕಾರ್ಯಕ್ರಮದಲ್ಲಿ ನಲಪಾಡ್ ಅವರು ದ್ವೇಷ ಭಾಷಣ ಮಾಡಿದ್ದಾರೆ ಎಂದು ಬಿಜೆಪಿ ಕಾರ್ಯಕರ್ತ ಕಡೂರು ತಾಲ್ಲೂಕು ಹಸ್ತಿನಾಪುರದ ಎಚ್.ಬಿ.ಪ್ರದೀಪ್ ನಾಯಕ್ ಸಖರಾಯಪಟ್ಟಣ ದೂರು ನೀಡಿದ್ದರು. ಆದರೆ, ಪೊಲೀಸರು ಎಫ್‌ಐಆರ್ ದಾಖಲಿಸಿಲ್ಲ ಎಂದು ಕೋರ್ಟ್ ಮೆಟ್ಟಿಲೇರಿದ್ದರು. ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಕಡೂರು ಜೆಎಂಎಫ್‌ಸಿ ನ್ಯಾಯಾಲಯ ಆದೇಶ ನೀಡಿತ್ತು ಎಂದು ಪ್ರದೀಪ್ ಪರ ವಕೀಲ ರಾಜಣ್ಣ ತಿಳಿಸಿದರು.

ನಲಪಾಡ್ ಅವರು 'ಗಾಂಧಿ ಹೈ- ಸಾವರ್ಕರ್ ನಹಿ' ಎಂಬ ಕಾರ್ಯಕ್ರಮದಲ್ಲಿ ದ್ವೇಷ ಭಾಷಣ ಮಾಡಿದ್ದಾರೆ. 'ಮೋದಿ ಸರ್ ನೇಮ್ ಇರುವವರು ಏಕೆ ಕಳ್ಳರಾಗಿರುತ್ತಾರೆ' ಎಂದು ಹೇಳಿ ಶಿಕ್ಷೆಗೆ ಗುರಿಯಾಗಿರುವ ರಾಹುಲ್ ಗಾಂಧಿ ಅವರ ಆ ಹೇಳಿಕೆಯನ್ನೇ ನಲಪಾಡ್ ಹೇಳಿದ್ದಾರೆ. ಅಲ್ಲದೇ ತನ್ನ ವಿರುದ್ಧ ಪ್ರಕರಣ ದಾಖಲಿಸಲಿ ನೋಡೋಣ ಎಂದೂ ಸವಾಲು ಹಾಕಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ರಾಜ್ಯದ 6 ಕಡೆ ಬಿಜೆಪಿ ಮೀಡಿಯಾ ವಿಭಾಗ ಕಚೇರಿ

ಮಂಗಳೂರು: ಚುನಾವಣೆ ಹಿನ್ನೆಲೆಯಲ್ಲಿ ಮಂಗಳೂರು, ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಕಲಬುರಗಿ, ಬೆಳಗಾವಿಯಲ್ಲಿ ಬಿಜೆಪಿ ಮೀಡಿಯಾ ವಿಭಾಗ ಕಚೇರಿ ಕಾರ್ಯನಿರ್ವಹಿಸಲಿವೆ. ಪ್ರತಿ ವಿಭಾಗ ಕಾರ್ಯಾಲಯದಲ್ಲಿ ಚುನಾವಣೆ ಮುಗಿಯುವ ತನಕ ಪಕ್ಷದ ಒಬ್ಬರು ರಾಷ್ಟ್ರೀಯ ವಕ್ತಾರರು ಮತ್ತು ರಾಜ್ಯ ಘಟಕದ ವಕ್ತಾರರು ಲಭ್ಯರಿರುತ್ತಾರೆ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ವಕ್ತಾರ ಎಂ.ಜಿ. ಮಹೇಶ ತಿಳಿಸಿದ್ದಾರೆ.

ಶಿಕ್ಷಣ ಸಂಸ್ಥೆಗಳಲ್ಲಿ ಬೋಧನಾ ಕಾರ್ಯಗಳಿಗೆ ಅಡಚಣೆ

ಬೋಧಕರಿಗೆ ಚುನಾವಣಾ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಕಾರ್ಯಕ್ಕೆ ಶಿಕ್ಷಕರು, ಉಪನ್ಯಾಸಕರನ್ನು ಅಧಿಕ ಸಂಖ್ಯೆಯಲ್ಲಿ ನೇಮಕ ಮಾಡಿಕೊಂಡಿದ್ದು, ಎಂಜಿನಿಯರಿಂಗ್ ಕಾಲೇಜುಗಳು ಸೇರಿದಂತೆ ಹಲವು ಶಿಕ್ಷಣ ಸಂಸ್ಥೆಗಳಲ್ಲಿ ಬೋಧನಾ ಕಾರ್ಯಗಳಿಗೆ ಅಡಚಣೆಯಾಗಿದೆ.

ರಾಜ್ಯದಲ್ಲಿ ಸರ್ಕಾರದ 14 ಕಾಲೇಜು ಸೇರಿ 208 ಎಂಜಿನಿಯರಿಂಗ್ ಕಾಲೇಜುಗಳಿವೆ. 2.65 ಲಕ್ಷ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಈ ಬಾರಿ ಎಂಜಿನಿಯರಿಂಗ್ ಕಾಲೇಜುಗಳ ಉಪನ್ಯಾಸಕರನ್ನು ಅಧಿಕ ಸಂಖ್ಯೆಯಲ್ಲಿ ಚುನಾವಣಾ ಕಾರ್ಯಕ್ಕೆ ನಿಯೋಜಿಸಲಾಗಿದೆ. ಹಾಗಾಗಿ, ಬೆಸ ಸಂಖ್ಯೆಯ ನಾಲ್ಕು (1,3,5,7) ಸೆಮಿಸ್ಟರ್‌ನ ತರಗತಿಗಳು ಸುಸೂತ್ರವಾಗಿ ನಡೆಯದೇ ವಿದ್ಯಾರ್ಥಿಗಳ ಕಲಿಕೆಗೆ ತೊಂದರೆಯಾಗಿದೆ.

'ಬೆಂಗಳೂರಿನ ಪ್ರತಿಷ್ಠಿತ ಎಂಜಿನಿಯರಿಂಗ್ ಕಾಲೇಜಿನಲ್ಲಿ ಏಳನೇ ಸೆಮಿಸ್ಟರ್ ಓದುತ್ತಿರುವೆ. ಕಾಲೇಜಿನಲ್ಲಿ 65 ಉಪನ್ಯಾಸಕರು ಇದ್ದಾರೆ. ಅವರಲ್ಲಿ 58 ಉಪನ್ಯಾಸಕರು ಚುನಾವಣಾ ಕಾರ್ಯಕ್ಕೆ ನಿಯೋಜನೆಗೊಂಡಿದ್ದಾರೆ. ಒಂದು ದಿನವೂ ಸರಿಯಾಗಿ ಪಾಠಗಳು ನಡೆಯುತ್ತಿಲ್ಲ. ಕೋವಿಡ್ ಸಮಯದಲ್ಲಿ ಎರಡು ಸೆಮಿಸ್ಟರ್‌ನ ತರಗತಿಗಳು ಸಂಪೂರ್ಣ ನಷ್ಟವಾಗಿದ್ದವು. ಆ ತರಗತಿಗಳನ್ನು ಇಂದಿಗೂ ಸರಿದೂಗಿಸಲು ಸಾಧ್ಯವಾಗಿಲ್ಲ. ಈಗ ಮತ್ತೆ ತರಗತಿಗಳಿಲ್ಲದ ಸ್ಥಿತಿ ಎದುರಿಸುತ್ತಿದ್ದೇವೆ' ಎಂದು ವಿದ್ಯಾರ್ಥಿ ಆಶಿಕ್ ರಾಜ್ ಬೇಸರ ತೋಡಿಕೊಂಡರು.

ರಾಜ್ಯದಲ್ಲಿ 430 ಪದವಿ ಕಾಲೇಜುಗಳಿದ್ದು, ಕಾಯಂ ಅಧ್ಯಾಪಕರನ್ನು ಚುನಾವಣಾ ಕಾರ್ಯಕ್ಕೆ ನಿಯೋಜಿಸಲಾಗಿದೆ. ಇವಿಎಂ ಯಂತ್ರಗಳ ತಪಾಸಣೆ, ಚೆಕ್‌ಪೋಸ್ಟ್ ನಿಗಾ ಮತ್ತಿತರ ಕೆಲಸಗಳಲ್ಲಿ ನಿಯೋಜನೆಗೊಂಡ ಅಧ್ಯಾಪಕರನ್ನು ಬಳಸಿಕೊಳ್ಳಲಾಗುತ್ತಿದೆ. ಕೆಲವರು ಸೆಮಿಸ್ಟರ್‌ಗಳ ಮೌಲ್ಯಮಾಪನ ಕಾರ್ಯದಲ್ಲಿ ತೊಡಗಿದ್ದಾರೆ. ಉಳಿದ ಶೇ 20ರಷ್ಟು ಅಧ್ಯಾಪಕರು ಕಾಲೇಜುಗಳಿಗೆ ಹಾಜರಾದರೂ, ನಿಯಮಿತವಾಗಿ ತರಗತಿಗಳು ನಡೆಯದೇ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ.

ಚುನಾವಣಾ ಕಾರ್ಯಕ್ಕೆ ನಿಯೋಜನೆಗೊಂಡಿರುವ ಪ್ರೌಢಶಾಲಾ ಶಿಕ್ಷಕರು ಎಸ್ಸೆಸ್ಸೆಲ್ಸಿ ಪರೀಕ್ಷಾ ಕಾರ್ಯವನ್ನೂ ನಿರ್ವಹಿಸುತ್ತಿದ್ದಾರೆ. ಪರೀಕ್ಷೆ ಮುಗಿದ ನಂತರ ಚುನಾವಣಾ ಕಾರ್ಯಕ್ಕೆ ತೆರಳುತ್ತಿದ್ದಾರೆ.

ಪಿಯು ಮೌಲ್ಯಮಾಪನ ವಿಳಂಬ ಸಾಧ್ಯತೆ

ದ್ವಿತೀಯ ಪಿಯು ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಏ.5ರಿಂದ ಆರಂಭಿಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ಯೋಜಿಸಿದೆ. ಉಪನ್ಯಾಸಕರು ಚುನಾವಣಾ ಕೆಲಸಗಳಿಗೆ ನಿಯೋಜಿತವಾಗಿರುವ ಕಾರಣ ಮೌಲ್ಯಮಾಪನ ವಿಳಂಬವಾಗುವ ಸಾಧ್ಯತೆ ಇದೆ.

'ಶೇ 30ರಷ್ಟು ಉಪನ್ಯಾಸಕರು ಚುನಾವಣಾ ಕಾರ್ಯಕ್ಕೆ ನಿಯೋಜಿತರಾಗಿದ್ದಾರೆ. 23 ಸಾವಿರ ಉಪನ್ಯಾಸಕರನ್ನು ಮೌಲ್ಯಮಾಪನಕ್ಕೆ ಬಳಸಿಕೊಳ್ಳಲಾಗುತ್ತಿದೆ. ಖಾಸಗಿ ಅನುದಾನರಹಿತ ಕಾಲೇಜುಗಳ ಉಪನ್ಯಾಸಕರನ್ನು ಬಳಸಿಕೊಂಡು ಮೌಲ್ಯಮಾಪನ ಕಾರ್ಯ ನಿಗದಿತ ಅವಧಿಯ ಒಳಗೆ ಪೂರ್ಣಗೊಳಿಸಲಾಗುವುದು' ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ಅಧಿಕಾರಿಗಳು ಪ್ರತಿಕ್ರಿಯಿಸಿದರು.

₹6.44 ಕೋಟಿ ಮೌಲ್ಯದ 17 ಕೆ.ಜಿ. ಚಿನ್ನ ವಶ

ಚಿಕ್ಕಮಗಳೂರು: ಜಿಲ್ಲೆಯ ತರೀಕೆರೆ ತಾಲ್ಲೂಕಿನ ಎಂ.ಸಿ.ಹಳ್ಳಿ ಚೆಕ್‌ಪೋಸ್ಟ್ ಸಿಬ್ಬಂದಿ ಶುಕ್ರವಾರ ಲಾಜಿಸ್ಟಿಕ್ ವಾಹನ ತಪಾಸಣೆ ನಡೆಸಿದಾಗ ಅಂದಾಜು ₹6.44 ಕೋಟಿ ಮೌಲ್ಯದ 17 ಕೆ.ಜಿ. ಚಿನ್ನ ಪತ್ತೆಯಾಗಿದೆ.

'ಸಿಕ್ವೆಲ್ ಸಂಸ್ಥೆಯ ಲಾಜಿಸ್ಟಿಕ್ ವಾಹನದಲ್ಲಿ ಚಿನ್ನಾಭರಣ ಸಿಕ್ಕಿದೆ. ಸೂಕ್ತದಾಖಲೆ ಇಲ್ಲದೆ ಚಿನ್ನಾಭರಣ ಒಯ್ಯಲಾಗುತ್ತಿತ್ತು, ಅದನ್ನು ವಶಪಡಿಸಿಕೊಂಡಿದ್ದೇವೆ' ಎಂದು ಪೊಲೀಸರು ತಿಳಿಸಿದ್ದಾರೆ.

₹1.40 ಕೋಟಿ ನಗದು ವಶ: (ಶಿವಮೊಗ್ಗ) ಬ್ಯಾಂಕ್ ಎಟಿಎಂಗಳಿಗೆ ಹಣ ತುಂಬುವ ವಾಹನದಲ್ಲಿ ದಾಖಲೆಗಳಿಲ್ಲದೇ ಸಾಗಣೆ ಮಾಡುತ್ತಿದ್ದ ₹ 1.40 ಕೋಟಿ ನಗದನ್ನು ಸಮೀಪದ ಹರಕೆರೆಯ ಚೆಕ್‌ಪೋಸ್ಟ್‌ನಲ್ಲಿ ತುಂಗಾ ನಗರ ಠಾಣೆ ಪೊಲೀಸರು ಶುಕ್ರವಾರ ವಶಪಡಿಸಿಕೊಳ್ಳಲಾಗಿದೆ.

ಸೆಲೆಬ್ರಿಟಿ ಮಾತು

'ಯೋಗ್ಯ ವ್ಯಕ್ತಿಗಳು ಆಯ್ಕೆಯಾಗಲಿ'

ಸುಧಾರಾಣಿ, ನಟಿ

ಮತದಾನ ಪ್ರಜಾತಂತ್ರದ ಹಬ್ಬ. ನಮ್ಮ ಆಡಳಿತದ ಚುಕ್ಕಾಣಿ ಅರ್ಹರ ಕೈಯಲ್ಲಿರಬೇಕು. ಆ ಜವಾಬ್ದಾರಿಯ ಕೆಲಸ ಮತ್ತೆ ಬಂದಿದೆ. 18 ವರ್ಷ ಮೇಲ್ಪಟ್ಟ ಎಲ್ಲ ಅರ್ಹ ಮತದಾರರು ತಪ್ಪದೆ ಮತ ಚಲಾಯಿಸಿ. ಅಂದಹಾಗೆ ನಿಮ್ಮ ಆಯ್ಕೆ ಪ್ರಾಮಾಣಿಕವಾಗಿರಲಿ. ಯಾವುದೇ ಆಮಿಷಗಳಿಗೆ ಒಳಗಾಗದೆ ಯೋಗ್ಯ ವ್ಯಕ್ತಿಯನ್ನು ಆಯ್ಕೆ ಮಾಡಿ. ನಮ್ಮ ಪ್ರಜಾತಂತ್ರ ಬಲಪಡಿಸಿ. ನಿಮ್ಮ ಸ್ನೇಹಿತರು, ಬಂಧುಗಳು ಎಲ್ಲರಿಗೂ ಮತದಾನ ಮಾಡಲು ಪ್ರೇರೇಪಿಸಿ. ನಾನು ಮತದಾನ ಮಾಡುತ್ತೇನೆ. ಬನ್ನಿ ನೀವೂ ಮತದಾನ ಮಾಡಿ.

ಗಾಳಿ ಮಾತು

ಬಿಎಸ್‌ವೈ ಆಪ್ತರ ನಡೆ ನಿಗೂಢ?



ಅಧಿಕಾರದಿಂದ ಇಳಿಸಿದರೂ ಬಿಜೆಪಿಯಲ್ಲಿ, ರಾಜ್ಯಕಾರಣದಲ್ಲಿ ತಮ್ಮದೇ ಕಿಮ್ಮತ್ತು ಹೊಂದಿರುವ 'ಶಿಕಾರಿ'ಪುರದ 'ರಾಜಾಹುಲಿ' ಬಿ.ಎಸ್. ಯಡಿಯೂರಪ್ಪನವರು ಈ ಚುನಾವಣೆಯಲ್ಲಿ ಆಡುವ ಆಟ ಸಖತ್ ಮಜವಾಗಿರುತ್ತದೆ ಎಂಬ ಮಾತುಗಳು ಹರಿದಾಡುತ್ತಲೇ ಇವೆ.

ಸಿದ್ದರಾಮಯ್ಯ ವಿರುದ್ಧ ವರುಣಾದಿಂದ ಬಿ.ವೈ. ವಿಜಯೇಂದ್ರ ಅವರನ್ನು ವರಿಷ್ಠರು ಕಣಕ್ಕೆ ಇಳಿಸಬಹುದು ಎಂದು ಸುದ್ದಿ ಹರಿದಾಡಿಸಿದ್ದೇ ತಡ, ಪ್ರಭಾವಿ ನಾಯಕನ ವಿರುದ್ಧ ತಮ್ಮ 'ಪ್ರಭಾವಿ' ಮಗ ಸ್ಪರ್ಧಿಸುವುದೇ ಇಲ್ಲ ಎಂದು ಬಿಎಸ್‌ವೈ ಹೇಳಿಬಿಟ್ಟರು. ಇದರ ಹಿಂದೆ ಬಲವಾದ ಕಾರಣವೂ ಇದೆ ಎಂಬ ಗುಸುಗುಸು ಎದ್ದಿದೆ.

ಯಡಿಯೂರಪ್ಪ ಆಪ್ತವಲಯದಲ್ಲಿ ಗುರುತಿಸಿಕೊಂಡು ಹಲವರು ಕಾಂಗ್ರೆಸ್ ಕಡೆ ಜಿಗಿದಿದ್ದು, ಕೆಲವರು ಬಿಜೆಪಿಯ ಪ್ರಭಾವಿಗಳ ಎದುರು ಸೆಣಸಲು ಅಣಿಯಾಗುತ್ತಿದ್ದಾರೆ. ಆಪ್ತಬಣದ ನಡೆಯ ಹಿಂದೆ ರಹಸ್ಯ ಅಡಗಿದ್ದು, ಈ ರಹಸ್ಯ ಭೇದಿಸುವುದು ಹೇಗೆ ಎಂದು 'ಚಾಣಕ್ಯ'ರೇ ತಲೆ ಕೆಡಿಸಿಕೊಂಡಿದ್ದಾರಂತೆ. . .

ಮೋಹನ ಲಿಂಬಿಕಾಯಿ ಕಾಂಗ್ರೆಸ್ ಸೇರಿದ್ದು, ಆಯನೂರು ಮಂಜುನಾಥರನ್ನು ಸೆಳೆಯಲು 'ಕೈ' ನಾಯಕರು ತಂತ್ರ ರೂಪಿಸಿದ್ದಾರೆ. ಯಡಿಯೂರಪ್ಪ ನಿಕಟವರ್ತಿಯಾಗಿದ್ದ ರುದ್ರೇಶ್, ರಾಮನಗರ ತೊರೆದು ಚಾಮರಾಜನಗರ ಕಡೆ ಮುಖಮಾಡಿದ್ದೇಕೆ? ಇದೇ ಬಣದಲ್ಲಿದ್ದ ತಮ್ಮಯ್ಯ, ಚಿಕ್ಕಮಗಳೂರಿಗೆ ದೌಡಾಯಿಸಿದ್ದೇಕೋ? ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ಆಪ್ತವರ್ಗದಲ್ಲಿ ಮಂಜುನಾಥ ಕುನ್ನೂರ ಕಾಂಗ್ರೆಸ್ ಅಪ್ಪಿಕೊಂಡಿದ್ದೇಕೆ? ಎಲ್ಲೋ ಏನೋ ನಡೆಯುತ್ತಿದೆಯೇ ಎಂಬ ಕತೆಗಳು ಅಕ್ಕಪಕ್ಕದಲ್ಲೇ ಇರುವ ಯಡಿಯೂರಪ್ಪ ನಿವಾಸ 'ಕಾವೇರಿ' ಹಾಗೂ ಮುಖ್ಯಮಂತ್ರಿ ಕಚೇರಿ 'ಕೃಷ್ಣಾ'ದ ಗೋಡೆಗಳನ್ನು ಅಪ್ಪಳಿಸುತ್ತಿವೆಯಂತಲ್ಲ..!!!

ಜಿಗಿ ನೆಗೆದಾಟ

ಎನ್.ವೈ. ಗೋಪಾಲಕೃಷ್ಣ

ಕಾಂಗ್ರೆಸ್ → ಬಿಜೆಪಿ → ಕಾಂಗ್ರೆಸ್

ಎ.ಟಿ. ರಾಮಸ್ವಾಮಿ

ಕಾಂಗ್ರೆಸ್ → ಜೆಡಿಎಸ್ → ?

ಮನೋಹರ ತಹಸೀಲ್ದಾರ್

ಕಾಂಗ್ರೆಸ್ → ಜೆಡಿಎಸ್

ಮಲ್ಲಿಕಾರ್ಜುನ ಖೂಬಾ

ಜೆಡಿಎಸ್ → ಬಿಜೆಪಿ → ಜೆಡಿಎಸ್

ದೊಡ್ಡಬಳ್ಳಾಪುರ ತಾಲ್ಲೂಕಿನ ಹೊಸಹುಡ್ಯ ಸಮೀಪ ತೆರೆದಿರುವ ಚೆಕ್‌ಪೋಸ್ಟ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕಾರನ್ನು ಚುನಾವಣಾ ಸಿಬ್ಬಂದಿ ತಪಾಸಣೆ ನಡೆಸಿದರು

ಸಿ.ಎಂ ಬೊಮ್ಮಾಯಿ ಕಾರು ತಪಾಸಣೆ

ದೊಡ್ಡಬಳ್ಳಾಪುರ: ತಾಲ್ಲೂಕಿನ ಘಾಟಿ ಸುಬ್ರಹ್ಮಣ್ಯ ದೇವಾಲಯಕ್ಕೆ ಶುಕ್ರವಾರ ಕುಟುಂಬ ಸಮೇತ ತೆರಳುತ್ತಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕಾರನ್ನು ತಾಲ್ಲೂಕಿನ ಗಡಿ ಭಾಗದ ಹೊಸಹುಡ್ಯ ಸಮೀಪ ತೆರೆದಿರುವ ಚೆಕ್‌ಪೋಸ್ಟ್‌ನಲ್ಲಿ ಚುನಾವಣಾ ಸಿಬ್ಬಂದಿ ತಡೆದು ತಪಾಸಣೆ ನಡೆಸಿದರು.

ಬಳಿಕ ಬಸವರಾಜ ಬೊಮ್ಮಾಯಿ ದಂಪತಿ ಸುಬ್ರಹ್ಮಣ್ಯ ಸ್ವಾಮಿ ದೇಗುಲಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ಮುಖ್ಯಮಂತ್ರಿಯಾದ ಬಳಿಕ ಘಾಟಿ ಕ್ಷೇತ್ರಕ್ಕೆ ಅವರ ಎರಡನೇ ಭೇಟಿ ಇದಾಗಿದೆ. ವಿಧಾನಸಭಾ ಚುನಾವಣೆ ಘೋಷಣೆಯಾದ ಬಳಿಕ ತಾಲ್ಲೂಕಿನಲ್ಲಿ ತಪಾಸಣಾ ಕಾರ್ಯವನ್ನು ಚುರುಕುಗೊಳಿಸಲಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದೆ. ವರುಣಾ ಕ್ಷೇತ್ರ ಸೇರಿದಂತೆ ಯಾರು ಎಲ್ಲಿ ಸ್ಪರ್ಧಿಸಬೇಕು ಎನ್ನುವುದನ್ನು ಪಕ್ಷದ ಚುನಾವಣೆ ನಿರ್ವಹಣಾ ಸಮಿತಿ ನಿರ್ಧರಿಸಲಿದೆ. ಸಮಿತಿಯ ಮುಖ್ಯಸ್ಥರಾಗಿರುವ ಬಿ.ಎಸ್. ಯಡಿಯೂರಪ್ಪ ಅವರು ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದ್ದಾರೆ' ಎಂದು ಪ್ರತಿಕ್ರಿಯಿಸಿದರು.

ಮತ ಆಮಿಷ, ಸಿಕ್ಕಿದ್ದೇನು?

₹ 1 ಕೋಟಿ
ಕಲಬುರಗಿ ಜಿಲ್ಲೆ ಫರಹತಾಬಾದ್ ಚೆಕ್‌ಪೋಸ್ಟ್

₹ 1.39 ಕೋಟಿ
ಶಿವಮೊಗ್ಗ ನಗರದ ಹರಕೆರೆ

17 ಕೆ.ಜಿ. ಚಿನ್ನ
ಚಿಕ್ಕಮಗಳೂರು ಜಿಲ್ಲೆ ಎಂ.ಸಿ ಹಳ್ಳಿ ಚೆಕ್‌ಪೋಸ್ಟ್

18.165 ಕೆ.ಜಿ. ಬೆಳ್ಳಿ ವಸ್ತುಗಳು
ಬೆಂಗಳೂರು ನಗರದ ಹಲಸೂರು

ವರುಣಾಗೆ ವಂದನೆ...

ಮೈಸೂರಿಗೆ ಶುಕ್ರವಾರ ಬಂದಿದ್ದ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಬೆಂಬಲಿಗರು ಮತ್ತು ಕಾರ್ಯಕರ್ತರು ಬರಮಾಡಿಕೊಂಡು, ಜಿಲ್ಲೆಯ ವರುಣಾ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಯುವಂತೆ ಒತ್ತಾಯಿಸಿದರು

–ಪ್ರಜಾವಾಣಿ ಚಿತ್ರ

ಕುಟುಂಬದ ಆಡುಂಬೊಲ ಯುವಶಕ್ತಿಗಿಲ್ಲ ಬಲ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಅಡ್ಡದಾರಿಯಲ್ಲಿ ಗಳಿಸಿದ ಅಪಾರ ದುಡ್ಡು, ಬೆನ್ನಿಗೆ ನಿಲ್ಲುವ ಜಾತಿಕಾರಣ, ಅಪ್ಪನ ಬೆಳೆಸಿದ ವಂಶ ರಾಜಕಾರಣದ ಆಲದಮರದ ಕಡು ನೆರಳು ರಾಜಕೀಯವನ್ನು ವ್ಯಾಪಿಸಿದೆ. ಈ ಪ್ರಭಾವಳಿಗಳಲ್ಲದೇ ರಾಜಕೀಯ ಏಣಿ ಏರಿ ವಿಧಾನಸೌಧದ ಮೆಟ್ಟಿಲು ಹತ್ತುವುದೇ ಕಷ್ಟಕರವಾಗಿರುವ ಈ ದಿನಗಳಲ್ಲಿ ರಾಜಕೀಯ ವಂಶವಾಹಿ ಇಲ್ಲದ ಬಿಸಿರಕ್ತದ ಹೊಸ ತಲೆಮಾರು ಚುನಾವಣೆಯಲ್ಲಿ ಸ್ಪರ್ಧಿಸುವುದೇ ದುಸ್ಸಾಧ್ಯ ಎಂಬ ವಾತಾವರಣ ನಿರ್ಮಾಣವಾಗಿದೆ.

'ಹೊಸ ನೆತ್ತರು ಉಕ್ಕಿ ಆರಿಹೋಗುವ ಮುನ್ನ. . ಕಟ್ಟುವೆವು ನಾವು ಹೊಸ ನಾಡೊಂದು ರಸದ ಬೀಡೊಂದನು' ಎಂಬ ಕವಿ ಮಾತು ಬದಿಗೆ ಸರಿದಿದ್ದು, ರಾಜಕೀಯವಾಗಿ ಬೆಳೆದ ನಿಂತ ಕುಟುಂಬದವರಿಗಷ್ಟೇ ಚುನಾವಣೆ ಆಡುಂಬೊಲವಾಗಿದೆ. ಕುಟುಂಬ ರಾಜಕಾರಣ ಎಲ್ಲೆ ಮೀರಿ, ಯುವರಕ್ತ ಹರಿದು ಬರುವುದೇ ವಿರಳ ಎಂಬ ಸ್ಥಿತಿ ಬಂದೊದಗಿದೆ.

ಕೆಲವರಿಗೆ ರಾಜಕೀಯ ಕ್ಷೇತ್ರ ಪ್ರವೇಶಿಸಲು ಆಸಕ್ತಿ ಇದೆ. ಜಾತಿ, ಹಣ, ಕುಟುಂಬ ರಾಜಕಾರಣ ಹಾಗೂ ಮಾರ್ಗ ಯಾವುದಾದರೂ ಇರಲಿ ಗೆಲುವೇ ಮುಖ್ಯ, ಅಧಿಕಾರದ ಗದ್ದುಗೆ ಏರಲೇಬೇಕು ಎನ್ನುವ ರಾಜಕೀಯ ಪಕ್ಷಗಳ ಧೋರಣೆಗಳು ಅಡ್ಡಿಯಾಗಿವೆ. ಹಲವು ಯವಕ, ಯುವತಿಯರು ಹತ್ತುಹಲವು ವರ್ಷಗಳು ರಾಜಕೀಯ ಪಕ್ಷಗಳಲ್ಲಿ ಗುರುತಿಸಿಕೊಂಡು ಪಕ್ಷದ ಬೆಳವಣಿಗೆಗೆ ಶ್ರಮಿಸಿದ್ದರೂ, ಸಣ್ಣಪುಟ್ಟ ಸ್ಥಾನಮಾನಗಳಲ್ಲೇ ತೃಪ್ತಿಪಟ್ಟುಕೊಂಡಿದ್ದಾರೆ. ಇಂತಹ ವ್ಯವಸ್ಥೆಯಿಂದ ಭ್ರಮನಿರಸನಗೊಂಡಿರುವ ಯುವಜನರು ರಾಜಕೀಯ ಕ್ಷೇತ್ರದಿಂದಲೇ ವಿಮುಖರಾಗುತ್ತಿದ್ದಾರೆ.

'ರಾಷ್ಟ್ರೀಯ ಪಕ್ಷವೊಂದರ ಕೊಂಡಿಯಾಗಿರುವ ವಿದ್ಯಾರ್ಥಿ ಸಂಘಟನೆಯಲ್ಲಿ ಎರಡು ದಶಕ ಕೆಲಸ ಮಾಡಿರುವೆ. ನೂರಾರು ಹೋರಾಟದ ಮೂಲಕ ನಾಯಕನಾಗಿ ಬೆಳೆದೆ. ವಿದ್ಯಾರ್ಥಿಗಳ ಮತಬ್ಯಾಂಕ್ ಅನ್ನು ಮಾತೃಪಕ್ಷಕ್ಕೆ ದೊರಕಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಹೋರಾಟ, ಸಂಘಟನೆ, ಸಂಘರ್ಷದ ಫಲವಾಗಿ ಹತ್ತುಹಲವು ಪ್ರಕರಣಗಳು ದಾಖಲಾದರೂ ಎದೆಗುಂದದೆ ನ್ಯಾಯಾಲಯಗಳಿಗೆ ಅಲೆದೆ. ಅದೊಂದು ದಿನ ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ನೀಡಬೇಕು ಎನ್ನುವ ವಿಚಾರ ಮುಂದಿಟ್ಟೆ. ಟಿಕೆಟ್ ಕೊಡಲು ನಿರಾಕರಿಸಿದರು. ಪಕ್ಷ ಅಧಿಕಾರಕ್ಕೆ ಬಂದರೆ ಸೂಕ್ತ ಸ್ಥಾನಮಾನ ನೀಡುವ ಭರವಸೆ ನೀಡಿದರು. ಇಂದಿಗೂ ನೀಡುತ್ತಲೇ ಇದ್ದಾರೆ' ಎನ್ನುತ್ತಾರೆ ರಾಷ್ಟ್ರೀಯ ಪಕ್ಷವೊಂದರ ವಿದ್ಯಾರ್ಥಿ ಸಂಘಟನೆಯಲ್ಲಿ ಉನ್ನತ ಸ್ಥಾನಕ್ಕೇರಿದ ವಿದ್ಯಾರ್ಥಿ ನಾಯಕ.

'ನೀನು ಬಯಸುತ್ತಿರುವ ಕ್ಷೇತ್ರದಲ್ಲಿ ನಿನ್ನ ಜಾತಿಯ ಜನರ ಸಂಖ್ಯೆ ಅತ್ಯಂತ ಕಡಿಮೆ. ಅಲ್ಲದೇ, ಎದುರಾಳಿ ಪಕ್ಷದ ಹಾಲಿ ಶಾಸಕರ ಹಣ ಬಲ ಎದುರಿಸುವ ಸಾಮರ್ಥ್ಯವೂ ನಿನಗಿಲ್ಲ. ನಮ್ಮ ಪಕ್ಷದಿಂದ ಹಿಂದೆ ಗೆಲುವು ಕಂಡಿದ್ದ ಮಾಜಿ ಸಚಿವರ ಪುತ್ರನಿಗೆ ಟಿಕೆಟ್ ನೀಡಬೇಕು ಎನ್ನುವುದು ಹೈಕಮಾಂಡ್ ನಿರ್ಧಾರ' ಎನ್ನುವುದು ನಮ್ಮ ಪಕ್ಷದ ನಾಯಕರು ಹೇಳಿದ ಮಾತು ಎಂದು ಟಿಕೆಟ್ ನಿರಾಕರಣೆಯ ಕಾರಣಗಳನ್ನು ಅವರು ಬಿಚ್ಚಿಟ್ಟರು.

ಅದೊಂದು ಕಾಲವಿತ್ತು. ಚಳವಳಿಗಳಲ್ಲಿ ಗುರುತಿಸಿಕೊಂಡವರು, ವಿದ್ಯಾರ್ಥಿ ಸಂಘಟನೆಯಲ್ಲಿ ತೊಡಗಿಸಿಕೊಂಡವರು. ಸಮಾಜ ಸೇವೆಗೆ ಜೀವನ ಮುಡಿಪಾಗಿಟ್ಟವರು ರಾಜಕೀಯದಲ್ಲೂ ಬಹುಬೇಗ ನಾಯಕರಾಗಿ ಬೆಳೆಯುತ್ತಿದ್ದರು. ಸಮಾಜವಾದಿ ಚಳವಳಿಯಲ್ಲಿ ಗುರುತಿಸಿಕೊಂಡಿದ್ದ ಶಾಂತವೇರಿ ಗೋಪಾಲಗೌಡರು ತಮ್ಮ 29ನೇ ವಯಸ್ಸಿಗೆ ವಿಧಾನಸಭೆ ಪ್ರವೇಶಿಸಿದ್ದರು. ಬಡತನದಲ್ಲೇ ಹುಟ್ಟಿ ಬೆಳೆದಿದ್ದ ಅವರಿಗೆ ಜನರೇ ಚುನಾವಣಾ ಪ್ರಚಾರದ ವೆಚ್ಚಕ್ಕೆ ಹಣ ನೀಡುತ್ತಿದ್ದರು. ರಾಜಕೀಯ ಹಿನ್ನೆಲೆ ಇಲ್ಲದ ಎಸ್.ಬಂಗಾರಪ್ಪ, ಬಿ.ಎಸ್.ಯಡಿಯೂರಪ್ಪ, ಕಾಗೋಡು ತಿಮ್ಮಪ್ಪ, ಕೆ.ಎಸ್.ಈಶ್ವರಪ್ಪ, ಸಿದ್ದರಾಮಯ್ಯ, ಎಚ್.ಡಿ.ದೇವೇಗೌಡ, ಪಿ.ಜಿ.ಆರ್.ಸಿಂಧ್ಯ ಸೇರಿದಂತೆ ನೂರಾರು ಯುವಕರು ಅಂದು 'ಗಾಡ್ ಫಾದರ್'ಗಳ ನೆರವಿಲ್ಲದೆ ತತ್ವ, ಸಿದ್ಧಾಂತ, ಹೋರಾಟ, ಸಂಘಟನೆಗಳ ಆಧಾರದಲ್ಲೇ ಅಂದು ವಿಧಾನಸಭೆ ಪ್ರವೇಶಿಸಿದ್ದರು.

ಕಾಂಗ್ರೆಸ್, ಬಿಜೆಪಿ, ಜನತಾ ಪರಿವಾರ ಸೇರಿದಂತೆ ಹಲವು ಪಕ್ಷಗಳ ಬಹುತೇಕ ಮುಖಂಡರು ಅಂತಹ ಅವಕಾಶಗಳ ಫಲವಾಗಿಯೇ ರಾಜಕಾರಣದ ಅಧಿಕಾರದ ಗದ್ದುಗೆ ಏರಿದ್ದಾರೆ. ಆದರೆ, ಇಂದು ಪರಿಸ್ಥಿತಿ ಬದಲಾಗಿದೆ. ತಮ್ಮ ಸಾಮರ್ಥ್ಯದಿಂದ ಮೇಲೆ ಬಂದವರು ತಮ್ಮ ಮಕ್ಕಳು, ಕುಟುಂಬದ ಸದಸ್ಯರನ್ನೇ ಭವಿಷ್ಯದ ರಾಜಕಾರಣಗಳನ್ನಾಗಿ ರೂಪಿಸುತ್ತಿದ್ದಾರೆ. 75 ವರ್ಷಗಳಾದವರು ಅಧಿಕಾರ ರಾಜಕಾರಣದಿಂದ ಹಿಂದೆ ಸರಿದು ಪಕ್ಷ ಸಂಘಟನೆಗೆ ತೊಡಗಿಸಿಕೊಳ್ಳಬೇಕು ಎಂಬ ಪಕ್ಷವೊಂದರ ನಿಲುವಿನ ಬಳಿಕ ಬಹುತೇಕ ರಾಜಕಾರಣಿಗಳು ತಮ್ಮ ಮಕ್ಕಳಿಗೆ ಟಿಕೆಟ್ ಕೊಡಿಸಲು ಪೈಪೋಟಿಗೆ ಇಳಿದಿದ್ದಾರೆ.

ಎಲ್ಲ ರಾಜಕೀಯ ಪಕ್ಷಗಳು ಪಕ್ಷದ ತತ್ವ, ಸಿದ್ಧಾಂತ, ವ್ಯಕ್ತಿಯ ಚಾರಿತ್ರ್ಯ, ಉತ್ತಮ ಗುಣಗಳಿಗಿಂತ ಅವರ ಜಾತಿ, ಹಣ ಬಲ ಆಧಾರದಲ್ಲೇ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಿವೆ.

'ಕಾಂಗ್ರೆಸ್ ಸೇರಿದಂತೆ ಅಂದು ಅಸ್ತಿತ್ವದಲ್ಲಿದ್ದ ಎಲ್ಲ ಪಕ್ಷಗಳಿಗೂ ನಿರ್ದಿಷ್ಟ ಮತ ಬ್ಯಾಂಕ್ ಇತ್ತು. ಪಕ್ಷದ ವರಿಷ್ಠರು ಸೂಚಿಸಿದ ವ್ಯಕ್ತಿ ಆ ಪಕ್ಷದ ಅಭ್ಯರ್ಥಿಯಾಗಿ ಚುನಾವಣೆಗೆ ಸ್ಪರ್ಧಿಸುತ್ತಿದ್ದರು. ತಮ್ಮ ವೈಯಕ್ತಿಕ ವರ್ಚಸ್ಸು, ಪಕ್ಷದ ಬಲದ ಮೇಲೆ ಗೆದ್ದು ಬರುತ್ತಿದ್ದರು. ಇಂದು ಪಕ್ಷಗಳ ಮತ ಬ್ಯಾಂಕ್ ಕ್ಷೀಣಿಸಿದೆ. ಪಕ್ಷಕ್ಕಿಂತ ಜಾತಿವಾರು ಪ್ರಾಬಲ್ಯ, ಹಣಬಲ ಚುನಾವಣೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತಿವೆ. ಅವರನ್ನು ಎದುರಿಸಲು ಉಳಿದ ಪಕ್ಷಗಳು ಅಂತಹ ಸಾಮರ್ಥ್ಯದ ಅಭ್ಯರ್ಥಿಗಳನ್ನೇ ಹುಡುಕುತ್ತವೆ. ಒಟ್ಟಿನಲ್ಲಿ ಅಧಿಕಾರದ ಗದ್ದುಗೆ ತಮ್ಮ ಪಕ್ಷಕ್ಕೆ ಸಿಗಬೇಕು ಎನ್ನುವುದೇ ಎಲ್ಲ ಪಕ್ಷಗಳ ಧೋರಣೆ. ಹಾಗಾಗಿ, ಯುವ ಸಮೂಹ ರಾಜಕೀಯ ಅವಕಾಶಗಳಿಂದ ವಂಚಿತವಾಗುತ್ತಿದೆ' ಎನ್ನುತ್ತಾರೆ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎನ್. ರಮೇಶ್.

ಪಕ್ಷದ ಬೆಳವಣಿಗೆಗೆ ಪೂರಕವಾಗಿ ದುಡಿದ ಯುವ ನಾಯಕರನ್ನು ನಿಗಮ, ಮಂಡಳಿ, ಪ್ರಾಧಿಕಾರ, ಸೆನೆಟ್, ಸಿಂಡಿಕೇಟ್‌ಗಳಿಗೆ ಸದಸ್ಯರನ್ನಾಗಿ ನೇಮಿಸುವ ಮೂಲಕ ಪಕ್ಷಗಳು ಸಂತೃಪ್ತಿ ಪಡಿಸುತ್ತಿವೆ. ಅಷ್ಟಕ್ಕೆ ಯುವ ಸಮೂಹವೂ ತೃಪ್ತಿ ಕಾಣುತ್ತಿದೆ ಎನ್ನುತ್ತಾರೆ ಕೆಪಿಎಸ್‌ಸಿ ಮಾಜಿ ಸದಸ್ಯರೊಬ್ಬರು.

'ನಾನು ರಾಜ್ಯಶಾಸ್ತ್ರ ಸ್ನಾತಕೋತ್ತರ ಪದವೀಧರ. ನಮ್ಮ ಸಂವಿಧಾನ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ತಿಳಿದಿದ್ದೇನೆ. ರಾಜಕೀಯ ಪ್ರವೇಶಿಸಿ, ಜನಪ್ರತಿನಿಧಿಯಾಗುವ ಬಯಕೆ ಇತ್ತು. ವಾಸ್ತವದ ಬೆಳವಣಿಗೆಗಳನ್ನು ನೋಡಿದರೆ ರಾಜಕೀಯದ ಸಹವಾಸವೇ ಬೇಡ ಎನಿಸುತ್ತದೆ. ಹಣ ಖರ್ಚು ಮಾಡದೇ ಯಾವ ಚುನಾವಣೆಯೂ ಅಸಾಧ್ಯ ಎನ್ನುವುದು ಮನವರಿಕೆಯಾಗಿದೆ. ಯುವಕರಾದರೂ ಎಲ್ಲೋ ಒಬ್ಬೊಬ್ಬರು ಕಾಣಬಹುದು, ಆದರೆ, ಯುವತಿಯರಂತೂ ನೇಪಥ್ಯಕ್ಕೆ ಸರಿಯುತ್ತಿದ್ದಾರೆ' ಎನ್ನುತ್ತಾರೆ ಧಾರವಾಡದ ತೇಜಸ್‌ಕುಮಾರ್.

ಶಾಸನಸಭೆ ಪ್ರವೇಶಿಸಿದ ಸಾಮಾನ್ಯರು

ಕಳೆದ ಒಂದು ದಶಕದಲ್ಲಿ ರಾಜ್ಯ ರಾಜಕಾರಣದಲ್ಲಿ ಹಣಬಲ ಇಲ್ಲದ ಕೆಲ ಯುವಕರು ಶಾಸನಸಭೆ ಪ್ರವೇಶಿಸಿದ್ದಾರೆ. ಪೊಲೀಸ್ ಅಧಿಕಾರಿಯಾಗಿದ್ದ ಮೂಲತಃ ಶಿವಮೊಗ್ಗ ಜಿಲ್ಲೆಯ ಪಿ.ರಾಜೀವ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಕುಡಚಿ ಕ್ಷೇತ್ರದಿಂದ ಸ್ಪರ್ಧಿಸಿ ಶಾಸಕರಾಗಿದ್ದಾರೆ. ಪತ್ರಕರ್ತರಾಗಿದ್ದ ಪ್ರತಾಪಸಿಂಹ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಸಂಸದರಾಗಿದ್ದಾರೆ. ಎಬಿವಿಪಿಯಲ್ಲಿ ಗುರುತಿಸಿಕೊಂಡಿದ್ದ ತೇಜಸ್ವಿಸೂರ್ಯ ಬೆಂಗಳೂರು ದಕ್ಷಿಣದ ಸಂಸದರಾದರು. ಎಂಜಿನಿಯರ್ ಆಗಿದ್ದ ಜನಾರ್ದನ ಸ್ವಾಮಿ ಹಿಂದೆ ಚಿತ್ರದುರ್ಗ ಸಂಸದರಾಗಿದ್ದರು. ರಿಜ್ವಾನ್ ಅರ್ಷದ್ ಶಿವಾಜಿನಗರದಿಂದ ಸ್ಪರ್ಧಿಸಿ ವಿಧಾನಸಭೆ ಪ್ರವೇಶಿಸಿದ್ದಾರೆ. ಪರಿಶಿಷ್ಟ ಜಾತಿ, ಪಂಗಡಗಳಿಗೆ ಮೀಸಲಾದ ಕ್ಷೇತ್ರಗಳಲ್ಲಿ ಸ್ವಲ್ಪಮಟ್ಟಿಗೆ ಕುಟುಂಬ ರಾಜಕಾರಣ ಹೊರತಾದ ಪ್ರತಿನಿಧಿಗಳು ಆಯ್ಕೆಯಾಗುತ್ತಿದ್ದಾರೆ.

ಪ್ರಜಾ ಪತ್ರ

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಈಗ ನಡೆಯುತ್ತಿರುವ ಚುನಾವಣೆಯ ವಿಧಾನದ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಓಡಾಡಿಸಿ ಹೊಡೆಯಿರಿ ಸಚಿವ ಮುನಿರತ್ನ ಕರೆ

ಬೆಂಗಳೂರು: 'ಕ್ಷೇತ್ರದಲ್ಲಿ ಇತರೆ ಪಕ್ಷದ ಅಭ್ಯರ್ಥಿಗಳ ಪರ ಮತ ಕೇಳಿಕೊಂಡು ಬಂದರೆ ಅವರನ್ನು ಓಡಾಡಿಸಿಕೊಂಡು ಹೊಡೆಯಿರಿ' ಎಂದು ತೋಟಗಾರಿಕಾ ಸಚಿವ ಮುನಿರತ್ನ ತಾವು ಪ್ರತಿನಿಧಿಸುವ ರಾಜರಾಜೇಶ್ವರಿ ನಗರದ ತಮಿಳು ಕಾಲೊನಿಯಲ್ಲಿ ತಮ್ಮ ಅನುಯಾಯಿಗಳಿಗೆ ಕರೆ ನೀಡಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ನೀವು ಅವರನ್ನು ಹೊಡೆಯಿರಿ, ಮಿಕ್ಕಿದ್ದು ನಾನು ನೋಡಿಕೊಳ್ಳುತ್ತೇನೆ. ಹೇಗೆ ಹೊಡೆಯಬೇಕು ಅಂದ್ರೆ ಅವರು ತಿರುಗಿಯೂ ನೋಡಬಾರದು. ಯಾರ್‍ಯಾರು ಹೊಡಿಯುತ್ತೀರಾ ಕೈ ಎತ್ತಿ' ಎಂದು ತಮಿಳಿನಲ್ಲೇ ಅಲ್ಲಿನ ಜನರನ್ನು ಪ್ರಚೋದಿಸಿದ್ದಾರೆ.

ಸಂಸದ ಡಿ.ಕೆ.ಸುರೇಶ್ ಖಂಡನೆ

ಸಚಿವ ಮುನಿರತ್ನ ಅವರು ಆರ್.ಆರ್. ನಗರ ಕ್ಷೇತ್ರದಲ್ಲಿ ತಮಿಳಿಗರನ್ನು ಕನ್ನಡಿಗರ ವಿರುದ್ಧ ಎತ್ತಿಕಟ್ಟಿ ದ್ವೇಷ ಹುಟ್ಟುಹಾಕುತ್ತಿದ್ದಾರೆ. ಯಾರೇ ಮತ ಕೇಳಿಕೊಂಡು ಬಂದರೂ ಅವರನ್ನು ಹೊಡೆಯಿರಿ, ಸಾಯಿಸಿರಿ ಎಂದು ಕನ್ನಡಿಗ ಹಾಗೂ ಒಕ್ಕಲಿಗ ಹೆಣ್ಣುಮಗಳ ವಿರುದ್ಧ ಪ್ರಚೋದನೆ ನೀಡುತ್ತಿದ್ದಾರೆ. ಚುನಾವಣೆ ಗೆಲ್ಲಲು ಕ್ಷೇತ್ರದಲ್ಲಿ ಭಯದ ವಾತಾವರಣ ಸೃಷ್ಟಿಸುತ್ತಿದ್ದಾರೆ ಎಂದು ಸಂಸದ ಡಿ.ಕೆ.ಸುರೇಶ್ ದೂರಿದ್ದಾರೆ.

ವಿರೋಧ ಪಕ್ಷಗಳು ಕೆಲಸ ಮಾಡಲು ಬಿಜೆಪಿ ಬಿಡುತ್ತಿಲ್ಲ. 2013ರಲ್ಲಿ ಮುನಿರತ್ನ ವಿರುದ್ಧ ಅಧಿಕಾರಿಗಳ ಮೇಲೆ ಹಲ್ಲೆ ಪ್ರಕರಣ ದಾಖಲಾಗಿತ್ತು. ಈಗ ಈ ಚುನಾವಣೆಯಲ್ಲೂ ಭಯದ ವಾತಾವರಣ ನಿರ್ಮಾಣ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಕಮಿಷನರ್‌ಗೆ ದೂರು: 'ಸಚಿವ ಮುನಿರತ್ನ ಅವರು ಪ್ರಚೋದನಾಕಾರಿ ಭಾಷಣ ಮಾಡಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ಒತ್ತಾಯಿಸಿ ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಚ್. ಕುಸುಮಾ ಅವರು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಅವರಿಗೆ ಗುರುವಾರ ದೂರು ನೀಡಿದ್ದಾರೆ. ಆದರೆ, ಯಾವುದೇ ಎಫ್‌ಐಆರ್ ದಾಖಲಾಗಿಲ್ಲ.

ಆಪ್: 60 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಬೆಂಗಳೂರು: ರಾಜ್ಯ ವಿಧಾನಸಭಾ ಚುನಾವಣೆಗೆ ಆಮ್ ಆದ್ಮಿ ಪಾರ್ಟಿ 60 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದೆ.

ರಾಜ್ಯ ಚುನಾವಣಾ ಉಸ್ತುವಾರಿ ದಿಲೀಪ್ ಪಾಂಡೆ ಹಾಗೂ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಅವರು ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದರು.

ಕಳೆದ ವಾರ 80 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಲಾಗಿತ್ತು.

ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದ ಪೃಥ್ವಿ ರೆಡ್ಡಿ, ಎರಡೂ ಪಟ್ಟಿಯಲ್ಲಿ ಒಟ್ಟು 14 ರೈತರಿಗೆ, 11 ಮಹಿಳೆಯರಿಗೆ, 18 ವಕೀಲರು, 6 ವೈದ್ಯರು, 23 ಎಂಜಿನಿಯರ್‌ಗಳು ಹಾಗೂ ನಾಲ್ವರು ಐಟಿ ವೃತ್ತಿಪರರು ಹಾಗೂ ಐವರು ಡಾಕ್ಟರೇಟ್ ಪಡೆದವರು ಇದ್ದಾರೆ. 29 ಜನರು ಸ್ನಾತಕೋತ್ತರ ಪದವೀಧರರು, 68 ಪದವೀಧರರು, 6 ಎಂಬಿಎ ಪದವೀಧರರನ್ನು ಈ ಪಟ್ಟಿಗಳು ಒಳಗೊಂಡಿವೆ' ಎಂದು ತಿಳಿಸಿದರು.

ಚಾಟಿಯೇಟು



ಪ್ರಧಾನಿ ನರೇಂದ್ರ ಮೋದಿ ಅವರು ಮಾತೆತ್ತಿದರೆ 'ನಾ ಖಾವೂಂಗಾ, ನಾ ಖಾನೇದೂಂಗ' ಎಂದು ಹೇಳುತ್ತಾರೆ. ಆದರೆ ಅವರ ಪ್ರವಾಸದ ಹೆಸರಲ್ಲಿ ರಾಜ್ಯ ಬಿಜೆಪಿ ನಾಯಕರು ಮೋದಿ ಟೂರ್ ಡೀಲ್ ನಡೆಸಿದ್ದಾರೆ. ಇದರಲ್ಲಿ ಶೇ 40 ಅಲ್ಲ, ಶೇ 300ರಷ್ಟು ಲೂಟಿ ಮಾಡಿದ್ದಾರೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಆವರಣದಲ್ಲಿ ನಿರ್ಮಿಸಿದ ಕೆಂಪೇಗೌಡರ ಪ್ರತಿಮೆ ವೆಚ್ಚ ₹ 59 ಕೋಟಿ. ಉದ್ಘಾಟನೆ ಕಾರ್ಯಕ್ರಮಕ್ಕೆ ಸರ್ಕಾರ ₹ 30 ಕೋಟಿ ಖರ್ಚು ಮಾಡಿ, ಲೂಟಿ ಹೊಡೆಯಲಾಗಿದೆ

ಡಿ.ಕೆ. ಸುರೇಶ್, ಕಾಂಗ್ರೆಸ್ ಸಂಸದ

ಯುವ ಮತ

ಸಮಾನ ದೃಷ್ಟಿಯ ನಾಯಕರಿರಲಿ

ಪರಿಸರ, ವಿಜ್ಞಾನ, ತಂತ್ರಜ್ಞಾನದ ಬಗ್ಗೆ ಮಾಹಿತಿ ಇರುವ ವಿಚಾರವಂತ ನಾಯಕ ನಮಗೆ ಬೇಕು. ಬಡವರು ಹಾಗೂ ಮಧ್ಯಮ ವರ್ಗಗಳ ಬೆಳವಣಿಗೆಗೆ ಒತ್ತು ನೀಡುವವರು, ಉಚಿತ ಉಡುಗೊರೆಗಳ ಬದಲು ಉದ್ಯೋಗ ಸೃಷ್ಟಿಸಿ ಜನರ ಆರ್ಥಿಕ ಮತ್ತು ಆರೋಗ್ಯದ ಹಿತದೃಷ್ಟಿಯಿಂದ ಕೆಲಸ ಮಾಡುವವರು ಬೇಕು. ಭ್ರಷ್ಟ, ಸ್ವಾರ್ಥ ಹಾಗೂ ಜಾತಿ ರಾಜಕಾರಣ ಮಾಡದೇ ಎಲ್ಲರನ್ನೂ ಸಮಾನ ದೃಷ್ಟಿಯಿಂದ ನೋಡುವವರಾಗಿರಬೇಕು. ಕಲೆ, ಕ್ರೀಡೆ, ಶಿಕ್ಷಣ, ಸಂಸ್ಕೃತಿ, ಭಾಷೆ ಮತ್ತು ಮಹಿಳೆಯರ ಶಿಕ್ಷಣ ಹಾಗೂ ಸಬಲೀಕರಣಕ್ಕೆ ಪುಷ್ಟಿ ನೀಡುವ ಜನಪ್ರತಿನಿಧಿಗಳು ಬೇಕು.

ರಕ್ಷಿತಾ ಎಸ್.ಎನ್, ದೇವರಾಜ್ ಅರಸು ನಗರ, ಸಾಗರ

ಸಾಮಾನ್ಯ ಪ್ರಜೆಗೂ ಅವಕಾಶವಿರಲಿ

ಪ್ರಚಲಿತ ರಾಜಕೀಯದ ಬೆಳವಣಿಗೆಗಳನ್ನು ಗಮನಿಸಿದರೆ ನೈಜ ಪ್ರಜಾಪ್ರಭುತ್ವ ಉಳಿದಿದೆಯೇ ಎನಿಸುತ್ತದೆ. ನಮ್ಮ ಸಂವಿಧಾನ ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡಿದ್ದರೂ, ರಾಜಕೀಯ ಅವಕಾಶ ಪಡೆಯುವವರು ಕೆಲವೇ ವರ್ಗಗಳು.

ಜನರನ್ನು ಮೂರ್ಖರನ್ನಾಗಿ ಮಾಡುವ ಈ ವಂಶರಾಜಕಾರಣಕ್ಕೆ ತಿಲಾಂಜಲಿ ಹೇಳಿ ವಿದ್ಯಾವಂತ, ಉತ್ತಮ ಗುಣಗಳ ಕ್ರಿಯಾಶೀಲ ಯುವಕರನ್ನು ರಾಜಕಾರಣಕ್ಕೆ ಕರೆತರುವ ಕೆಲಸ ಎಲ್ಲ ರಾಜಕೀಯ ಪಕ್ಷಗಳು ಮಾಡಬೇಕು. ಸಮಾಜಮುಖಿಯಾದ ಒಬ್ಬ ಸಾಮಾನ್ಯ ಪ್ರಜೆ ಚುನಾವಣಾ ಅಭ್ಯರ್ಥಿಯಾಗಲು ಮುಂದಾದರೆ ಜನರು ಸ್ವಾಗತಿಸಬೇಕು. ಅದಕ್ಕಾಗಿ ಜನರ ಮನಸ್ಥಿತಿ ಮೊದಲು ಬದಲಾಗಬೇಕು.

'ಅಜ್ಜ ಹಳೆಯ ಆಲದ ಮರಕ್ಕೆ ನೇಣುಹಾಕೊಂಡಿದ್ದ ಅದಕ್ಕೆ ನಾನೂ ನೇಣು ಹಾಕಿಕೊಳ್ಳಬೇಕು' ಎಂಬ ಮೂರ್ಖತನ ಬಿಡಬೇಕು. ನಮ್ಮ ಅಜ್ಜಂದಿರನ್ನು ಮೋಸ, ಭ್ರಷ್ಟಾಚಾರದ ಹೆಸರಿನಲ್ಲಿ ನೇಣಿನ ಕುಣಿಕೆಗೆ ದೂಡಿದ ರಾಜಕಾರಣ ಮುಂದೆ ನಮ್ಮನ್ನೂ ಅದೇ ದಾರಿಗೆ ನೂಕುತ್ತದೆ ಎಂಬ ಅರಿವು ಇರಬೇಕು. ಜನರು ಬದಲಾದರೆ ಪ್ರಜಾಪ್ರಭುತ್ವಕ್ಕೆ ಅರ್ಥ ಬರುತ್ತದೆ. ಜಾತಿ, ಹಣ, ಕುಟುಂಬ ರಾಜಕಾರಣ ಧಿಕ್ಕರಿಸಿ, ಉತ್ತಮ ಗುಣವಿರುವ ಸಾಮಾನ್ಯ ಯುವ ನಾಯಕರನ್ನು ಎಲ್ಲರೂ ಆರಿಸೋಣ.

–ಸುನೀತಾ ಪಿ.ಎಸ್. ವಿಜಯಪ್ರಸಾದ, ಆನವಟ್ಟಿ, ಸೊರಬ.

ನಿರಾಸಕ್ತಿ ಏಕೆ?

ರಾಜಕೀಯ ಈಗ ಉದ್ಯಮವಾಗಿ ಬದಲಾಗಿದೆ. ರಾಜಕಾರಣಿಗಳ ಮುಖವಾಡ ಹೊತ್ತ ಬಂಡವಾಳಶಾಹಿಗಳು ಬಂಡವಾಳ ಹೂಡಿ ಲಾಭ ಗಳಿಸುವ ಉಮೇದಿನಲ್ಲಿದ್ದಾರೆ. ಉದ್ಯಮಿಗಳ ಮಕ್ಕಳು ಉದ್ಯಮಿಗಳಾಗುವಂತೆ, ರಾಜಕಾರಣಿಗಳ ಮಕ್ಕಳೇ ರಾಜಕಾರಣಿಗಳಾಗುತ್ತಿದ್ದಾರೆ. ಜನರ ಸೇವೆ ಚುನಾವಣಾ ಭಾಷಣಕ್ಕೆ ಸೀಮಿತವಾಗುತ್ತಿದೆ. ಇದೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿರುವ ಯುವ ಸಮೂಹ ಚುನಾವಣೆ, ರಾಜಕಾರಣದ ಬಗ್ಗೆ ಮುಜುಗರ ಪಡುತ್ತಿದೆ.

ಚುನಾವಣಾ ಸಂದರ್ಭದಲ್ಲಿ ಜನಪ್ರತಿನಿಧಿಗಳು ನೀಡುವ ಭರವಸೆಗಳು, ಟೀಕೆ–ಟಿಪ್ಪಣಿಗಳು ವಿದ್ಯಾವಂತ ಯುವ ಸಮುದಾಯದಲ್ಲಿ ಬೇಸರ ಹುಟ್ಟಿಸಿದೆ. ಅವರು ಬೊಗಳೆ ಮಾತುಗಳ ಮೂಲಕ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ಈ ಬೆಳವಣಿಗೆಗಳು ಚುನಾವಣೆ ಬಗ್ಗೆ ಯುವಜನರಲ್ಲಿ ನಿರಾಸಕ್ತಿ ಉಂಟು ಮಾಡಿದೆ.

ಪಿ. ಪ್ರೇಮ್ ಕುಮಾರ್, ಕಣ್ಣೂರು, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ

ಯುವಜನತೆ ಕರ್ತವ್ಯ ನಿಭಾಯಿಸಲಿ

ಈಚಿನ ದಿನಗಳಲ್ಲಿ ಸಾಮಾಜಿಕ ವ್ಯವಸ್ಥೆ ಸರಿ ಇಲ್ಲದ ಕಾರಣ ಯುವಜನತೆ ಮತ ಚಲಾಯಿಸಲು ನಿರಾಸಕ್ತಿ ತೋರುತ್ತಿದ್ದಾರೆ. ಸಮಾಜದಲ್ಲಿ ಬದಲಾವಣೆ ತರಬೇಕಾದರೆ ಅದು ಯುವಜನತೆಯಿಂದ ಮಾತ್ರ ಸಾಧ್ಯ. ಯುವ ಜನತೆ ಮನಸ್ಸು ಮಾಡಿದರೆ ಉತ್ತಮ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿ ದೇಶದ ಬಲಾವಣೆಗೆ ಕಾರಣವಾಗಬಹುದು. ಹಾಗಾಗಿ ಈ ಸಲ ನಾನು ಒಂದು ನಿರ್ದಿಷ್ಟ ಪಕ್ಷ ಅಂತ ಅಲ್ಲ, ಜನರಿಗೆ ಹಾಗೂ ಯುವಜನತೆಗೆ ಒಳ್ಳೆಯ ಕಾರ್ಯವನ್ನು ಮಾಡುವ ಜನನಾಯಕನಿಗೆ ಮತ ಚಲಾಯಿಸುತ್ತೇನೆ. ನನ್ನ ಕರ್ತವ್ಯ ನಿಭಾಯಿಸುತ್ತೇನೆ. ಯುವಜನತೆ ನನ್ನಂತೆ ತಮ್ಮ ಕರ್ತವ್ಯ ನಿಭಾಯಿಸಲಿ.

ಯುಕ್ತಾ, ವಿದ್ಯಾರ್ಥಿನಿ, ಸಂತ ಅಲೋಶಿಯಸ್ ಕಾಲೇಜು, ಮಂಗಳೂರು

ಜೈಕಾರ ಹಾಕಲು ಸೀಮಿತ

ಇಂದಿನ ಬಹುತೇಕ ಯುವ ಜನತೆ ಶಿಕ್ಷಣ, ಉದ್ಯೋಗದ ಬೆನ್ನು ಹತ್ತಿದ್ದಾರೆ. ಕೆಲವರು ಚುನಾವಣೆಯ ಕಡೆ ಗಮನ ಹರಿಸಿದರೂ ಹೆಚ್ಚಿನ ಪ್ರೋತ್ಸಾಹ ಸಿಗುತ್ತಿಲ್ಲ. ಹೀಗಾಗಿ, ಯುವ ಸಮೂಹ ಕೇವಲ ರಾಜಕೀಯ ಪಕ್ಷಗಳ ಪರವಾಗಿ ಘೋಷಣೆ ಕೂಗಲು, ಮುಖಂಡರಿಗೆ ಜೈಕಾರ ಹಾಕಲು ಸೀಮಿತವಾಗಿದ್ದಾರೆ. ಚುನಾವಣೆ ಮತ್ತು ರಾಜಕೀಯದ ಬಗ್ಗೆ ಅರಿತು, ಸಕ್ರಿಯವಾಗಿ ಪಾಲ್ಗೊಳ್ಳುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಎಲ್ಲಾ ಪಕ್ಷಗಳಿಂದ ಯುವ ಜನತೆಗೆ ಆದ್ಯತೆ ನೀಡಬೇಕು. ಯಾವುದೇ ರಾಜಕೀಯದ ಹಿನ್ನೆಲೆ ಇಲ್ಲದವರನ್ನು ಪರಿಗಣಿಸಬೇಕು.

ಎಸ್. ಕಮಲ, ತುಮಕೂರು.

ವ್ಯವಸ್ಥೆಗೆ ಮಗ್ಗಲು ಮುಳ್ಳು

ರಾಜಕೀಯ ಕ್ಷೇತ್ರ ಇರುವುದು ಹಿರಿತಲೆಗಳಿಗೆ, ಕುಟುಂಬ ರಾಜಕಾರಣಕ್ಕೆ, ಆಯ್ಕೆಯಾದ ವ್ಯಕ್ತಿಯ ಮರುಆಯ್ಕೆಗೆ ಹಾಗೂ ಹಣವಿದ್ದವರಿಗೆ ಮಾತ್ರ ಎನ್ನುವಂತಾಗಿದೆ. ಯುವಕರಿಗೆ ಅಲ್ಲಿ ಅವಕಾಶ ನಿಷಿದ್ಧ ಎನ್ನುವ ಅಘೋಷಿತ ನಿಯಮ ಜಾರಿಗೆ ಬಂದಂತಿದೆ. ಯುವಕರೇ ಹೆಚ್ಚಿರುವ ಭಾರತದಲ್ಲಿ ಯುವ ಜನಪ್ರತಿನಿಧಿಗಳ ಸಂಖ್ಯೆ ಕಡಿಮೆಯಿರುವುದು ವಿಪರ್ಯಾಸ.

ಇಂದಿನ ರಾಜಕಾರಣಿಗಳು ಅಭಿವೃದ್ಧಿ ವಿಷಯದಲ್ಲಿ ಕಚ್ಚಾಡುವುದನ್ನು ಬಿಟ್ಟು, ವೈಯಕ್ತಿಕ ವಿಷಯ ಮುಂದಿಟ್ಟುಕೊಂಡು ಸಮಾಜದ ಸ್ವಾಸ್ಥ್ಯ ಹಾಳುಮಾಡುತ್ತಿದ್ದಾರೆ. ಪಕ್ಷಗಳೂ ಹಣ ಇದ್ದವರಿಗಷ್ಟೇ ಟಿಕೆಟ್ ನೀಡುತ್ತಿರುವುದು ಆತಂಕದ ಸಂಗತಿ. ಪ್ರಜಾಪ್ರಭುತ್ವ ವ್ಯವಸ್ಥೆ ಸದೃಢಗೊಳಿಸಬೇಕೆಂದರೆ, ನಿಸ್ವಾರ್ಥ ಮನೋಭಾವದ ಯುವಕರು ಮುಂದೆ ಬರಬೇಕು. ಪಕ್ಷಗಳು ಅವರಿಗೆ ಟಿಕೆಟ್ ನೀಡಿ ಬೆನ್ನೆಲುಬಾಗಿ ನಿಲ್ಲಬೇಕು. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ರಾಜಕೀಯ ಕ್ಷೇತ್ರ, ಪ್ರಜಾತಂತ್ರ ವ್ಯವಸ್ಥೆಯ ಮಗ್ಗಲು ಮುಳ್ಳಾಗಲಿದೆ.

-ಡಿ.ಆರ್.ರಮ್ಯಾ, ವಿದ್ಯಾರ್ಥಿನಿ, ವಿದ್ಯಾನಗರ, ಹುಬ್ಬಳ್ಳಿ

ಭ್ರಷ್ಟಾಚಾರದಿಂದ ಹಿಂಜರಿಕೆ

ಹೆಚ್ಚಿನ ಯುವ ಜನತೆಗೆ ರಾಜಕೀಯ, ಚುನಾವಣೆಯ ಅರಿವಿಲ್ಲ. ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದರೂ, ಕೇವಲ ಪುಸ್ತಕದ ಹುಳು ಆಗುತ್ತಿದ್ದಾರೆ. ಭ್ರಷ್ಟ ವ್ಯವಸ್ಥೆ ಕಂಡು ರಾಜಕಾರಣದಲ್ಲಿ ಭಾಗಿಯಾಗಲು ಅವರು ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಎಲ್ಲಾ ಸವಾಲುಗಳನ್ನು ಎದುರಿಸಿ ಮುಂದೆ ಬಂದ ಆಸಕ್ತರಿಗೆ ಕುಟುಂಬ ರಾಜಕಾರಣದಿಂದ ಅವಕಾಶಗಳೇ ಸಿಗುತ್ತಿಲ್ಲ.

ಅಭಿಷೇಕ್, ತುಮಕೂರು.

ಸುಭಾಷಿತ

ನಂಬಿ ಅನುಭವಿಸುವುದಕ್ಕಿಂತ ಅನುಭವಿಸಿ ನಂಬುವುದೇ ಒಳ್ಳೆಯದು.

–ಕುವೆಂಪು

ಮುಕ್ತ ಚುನಾವಣೆ ಸಾಧ್ಯವಾಗಿಸುವಲ್ಲಿ ಜನರ ಸಹಭಾಗಿತ್ವವೂ ಅಗತ್ಯ

ಭಾರತೀಯ ಚುನಾವಣಾ ಆಯೋಗವು ಕರ್ನಾಟಕ ವಿಧಾನಸಭೆಯ ಚುನಾವಣೆಗೆ ದಿನಾಂಕವನ್ನು ಪ್ರಕಟಿಸಿದೆ. ಈ ಮೂಲಕ ಚುನಾವಣಾ ಪ್ರಕ್ರಿಯೆಗೆ ಚಾಲನೆ ದೊರೆತಿದೆ. ಮೇ 10ರಂದು ಮತದಾನ ನಡೆದು, ಮೇ 13ರಂದು ಮತ ಎಣಿಕೆ ನಡೆಯಲಿದೆ. ಮುಂದಿನ 40 ದಿನಗಳಲ್ಲಿ ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಚುನಾವಣೆ ಈಗ ಘೋಷಣೆಯಾಗಿದ್ದರೂ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಕೆಲವು ತಿಂಗಳುಗಳಿಂದಲೇ ಚುನಾವಣಾ ಸಿದ್ಧತೆ ನಡೆಸಿದ್ದಾರೆ. ಪ್ರಚಾರದ ಬಿರುಸು ಆರಂಭಗೊಂಡು ಕೆಲವು ತಿಂಗಳುಗಳೇ ಆಗಿವೆ. ನಮ್ಮ ರಾಜಕೀಯ ಪಕ್ಷಗಳು ಮತ್ತು ಹುರಿಯಾಳುಗಳಾಗಲು ಬಯಸಿದವರಲ್ಲಿ ಹಲವರು ಎಷ್ಟು ಲಜ್ಜೆಗೇಡಿಗಳು ಎಂಬುದು ಚುನಾವಣೆ ಘೋಷಣೆಗೆ ಮುನ್ನವೇ ಬಯಲಾಗಿದೆ. ರಾಜ್ಯವನ್ನು ಅಭಿವೃದ್ಧಿಯತ್ತ ಒಯ್ಯುವ ಮುನ್ನೋಟ, ಜನಪರವಾದ ಕಾಳಜಿ, ಶಾಸಕಾಂಗದ ಮಹತ್ವದ ಅರಿವು, ನಾಯಕತ್ವ ಗುಣದ ಮೂಲಕ ಚುನಾವಣೆ ಗೆಲ್ಲುವ ಕುರಿತಂತೆ ಯಾರೂ ಚಿಂತಿಸುತ್ತಿಲ್ಲ. ಸೀರೆ, ಕುಕ್ಕರ್, ಗೋಡೆ ಗಡಿಯಾರ, ಟಿ.ವಿ.ಯಂಥ ವಸ್ತುಗಳನ್ನು ನೀಡಿ ಮತದಾರರಿಗೆ ಆಮಿಷ ಒಡ್ಡುವ ಕೆಲಸ ಎಗ್ಗಿಲ್ಲದೆ ನಡೆದಿದೆ. ಕೆಲವರು ಕಾನೂನು ಜಾರಿ ಅಧಿಕಾರಿಗಳಿಗೆ ಸಿಕ್ಕಿಬಿದ್ದಿದ್ದಾರೆ. ಬಾಡೂಟ, ಮದ್ಯ ಸಮಾರಾಧನೆಯ ಕಾರ್ಯಕ್ರಮ ಏರ್ಪಡಿಸಿ ಮತದಾರರ ಮನಗೆಲ್ಲಲು ಯತ್ನಿಸಿದ ಹಲವರು ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಂಡಿದ್ದಾರೆ. ರಾಜಕಾರಣಿಗಳ ಮಾತು, ಅದಕ್ಕೆ ತಿರುಗೇಟುಗಳೆಲ್ಲ ಅಸಹನೀಯ ಎನ್ನಿಸುವ ಮಟ್ಟಕ್ಕೆ ಹೋಗಿವೆ. ಈಗ, ಮಾದರಿ ನೀತಿ ಸಂಹಿತೆ ಜಾರಿಗೆ ಬಂದಿದೆ. ಹಾಗಾಗಿ, ಪಕ್ಷಗಳು ಮತ್ತು ಅಭ್ಯರ್ಥಿಗಳು ಹೆಚ್ಚು ಎಚ್ಚರದಲ್ಲಿ ಇರಬೇಕಾಗುತ್ತದೆ. ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಏನೇ ಮಾಡಿದರೂ ಸರಿ ಎಂಬ ಮನೋಭಾವ ಇದೆ. ಆದರೆ, ಇದು ಪ್ರಜಾಪ್ರಭುತ್ವವನ್ನು ಅರ್ಥ ಮಾಡಿಕೊಳ್ಳದವರ ಅವಿವೇಕ ಮಾತ್ರ. ವಿಧಾನಸಭೆಗೆ 2018ರಲ್ಲಿ ನಡೆದ ಇಡೀ ಚುನಾವಣಾ ಪ್ರಕ್ರಿಯೆಯಲ್ಲಿ ವಶಕ್ಕೆ ಪಡೆದಷ್ಟು ದಾಖಲೆ ಇಲ್ಲದ ಹಣವನ್ನು ಈಗಾಗಲೇ ವಶಕ್ಕೆ ಪಡೆಯಲಾಗಿದೆ. ಇದು ನಿಜಕ್ಕೂ ಎಚ್ಚರಿಕೆ ಗಂಟೆ.

ರಾಜ್ಯದಲ್ಲಿ ಸಕ್ರಿಯವಾಗಿರುವ ಮೂರೂ ಪ್ರಮುಖ ಪಕ್ಷಗಳಿಗೆ ಈ ಚುನಾವಣೆ ಬಹಳ ಮಹತ್ವದ್ದು

ರಾಜ್ಯದಲ್ಲಿ ಸಕ್ರಿಯವಾಗಿರುವ ಮೂರೂ ಪ್ರಮುಖ ಪಕ್ಷಗಳಿಗೆ ಈ ಚುನಾವಣೆ ಬಹಳ ಮಹತ್ವದ್ದು. ಮರಳಿ ಅಧಿಕಾರಕ್ಕೆ ಬರಲು ಶತಾಯ ಗತಾಯ ಯತ್ನಿಸುತ್ತಿರುವ ಕಾಂಗ್ರೆಸ್‌ಗೆ ಈ ಚುನಾವಣೆ ಇನ್ನೂ ಹೆಚ್ಚು ಮುಖ್ಯವಾಗಿದೆ. ಅಧಿಕಾರ ಉಳಿಸಿಕೊಳ್ಳಲು ಬಿಜೆಪಿ ಯತ್ನಿಸುತ್ತಿದ್ದರೆ, ರಾಜ್ಯ ರಾಜಕಾರಣದಲ್ಲಿ ಪ್ರಸ್ತುತವಾಗಿಯೇ ಇರಬೇಕು ಎಂಬ ಹೆಬ್ಬಯಕೆ ಜೆಡಿಎಸ್‌ಗೆ ಇದೆ. ಲೋಕಸಭೆಗೆ ಮುಂದಿನ ವರ್ಷ ಸಾರ್ವತ್ರಿಕ ಚುನಾವಣೆ ನಡೆಯಲಿದೆ. ಈ ದೃಷ್ಟಿಯಿಂದಲೂ ಕರ್ನಾಟಕದ ಚುನಾವಣೆಯು ಎಲ್ಲ ಪಕ್ಷಗಳಿಗೆ ಮಹತ್ವದ್ದಾಗಿದೆ. ರಾಷ್ಟ್ರ ಮಟ್ಟದಲ್ಲಿ ಬಿಜೆಪಿಯನ್ನು ವಿರೋಧಿಸುವ ಪಕ್ಷಗಳ ನಾಯಕತ್ವ ಸ್ಥಾನವನ್ನು ದೃಢೀಕರಿಸಿಕೊಳ್ಳುವುದಕ್ಕೆ ಕಾಂಗ್ರೆಸ್‌ಗೆ ಕರ್ನಾಟಕದ ಗೆಲುವು ಅನಿವಾರ್ಯ. ಹಾಗೆಯೇ, ದಕ್ಷಿಣದಲ್ಲಿ ಇರುವ ಏಕೈಕ ರಾಜ್ಯವನ್ನು ಬಿಟ್ಟುಕೊಡಲು ಬಿಜೆಪಿಯೂ ಸಿದ್ಧವಿಲ್ಲ. ಸರ್ಕಾರದಲ್ಲಿ ಭಾಗಿಯಾಗಿರುವ ಹಲವರ ಮೇಲೆ ಭ್ರಷ್ಟಾಚಾರದ ಆರೋಪಗಳಿವೆ. ಕಾಮಗಾರಿ ಗುತ್ತಿಗೆಯಲ್ಲಿ ಶೇ 40ರಷ್ಟನ್ನು ಲಂಚದ ರೂಪದಲ್ಲಿ ಕೊಡಬೇಕಾಗುತ್ತದೆ ಎಂಬ ಆರೋಪವನ್ನು ಪ್ರಧಾನಿ ಕಚೇರಿಯವರೆಗೆ ಒಯ್ಯಲಾಗಿದೆ. ಆದರೆ ಯಾವುದೇ ಕ್ರಮ ಜರುಗಿಲ್ಲ. ಇದು ರಾಷ್ಟ್ರ ಮಟ್ಟದಲ್ಲಿ ಚರ್ಚೆಯಾದ ವಿಷಯ. ರಾಜ್ಯ ಸರ್ಕಾರದ ಕಾರ್ಯಕ್ಷಮತೆ, ದಕ್ಷತೆಯು ಕಳಪೆಯಾಗಿತ್ತು ಎಂದೂ ವಿಶ್ಲೇಷಿಸಲಾಗಿದೆ. ಹೀಗಾಗಿ, ಆಡಳಿತ ವಿರೋಧಿ ಅಲೆ ಇದೆ ಎನ್ನುವುದು ವಾಸ್ತವ. ಪ್ರಚಾರಕ್ಕಾಗಿ ಬಿಜೆಪಿ ತನ್ನ ಕೇಂದ್ರದ ನಾಯಕರು ಅದರಲ್ಲೂ ಮುಖ್ಯವಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನೇ ಅವಲಂಬಿಸಿದೆ. ಕಾಂಗ್ರೆಸ್ ಪಕ್ಷದ ಮುಂದೆಯೂ ಹಲವು ಸವಾಲುಗಳು ಇವೆ. ಬಿಜೆಪಿಯ ಸೋಲರಿಯದ ಚುನಾವಣಾ ವ್ಯವಸ್ಥೆಯನ್ನು ಎದುರಿಸುವುದು ಕಾಂಗ್ರೆಸ್ ಮುಂದಿನ ಬಹುದೊಡ್ಡ ಸವಾಲು.

ಚುನಾವಣಾ ಪ್ರಚಾರ ಕಣವು ಎಲ್ಲ ರೀತಿಯ ಅಭಿವ್ಯಕ್ತಿಗಳಿಗೆ ಸಾಕ್ಷಿಯಾಗಿದೆ. ಧರ್ಮ, ಜಾತಿ, ವರ್ಗಗಳ ಆಧಾರದ ಮಾತು ಕೇಳಿಬಂದಿದೆ; ಹಣ, ತೋಳ್ಬಲದ ಪ್ರದರ್ಶನವಾಗಿದೆ; ವೈಯಕ್ತಿಕ ಮಹತ್ವಾಕಾಂಕ್ಷೆ ವ್ಯಕ್ತವಾಗಿದೆ. ಭರವಸೆ ನೀಡಲಾಗಿದೆ, ಆಶಾಭಾವವನ್ನು ಸೃಷ್ಟಿಸಲಾಗಿದೆ; ದ್ವೇಷ ಭಾಷಣದ ಜೊತೆಗೆ ಧ್ರುವೀಕರಣದ ಯತ್ನವೂ ನಡೆದಿದೆ. ಪ್ರದೇಶ, ಜಾತಿ, ಧರ್ಮದ ಆಧಾರದಲ್ಲಿ ಮತ ಕೇಳಲಾಗಿದೆ. ವರ್ತಮಾನದ ವಿಚಾರಗಳಲ್ಲಿ ಮಾತ್ರವಲ್ಲ, ಭೂತ ಮತ್ತು ಭವಿಷ್ಯ ಕುರಿತು ಕೂಡ ಆರೋಪ ಮತ್ತು ಪ್ರತ್ಯಾರೋಪ ಮಾಡಲಾಗಿದೆ. ಪ್ರಚಾರದ ಭರಾಟೆಯಲ್ಲಿ ಅಭಿವ್ಯಕ್ತಿಯಾಗಿರುವ ಎಲ್ಲವನ್ನೂ ಮತದಾರರು ಅಳೆದು ತೂಗಿ ನೋಡಬೇಕು. ರಾಜಕಾರಣಿಗಳು ತಮ್ಮ ಮತದ ಜೊತೆಗೆ ಪರಾರಿ ಆಗುವುದಿಲ್ಲ ಎಂಬುದನ್ನು ಮತದಾರರು ಖಾತರಿಪಡಿಸಿಕೊಳ್ಳಬೇಕು. ಈ ಹಿಂದೆಂದಿಗಿಂತಲೂ ಈಗ ರಾಜಕಾರಣವು ಜನರು ಮತ್ತು ಅವರ ಜೀವನಕ್ಕೆ ಹೆಚ್ಚು ಮುಖ್ಯವಾಗಿದೆ. ಚುನಾವಣೆಯು ಪ್ರಜಾಪ್ರಭುತ್ವವನ್ನು ಅಭಿವ್ಯಕ್ತಿಸುವ ಪರಿಣಾಮಕಾರಿ ಸಾಧನ. ಕರ್ನಾಟಕಕ್ಕೆ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯು ಬೇಕಿದೆ. ಇದನ್ನು ಸಾಧ್ಯವಾಗಿಸುವುದು ಚುನಾವಣಾ ಆಯೋಗದ ಕರ್ತವ್ಯ ಮಾತ್ರವಲ್ಲ, ಜನರ ಕರ್ತವ್ಯವೂ ಹೌದು.

ದಿನದ ಟ್ವೀಟ್

ನಮ್ಮಲ್ಲೂ ಪುನರ್‌ಪರಿಶೀಲನೆಯಾಗಲಿ

ದೇಶದ್ರೋಹಕ್ಕೆ ಸಂಬಂಧಿಸಿದ ಪಾಕಿಸ್ತಾನದ ಕಾನೂನನ್ನು ಅಸಾಂವಿಧಾನಿಕ ಎಂದು ಲಾಹೋರ್ ಹೈಕೋರ್ಟ್ ಹೇಳಿದೆ! ನಮ್ಮ ನ್ಯಾಯಾಲಯಗಳು ನೆರೆಹೊರೆಯವರನ್ನು ಅನುಸರಿಸಬೇಕಾದ ಕಾಲ ಬಂದಿದೆಯೇ? ಕೆಲವು ವಿಚಾರಗಳಲ್ಲಿ, ಪಾಕಿಸ್ತಾನ ಕೂಡ ಒಂದು ಹೆಜ್ಜೆ ಮುಂದಿದೆ!

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ಕಾಂಗ್ರೆಸ್ ನಾಯಕರು, ಶಾಸಕರು ಬೇರೆ ಬೇರೆ ಕಡೆ ಅಲೆದಾಡುತ್ತಿದ್ದಾರೆ. ಕ್ಷೇತ್ರದ ಹುಡುಕಾಟ ನಡೆಸುತ್ತಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಅಭದ್ರತೆ, ಅಸ್ತಿತ್ವಕ್ಕಾಗಿ ಹೋರಾಟ ಎಲ್ಲವೂ ಕಾಂಗ್ರೆಸ್ ಪಕ್ಷದಲ್ಲೇ ಇವೆ. ನಾವು ಖುಷಿಯಿಂದ ರಾಜ್ಯದಾದ್ಯಂತ ಸಂಕಲ್ಪ ಯಾತ್ರೆ ಮುಗಿಸಿದ್ದೇವೆ. ಅದರ ವಿಜಯವನ್ನು ಚುನಾವಣೆಯಲ್ಲೂ ಕಾಣಲಿದ್ದೇವೆ.

ಸುನಿಲ್ ಕುಮಾರ್, ಇಂಧನ ಸಚಿವ

25 ವರ್ಷಗಳ ಹಿಂದೆ

ಬುಧವಾರ, 1-4-1998

● **ಆರ್ಥಿಕ ಸಾರ್ವಭೌಮತ್ವ: ರಾಜಿ ಇಲ್ಲ– ಪ್ರಧಾನಿ**

ನವದೆಹಲಿ, ಮಾರ್ಚ್ 31– ರಾಷ್ಟ್ರದ ಭದ್ರತೆ ಮತ್ತು ಆರ್ಥಿಕ ಸಾರ್ವಭೌಮತ್ವದ ವಿಷಯದಲ್ಲಿ ಯಾವುದೇ ಕಾರಣಕ್ಕೂ ರಾಜಿ ಮಾಡಿಕೊಳ್ಳುವುದಿಲ್ಲ. ಈ ವಿಷಯದಲ್ಲಿ ಬಾಹ್ಯ ಒತ್ತಡಗಳಿಗೆ ಮಣಿಯುವುದಿಲ್ಲ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಇಂದು ಪ್ರಕಟಿಸಿದರು.

ಸಂವಿಧಾನ ಪುನರ್‌ವಿಮರ್ಶೆ ಮಾಡುವಾಗ ಅದರ ಮೂಲ ಸ್ವರೂಪಕ್ಕೆ ಧಕ್ಕೆ ತರಲಾಗುವುದೆಂಬ ಬಗೆಗೆ ಶಂಕೆ ವ್ಯಕ್ತವಾಗಿದೆ. ಅಂತಹ ಶಂಕೆ ಬೇಡ ಎಂದು ಹೇಳಿದರು.

ರಾಷ್ಟ್ರಪತಿ ಅವರ ಭಾಷಣದ ಮೇಲಿನ ಎರಡು ದಿನಗಳ ಚರ್ಚೆಗೆ ಉತ್ತರಿಸಿದ ಅವರು, ತಮಗೆ ಈಗ ಹೊರಿಸಿರುವ ಜವಾಬ್ದಾರಿಯನ್ನು ನಿರ್ವಹಿಸಿದ ಬಳಿಕ ಮುಂದಿನ ಚುನಾವಣೆಯಲ್ಲಿ ತಾವು ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿದರು.

● **ತ್ರಿಪುರಾ: ಆರೋಗ್ಯ ಸಚಿವರ ಕಗ್ಗೊಲೆ**

ಅಗರ್ತಲಾ, ಮಾರ್ಚ್ 31 (ಯುಎನ್ಐ, ಪಿಟಿಐ)– ತ್ರಿಪುರಾ ರಾಜ್ಯದ ಆರೋಗ್ಯ ಸಚಿವ ಬಿಮಲ್ ಸಿನ್ಹಾ ಮತ್ತು ಅವರ ಕಿರಿಯ ಸೋದರ ವಿದ್ಯುತ್ ಅವರನ್ನು ಧಲಾಯಿ ಜಿಲ್ಲೆಯ ಕಮಲಾಪುರದಲ್ಲಿ ಇಂದು ಭೂಗತ ಉಗ್ರಗಾಮಿಗಳು ಕಗ್ಗೊಲೆ ಮಾಡಿದ್ದಾರೆ.

ಬೆಳಿಗ್ಗೆ ಕಮಲಾಪುರ– ಅಂಬಾಸ ರಸ್ತೆಯ ಅಭಂಗ ಪ್ರದೇಶದಲ್ಲಿ ಬಿಮಲ್ ಅವರು ತಮ್ಮ ಸಹೋದರನೊಡನೆ ಭದ್ರತಾ ಪಡೆ ಇಲ್ಲದೆ ಉಗ್ರಗಾಮಿಗಳ ಜತೆ ಸಂಧಾನಕ್ಕೆಂದು ಅರಣ್ಯದ ಕಡೆ ನಡೆದು ಹೋಗುತ್ತಿದ್ದಾಗ ಗುಂಡು ಹಾರಿಸಿ ಕೊಲ್ಲಲಾಗಿದೆ.

50 ವರ್ಷಗಳ ಹಿಂದೆ

ಭಾನುವಾರ, 1-4-1973

● **ಕೇಂದ್ರ ಸರ್ಕಾರಕ್ಕೆ ಮೂರನೇ ವೇತನ ಆಯೋಗದ ವರದಿ ಸಲ್ಲಿಕೆ**

ನವದೆಹಲಿ, ಮಾರ್ಚ್ 31– ಬಹಳ ದಿನಗಳಿಂದ ನಿರೀಕ್ಷಿಸಲಾಗಿದ್ದ ಕೇಂದ್ರ ನೌಕರರ ತೃತೀಯ ವೇತನ ಆಯೋಗದ ವರದಿಯನ್ನು ಅದರ ಅಧ್ಯಕ್ಷ ನ್ಯಾಯಮೂರ್ತಿ ಶ್ರೀ ರಘುವರ್ ದಯಾಳ್ ಅವರು ಇಂದು ಕೇಂದ್ರ ಹಣಕಾಸು ಮಂತ್ರಿ ಶ್ರೀ ವೈ.ಬಿ.ಚವಾಣ್ ಅವರಿಗೆ ಸಲ್ಲಿಸಿದರು.

ಶೇ 5ರಿಂದ ಶೇ 10ರವರೆಗೆ ವೇತನ ಏರಿಕೆ ಮಾಡುವಂತೆ ಆಯೋಗ ಶಿಫಾರಸು ಮಾಡಿದೆ ಎಂದು ಗೊತ್ತಾಗಿದೆ.

200 ರೂಪಾಯಿಗಿಂತ ಕಡಿಮೆ ಸಂಬಳ ಬರುವವರಿಗೆ ಶೇ 10ರಷ್ಟು ಹಾಗೂ 200 ರೂಪಾಯಿಗಿಂತ ಮೇಲ್ಪಟ್ಟು ಸಂಬಳ ಬರುವವರಿಗೆ ಶೇ 5ರಷ್ಟು ವೇತನ ಹೆಚ್ಚಿಸುವಂತೆ ಶಿಫಾರಸು ಮಾಡಲಾಗಿದೆ.

● **ಸದ್ಯಕ್ಕೆ ಅಕ್ಟ್ರಾಯ್ ರದ್ದಿಲ್ಲ**

ಬೆಂಗಳೂರು, ಮಾರ್ಚ್ 31– 15 ಕೋಟಿ ರೂಪಾಯಿಗಳಿಗೆ ಅನ್ಯ ವರಮಾನ ದಾರಿ ತೋರದೇ, ರಾಜ್ಯದಲ್ಲಿ ಆಕ್ಟ್ರಾಯ್ ರದ್ದು ಸಾಧ್ಯವಿಲ್ಲ ಎಂದು ಪೌರಾಡಳಿತ ಮಂತ್ರಿ ಶ್ರೀ ಬಸವಲಿಂಗಪ್ಪನವರು ಇಂದು ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದರು.

‘ಆಕ್ಟ್ರಾಯ್ ತೆಗೆಯಲು ಸಾಧ್ಯವಿಲ್ಲ. ಇದರಲ್ಲಿ ಯಾರಾದರೂ ರಾಜಕೀಯ ಮಾಡಿದರೆ ನಾವು ನೋಡಿಕೊಳ್ಳುತ್ತೇವೆ’ ಎಂದು ಅವರು ತಮ್ಮ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ನೀಡಿದಾಗ ತಿಳಿಸಿದರು.

ಪ್ರತಿಷ್ಠಿತ ಐಐಟಿಗಳಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಇಷ್ಟು ಕಡಿಮೆ ಇರುವುದೇಕೆ?

ಐಐಟಿ ಮತ್ತು ವಿದ್ಯಾರ್ಥಿನಿಯರು

ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

‘ಬೋರ್ಡ್, ಕಾಲೇಜು, ವಿಶ್ವವಿದ್ಯಾಲಯಗಳ ವಿವಿಧ ಪರೀಕ್ಷೆಗಳಲ್ಲಿ ಸಾಮಾನ್ಯವಾಗಿ ವಿದ್ಯಾರ್ಥಿನಿಯರದೇ ಮೇಲುಗೈ. ಆದರೆ ದೇಶದ ಪ್ರತಿಷ್ಠಿತ ಐಐಟಿಗಳಲ್ಲಿ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ವಿದ್ಯಾರ್ಥಿನಿಯರ ಸಂಖ್ಯೆ ಏಕೆ ಇಷ್ಟು ಕಡಿಮೆಯಿದೆ?’ ಇದು 2018ರಲ್ಲಿ ಐಐಟಿ ಖರಗಪುರದ 64ನೆಯ ಪದವಿ ಪ್ರದಾನ ಸಮಾರಂಭದಲ್ಲಿ ಅಂದಿನ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಶಿಕ್ಷಣ ತಜ್ಞರನ್ನು ಕೇಳಿದ ಮುಖ್ಯ ಪ್ರಶ್ನೆ.

ನಮ್ಮ ದೇಶದ ಪ್ರತಿಷ್ಠಿತ ಐಐಟಿಗಳಿಗೆ ಪ್ರವೇಶ ಪಡೆಯಲು ಬಯಸುವ ವಿದ್ಯಾರ್ಥಿಗಳು, ‘ಜಾಯಿಂಟ್ ಎಂಟ್ರೆನ್ಸ್ ಎಕ್ಸಾಮಿನೇಷನ್– ಮೇನ್ ಮತ್ತು ಅಡ್ವಾನ್ಸ್‌ಡ್’ (ಜೆಇಇ) ಎಂಬ ಎರಡು ಹಂತದ ಪ್ರವೇಶ ಪರೀಕ್ಷೆ ಬರೆಯಬೇಕು. ರಾಷ್ಟ್ರಪತಿ ಕೇಳಿದ ಪ್ರಶ್ನೆಯ ಹಿನ್ನೆಲೆಯಲ್ಲಿ, ಒಂದು ವರ್ಷ ಹಿಂದಿನ, ಅಂದರೆ 2017ರ ಈ ಪರೀಕ್ಷೆಯನ್ನು ಪರಿಶೀಲಿಸೋಣ. ಆ ವರ್ಷ ಜೆಇಇ (ಮೇನ್ಸ್) ಮೊದಲ ಹಂತದ ಪರೀಕ್ಷೆಯನ್ನು ಬರೆದ ವಿದ್ಯಾರ್ಥಿಗಳ ಸಂಖ್ಯೆ 12.86 ಲಕ್ಷ. ಇದರಲ್ಲಿ ಯುವಕರ ಪ್ರಮಾಣ ಶೇ 72.2ರಷ್ಟು, ಯುವತಿಯರು ಶೇ 27.8ರಷ್ಟು. ಎರಡನೆಯ ಹಂತದಲ್ಲಿ ಜೆಇಇ (ಅಡ್ವಾನ್ಸ್‌ಡ್) ಪರೀಕ್ಷೆ ಬರೆಯಲು ಆಯ್ಕೆಯಾದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ 2.20 ಲಕ್ಷ. ಇವರಲ್ಲಿ ಗಂಡುಮಕ್ಕಳು ಶೇ 79.2ರಷ್ಟು ಮತ್ತು ಹೆಣ್ಣುಮಕ್ಕಳು ಶೇ 20.8ರಷ್ಟು. ಆ ವರ್ಷ ದೇಶದ 23 ಐಐಟಿಗಳಲ್ಲಿ ಲಭ್ಯವಿದ್ದ ಸೀಟುಗಳ ಸಂಖ್ಯೆ 10,572. ಅಂತಿಮವಾಗಿ ಆಯ್ಕೆಯಾದ ವಿದ್ಯಾರ್ಥಿನಿಯರ ಸಂಖ್ಯೆ 995 ಅಥವಾ ಶೇ 9.4ರಷ್ಟು. ವಿಪರ್ಯಾಸದ ಸಂಗತಿಯೆಂದರೆ, ಈ ರೀತಿ ಆಯ್ಕೆಯಾದ ವಿದ್ಯಾರ್ಥಿನಿಯರಲ್ಲಿ ಅನೇಕರು ಐಐಟಿಗಳಿಗೆ ಸೇರಲೇ ಇಲ್ಲ. 2017ರ ಹಿಂದಿನ ವರ್ಷಗಳ ಕಥೆಯೂ ಸರಿಸುಮಾರು ಇದೇ! ರಾಷ್ಟ್ರಪತಿಯವರ ಪ್ರಶ್ನೆಯ ಹಿಂದಿದ್ದುದು ಈ ಪರಿಸ್ಥಿತಿಯ ಬಗೆಗಿನ ಕಾಳಜಿ.

ನಮ್ಮ ದೇಶದ ಐಐಟಿ ವಿದ್ಯಾರ್ಥಿಗಳಲ್ಲಿ ಮಹಿಳಾ ಪ್ರಾತಿನಿಧ್ಯ ಎದ್ದು ಕಾಣುವಂತೆ ಕಡಿಮೆಯಿರಲು ಕಾರಣಗಳನ್ನು ವಿಶ್ಲೇಷಿಸಿ ಅದನ್ನು ಸರಿಪಡಿಸಲು ಸೂಕ್ತ ಸಲಹೆಗಳನ್ನು ನೀಡುವ ಉದ್ದೇಶದಿಂದ ಐಐಟಿ ನಿರ್ದೇಶಕ ಪ್ರೊ. ತಿಮೋತಿ ಗೋನ್ಸಾಲ್ವೆಸ್ ಅವರ ಅಧ್ಯಕ್ಷತೆಯಲ್ಲಿ 17 ಪರಿಣತ ಸದಸ್ಯರ ಸಮಿತಿಯೊಂದನ್ನು 2017ರಲ್ಲಿ ನೇಮಿಸಲಾಯಿತು. ಈ ಸಮಿತಿ ನೀಡಿದ ವರದಿಯಂತೆ, ಈ ಪರಿಸ್ಥಿತಿಗೆ ಪೋಷಕರು, ಕುಟುಂಬ ಮತ್ತು ಶಿಕ್ಷಕರ ಲಿಂಗಪಕ್ಷಪಾತ ಮತ್ತು ಲಿಂಗತಾರತಮ್ಯದ ಧೋರಣೆ ಹಾಗೂ ಬಹಳಷ್ಟು ಪ್ರಮಾಣದಲ್ಲಿ ‘ರೋಲ್ ಮಾಡೆಲ್’ಗಳ ಅಭಾವ ಮುಖ್ಯ ಕಾರಣಗಳಾಗಿದ್ದವು.

ಜೆಇಇ ಅತ್ಯಂತ ಕಠಿಣ ಪ್ರವೇಶ ಪರೀಕ್ಷೆಗಳಲ್ಲೊಂದು. ಸರಿಯಾದ ಮಾರ್ಗದರ್ಶನ, ಬೋಧನೆ, ತರಬೇತಿ, ಕುಟುಂಬದ ಬೆಂಬಲವಿಲ್ಲದೇ ಜಯ ಗಳಿಸುವುದು ಬಹುಮಟ್ಟಿಗೆ ಅಸಾಧ್ಯ. ನಗರ, ಪಟ್ಟಣ ಪ್ರದೇಶಗಳಲ್ಲಿ ಕೋಚಿಂಗ್ ಕೇಂದ್ರಗಳು ವಿಧಿಸುವ ಶುಲ್ಕ ಬಹು ದುಬಾರಿ. ಹೆಚ್ಚಿನ ಕುಟುಂಬಗಳು ಈ ವೆಚ್ಚವನ್ನು ಭವಿಷ್ಯದ ಬದುಕಿಗೆ ಹೂಡಿಕೆ ಮಾಡುವ ಬಂಡವಾಳವೆಂದು ಪರಿಗಣಿಸುತ್ತವೆ. ಅದರಲ್ಲಿ ತಪ್ಪೇನಿಲ್ಲ. ಆದರೆ ‘ಮಗ’ನಿಗಾಗಿ ಬಂಡವಾಳ ಹೂಡುವ ಪೋಷಕರು, ‘ಮಗಳ’ ಪ್ರಶ್ನೆ ಬಂದಾಗ ಅದು ಕೇವಲ ಅನಗತ್ಯ ವೆಚ್ಚ ಎಂದು ಹಿಂದೆಗೆಯುತ್ತಾರೆ. ಪರೀಕ್ಷಾ ಸಿದ್ಧತೆಗಾಗಿ ದೂರದ ಊರುಗಳಲ್ಲಿ ಉಳಿಯಬೇಕಾದಾಗ ಹೆಣ್ಣುಮಕ್ಕಳ ಸುರಕ್ಷತೆ ಪೋಷಕರಿಗೆ ಸದಾಕಾಲದ ಚಿಂತೆಯಾಗುತ್ತದೆ. ಈ ಎಲ್ಲ ಸಮಸ್ಯೆಗಳನ್ನೂ ಎದುರಿಸಿ, ಅತ್ಯುತ್ತಮ ಶಿಕ್ಷಣ ಪಡೆದು ಬದುಕಿನಲ್ಲಿ ಮುಂದೆ ಬಂದಿರುವ ‘ರೋಲ್ ಮಾಡೆಲ್’ಗಳೊಡನೆ ಚರ್ಚೆ, ಸಂವಾದ, ಸಮಾಲೋಚನೆಗಳಿಗೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಅವಕಾಶಗಳು ಇಲ್ಲವೇ ಇಲ್ಲವೆನ್ನಿಸುವಷ್ಟು ಕಡಿಮೆ.

ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ತಮ್ಮ ಆಸಕ್ತಿಯ ವಿಷಯ, ಶಿಕ್ಷಣ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳುವಾಗಲೂ ಪೋಷಕರ, ಹಿತಚಿಂತಕರ ಒತ್ತಡ ಮುಖ್ಯಪಾತ್ರ ವಹಿಸುತ್ತದೆ. ಮನೆಗೆ ಹತ್ತಿರವಿದ್ದು, ಬಹಳಷ್ಟು ಹೆಣ್ಣುಮಕ್ಕಳಿರುವ, ಸುರಕ್ಷಿತ ಪರಿಸರದ ಸಂಸ್ಥೆಯಲ್ಲಿ ಯಾವುದೇ ಕೋರ್ಸ್ ಆದರೂ ನಡೆಯುತ್ತದೆ. ಇಂಥ ಧೋರಣೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿನಿಯರ ಪ್ರಮಾಣ ಕಡಿಮೆಯಾಗಲು ಮುಖ್ಯ ಕಾರಣವೆಂಬುದು ಪರಿಣತ ಸಮಿತಿಯ ಅಭಿಪ್ರಾಯ. ಇದರ ಪರಿಣಾಮವಾಗಿಯೇ ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ, ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್, ನ್ಯಾಷನಲ್ ಅಕಾಡೆಮಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್ ಮುಂತಾದವು ನೀಡುವ ಪ್ರತಿಷ್ಠಿತ ಫೆಲೋಶಿಪ್‌ಗಳು ಮತ್ತು ವೈಜ್ಞಾನಿಕ ಸಂಶೋಧನಾ ಕ್ಷೇತ್ರದ ಅತ್ಯುನ್ನತ ಗೌರವವಾದ ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ ವಿಜೇತರಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಿಲ್ಲ.

ಐಐಟಿಗಳಲ್ಲಿ ವಿದ್ಯಾರ್ಥಿನಿಯರ ಕಡಿಮೆ ಪ್ರಮಾಣಕ್ಕೆ ಸಾಮಾಜಿಕ, ಕೌಟುಂಬಿಕ, ಆರ್ಥಿಕ ಕಾರಣಗಳನ್ನು ವಿಶ್ಲೇಷಿಸಿದ ಪರಿಣತ ಸಮಿತಿಯು ಸಮಸ್ಯೆಯನ್ನು ಎದುರಿಸಲು ಮಾಡಿದ ಹಲವಾರು ಶಿಫಾರಸುಗಳಲ್ಲಿ ಬಹುಮುಖ್ಯವಾದುದು ವಿದ್ಯಾರ್ಥಿನಿಯರಿಗೆಂದೇ ಪ್ರತ್ಯೇಕವಾದ ಹೆಚ್ಚುವರಿ ‘ಸೂಪರ್ ನ್ಯೂಮರರಿ’ ಸೀಟುಗಳನ್ನು ಸೃಷ್ಟಿಸುವುದು. ಅದರಂತೆ, ದೇಶದ ಎಲ್ಲ ಐಐಟಿಗಳ ಮೇಲ್ವಿಚಾರಣೆಯ ಹೊಣೆ ಹೊತ್ತಿರುವ ಐಐಟಿ ಮಂಡಳಿ, 2018ರಲ್ಲಿ ಒಟ್ಟು 800 ಸೀಟುಗಳನ್ನು ಹೊಸದಾಗಿ ಸೃಷ್ಟಿಸಿತು. ಇದರಿಂದ ಇತರ ವರ್ಗಗಳಿಗೆ, ಅದರಲ್ಲೂ ಮುಖ್ಯವಾಗಿ ಯುವಕರಿಗೆ ಲಭ್ಯವಿದ್ದ ಸೀಟುಗಳಲ್ಲಿ ಯಾವುದೇ ಕಡಿತ ಉಂಟಾಗಲಿಲ್ಲ. ಅದರ ಜೊತೆಗೆ ಈ ಅವಕಾಶವನ್ನು ಬಳಸಿಕೊಳ್ಳಲು ವಿದ್ಯಾರ್ಥಿನಿಯರು ಈ ಮೊದಲಿನಂತೆಯೇ ಜೆಇಇ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, ಪ್ರವೇಶಕ್ಕೆ ಅರ್ಹತೆ ಪಡೆಯಬೇಕಿತ್ತು. ಅದರಲ್ಲಿ ಯಾವ ರಿಯಾಯಿತಿಯೂ ಇರಲಿಲ್ಲ.

2018, 2019, 2020ರಲ್ಲಿ ಒಟ್ಟು ಸೀಟುಗಳ ಶೇ 14, ಶೇ 17 ಮತ್ತು ಶೇ 20ರಷ್ಟು ಸೀಟುಗಳನ್ನು ಹೆಚ್ಚುವರಿಯಾಗಿ ಸೃಷ್ಟಿಸಿದ ಕ್ರಮ ಇಂದಿಗೂ ಮುಂದುವರಿದಿದೆ. ಇದರಿಂದ 2017ಕ್ಕೆ ಹೋಲಿಸಿದರೆ, 2021- 22ರಲ್ಲಿ ದೇಶದ ಐಐಟಿಗಳಲ್ಲಿ ವಿದ್ಯಾರ್ಥಿನಿಯರ ಪ್ರಮಾಣ ಮೂರು ಪಾಲು ಹೆಚ್ಚಾಗಿರುವುದನ್ನು ಅಧ್ಯಯನ ಖಚಿತಪಡಿಸಿದೆ. ಆದರೆ ಈ ಹೆಚ್ಚಳಕ್ಕೆ ಹೆಚ್ಚುವರಿ ಸೀಟುಗಳ ಸೃಷ್ಟಿಯಷ್ಟೇ ಕಾರಣವಲ್ಲ. ಎಲ್ಲ ಐಐಟಿಗಳೂ ಪ್ರತಿಭಾವಂತ ಹೆಣ್ಣುಮಕ್ಕಳನ್ನು, ಅದರಲ್ಲೂ ಮುಖ್ಯವಾಗಿ ಆಯ್ಕೆಯಾದ ನಂತರವೂ ಐಐಟಿಗಳಿಗೆ ಸೇರದೇ ಹಿಂದುಳಿಯುವ ಯುವತಿಯರು ಹಾಗೂ ಅವರ ಪೋಷಕರ ಮನವೊಲಿಸುವ ವಿಶೇಷ ‘ಔಟ್‌ರೀಚ್’ ಕಾರ್ಯಕ್ರಮಗಳನ್ನು ಪ್ರಾರಂಭಿಸಿವೆ.

ಬಹುತೇಕ ಐಐಟಿಗಳು ‘ಆಸ್ಕ್ ಐಐಟಿ’ ಎಂಬ ಪೋರ್ಟಲ್ ಒಂದನ್ನು ಸೃಷ್ಟಿಸಿ, ಭವಿಷ್ಯದ ವಿದ್ಯಾರ್ಥಿಗಳು ಮತ್ತು ಪೋಷಕರು, ಪ್ರಾಧ್ಯಾಪಕರು, ಹಿರಿಯ ವಿದ್ಯಾರ್ಥಿಗಳು, ಉದ್ಯಮದ ನಾಯಕರೊಡನೆ ಸಮಾಲೋಚನೆ ನಡೆಸುವ ಅವಕಾಶವನ್ನು ಕಲ್ಪಿಸಿವೆ. ಎಲ್ಲ ಐಐಟಿಗಳೂ ಆಯ್ಕೆಯಾದ ವಿದ್ಯಾರ್ಥಿಗಳು ಹಾಗೂ ಪೋಷಕರ ಕ್ಯಾಂಪಸ್ ಭೇಟಿಯನ್ನು ಏರ್ಪಡಿಸುತ್ತಿವೆ. ಆ ವೆಚ್ಚವನ್ನು ಭರಿಸುವ ಸಂಸ್ಥೆಗಳೂ ಉಂಟು. ಇವುಗಳ ಫಲವಾಗಿ ಕಾನ್ಪುರ ಮತ್ತು ಮದ್ರಾಸ್ ಐಐಟಿಗಳಲ್ಲಿ ವಿದ್ಯಾರ್ಥಿನಿಯರ ಪ್ರಮಾಣ ಹಿಂದಿನ ವರ್ಷ ಶೇ 29 ಮತ್ತು ಶೇ 30ಕ್ಕೇರಿದೆ. ದೆಹಲಿ ಐಐಟಿ ಇದನ್ನು ಶೇ 50ಕ್ಕೇರಿಸುವ ದಿಕ್ಕಿನಲ್ಲಿ ಕಾರ್ಯಪ್ರವೃತ್ತವಾಗಿದೆ.

ವಿದ್ಯಾರ್ಥಿನಿಯರ ಸಂಖ್ಯೆಯನ್ನು ಹೆಚ್ಚಿಸುವ ಈ ಎಲ್ಲ ಕ್ರಮಗಳು ಸ್ವಾಗತಾರ್ಹವಾದರೂ ಆರ್ಥಿಕವಾಗಿ ದುರ್ಬಲರಾಗಿರುವ, ಗ್ರಾಮಾಂತರ ಪ್ರದೇಶದ ಪ್ರತಿಭಾವಂತ ಹೆಣ್ಣುಮಕ್ಕಳಿಗೆ ಉಚಿತವಾಗಿ ಅಥವಾ ಅಲ್ಪ ವೆಚ್ಚದಲ್ಲಿ ಉತ್ತಮ ಕೋಚಿಂಗ್ ಸೌಲಭ್ಯ ದೊರೆಯದಿದ್ದರೆ, ಈ ಹೆಚ್ಚುವರಿ ಸೀಟುಗಳಿಂದ ಅಲ್ಲಿನ ವಿದ್ಯಾರ್ಥಿನಿಯರಿಗೆ ಯಾವ ಪ್ರಯೋಜನವೂ ಇಲ್ಲ. ಹೀಗಾಗಿ ಅಂತಹ ವಿವಿಧ ಅವಕಾಶಗಳನ್ನು ನಗರ, ಪಟ್ಟಣಗಳಿಂದ ದೂರವಿರುವ ಹೆಣ್ಣುಮಕ್ಕಳಿಗೆ ಸೃಷ್ಟಿಸಬೇಕಾದ ತುರ್ತು ಅಗತ್ಯವಿದೆ. ದೆಹಲಿ, ಮಹಾರಾಷ್ಟ್ರ, ಉತ್ತರಪ್ರದೇಶ ಸರ್ಕಾರಗಳು ಈ ದಿಕ್ಕಿನಲ್ಲಿ ಉತ್ತಮ ಕೆಲಸ ಮಾಡಿವೆ. ಕಾರ್ಪೊರೇಟ್ ವಲಯವೂ ಈ ಕ್ಷೇತ್ರದಲ್ಲಿ ಭಾಗವಹಿಸುತ್ತಿರುವುದು ಉತ್ತಮ ಬೆಳವಣಿಗೆ.

ಬದುಕಿನ ಸಮಸ್ಯೆಗಳನ್ನು ತಂತ್ರಜ್ಞಾನದ ನೆರವಿನಿಂದ ಪರಿಹರಿಸಿ, ಜೀವನದ ಗುಣಮಟ್ಟವನ್ನು ಉತ್ತಮಪಡಿಸುವುದು ಐಐಟಿಗಳ ಮುಖ್ಯ ಉದ್ದೇಶ. ಈ ಸಂಸ್ಥೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿದಂತೆ ಅವರ ಆಲೋಚನೆ, ಹೊಸದೃಷ್ಟಿ, ಒಳನೋಟಗಳು ತರುವ ವೈವಿಧ್ಯವು ಶೈಕ್ಷಣಿಕ ಮತ್ತು ಬೌದ್ಧಿಕ ಚಟುವಟಿಕೆಗಳನ್ನು ಮತ್ತಷ್ಟು ಶ್ರೀಮಂತಗೊಳಿಸಿ, ನಮ್ಮ ಅನೇಕ ಸಮಸ್ಯೆಗಳಿಗೆ ವಿನೂತನ ಪರಿಹಾರಗಳನ್ನು ಸೂಚಿಸಲಿವೆ ಎಂಬುದು ಪರಿಣತರ ಖಚಿತ ಅಭಿಪ್ರಾಯ.

ಚುರುಮುರಿ

ಹೆಚ್ಚೆತ್ತ ಕರ್ನಾಟಕ!

● ಚಂದ್ರಕಾಂತ ವಡ್ಡು

ಗಂಟೆ ಎಂಟಾದರೂ ಮಲಗಿಯೇ ಇದ್ದ ಮಗನ ಮೇಲಿನ ಸಿಟ್ಟನ್ನು ಹೆಂಡತಿಯ ಮೇಲೆ ಹಾಕಿದ ತಿಂಗಳೇಶ, ‘ನಿನಗೆ ಒಂಚೂರೂ ಜವಾಬ್ದಾರಿ ಇಲ್ಲ... ಅವನನ್ನು ಬೇಗ ಎಬ್ಬಿಸಬಾರದೇ? ಇಷ್ಟೊತ್ತಾದರೂ ಎಚ್ಚರಗೊಳ್ಳದ ಅವನೇನು ಭಾರತದ ಮತದಾರನೇ...?’

‘ನೋಡಿ... ನಿಮ್ಮ ‘ಎದ್ದೇಳು ಕರ್ನಾಟಕ’ ಅಭಿಯಾನ ಮನೆಯಲ್ಲಿ ಬೇಡ. ಅಂಥದ್ದನ್ನೆಲ್ಲಾ ಫೇಸ್‌ಬುಕ್ಕಿನಲ್ಲೇ ಹರಿಯಬಿಟ್ಟು ಲೈಕುಗಳನ್ನು ಒಟ್ಟುಗೂಡಿಸಿಕೊಳ್ಳಿ, ‘ಮಲಗು ಕರ್ನಾಟಕ’ ಅಭಿಯಾನ ಮಾಡಿದರೂ ಅಷ್ಟೇ ಲೈಕು ಬೀಳುತ್ತವೆ...’ ಮಡದಿಯ ಮಾಧ್ಯಮ ಜ್ಞಾನಕ್ಕೆ ದಂಗಾದ ತಿಂಗಳೇಶ! ‘ಹಾಗಾದರೆ ಚುನಾವಣೆ ಯಾರಿಗೆ ಪರೀಕ್ಷೆ ಹೇಳು ನೋಡೋಣ?’

‘ಪೂರ್ವಭಾವಿ ಪರೀಕ್ಷೆಯು ಅಭ್ಯರ್ಥಿಗಳು, ಪಕ್ಷಗಳಿಗೆ. ಅಂತಿಮ ಪರೀಕ್ಷೆ ಮತದಾರರಿಗೆ. ಅಭ್ಯರ್ಥಿಗಳಿಗೆ ಕ್ಷೇತ್ರ ಆಯ್ಕೆಯ ಏಕೈಕ ಪ್ರಶ್ನೆ, ಪಕ್ಷಗಳಿಗೆ ಅಭ್ಯರ್ಥಿಯನ್ನು ಆಯುವ ಬಹು ಆಯ್ಕೆಯ ಪ್ರಶ್ನೆಗಳಿರುತ್ತವೆ. ಕೆಲವು ಉಮೇದುವಾರರಿಗೆ ಬಹು ಕ್ಷೇತ್ರಗಳು, ಪಕ್ಷಗಳು ಎದುರಾಗಿ ದೈವಗಳ ಮೊರೆ ಹೋಗುವುದೂ ಉಂಟು...’

‘ಅಂತಿಮ ಪರೀಕ್ಷೆಯಲ್ಲಿ...?’

‘ಮತದಾರರಿಗೂ ಬಹು ಆಯ್ಕೆ ಪ್ರಶ್ನೆ ಪತ್ರಿಕೆಯೇ ಇರುತ್ತದೆ. ಆತ ಪಕ್ಷಗಳನ್ನು ಗುಣಿಸಬೇಕು, ಜಾತಿ ಗಣಿಸಬೇಕು, ಅಭ್ಯರ್ಥಿಯನ್ನೂ ಪರಿಗಣಿಸಬೇಕು, ಕೊಡುಗೆಗಳನ್ನೂ ಕಡೆಗಣಿಸಲಾಗದು. ಬಹಳ ಕಠಿಣ ಕಣ್ರೀ. ಆದರೂ ಮತದಾರ ತಲೆ ಕೆರೆದುಕೊಂಡೋ ಅಕ್ಕಪಕ್ಕದವರಿಂದ ಕಾಪಿ ಮಾಡಿಯೋ ಉತ್ತರ ಬರೆಯಬಲ್ಲ. ಆದರೆ ಪರೀಕ್ಷೆ ಹಿಂದಿನ ರಾತ್ರಿ ಸೋರಿಕೆಯಾಗುವ ಪ್ರಶ್ನೆ ಪತ್ರಿಕೆ ಮಾತ್ರ ಮತ್ತೆ ಗೊಂದಲಕ್ಕೆ ದೂಡುತ್ತದೆ’.

‘ಹೌದಾ... ಲೀಕ್ ಆದ ಪ್ರಶ್ನೆಪತ್ರಿಕೆಯಲ್ಲಿ ಅಂಥಾದ್ದೇನಿರುತ್ತದೆ?’

‘ಮತವನ್ನು ದಾನ ಮಾಡಬೇಕೆ, ಮಾರಬೇಕೆ, ಚಲಾಯಿಸಬೇಕೆ, ಹಂಚಬೇಕೆ ಇತ್ಯಾದಿ ಔಟ್ ಆಫ್ ಸಿಲಬಸ್ ಪ್ರಶ್ನೆಗಳು ಇರುತ್ತವೆ’.

ಅಷ್ಟರಲ್ಲಿ ಎದ್ದುಬಂದ, ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧಗೊಳ್ಳುತ್ತಿದ್ದ ಮಗ, ‘ವೆರಿ ಸಿಂಪಲ್, ಮನೆಯಲ್ಲಿರುವ ಮತಗಳನ್ನು ಹುರಿಯಾಳುಗಳು ಕೊಟ್ಟ ಹಣಕ್ಕನುಸಾರ ಸಮನಾಗಿ ಹಂಚಿದರೆ ಮುಗೀತು...’ ಎಂದು ಘೋಷಿಸಿದ. ಮಗನಲ್ಲಿ ‘ಹೆಚ್ಚೆತ್ತ ಕರ್ನಾಟಕ’ ಕಂಡ ತಿಂಗಳೇಶ!

ಸಂಗತ

ಜೋಕೆ... ಕಳೆದೀತು ವಿನೋದದ ಹದ!

ಬದುಕಿನಲ್ಲಿ ಎದುರಾಗುವ ಉದ್ವೇಗ, ನೋವು, ನಿರಾಸೆಗಳನ್ನು ನಿರ್ವಹಿಸಲು ನಮ್ಮೊಳಗೊಬ್ಬ ವಿದೂಷಕನಿರಬೇಕು

● ಬಿ.ಎಸ್.ಭಗವಾನ್

ಬೆಂಗಳೂರಿನ ಹನುಮಂತನಗರದಿಂದ ಶಿವಾಜಿನಗರಕ್ಕೆ ಬಸ್ಸಿನಲ್ಲಿ ಹೊರಟಿದ್ದೆ. ಗಣೇಶ ಭವನದ ಸ್ಟಾಪಿನಲ್ಲಿ ಬಸ್ಸೇರಿದ ನಡುವಯಸ್ಕರೊಬ್ಬರು ಸೀಟಿಗೆ ಹುಡುಕಾಡಿದರು. ‘ಬಸ್ಸು ಅರ್ಧ ಖಾಲಿ, ಎಲ್ಲಾದ್ರು ಕುಳಿತುಕೊಳ್ಳಿ ಸಾರ್’ ಅಂತ ಕಂಡಕ್ಟರ್ ಹೇಳಿದಾಗಲೂ ಅವರ ಧಾವಂತ ಮುಂದುವರಿದಿತ್ತು. ‘ಏನಿಲ್ಲ, ನಿಂತರೂ ಸರಿ, ಮಿಕ್ಸರ್ ಪಕ್ಕ ಬೇಡ ಅಂತ’ ಎಂದು ಅವರು ಒಗಟು ಒಡೆದಿದ್ದರು. ಅವರ ನಿಘಂಟಿನಲ್ಲಿ ‘ಮಿಕ್ಸರ್’ ಅಂದರೆ ಎಲೆ ಅಡಿಕೆ ಜಗಿಯುವವರು! ಇಡೀ ಬಸ್ಸು ಗೊಳ್ಳೆನ್ನಲು ಇದಕ್ಕಿಂತ ಬೇಕೇ?

ಹಾಸ್ಯವು ಮನುಷ್ಯ ಸಂಸ್ಕೃತಿಯ ಭಾಗ. ವಿನೋದ ರಹಿತವಾದ ಯಾವುದೇ ಸಂಸ್ಕೃತಿ ಜಗತ್ತಿನಲ್ಲಿಲ್ಲ. ಬದುಕಿನಲ್ಲಿ ಘಟಿಸಿದ ಪ್ರಸಂಗಗಳು- ಕಹಿಯೊ, ಸಿಹಿಯೊ ಮೆಲುಕು ಹಾಕಿದಾಗ ಒಟ್ಟಾರೆ ಉಕ್ಕುವುದು ನಗುವೇ ವಿನಾ ಬಿಕ್ಕುವ ಅಳುವಲ್ಲ. ವಿನೋದವು ಖಿನ್ನತೆ ನಿವಾರಕ, ಅಹಂಕಾರ ವಿಮೋಚಕ. ಮನುಷ್ಯನಾಗಿ ಇರುವುದೆಂದರೆ ಏನೆಂದು ಹಾಸ್ಯವು ತಿಳಿಸುತ್ತದೆ. ವಿನೋದವಿದ್ದಲ್ಲಿ ನಾಗರಿಕತೆ ಜೀವಂತವಿರುವುದು. ಬದುಕೆಂಬ ಎಂಜಿನ್ನಿಗೆ ಹಾಸ್ಯವು ಎರೆಯೆಣ್ಣೆಯಿದ್ದಂತೆ.

ನ್ಯೂಯಾರ್ಕಿನ ಹಿಂದಿನ ಶತಮಾನದ ಪ್ರಸಿದ್ಧ ಕಥೆಗಾರ ಈ.ಬಿ.ವೈಟ್ ‘ತಮಾಷೆ ಆನಂದಿಸಿ. ಅದರ ಪೂರ್ವಾಪರ ತಿಳಿಯುವ ಗೋಜು ಬೇಡ. ಅಧ್ಯಯನಾರ್ಥ ಕಪ್ಪೆಯ ಅಂಗ ವಿಚ್ಛೇದಿಸಿದರೆ ಅದರ ಸಾವು!’ ಎನ್ನುತ್ತಿದ್ದರು. ಚಟಾಕಿ ಹಳೆಯದಾದರೇನು, ಪುಟಿಯುವ ನಗು ನವನವೀನ. ಗೇಟು ದೂಡಿ ಒಳಬರುವ ಅತಿಥಿಯ ‘ನಾಯಿ ಕಚ್ಚುವುದಿಲ್ಲ ತಾನೆ?’ ಆರ್ತನಾದದಲ್ಲಿ ಪ್ರಾಮಾಣಿಕತೆಯಿದೆ. ಮನೆಯೊಡೆಯನ ‘ನಿನ್ನೆಯಷ್ಟೇ ಖರೀದಿಸಿದ್ದು. ನಾಯಿ ನಿಮ್ಮಷ್ಟೆ ನಮಗೂ ಪರಿಚಿತ’ ಎಂಬ ಸಮಜಾಯಿಷಿಯಲ್ಲೂ ಅಷ್ಟೇ ಪಾರದರ್ಶಕತೆ ರಾರಾಜಿಸುತ್ತದೆ! ಜನಪದರು ಒಂದು ವರಸೆ ಪಸಂದಾಗಿಯೇ ನಕ್ಕಿದ್ದಾರೆ, ನಗಿಸಿದ್ದಾರೆ. ಒಂದೊಂದು ಗಾದೆಯೂ ಸನ್ನಡತೆಗೆ ನಡೆ ಹಾಸುವ ಪ್ರಖರ ವಿಡಂಬನೆ.

ಒಂದು ವೃತ್ತಿನಾಟಕ ತಂಡ ಆ ಊರಿನಲ್ಲಿ ಬೀಡುಬಿಟ್ಟಿತ್ತು. ಟಿಕೆಟ್ ಮಾರಾಟ ಅಷ್ಟಕ್ಕಷ್ಟೆ. ಕಂಪನಿ ಮಾಲೀಕನದೇ ರಾಜನ ಪಾತ್ರ. ರಾಜ ತನ್ನ ದರ್ಬಾರಿನಲ್ಲಿ ಠೀವಿಯಿಂದ ‘ಯಾರಲ್ಲಿ?’ ಎನ್ನುವನು. ‘ಏನಪ್ಪಣೆ ಪ್ರಭು’ ಎನ್ನಬೇಕಿದ್ದ ಸೇವಕ ‘ಯಾರೂ ಇಲ್ಲ’ ಎಂದ. ನಾಟಕ ಹಿಡಿತ ಕಳೆದುಕೊಳ್ಳಲು ಇಷ್ಟು ಸಾಕಲ್ಲ. ಸೇವಕನ ಪಾತ್ರಧಾರಿಗೆ ಸಂಬಳ ಬಾಕಿಯಿದ್ದ ಕಾರಣ ಈ ಎಡವಟ್ಟು!

ಸಮಾರಂಭಗಳಿಗೆ ಮುಖ್ಯ ಅತಿಥಿಗಳಾಗಿ ಆಹ್ವಾನಿಸುವ ಮುನ್ನ ಅವರಿಗೆ ಸಮಯ, ಸನ್ನಿವೇಶದ ಮಹತ್ವ ಕನಿಷ್ಠತಮವಾದರೂ ತಿಳಿದಿರಬೇಕು ತಾನೆ? ಒಂದು ವೃತ್ತಾಂತ ಸ್ವಾರಸ್ಯಕರವಾಗಿದೆ. ಫುಟ್‌ಬಾಲ್ ಪಂದ್ಯಕ್ಕೆ ಅತಿಥಿಯಾಗಿ ಪ್ರತಿಷ್ಠಿತ ಉದ್ಯಮಿಯೊಬ್ಬರನ್ನು ಆಮಂತ್ರಿಸಲಾಗಿತ್ತು. ಅವರೋ ಪಂದ್ಯ ಮುಗಿಯುವ ಮುನ್ನವೇ ಮೈಕ್ ಹಿಡಿದರು. ‘ಒಂದು ಚೆಂಡಿಗೆ ಮುನ್ನೂರು ರೂಪಾಯಿ ಎಂದು ನನ್ನ ಪಿ.ಎ. ಹೇಳಿದರು. ನಾನು ಎಲ್ಲರಿಗೂ ಒಂದೊಂದು ಚೆಂಡು ಕೊಡಿಸುತ್ತೇನೆ. ದಯವಿಟ್ಟು ಜಗಳ ನಿಲ್ಲಿಸಿ. ಮುಂದೆಂದೂ ಹೀಗೆ ಬರೀ ಒಂದು ಚೆಂಡಿಗೆ ಪೈಪೋಟಿ ನಡೆಸಬೇಡಿ’ ಎಂದಿದ್ದೆ ಅವರು ಸೀದಾ ತಮ್ಮ ಕಾರಿನತ್ತ ದೌಡಾಯಿಸಿದ್ದರು. ಹುಸಿ, ಸುಳ್ಳು ಎಂದು ತಿಳಿದಿದ್ದರೂ ಹಿತಮಿತವಾಗಿ ‘ಪೆದ್ದರಾಗುವಲ್ಲಿ’, ‘ಪೆದ್ದರನ್ನಾಗಿಸುವಲ್ಲಿ’ ಖುಷಿಯಿದೆ. ಯಾರಾದರೂ ನಮ್ಮನ್ನು ನೋಡಿ ಮುಗುಳ್ನಕ್ಕರೆ ಅದನ್ನು ಹಿಂದಿರುಗಿಸದಿದ್ದರೆ ಅದಕ್ಕಿಂತ ಅನಾಗರಿಕತೆ ಮತ್ತೊಂದಿಲ್ಲ. ನಸುನಗುವಿಗೆ ಮರಳಿ ಉಡುಗೊರೆ ನಸುನಗುವೇ.

1940ರ ಸುಮಾರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಆಕ್ಸ್‌ಫರ್ಡ್ ಮೂಲದ ಪ್ರೊ. ಜೆ.ಸಿ. ರಾಲೊ ಪ್ರಿನ್ಸಿಪಾಲರಾಗಿದ್ದರು. ಅವರು ಶಿಷ್ಯವತ್ಸಲರೆಂದು ಖ್ಯಾತರಾಗಿದ್ದರು. ಅವರ ಪಾಂಡಿತ್ಯಪೂರ್ಣ ಇಂಗ್ಲಿಷ್ ಸಾಹಿತ್ಯ ಬೋಧನೆ, ಆಡಳಿತದಲ್ಲಿ ದಕ್ಷತೆ, ಶಿಸ್ತು ಮನೆಮಾತಾಗಿತ್ತು. ಶತಾಯುಷಿಯಾಗಿ ಬಾಳಿದ ಪ್ರೊ. ಎ.ಎನ್.ಮೂರ್ತಿರಾಯರು ರಾಲೊ ಅವರ ಅಚ್ಚುಮೆಚ್ಚಿನ ವಿದ್ಯಾರ್ಥಿ, ನಂತರ ಅದೇ ಕಾಲೇಜಿನಲ್ಲಿ ಅವರ ಸಹೋದ್ಯೋಗಿಯೂ ಆದರು.

ರಾಯರ ಹಾಸ್ಯ ಅಮೋಘವಾಗಿತ್ತು. ಒಮ್ಮೆ ಒಂದು ವಿವಾಹ ಸಮಾರಂಭದಲ್ಲಿ ಶಿಷ್ಯರು ರಾಯರನ್ನು ಮುತ್ತಿ ‘ತಾವು ನಮಗೆ ಕಿಂಗ್‌ಲಿಯರ್ ಪಾಠ ಮಾಡುತ್ತಿದ್ದಿರಿ ಸಾರ್’ ಎಂದರು. ಅದಕ್ಕೆ ಅವರು ‘ಇದರಲ್ಲಿ ನನ್ನದೇನೂ ತಪ್ಪಿಲ್ಲ ಕಣ್ರಪ್ಪ. ರಾಲೊ ಸಾಹೇಬರ ಮಾತು ಕೇಳಲೇಬೇಕಲ್ಲ’ ಎಂದಿದ್ದರು! ರಾಯರ ಈ ಗಂಭೀರ ಹಾಸ್ಯ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆದಂತೆ. ಒಂದೆಡೆ, ತಮ್ಮ ಪಾಠ ಮತ್ತೂ ಮಾಗಬೇಕೆಂಬ ಮುಕ್ತ ಮನಸ್ಸು. ಇನ್ನೊಂದೆಡೆ, ತಮಗಿಂತಲೂ ರಾಲೊ ಎತ್ತರದವರೆಂಬ ವಿನಯ.

ಹಾಸ್ಯನಟ ಚಾರ್ಲಿ ಚಾಪ್ಲಿನ್ ತಮ್ಮ ವಿಶಿಷ್ಟ ಆಂಗಿಕ ಭಾಷೆಯಿಂದಲೇ ಜಗತ್ಪ್ರಸಿದ್ಧರಾದ ಮೇರು ಕಲಾವಿದ. ಅಂಗಾಲುಗಳಲ್ಲಿನ ಹುಣ್ಣುಗಳು ಅವರಿಗೆ ವಿಪರೀತ ನೋವುಂಟು ಮಾಡುತ್ತಿದ್ದವು. ಹಾಗಾಗಿ ಅವರು ನಟನೆಗೆ ಅಡ್ಡಗಾಲಿನ ನಡಿಗೆಯನ್ನು ಆಯ್ಕೆ ಮಾಡಿಕೊಂಡರು. ತಮ್ಮ ಅಂಗಾಲಿನ ಹುಣ್ಣು ಮರೆತರು. ಇಡೀ ಜಗತ್ತು ‘ಹೊಟ್ಟೆ ಹುಣ್ಣಾಗುವಂತೆ’ ನಗಿಸಿದರು! ಇದಲ್ಲವೇ ಅನನ್ಯ ಹಾಸ್ಯ ಕೈಂಕರ್ಯದ ಅಸ್ಮಿತೆ?

ಸಿನಿಮಾ, ಟಿ.ವಿ. ಸೀರಿಯಲ್, ನಾಟಕವು ಶಿಷ್ಟಾಚಾರ ಅಲಕ್ಷಿಸಿ ಕೀಳುದರ್ಜೆಯ ಹಾಸ್ಯದೊಂದಿಗೆ ರಾಜಿಯಾಗಬಾರದು. ಕರತಾಡನದ ಹಂಬಲದಲ್ಲಿ ವಿನೋದದ ಹದ ಕಳೆಯಬಾರದು. ಪ್ರೇಕ್ಷಕರ ಕೇಕೆ, ಚಪ್ಪಾಳೆಯೇ ಮಂಡಿಸಿದ ಹಾಸ್ಯದ ಶ್ರೇಷ್ಠತೆಯ ಮಾನದಂಡವಲ್ಲ.

ವಾಚಕರ ವಾಣಿ

ಮನಸೋಇಚ್ಛೆ ಶುಲ್ಕ ಹೆಚ್ಚಳ ಸಲ್ಲ

ಪ್ರಸ್ತುತ ದಿನಮಾನಗಳಲ್ಲಿ ವ್ಯಾಪಾರಿ ಕೇಂದ್ರಗಳಾಗಿರುವ ಶಿಕ್ಷಣ ಸಂಸ್ಥೆಗಳು, ಶಿಕ್ಷಣದ ಹೆಸರಿನಲ್ಲಿ ಪೋಷಕರನ್ನು ಸುಲಿಗೆ ಮಾಡುತ್ತಿರುವುದು ದುರದೃಷ್ಟಕರ ಸಂಗತಿ. 2023-24ನೇ ಸಾಲಿನ ಪ್ರವೇಶಕ್ಕೆ ಗರಿಷ್ಠ ಶೇ 15ಕ್ಕಿಂತ ಜಾಸ್ತಿ ಶುಲ್ಕವನ್ನು ಹೆಚ್ಚಳ ಮಾಡದಂತೆ ‘ಕ್ಯಾಮ್ಸ್’ ಸೂಚನೆ ನೀಡಿತ್ತು. ಆದರೆ ಈ ಸೂಚನೆಯನ್ನು ಲೆಕ್ಕಿಸದೇ ಶಾಲೆಗಳು ತಮಗೆ ಇಷ್ಟಬಂದಂತೆ ಶುಲ್ಕ ಹೆಚ್ಚಳ ಮಾಡುತ್ತಿವೆ. ಪ್ರತಿವರ್ಷ ಅಗತ್ಯ ವಸ್ತುಗಳ ಬೆಲೆ ಜಾಸ್ತಿಯಾಗುತ್ತಿದೆ. ಇದರ ಜೊತೆಗೆ ಶಾಲೆಗಳು ಶೇ 30ರಿಂದ 40ರಷ್ಟು ಶುಲ್ಕ ಹೆಚ್ಚಳ ಮಾಡಿದರೆ ಹೇಗೆ?

ಪೋಷಕರು ಈಗಾಗಲೇ ಸಂಕಷ್ಟಕ್ಕೆ ಸಿಲುಕಿದ್ದಾರೆ. ‘ಖಾಸಗಿ ಶಾಲೆಗಳ ಶುಲ್ಕ ನಿಗದಿ ಮಾಡುವ ಅಧಿಕಾರ ಸರ್ಕಾರಕ್ಕೆ ಇಲ್ಲ’ ಎಂದು ಹೈಕೋರ್ಟ್ ನೀಡಿರುವ ತೀರ್ಪನ್ನೇ ಅಸ್ತ್ರವಾಗಿಟ್ಟುಕೊಂಡಿವೆ. ಈ ಒಂದು ಏಕೈಕ ಕಾರಣಕ್ಕೆ ಖಾಸಗಿ ಶಾಲೆಗಳು ತಮಗೆ ಇಷ್ಟ ಬಂದಂತೆ ಶುಲ್ಕ ಹೆಚ್ಚಳ ಮಾಡುವುದು ಎಷ್ಟು ಸರಿ? ಸರ್ಕಾರ ಕೂಡಲೇ ಗಮನಹರಿಸಿ ಶುಲ್ಕ ಹೆಚ್ಚಳ ಮಾಡದಂತೆ ನೋಡಿಕೊಳ್ಳಬೇಕು.

ರಾಜ ಮುಗಲಳ್ಳಿ, ಉಜ್ಜಯಿನಿ, ವಿಜಯನಗರ

ಅಧಿಕಾರಸ್ಥರ ಪ್ರಶ್ನಿಸಲು ಹಿಂಜರಿಕೆ?

ಈಗ, ಉದ್ಯೋಗಿಗಳು 60 ವರ್ಷ ವಯಸ್ಸಿಗೆ ನಿವೃತ್ತರಾಗುತ್ತಾರೆ. ನರೇಂದ್ರ ಮೋದಿ ಅವರು ತಮ್ಮ 63ನೇ ವಯಸ್ಸಿನಲ್ಲಿ ಪ್ರಧಾನಿಯಾದರು. ಆಗ, ಪಕ್ಷದಲ್ಲಿ ಇರುವವರು 70 ವರ್ಷಕ್ಕೆ ಅಧಿಕಾರವನ್ನು ತ್ಯಜಿಸಬೇಕೆಂದು ಬಿಜೆಪಿ ವರಿಷ್ಠರು ಅನೌಪಚಾರಿಕವಾಗಿ ಸೂಚನೆ ರವಾನಿಸಿದ್ದರು. ಅದರಂತೆ, ಗುಜರಾತಿನ ಮುಖ್ಯಮಂತ್ರಿಯಾಗಿದ್ದ ಆನಂದಿಬೆನ್ ಪಟೇಲ್ ಅವರು ತಮಗೆ 70 ವರ್ಷ ತುಂಬಿದಾಗ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಆದರೆ, ಕರ್ನಾಟಕದಲ್ಲಿ ಯಡಿಯೂರಪ್ಪನವರು ಅಧಿಕಾರ ತ್ಯಜಿಸಿದ್ದು 78 ವರ್ಷವಾದಾಗ.

ವಿರೋಧ ಪಕ್ಷದಲ್ಲಿ ಇರುವವರಿಗಂತೂ ಈ ನಿವೃತ್ತಿ ವಯಸ್ಸು ಅನ್ವಯವಾಗುವುದಿಲ್ಲ. ಏಕೆಂದರೆ ಈ ಬಗ್ಗೆ ಚರ್ಚಿಸಲೂ ಅವರಿಗೆ ಹೆದರಿಕೆ. ಆರ್‌ಎಸ್‌ಎಸ್‌ನ ಸರಸಂಘಚಾಲಕ ಮೋಹನ ಭಾಗವತ್ ಮತ್ತು ಮೋದಿ 72 ವಸಂತಗಳನ್ನು ತಲುಪಿದ್ದಾರೆ. ಜೆಡಿಎಸ್ ನಾಯಕ ಎಚ್.ಡಿ.ದೇವೇಗೌಡ ಅವರು 90ರ ಅಂಚಿನಲ್ಲಿದ್ದಾರೆ. ಹೀಗಿರುವಾಗ, ವಾಕ್ ಸ್ವಾತಂತ್ರ್ಯವಿದ್ದರೂ ಪ್ರತಿಯೊಂದು ಪಕ್ಷದಲ್ಲಿಯೂ ಅಧಿಕಾರಸ್ಥರ ಬಗ್ಗೆ, ಅವರ ನಂತರ ಯಾರು ಎಂಬ ಬಗ್ಗೆ ಪ್ರಶ್ನಿಸಲು ಉಳಿದವರು ಹೆದರುತ್ತಿರುವುದೇಕೆ?

ಕೆ.ಜೆ.ಸುಚಿನ್ ಆಸೂರಿ, ಬೆಂಗಳೂರು

ಹೊರೆ ಹೊತ್ತ ಕತ್ತೆಯ ಮೇಲೆ ಇನ್ನಷ್ಟು ಭಾರ!

ಏಪ್ರಿಲ್ 1ರಿಂದ ಹೊಸ ದರ ಜಾರಿಗೆ ಬರುವಂತೆ, ಅಗತ್ಯ ಔಷಧಗಳ ಬೆಲೆಯನ್ನು ಶೇ 12.12ರವರೆಗೆ ಏರಿಕೆ ಮಾಡಲು ರಾಷ್ಟ್ರೀಯ ಔಷಧ ದರ ನಿಗದಿ ಪ್ರಾಧಿಕಾರ ಅವಕಾಶ ನೀಡಿರುವುದು, ಹೊರಲಾರದ ಹೊರೆ ಹೊತ್ತಿರುವ ಕತ್ತೆಯ ಮೇಲೆ ಇನ್ನಷ್ಟು ಹೊರೆ ಹೊರಿಸಿದಂತಾಗಿದೆ. ಜನಸಾಮಾನ್ಯರಿಗೆ ಇದನ್ನು ತಡೆಯುವ ಯಾವ ಅಧಿಕಾರ ಇದೆ? ಯಾರ ಬಳಿ ಕಷ್ಟ ತೋಡಿಕೊಳ್ಳುವುದು? ಬೆಳಗಿನಿಂದ ಸಂಜೆಯವರೆಗೆ ದುಡಿಯುವ ಕೂಲಿಕಾರನಿಗೆ, ಇಂತಿಷ್ಟೇ ಕೂಲಿ ಕೊಡಿ ಎನ್ನುವ ಧೈರ್ಯವಿಲ್ಲ, ಕೊಟ್ಟದ್ದನ್ನು ಪಡೆಯಬೇಕು. ತಿಂಗಳೆಲ್ಲಾ ದುಡಿದು ತಿಂಗಳ ಕೊನೆಯಲ್ಲಿ ಸಂಬಳ ಪಡೆಯುವ ನೌಕರರು, ಅವರು ಕೊಟ್ಟದ್ದನ್ನೇ ಪಡೆಯಬೇಕು. ರೈತರು ಉತ್ಪಾದನೆ ಮಾಡುವ ರಾಗಿ, ಭತ್ತ, ಜೋಳ, ಕಾಳು, ತರಕಾರಿಗೆ ಬೆಲೆ ನಿರ್ಧರಿಸುವ ಅಧಿಕಾರ ರೈತರಿಗಿಲ್ಲ. ವ್ಯಾಪಾರಿಗಳು ಬೆಲೆ ಕಟ್ಟುತ್ತಾರೆ, ಅದೇ ಬೆಲೆಗೆ ನಾವೇ ಕೊಳ್ಳಬೇಕು ಮತ್ತು ಆ ಬೆಲೆಗೇ ಜಿಎಸ್‌ಟಿ ಕಟ್ಟಬೇಕು.

ವೈದ್ಯರ ಮುಂದೆ ಕುಳಿತುಕೊಳ್ಳುವ ರೋಗಿಗಳಿಗೆ ಯಾವ ಸ್ವಾತಂತ್ರ್ಯ ಇದೆ? ಅವರು ಒಡ್ಡುವ ಎಲ್ಲಾ ಪರೀಕ್ಷೆಗಳಿಗೂ ಒಳಗಾಗಿ, ಔಷಧ ನೀಡುವ ಮೊದಲೇ ಸಾವಿರಾರು ರೂಪಾಯಿಯನ್ನು ತಪಾಸಣೆಗಾಗಿ ಕೊಡಬೇಕು. ಯಾವ ಯಾವ ತಪಾಸಣೆಗೆ ಎಷ್ಟೆಷ್ಟು ಬೆಲೆ ಎಂದು ತಿಳಿಸುವ ಬೋರ್ಡು ಬಹುಪಾಲು ಆಸ್ಪತ್ರೆಗಳಲ್ಲಿ ಇಲ್ಲ. ಇಂತಹ ಎಲ್ಲಾ ಕಡೆಗಳಲ್ಲಿ ಜನಸಾಮಾನ್ಯರಿಗೆ ಸ್ಪಂದಿಸಿ ಬೆಲೆ ಇಳಿಸಬೇಕಾಗಿರುವ ಸರ್ಕಾರವೇ ಬೆಲೆ ಏರಿಸುವವರ ಪರ ನಿಂತಿದೆ. ಯಾರದೋ ಸುಖಕ್ಕಾಗಿ ಇನ್ನಾರನ್ನೋ ದುಡಿಸುವ ವ್ಯವಸ್ಥಿತ ಪಿತೂರಿಯಲ್ಲಿ ನಾವಿದ್ದೇವೆ. ನಾವು ಮತ ಕೊಟ್ಟು ಗೆಲ್ಲಿಸಿದ ನಮ್ಮ ಪ್ರತಿನಿಧಿಗಳೇ ನಮ್ಮ ಕಷ್ಟದ ಸಮಯದಲ್ಲಿ ದೂರ ಉಳಿದರೆ, ಬಡವರ ಬದುಕಿಗೆ ಸಹಾಯ ಮಾಡುವವರು ಯಾರು? ಹರ ಕೊಲ್ಲಲ್, ಪರ ಕಾಯ್ವನೆ?

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಚುನಾವಣೆಯೆಂಬ ಹಬ್ಬವನ್ನು ಸಂಭ್ರಮಿಸೋಣ...

ರಾಜಕಾರಣಿಗಳು ನುಡಿದಂತೆ ನಡೆಯುವುದಿಲ್ಲ, ಮೋಸ ಮಾಡುತ್ತಾರೆ, ರಾಜಕಾರಣವೇ ಸರಿಯಿಲ್ಲ ಎಂಬಂತಹ ಮಾತುಗಳು ಕೇಳಿಬರುವುದು ಸಾಮಾನ್ಯ. ಜನಪ್ರತಿನಿಧಿಗಳನ್ನು ಆಯ್ಕೆ ಮಾಡಲು ‘ಮತ’ ಎಂಬ ಬ್ರಹ್ಮಾಸ್ತ್ರ ನಮ್ಮ ಕೈಯಲ್ಲಿ ಇದ್ದರೂ ಅದನ್ನು ಸರಿಯಾಗಿ ಬಳಸದೇ ಇರುವುದು ನಮ್ಮ ತಪ್ಪು ತಾನೇ? ರಾಜಕಾರಣಿಗಳ ಬಗ್ಗೆ ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್, ‘ಸದಾ ಒಂದು ಸಮೂಹ ಹಾಗೂ ಸಮಾಜದ ಜನರನ್ನು ಒಂದು ಸಿದ್ಧಾಂತ ಮತ್ತು ನಂಬಿಕೆಯೆಡೆಗೆ ಕೇಂದ್ರೀಕರಿಸಲು ರಾಜಕಾರಣಿಗಳು ಹೆಣಗುತ್ತಾರೆ. ಎಷ್ಟು ದಿನ ಒಂದು ನಂಬಿಕೆಯನ್ನು ಜೀವಂತವಾಗಿಡಲು ಸಾಧ್ಯವೋ ಅಷ್ಟು ದಿನ ಅದು ಆ ರಾಜಕಾರಣಿಯ ಯಶಸ್ಸು. ಇಲ್ಲಿ ಯಶಸ್ವಿಯಾದವನು ಜನರಿಗೆ ಒಳ್ಳೆಯದು ಮಾಡುತ್ತಾನೆ ಎಂದಲ್ಲ, ತನಗಂತೂ ಖಂಡಿತವಾಗಿಯೂ ಒಳ್ಳೆಯದು ಮಾಡಿಕೊಳ್ಳುತ್ತಾನೆ. ರಾಜಕಾರಣಿಗಳಿಂದ ಜನರಿಗೆ ಒಳ್ಳೆಯದಾಗುತ್ತದೆ ಎಂಬುದು ಭ್ರಮೆ’ ಎಂದು ಬಹಳಷ್ಟು ಹಿಂದೆಯೇ ಹೇಳಿದ್ದ. ಅಂದಿನ ಮಾತು ಇಂದಿಗೂ ನಿಜವೆನಿಸುತ್ತದೆ.

ಇನ್ನು, ನನ್ನ ಒಂದು ಮತದಿಂದ ಏನು ತಾನೇ ಬದಲಾವಣೆ ಸಾಧ್ಯ ಎಂದು ಕೆಲವರು ಮತದಾನವನ್ನೇ ಮಾಡುವುದಿಲ್ಲ. ಈ ಹಿಂದಿನ ಚುನಾವಣೆಯಲ್ಲಿ, ಬೆಂಗಳೂರು ನಗರದಲ್ಲಿ ಅತಿ ಕಡಿಮೆ ಮತದಾನವಾಗಿದ್ದು ವರದಿಯಾಗಿತ್ತು. ಇದನ್ನು ಗಮನಿಸಿದಾಗ, ಅಕ್ಷರಸ್ಥರೆಂದು ಕರೆಸಿಕೊಳ್ಳುವ ಯುವಜನತೆ, ದೊಡ್ಡ ದೊಡ್ಡ ಕಂಪನಿಗಳಲ್ಲಿ ಕೆಲಸ ಮಾಡುವಂತಹವರು ಮತದಾನ ಮಾಡದಿದ್ದರೆ ಅಕ್ಷರಸ್ಥರಾಗಿಯೂ ಪ್ರಯೋಜನವೇನು? ಈ ಬಾರಿ ಪ್ರತಿಯೊಬ್ಬ ಅರ್ಹ ಪ್ರಜೆಯೂ ಮತದಾನ ಮಾಡುವ ಮೂಲಕ ಚುನಾವಣೆಯೆಂಬ ಹಬ್ಬವನ್ನು ಸಂಭ್ರಮಿಸೋಣ.

ಆನಂದ ಜೇವೂರ್, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಿಧಾನಸಭೆ ಚುನಾವಣೆ ಘೋಷಣೆಗೂ ಮುನ್ನವೇ ರಾಜ್ಯದಲ್ಲಿ ಚುನಾವಣಾ ಪ್ರಚಾರ ಬಿರುಸು ಪಡೆದಿತ್ತು. ಈಗ ಚುನಾವಣಾ ದಿನಾಂಕವೂ ಪ್ರಕಟವಾಗಿದೆ. ವಿವಿಧ ಪಕ್ಷಗಳ ನಾಯಕರು ಪ್ರಚಾರಕ್ಕೆ ಧುಮುಕಿದ್ದಾರೆ. ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಅವರೂ ರಾಜ್ಯದಲ್ಲಿ ಪ್ರವಾಸ ಮಾಡುತ್ತಿದ್ದಾರೆ. ಪಕ್ಷದ ಕಾರ್ಯತಂತ್ರ, ಗೆಲುವಿನ ಸಾಧ್ಯತೆ ಮತ್ತು ಮತದಾರರ ಮನಃಸ್ಥಿತಿ ಕುರಿತು ಅವರು 'ಪ್ರಜಾವಾಣಿ' ಜೊತೆಗೆ ಮಾತನಾಡಿದ್ದಾರೆ

'ಡಬಲ್ ಎಂಜಿನ್ ಸರ್ಕಾರ ರಾಜ್ಯಕ್ಕೆ ಟ್ರಬಲ್ ಎಂಜಿನ್ ಆಗಿದೆ'

ಪ್ರಜಾವಾಣಿ ಸಂದರ್ಶನ

ರಣದೀಪ್ ಸಿಂಗ್ ಸುರ್ಜೇವಾಲಾ
ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ

● ರಾಜೇಶ್ ರೈ ಚಟ್ಲ

● ಕಾಂಗ್ರೆಸ್ ಉಸ್ತುವಾರಿಯಾಗಿ ಇಡೀ ರಾಜ್ಯದಲ್ಲಿ ಓಡಾಡಿದ್ದೀರಿ. ನಿಮ್ಮ ಪಕ್ಷದ ಸಂಘಟನೆ ಬಗ್ಗೆ ಏನು ಹೇಳುತ್ತೀರಿ?

ಇಡೀ ಕರ್ನಾಟಕವನ್ನು ಮೂರು ಬಾರಿ ಸುತ್ತುಹಾಕಿದ್ದೀನಿ. ಬದಲಾವಣೆಗಾಗಿನ ತುಡಿತ ಜನರಲ್ಲಿ ಎದ್ದು ಕಾಣುತ್ತಿದೆ. ತಾವು ಮೋಸಹೋಗಿದ್ದೇವೆ ಎಂಬ ಭಾವನೆ ರಾಜ್ಯದ ಜನರಲ್ಲಿದೆ. ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಬಿಜೆಪಿಯ 40 ಪರ್ಸೆಂಟ್ ಸರ್ಕಾರವು ರಾಜ್ಯವನ್ನು ಹೇಗೆ ಲೂಟಿ ಮಾಡಿದೆಯೆಂದರೆ, ಜನರ ಉಸಿರುಕಟ್ಟಿದೆ. ತಾವು ವಂಚನೆಗೆ ಒಳಗಾಗಿದ್ದೇವೆ ಎಂಬ ಭಾವನೆ ರಾಜ್ಯದ ಯುವಜನರಲ್ಲಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಜನರಲ್ಲಿ ಎದ್ದು ಕಾಣುತ್ತಿದೆ.

ಸರ್ಕಾರಿ ಉದ್ಯೋಗದ ನೇಮಕಾತಿಯಲ್ಲಿ ಸಾಲು ಸಾಲು ಹಗರಣಗಳು ನಡೆದಿವೆ. ಪಿಎಸ್‌ಐ ನೇಮಕಾತಿ ಹಗರಣ, ಸಹಾಯಕ ಎಂಜಿನಿಯರ್ ನೇಮಕಾತಿ ಹಗರಣ, ಜಿಲ್ಲಾ ಸಹಕಾರಿ ಬ್ಯಾಂಕ್‌ಗಳ ನೇಮಕಾತಿ ಹಗರಣ, ಸಹಾಯಕ ಪ್ರಾಧ್ಯಾಪಕ ನೇಮಕಾತಿ ಹಗರಣಗಳು ರಾಜ್ಯದ ಯುವಜನರ ಭವಿಷ್ಯವನ್ನು ಮಂಕಾಗಿಸಿವೆ.

ಬೊಮ್ಮಾಯಿ ಸರ್ಕಾರವು, 90 ದಿನಗಳಲ್ಲಿ ಮೂರು ಬಾರಿ ಮೀಸಲಾತಿಯನ್ನು ಮರುವರ್ಗೀಕರಿಸಿದೆ. ಚುನಾವಣಾ ಲಾಭಕ್ಕಾಗಿ ಮೀಸಲಾತಿಯನ್ನು ತಿರುಚುವುದು ಬಿಜೆಪಿಗೆ ಸಾಮಾನ್ಯ ಎಂಬಂತಾಗಿದೆ ಎಂಬುದು ಸಾಬೀತಾಗಿದೆ. ಲಿಂಗಾಯತರು, ಒಕ್ಕಲಿಗರು, ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಮುಸ್ಲಿಮರನ್ನು ವಂಚಿಸಿರುವುದು ದೃಢಪಟ್ಟಿದೆ. ಮೀಸಲಾತಿಯನ್ನು ಪದೇ ಪದೇ ವರ್ಗೀಕರಣ ಮಾಡಿದ್ದು ಚುನಾವಣಾ ಗಿಮಿಕ್ ಮಾತ್ರ, ಬದಲಿಗೆ ಅದರಿಂದ ಯಾರಿಗೂ ಲಾಭವಿಲ್ಲ. ಈ ಮರುವರ್ಗೀಕರಣಗಳು ಸಂವಿಧಾನಬದ್ಧವಲ್ಲ ಎಂಬುದು ಈ ಎಲ್ಲಾ ಸಮುದಾಯಗಳಿಗೆ ಮನದಟ್ಟಾಗಿದೆ. ಇದು ಬೊಮ್ಮಾಯಿ ಸರ್ಕಾರದ ಅಪ್ರಾಮಾಣಿಕತೆಯ ಪರಮಾವಧಿ.

ಬಿಜೆಪಿಯ ಒಡೆದು ಆಳುವ ನೀತಿಯ ವಿರುದ್ಧ ರಾಜ್ಯದಾದ್ಯಂತ ಆಕ್ರೋಶ ಹೆಚ್ಚಾಗುತ್ತಿದೆ ಮತ್ತು ಜನರು ಬದಲಾವಣೆಗಾಗಿ ಕಾತರರಾಗಿದ್ದಾರೆ. ಬಿಜೆಪಿಯ 40 ಪರ್ಸೆಂಟ್ ಸರ್ಕಾರವನ್ನು ಜನರು, ಈ ಚುನಾವಣೆಯಲ್ಲಿ 40 ಸ್ಥಾನಗಳಿಗೆ ಇಳಿಸಲಿದ್ದಾರೆ.

● ಚುನಾವಣೆ ಎದುರಿನಲ್ಲಿದೆ. ನಿಮ್ಮ ಕಾರ್ಯತಂತ್ರವೇನು?

ಕಾಂಗ್ರೆಸ್‌ನ ಕಾರ್ಯತಂತ್ರ ಸ್ಪಷ್ಟವಾಗಿದೆ ಮತ್ತು ನಿಚ್ಚಳವಾಗಿದೆ. 'ಬ್ರ್ಯಾಂಡ್ ಕರ್ನಾಟಕ'ವನ್ನು ನಾವು ಮರುಕಟ್ಟುತ್ತೇವೆ. ಇಡೀ ದೇಶವು ಕರ್ನಾಟಕವನ್ನು ಮಾದರಿಯಾಗಿ ಸ್ವೀಕರಿಸುವಂತೆ ಮಾಡುತ್ತೇವೆ. ಜನರನ್ನು ಪರಸ್ಪರ ಎತ್ತಿಕಟ್ಟುವ ಮತ್ತು ಸಂಘರ್ಷವನ್ನು ಹುಟ್ಟುಹಾಕುವಂತಹ ಕೃತ್ಯಗಳಿಂದ ರಾಜ್ಯದ ವರ್ಚಸ್ಸು ಕುಗ್ಗಿದೆ. ನಾವು ಕನ್ನಡಿಗರ ಪ್ರತಿಷ್ಠೆಯನ್ನು ಮರುಸ್ಥಾಪಿಸುತ್ತೇವೆ. ರಾಜ್ಯದಲ್ಲೀಗ ಬಿಜೆಪಿಯ ವಿಭಜನೆ ಮತ್ತು ವಂಚನೆಯ ಸಂಕಥನಗಳು ತಾಂಡವವಾಡುತ್ತಿವೆ. ನಾವು ಅಭಿವೃದ್ಧಿ ಮತ್ತು ಪ್ರಗತಿಯ ಹಾದಿಯನ್ನು ಸ್ಥಾಪಿಸುತ್ತೇವೆ.

ಈಗ ರಾಜ್ಯದಲ್ಲಿ ದುರಾಡಳಿತವಿದೆ, ಸರ್ಕಾರ ಜಡವಾಗಿದೆ. ಅವುಗಳ ಬದಲಿಗೆ ಜನರಿಗೆ ಸ್ಪಂದಿಸುವ, ಉತ್ತರದಾಯಿ ಆಡಳಿತವನ್ನು ಕಾಂಗ್ರೆಸ್ ಸರ್ಕಾರ ನೀಡಲಿದೆ. ಕಾಂಗ್ರೆಸ್ ಈಗ ನೀಡಿರುವ ಗ್ಯಾರೆಂಟಿಗಳನ್ನು ಮೊದಲ ಸಂಪುಟ ಸಭೆಯಲ್ಲಿಯೇ ಜಾರಿಗೆ ತರುತ್ತೇವೆ. ಅನ್ವೇಷಣೆ, ಕ್ರಿಯಾಶೀಲತೆಗೆ ತೊಡಿಸಿರುವ ಸಂಕೋಲೆಗಳನ್ನು ತೊಡೆದುಹಾಕುತ್ತೇವೆ. 'ನವ ಕರ್ನಾಟಕ'ದ ಧ್ಯೇಯಗಳನ್ನು ರಾಜ್ಯದ ಜನರು, ದೇಶ ಮತ್ತು ವಿಶ್ವದ ಎದುರು ತೆರೆದಿಡುತ್ತೇವೆ.

● ಅಭ್ಯರ್ಥಿಗಳ ಆಯ್ಕೆಯಲ್ಲಿ ವಿಳಂಬವೇಕೆ?

ಅಭ್ಯರ್ಥಿಗಳ ಆಯ್ಕೆಯಲ್ಲಿ ವಿಳಂಬದ ಪ್ರಶ್ನೆಯೇ ಇಲ್ಲ. ನೀತಿ ಸಂಹಿತೆ ಜಾರಿಯಾಗುವ ಮುನ್ನವೇ ನಾವು 124 ಅಭ್ಯರ್ಥಿಗಳ ಪಟ್ಟಿಯನ್ನು ಘೋಷಿಸಿದ್ದನ್ನು ನೀವು ಗಮನಿಸಿದ್ದೀರಿ ಎಂದುಕೊಂಡಿದ್ದೇನೆ. ಉಳಿದ ಅಭ್ಯರ್ಥಿಗಳನ್ನೂ ಶೀಘ್ರವೇ ಅಂತಿಮಗೊಳಿಸುತ್ತೇವೆ. ಆದರೆ, ಬಿಜೆಪಿಯಲ್ಲಿ ನೋಡಿ. ಬಿಜೆಪಿಯ ಹಲವು ಹಾಲಿ ಶಾಸಕರು ಸ್ಪರ್ಧಿಸಬೇಕೇ ಬೇಡವೇ ಎಂದು ಮೀನಮೇಷ ಎಣಿಸುತ್ತಿದ್ದಾರೆ. ಮುಖ್ಯಮಂತ್ರಿ ಬೊಮ್ಮಾಯಿಯೇ ಯಾವ ಕ್ಷೇತ್ರದಲ್ಲಿ ಸ್ಪರ್ಧಿಸುವುದು ಎಂದು ಹುಡುಕುತ್ತಿರುವ ಸಂದರ್ಭದಲ್ಲಿ, ಬಿಜೆಪಿ ಈವರೆಗೆ ಒಬ್ಬ ಅಭ್ಯರ್ಥಿಯನ್ನೂ ಘೋಷಿಸದೇ ಇರುವುದರಲ್ಲಿ ಆಶ್ಚರ್ಯವಿಲ್ಲ.

● ಗೆಲ್ಲುವ ಸಾಧ್ಯತೆ ಒಂದೇ ಅಭ್ಯರ್ಥಿ ಆಯ್ಕೆಯ ಮಾನದಂಡವೇ ಅಥವಾ ಜಾತಿ ಮತ್ತು ಧರ್ಮವನ್ನೂ ಪರಿಗಣಿಸುತ್ತೀರಾ?

ಪಕ್ಷ ನಿಷ್ಠೆ, ಪಕ್ಷದ ಸಿದ್ಧಾಂತದಲ್ಲಿ ನಂಬಿಕೆ, ಜನಸೇವೆಯ ಬದ್ಧತೆ, ಸಾಮಾಜಿಕ ನ್ಯಾಯ ಮತ್ತು ಸುಧಾರಣೆಗಾಗಿನ ತುಡಿತ ಹಾಗೂ ಗೆಲ್ಲುವ ಸಾಧ್ಯತೆಗಳನ್ನು ಪರಿಗಣಿಸುತ್ತೇವೆ.

● ಟಿಕೆಟ್ ಹಂಚಿಕೆ ಕಾಂಗ್ರೆಸ್‌ಗೆ ದೊಡ್ಡ ಸವಾಲಾಗಿದೆಯಲ್ಲವೇ?

ಇದು ತಪ್ಪು ಗ್ರಹಿಕೆ. ಒಮ್ಮತದಿಂದ ಅಭ್ಯರ್ಥಿಗಳ ಆಯ್ಕೆ ನಡೆದಿದೆ. ಇದರ ಶ್ರೇಯ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮತ್ತು ಪರಿಶೀಲನಾ ಸಮಿತಿ ಸದಸ್ಯರಿಗೆ ಸಲ್ಲಬೇಕು. ಬಿಜೆಪಿಯಲ್ಲಿ ಅರಾಜಕತೆ ಮತ್ತು ಬಣ ರಾಜಕಾರಣವಿದೆ. ಆದರೆ, ಕಾಂಗ್ರೆಸ್‌ನಲ್ಲಿ ಅಭ್ಯರ್ಥಿ ಆಯ್ಕೆಯಲ್ಲಿ ವ್ಯಕ್ತಿಗತ ಹಿತಾಸಕ್ತಿಗಿಂತ ರಾಜ್ಯದ ಅಭಿವೃದ್ಧಿಗೆ ಆದ್ಯತೆ ಎಂಬುದನ್ನು ನಾವು ಸಾಬೀತು ಮಾಡಿದ್ದೇವೆ.

● ಈ ಚುನಾವಣೆಯಲ್ಲಿ ನಿಮ್ಮ ಮುಖ್ಯ ಕಾರ್ಯಸೂಚಿಯೇನು?

ಕಲ್ಯಾಣ ರಾಜ್ಯವನ್ನು ಒಳಗೊಂಡ ಒಂದು ಅಭಿವೃದ್ಧಿ ಮಾದರಿಯನ್ನು ರೂಪಿಸುವುದು ನಮ್ಮ ಕಾರ್ಯಸೂಚಿ. ಕುಟುಂಬದ ಮಹಿಳಾ ಯಜಮಾನಿಗೆ ಮಾಸಿಕ ₹2,000 ನೀಡುವ ಗೃಹಲಕ್ಷ್ಮಿ ಘೋಷಣೆಯು, ಅತೀವ ಹಣದುಬ್ಬರದಿಂದ ಬಸವಳಿದವರಿಗೆ ನೆರವಾಗಲಿದೆ. ಗೃಹಜ್ಯೋತಿ ಘೋಷಣೆಯ ಅಡಿಯಲ್ಲಿ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡಲಾಗುತ್ತದೆ. ಬಿಪಿಎಲ್ ಚೀಟಿ ಹೊಂದಿರುವ ಪ್ರತಿ ವ್ಯಕ್ತಿಗೆ 10 ಕೆ.ಜಿ. ಅಕ್ಕಿ ನೀಡುವ ಅನ್ನಭಾಗ್ಯ ಘೋಷಣೆಯು ಹಸಿವನ್ನು ಹೋಗಲಾಡಿಸಲಿದೆ. ಪದವೀಧರರಿಗೆ ಮತ್ತು ಡಿಪ್ಲೊಮಾ ಮಾಡಿದವರಿಗೆ ಎರಡು ವರ್ಷಗಳವರೆಗೆ ಕ್ರಮವಾಗಿ ₹3,000 ಮತ್ತು ₹1,500 ನೀಡುವ ಯುವನಿಧಿ ಕಾರ್ಯಕ್ರಮವು ಯುವಜನರ ಸಬಲೀಕರಣಕ್ಕೆ ಕಾರಣವಾಗಲಿದೆ.

● ರಾಜ್ಯದಲ್ಲಿನ ಭ್ರಷ್ಟಾಚಾರದ ಬಗ್ಗೆ ನೀವು ಮಾತನಾಡಿದಾಗಲೆಲ್ಲಾ, 'ಕಾಂಗ್ರೆಸ್ ಸರ್ಕಾರದಲ್ಲಿ ಹೀಗಿತ್ತು' ಎಂದು ಬಿಜೆಪಿ ತಿರುಗೇಟು ನೀಡುತ್ತದೆ. ಈ ಬಗ್ಗೆ ಏನು ಹೇಳುತ್ತೀರಿ?

ಕರ್ನಾಟದಲ್ಲಿನ ಬಿಜೆಪಿ ಸರ್ಕಾರವು ದೇಶದಲ್ಲೇ ಅತ್ಯಂತ ಭ್ರಷ್ಟ ಸರ್ಕಾರ ಎಂಬುದರಲ್ಲಿ ಎರಡು ಮಾತಿಲ್ಲ. ಇದು ಕಾಂಗ್ರೆಸ್ ಮಾಡುತ್ತಿರುವ ಆರೋಪವಲ್ಲ. ಶೇ 40ರಷ್ಟು ಕಮಿಷನ್ ಬಗ್ಗೆ ಗುತ್ತಿಗೆದಾರರ ಸಂಘ, ಖಾಸಗಿ ಶಾಲೆಗಳ ಒಕ್ಕೂಟ ಬಹಿರಂಗವಾಗಿ ಹೇಳಿರಲಿಲ್ಲವೇ ಮತ್ತು ಪ್ರಧಾನಿಗೇ ಪತ್ರ ಬರೆದಿರಲಿಲ್ಲವೇ? ಮಠಕ್ಕೆ ನೀಡಿದ ಅನುದಾನ ಬಿಡುಗಡೆಗೆ ಶೇ 30ರಷ್ಟು ಕಮಿಷನ್ ಕೇಳಲಾಗುತ್ತಿದೆ ಎಂದು ಗದಗದ ದಿಂಗಾಲೇಶ್ವರ ಸ್ವಾಮೀಜಿ ಹೇಳಿರಲಿಲ್ಲವೇ? ಯತ್ನಾಳರಂತಹ ಬಿಜೆಪಿ ನಾಯಕರೇ ಭ್ರಷ್ಟಾಚಾರ ಮತ್ತು ಮುಖ್ಯಮಂತ್ರಿ ಹುದ್ದೆಗೆ ಹಣ ನಿಗದಿಯಾಗಿತ್ತು ಎಂದು ಸಾರ್ವಜನಿಕವಾಗಿ ಹೇಳಿರಲಿಲ್ಲವೇ? ಸಚಿವರೊಬ್ಬರು ಮುಖ್ಯಮಂತ್ರಿಯ ವಿರುದ್ಧ ರಾಜ್ಯಪಾಲರಲ್ಲಿಗೆ ಹೋಗಿರಲಿಲ್ಲವೇ? ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ದುರ್ನಾತದಿಂದ ವಾಕರಿಕೆ ಬರುತ್ತದೆ ಎಂಬುದಕ್ಕೆ ಹಲವು ನಿದರ್ಶನಗಳಿವೆ. ನಮ್ಮತ್ತ ಬೊಟ್ಟು ಮಾಡುತ್ತಿರುವ ಬಿಜೆಪಿ ನಾಯಕರಿಗೆ 'ಭ್ರಷ್ಟಾಚಾರ ಮತ್ತು ದುರಾಡಳಿತದ ಗಾಜಿನ ಮನೆಯಲ್ಲಿ ನೀವು ನಿಂತಿದ್ದೀರಿ, ಅದು ಚೂರಾಗಲಿದೆ' ಎಂದಷ್ಟೇ ಹೇಳಲು ಬಯಸುತ್ತೇನೆ.

> **● ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿ ಯಾರು?**
> ನಾವು ಕನ್ನಡದ ಪ್ರತಿಷ್ಠೆಯನ್ನು ಮರುಸ್ಥಾಪಿಸಲು ಹೋರಾಡುತ್ತಿದ್ದೇವೆ. ಬ್ರ್ಯಾಂಡ್ ಕರ್ನಾಟಕ ಪುನಸ್ಥಾಪನೆಗೊಂಡು ಅಭಿವೃದ್ಧಿಯುಗಕ್ಕೆ ದಾರಿ ಮಾಡಿಕೊಡಲು ಹೋರಾಡುತ್ತಿದ್ದೇವೆ. ನಮ್ಮೆಲ್ಲ ನಾಯಕರಿಗೂ ಇದುವೇ ಆದ್ಯತೆಯೇ ಹೊರತು ಅಧಿಕಾರದಲ್ಲಿ ದೊರೆಯುವ ಪಾಲು ಅಲ್ಲ. ಅಧಿಕಾರಕ್ಕೆ ಬಂದರೆ ನಾವು ಜನಸೇವಕರು ಮತ್ತು ಎಲ್ಲರೂ ಒಟ್ಟಾಗಿ ರಾಜ್ಯ ಕಟ್ಟುತ್ತೇವೆ.

● ಕಾಂಗ್ರೆಸ್ ಒಡೆದ ಮನೆಯಾಗಿದೆ. ಸಿದ್ದರಾಮಯ್ಯ ಮತ್ತು ಡಿಕೆಶಿ ಮಧ್ಯೆ ಭಿನ್ನಾಭಿಪ್ರಾಯವಿದೆ. ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯಲು ಕಾಂಗ್ರೆಸ್‌ಗೆ ಏಕೆ ಸಾಧ್ಯವಾಗುತ್ತಿಲ್ಲ? ಇದರ ಮಧ್ಯೆ ಬಹುಮತ ಹೇಗೆ ಸಾಧಿಸುತ್ತೀರಿ?

ಕಾಂಗ್ರೆಸ್ ಎಂದಿಗಿಂತ ಇಂದು ಹೆಚ್ಚು ಒಗ್ಗಟ್ಟಾಗಿದೆ. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಒಟ್ಟಿಗೇ ಕೆಲಸ ಮಾಡುತ್ತಿದ್ದಾರೆ, ಒಟ್ಟಿಗೇ ಪ್ರಯಾಣಿಸುತ್ತಿದ್ದಾರೆ, ನಮ್ಮ ಎಲ್ಲಾ ನಾಯಕರ ಜತೆಗೂಡಿ ಹೋರಾಡುತ್ತಿದ್ದಾರೆ. ಬಿಜೆಪಿಯಿಂದ ಕರ್ನಾಟಕವನ್ನು ರಕ್ಷಿಸಲು ನಾವೆಲ್ಲಾ ಒಟ್ಟಾಗಿ ಹೋರಾಡುತ್ತಿರುವ ಸಂದರ್ಭದಲ್ಲಿ, ಕಾಂಗ್ರೆಸ್ ಒಡೆದ ಮನೆ ಎನ್ನುವುದು ಸರಿಯಲ್ಲ. ನಾವು 150ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತೇವೆ.

● ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷದ ಅಧ್ಯಕ್ಷರಾಗಿರುವುದು, ಈ ಚುನಾವಣೆಯನ್ನು ಹೇಗೆ ಪ್ರಭಾವಿಸುತ್ತದೆ?

ಖರ್ಗೆ ಅವರು ಪಕ್ಷದ ಅಧ್ಯಕ್ಷರಾಗಿರುವುದು ನಮ್ಮ ಉತ್ಸಾಹ ಮತ್ತು ಚೈತನ್ಯವನ್ನು ಹೆಚ್ಚಿಸಿದೆ. ಒಬ್ಬ ಕನ್ನಡಿಗ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರಾಗಿರುವುದು ಹೆಮ್ಮೆಯ ವಿಚಾರ. ದಶಕಗಳ ಕಾಲ ಕರ್ನಾಟಕಕ್ಕಾಗಿ ಸೇವೆ ಸಲ್ಲಿಸಿದ ಅವರ ಬದ್ಧತೆಯ ಬಗ್ಗೆ ಎಲ್ಲರಿಗೂ ತಿಳಿದೇ ಇದೆ. 150ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವಲ್ಲಿ ಅವರ ಉಪಸ್ಥಿತಿ ಮತ್ತು ಮಾರ್ಗದರ್ಶನ ನಮಗೆ ನೆರವಿಗೆ ಬರಲಿದೆ.

● 'ಭಾರತ್ ಜೋಡೊ ಯಾತ್ರೆ' ಮತ್ತು ಪ್ರಜಾಧ್ವನಿ ಯಾತ್ರೆಯ ಪರಿಣಾಮಗಳೇನು?

ರಾಹುಲ್ ಗಾಂಧಿ ಅವರ 'ಭಾರತ್ ಜೋಡೊ ಯಾತ್ರೆ' ಕರ್ನಾಟಕದಲ್ಲಿ 21 ದಿನಗಳ ಕಾಲ ಸಾಗಿತ್ತು. ಹಣದುಬ್ಬರ, ನಿರುದ್ಯೋಗ, ಅಸಮಾನತೆ ಮತ್ತು ದ್ವೇಷ ರಾಜಕಾರಣದ ವಿರುದ್ಧ ನಾವೆಲ್ಲರೂ ಒಟ್ಟಾಗಿ ಹೋರಾಡಲು ಈ ಯಾತ್ರೆ ನೆರವಾಯಿತು. ಪ್ರಜಾಧ್ವನಿ ಯಾತ್ರೆ ಈಗಾಗಲೇ 200ಕ್ಕೂ ಹೆಚ್ಚು ಕ್ಷೇತ್ರಗಳನ್ನು ಪೂರೈಸಿದೆ. ಜನರ ಸಮಸ್ಯೆಗಳಿಗೆ ಕಾಂಗ್ರೆಸ್ ಮಾತ್ರವೇ ಪರಿಹಾರ ಒದಗಿಸಬಲ್ಲದು ಎಂಬುದನ್ನು ಈ ಯಾತ್ರೆ ಮನವರಿಕೆ ಮಾಡಿಕೊಟ್ಟಿದೆ. ಈ ಯಾತ್ರೆಯ ಕಾರಣದಿಂದಲೇ ಕಾಂಗ್ರೆಸ್ ಗ್ಯಾರೆಂಟಿಗಳು ರೂಪುಗೊಂಡಿದ್ದು. ಈ ಯಾತ್ರೆಗಳು ನಿಜವಾದ ಅರ್ಥದಲ್ಲಿ ಜನರ ದನಿಯೇ ಆಗಿವೆ.

● ಪಕ್ಷ ಅಧಿಕಾರಕ್ಕೆ ಬಂದರೆ 'ಗ್ಯಾರೆಂಟಿ' ಯೋಜನೆಗಳ ಭರವಸೆ ಕೊಟ್ಟಿದ್ದೀರಿ. ರಾಜ್ಯವು ಈಗಾಗಲೇ ಸಾಲದಲ್ಲಿದೆ. ಹಾಗಿರುವಾಗ ಈ ಎಲ್ಲ ಯೋಜನೆಗಳಿಗೆ ಹಣ ಎಲ್ಲಿಂದು ಹೊಂದಿಸುವಿರಿ? ಕಾಂಗ್ರೆಸ್ ಪಕ್ಷವು ಗ್ಯಾರೆಂಟಿ ಕಾರ್ಡ್ ಅಲ್ಲ, ವಿಸಿಟಿಂಗ್ ಕಾರ್ಡ್ ವಿತರಿಸುತ್ತಿದೆ ಎಂದು ಬಿಜೆಪಿ ವ್ಯಂಗ್ಯವಾಡುತ್ತಿದೆ. ಏನಂತೀರಿ?

ಕಾಂಗ್ರೆಸ್ 'ಗ್ಯಾರೆಂಟಿಗಳು' ಯುಗ ಪ್ರವರ್ತಕವಾಗಿವೆ. ಮುಂದಿನ ದಿನಗಳಲ್ಲಿ ಎಲ್ಲ ರಾಜ್ಯಗಳೂ ಅವುಗಳನ್ನು ಅನುಕರಣೆ ಮಾಡಲಿವೆ. ಶೇ 40ರ ಕಮಿಷನ್ ವ್ಯವಸ್ಥೆಯನ್ನು ನಿಲ್ಲಿಸಿದರೆ ಈ ಎಲ್ಲ ಯೋಜನೆಗಳಿಗೆ ಸಾಕಷ್ಟು ಹಣ ದೊರೆಯುತ್ತದೆ. ರಾಜ್ಯದ ಅರ್ಥವ್ಯವಸ್ಥೆಯ ಗಾತ್ರವು ದುಪ್ಪಟ್ಟಾಗಬೇಕು. ಮುಂದಿನ ಐದು ವರ್ಷಗಳಲ್ಲಿ ಬಜೆಟ್ ಗಾತ್ರವು ₹6 ಲಕ್ಷ ಕೋಟಿಗೆ ತಲುಪಬೇಕು. ಈ ಎಲ್ಲ ಜನಕಲ್ಯಾಣ ಯೋಜನೆಗಳಿಗೆ ಬೇಕಾದಷ್ಟು ಹಣವು ದೊರೆಯುತ್ತದೆ. ಹಾಗೆಯೇ, ಕಾಂಗ್ರೆಸ್ ಗ್ಯಾರೆಂಟಿಗಳು ಉಚಿತ ಕೊಡುಗೆಗಳಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮಹಿಳೆಯರು, ಯುವ ಜನರು ಮತ್ತು ಬಡವರ ಕೈಸೇರುವ ಹಣವು ಅರ್ಥ ವ್ಯವಸ್ಥೆಯು ಹಲವು ಪಟ್ಟು ಬೆಳೆಯಲು, ಬೇಡಿಕೆ ಹೆಚ್ಚಿಸಲು ಮತ್ತು ಉದ್ಯೋಗ ಸೃಷ್ಟಿಗೆ ನೆರವಾಗುತ್ತದೆ. ರಾಜ್ಯದ ಬಿಜೆಪಿ ನಾಯಕರು ಈಗಾಗಲೇ ಸೋತವರ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ. ಕಾಂಗ್ರೆಸ್ ಗ್ಯಾರೆಂಟಿಗಳನ್ನು ವಿರೋಧಿಸುವ ಮೂಲಕ ರಾಜ್ಯದ ಮಹಿಳೆಯರು ಮತ್ತು ಯುವ ಜನರನ್ನು ಬಿಜೆಪಿ ಅವಮಾನಿಸಿದೆ. ಈ ಚುನಾವಣೆಯಲ್ಲಿ ಜನರು ಅವರಿಗೆ ಪಾಠ ಕಲಿಸಲಿದ್ದಾರೆ.

ಪ್ರಜಾಧ್ವನಿ ಯಾತ್ರೆಯ ದೃಶ್ಯ

● ರಾಜ್ಯದಲ್ಲಿ ಮೋದಿ ಅಲೆಯ ಕುರಿತು ಏನು ಹೇಳುತ್ತೀರಿ...

ಇದು ಮೋದಿ ಚುನಾವಣೆ ಅಲ್ಲ. ರಾಷ್ಟ್ರ ಮಟ್ಟದ ಚುನಾವಣೆ ಇರುವುದು 2024ರಲ್ಲಿ. ಇನ್ನೂ ಒಂದು ವಿಷಯ ನೆನಪಿನಲ್ಲಿ ಇರಿಸಿಕೊಳ್ಳಿ. ಡಬಲ್ ಎಂಜಿನ್ ಎಂದು ಹೇಳಿಕೊಳ್ಳುವ ಸರ್ಕಾರವು ಕರ್ನಾಟಕದ ಮಟ್ಟಿಗೆ ಟ್ರಬಲ್ ಎಂಜಿನ್ ಆಗಿಬಿಟ್ಟಿದೆ. ಭ್ರಷ್ಟಾಚಾರ ಹಗರಣಗಳು, ನೇಮಕಾತಿ ಹಗರಣಗಳು, ದುರಾಡಳಿತ, ಬೊಕ್ಕಸದ ಲೂಟಿ ಸೇರಿದಂತೆ ಎಲ್ಲ ರೀತಿಯ ಪ್ರಮಾದಗಳು ಮೋದಿ ಅವರ ಮೂಗಿನಡಿಯಲ್ಲಿ ನಾಲ್ಕು ವರ್ಷಗಳಿಂದ ನಡೆದಿದೆ. ಅವರು ಏಕೆ ಹಸ್ತಕ್ಷೇಪ ನಡೆಸಲಿಲ್ಲ? ಅವರು ಏಕೆ ಅದನ್ನು ನಿಲ್ಲಿಸಲಿಲ್ಲ? ಪ್ರವಾಹ ಪರಿಹಾರ ಮತ್ತು ಜಿಎಸ್‌ಟಿ ಬಾಕಿಯನ್ನು ಕನ್ನಡಿಗರಿಗೆ ನಿರಾಕರಿಸಿದ್ದು ಏಕೆ? ಎಸ್‌ಸಿ ಮತ್ತು ಎಸ್‌ಟಿ ಮೀಸಲಾತಿ ಹೆಚ್ಚಳವನ್ನು ಮೋದಿ ಸರ್ಕಾರ ತಿರಸ್ಕರಿಸಿದ್ದು ಏಕೆ? ಈ ಎಲ್ಲ ವಿಚಾರಗಳ ಕುರಿತು ಪ್ರಧಾನಿ ಮೌನವಾಗಿರುವುದು ಏಕೆ? ಮೋದಿ ನೇತೃತ್ವದ ಸರ್ಕಾರವು ಕರ್ನಾಟಕಕ್ಕೆ ಹಾನಿಕರವಾಗಿ ಪರಿಣಮಿಸಿದೆ.

ಒಬ್ಬರಿಗೆ ಹಾಕಿದ ಮತ ಬೇರೊಬ್ಬರಿಗೆ ಹೋಗುತ್ತದೆಯೇ...

ಪ್ರತಿ ಬಾರಿ ಚುನಾವಣೆ ನಡೆದು, ಫಲಿತಾಂಶ ಪ್ರಕಟವಾದಾಗಲೂ ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ತಿರುಚಲಾಗಿದೆ ಎಂಬ ಆರೋಪ ಕೇಳಿಬರುತ್ತದೆ. ಮತದಾನದ ದಿನವೇ ಮತಯಂತ್ರಗಳು ಸರಿಯಾಗಿ ಕೆಲಸ ಮಾಡಲಿಲ್ಲ, ಯಾವುದೋ ಅಭ್ಯರ್ಥಿಗೆ ಮತ ಒತ್ತಿದರೆ ಮತ್ಯಾವುದೋ ಅಭ್ಯರ್ಥಿಗೆ ಮತ ಬೀಳುತ್ತದೆ ಎಂಬ ಆರೋಪಗಳೂ ಕೇಳಿಬರುತ್ತವೆ. ಇಂತಹ ಆರೋಪಗಳ ನಿರ್ವಹಣೆಗೆ ಚುನಾವಣಾ ಆಯೋಗವು ಪರಿಹಾರ ವ್ಯವಸ್ಥೆಯನ್ನು ಹೊಂದಿದೆ. ಮತದಾನದ ಸಂದರ್ಭದಲ್ಲಿ ಬರುವ ದೂರುಗಳನ್ನು ಸ್ಥಳದಲ್ಲಿಯೇ ಪರಿಹರಿಸಲು ಈ ವ್ಯವಸ್ಥೆ ಅವಕಾಶ ಮಾಡಿಕೊಡುತ್ತದೆ. ಮತದಾನವು ಸರಿಯಾಗಿ ನಡೆಯುತ್ತಿದೆ ಎಂದು ಖಚಿತಪಡಿಸಿಕೊಳ್ಳುವ ಮತ್ತು ಸರಿಯಾಗಿ ನಡೆಯದೇ ಇದ್ದರೆ, ಆ ಬಗ್ಗೆ ದೂರು ನೀಡುವ ಎಲ್ಲಾ ಹಕ್ಕೂ ಮತದಾರನಿಗೆ ಇದೆ.

ಮತದಾರನು ತಾನು ಮತ ಹಾಕಿದ ಅಭ್ಯರ್ಥಿಗೇ ಮತ ಬಿದ್ದಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು 'ವಿವಿಪ್ಯಾಟ್' ವ್ಯವಸ್ಥೆ ಅನುವು ಮಾಡಿಕೊಡುತ್ತದೆ. ಮತದಾರನು ಮತಯಂತ್ರದಲ್ಲಿ ಗುಂಡಿ ಒತ್ತಿದ ನಂತರ, 'ವಿವಿಪ್ಯಾಟ್' ಯಂತ್ರವು ಚೀಟಿಯ ರೂಪದಲ್ಲಿ ಮತವನ್ನು ದೃಢಪಡಿಸುತ್ತದೆ. ಈ ಯಂತ್ರವು ತಪ್ಪು ಮತವನ್ನು ತೋರಿಸಿದರೆ, ಮತದಾರನು ಸ್ಥಳದಲ್ಲಿಯೇ ಅದಕ್ಕೆ ಆಕ್ಷೇಪ ವ್ಯಕ್ತಪಡಿಸಬಹುದು. ಮತದಾರನ ಆರೋಪವನ್ನು ಅಥವಾ ದೂರನ್ನು ಮತಗಟ್ಟೆಯ ಪ್ರಿಸೈಡಿಂಗ್ ಅಧಿಕಾರಿಯು ತಳ್ಳಿಹಾಕುವಂತಿಲ್ಲ. ಬದಲಿಗೆ,

1. ಇಂತಹ ಆರೋಪ ಅಥವಾ ದೂರು ನೀಡಿದ ನಂತರದ ಪ್ರಕ್ರಿಯೆ ಬಗ್ಗೆ ಮತದಾರನಿಗೆ ಮಾಹಿತಿ ನೀಡಬೇಕು. ದೂರು ಸುಳ್ಳಾಗಿದ್ದರೆ, ಎದುರಿಸಬೇಕಾದ ಕ್ರಮಗಳ ಬಗ್ಗೆ ಮತದಾರನಿಗೆ ಮಾಹಿತಿ ನೀಡಬೇಕು
2. ಮತದಾರನಿಂದ ಲಿಖಿತ ರೂಪದಲ್ಲಿ ದೂರನ್ನು ಸ್ವೀಕರಿಸಬೇಕು
3. ಪರೀಕ್ಷಾರ್ಥವಾಗಿ ಮತ ಚಲಾಯಿಸುವಂತೆ ಮತದಾರನಿಗೆ ಸೂಚಿಸಬೇಕು. ಪರೀಕ್ಷಾರ್ಥ ಮತ ಚಲಾವಣೆಯ ವೇಳೆ ಅಭ್ಯರ್ಥಿ ಅಥವಾ ಅಭ್ಯರ್ಥಿಯ ಪಕ್ಷದ ಪ್ರತಿನಿಧಿಗಳು ಮತಗಟ್ಟೆಯಲ್ಲಿ ಇರಬೇಕು. ಪರೀಕ್ಷಾರ್ಥ ಮತ ಚಲಾವಣೆಯ ನಂತರ ವಿವಿಪ್ಯಾಟ್‌ನಲ್ಲಿ ಬರುವ ಚೀಟಿಯನ್ನು ಪರಿಶೀಲಿಸಬೇಕು
4. ಒಬ್ಬ ಅಭ್ಯರ್ಥಿಗೆ ಹಾಕಿದ ಮತವು ಬೇರೊಬ್ಬ ಅಭ್ಯರ್ಥಿಗೆ ಹೋಗುತ್ತಿದೆ ಎಂಬುದನ್ನು ಪರೀಕ್ಷಾರ್ಥ ಮತ ಚಲಾವಣೆಯು ದೃಢಪಡಿಸಿದರೆ, ತಕ್ಷಣವೇ ಮತ ಚಲಾವಣಾ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು
5. ಮತ ಚಲಾವಣೆ ಮತ್ತು ದಾಖಲಾತಿಯಲ್ಲಿ ಲೋಪವಾಗುತ್ತಿರುವ ಬಗ್ಗೆ ರಿಟರ್ನಿಂಗ್ ಅಧಿಕಾರಿಗೆ ತಕ್ಷಣವೇ ಮಾಹಿತಿ ನೀಡಬೇಕು ಮತ್ತು ರಿಟರ್ನಿಂಗ್ ಅಧಿಕಾರಿಯ ಸೂಚನೆಯನ್ನು ಪಾಲಿಸಬೇಕು

ಮತದಾರನ ಆರೋಪ ಅಥವಾ ದೂರು ಸಾಬೀತಾಗದೇ ಇದ್ದರೆ....,

1. ಮತಗಟ್ಟೆಯಲ್ಲಿ ಇರುವ 17ಎ ನಮೂನೆಯಲ್ಲಿ ಪರೀಕ್ಷಾರ್ಥ ಮತ ಚಲಾವಣೆಯ ಪ್ರಕ್ರಿಯೆಯು ಸರಿಯಾಗಿ ನಡೆದಿದೆ ಎಂದು ನಮೂದಿಸಬೇಕು
2. 17ಎ ನಮೂನೆಯಲ್ಲಿ ಮತದಾರನ ಸಹಿ ಅಥವಾ ಹೆಬ್ಬೆಟ್ಟು ಗುರುತನ್ನು ಪಡೆಯಬೇಕು
3. 17ಸಿ ನಮೂನೆಯಲ್ಲೂ ಈ ಬಗ್ಗೆ ಎಲ್ಲಾ ವಿವರಗಳನ್ನು ದಾಖಲಿಸಬೇಕು

ಮತದಾನ ದೃಢೀಕರಣ/ ಖಾತರಿ

ಮತದಾರನು ತಾನು ಯಾರಿಗೆ ಮತ ಚಲಾಯಿಸಿದ್ದೇನೋ ಆ ಅಭ್ಯರ್ಥಿಗೇ ಮತ ಹೋಗಿದೆ ಎಂಬುದನ್ನು ಖಾತರಿ ಮಾಡಿಕೊಳ್ಳುವ ವ್ಯವಸ್ಥೆಯೇ ವಿವಿ–ಪ್ಯಾಟ್ (ವೋಟರ್ ವೆರಿಫೈಡ್ ಆಡಿಟ್ ಟ್ರಯಲ್). ವಿವಿ–ಪ್ಯಾಟ್ ಯಂತ್ರವು ಒಂದು ಪ್ರತ್ಯೇಕ ಘಟಕವಾಗಿದ್ದರೂ, ವಿದ್ಯುನ್ಮಾನ ಮತಯಂತ್ರದೊಟ್ಟಿಗೆ ಮಾತ್ರ ಕೆಲಸ ಮಾಡುತ್ತದೆ.

ಇವಿಎಂ ಮತ್ತು ವಿವಿ–ಪ್ಯಾಟ್

ಕಂಟ್ರೋಲ್ ಯುನಿಟ್: ಇದು ಇವಿಎಂ ಅಥವಾ ವಿದ್ಯುನ್ಮಾನ ಮತ ಯಂತ್ರದ ಬಹುಮುಖ್ಯವಾದ ಭಾಗ. ಮತಗಟ್ಟೆಯಲ್ಲಿ ಇದನ್ನು ಪ್ರತ್ಯೇಕವಾಗಿ ಇರಿಸಲಾಗಿರುತ್ತದೆ. ಮತದಾರರ ಪಟ್ಟಿ ಮತ್ತು ಮತದಾರನ ಚೀಟಿಯನ್ನು ಪರಿಶೀಲಿಸಿದ ನಂತರ ಆತ ಮತ ಚಲಾಯಿಸಲು ಅವಕಾಶ ಮಾಡಿಕೊಡಲಾಗುತ್ತದೆ. ಮತದಾರ ಮತದಾನ ಮಾಡಬಹುದು ಎಂಬುದು ದೃಢಪಟ್ಟ ನಂತರ ಅಧಿಕಾರಿಯು ಕಂಟ್ರೋಲ್ ಯೂನಿಟ್‌ನಲ್ಲಿ ಒಂದು ಗುಂಡಿಯನ್ನು ಒತ್ತುತ್ತಾರೆ.

ಮತಯಂತ್ರ: ಇದು ಇವಿಎಂನ ಮತ್ತೊಂದು ಪ್ರಮುಖ ಭಾಗ. ಅಭ್ಯರ್ಥಿಗಳ ಚಿತ್ರ, ಪಕ್ಷದ ಚಿಹ್ನೆ, ಕ್ರಮಸಂಖ್ಯೆ ಮತ್ತು ಮತದಾನದ ಗುಂಡಿ ಇರುವ ಯಂತ್ರ. ಮತದಾರನು ಇಲ್ಲಿ ಗುಂಡಿ ಒತ್ತುವ ಮೂಲಕ ತನ್ನ ಇಚ್ಛೆಯ ಅಭ್ಯರ್ಥಿಗೆ ಮತ ಹಾಕಬಹುದು.

ವಿವಿ–ಪ್ಯಾಟ್: ಮತದಾರನು ಮತಯಂತ್ರದಲ್ಲಿ ತನ್ನ ಆಯ್ಕೆಯ ಅಭ್ಯರ್ಥಿಯ ಚಿತ್ರದ ಮುಂದೆ ಇರುವ ಗುಂಡಿಯನ್ನು ಒತ್ತಿದ ನಂತರ, ವಿವಿ–ಪ್ಯಾಟ್ ಯಂತ್ರವು ಬೀಪ್ ಸದ್ದು ಮಾಡುತ್ತದೆ. ನಂತರ ಯಾರಿಗೆ ಮತ ಹೋಗಿದೆ ಎಂಬುದನ್ನು ಚೀಟಿಯ ರೂಪದಲ್ಲಿ ತೋರಿಸುತ್ತದೆ

ಆಧಾರ: ಚುನಾವಣಾ ಆಯೋಗ

ಪದಬಂಧ 5275

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಣವಿಟ್ಟು ಕೊಂಡೇ ಏರುವಿಕೆ! (4)
3.ನಿಷ್ಪ್ರಯೋಜಕ ಮಾತಿದು (4)
5.ತಾರಕ ಸ್ವರದಲ್ಲಿ ಕೇಳುತ್ತಿರುವ ತಂತಿವಾದ್ಯ(3)
7.ಇದು ಬೇರೆಯವರ ಹಣ (4)
9. ತಂಟೆಕೋರನಿಲ್ಲಿ ತಿರುಗಿದ್ದಾನಲ್ಲಾ! (2)
10. ನವರತ್ನದಲ್ಲಿ ಇದು ಅತೀ ಕಠಿಣವಾದುದು (2)
11.ನಿಜವಾಗಿಯೂ ಧರಿಸಿಕೊಂಡಿರುವ ಯಜ್ಞಸೂತ್ರ (4)
14.ಸಂತನಿಂದ ಮುಂದುವರೆದ ಪೀಳಿಗೆ(3)
16.ಗತಿಯಲ್ಲಿ ಕೊನೆಗೊಂಡಿರುವ ವರ್ಗ(4)
17.ಅತಿಯಾಗಿ ಭೇದಿಯಾಗುವ ರೋಗ(4)

ಮೇಲಿಂದ ಕೆಳಕ್ಕೆ
1.ಆಲದ ಮರಕ್ಕೊರಗಿರುವ ಸೋಮಾರಿ(3)
2.ಗುರುತರವಾದ ಭಾರವೇನಿಲ್ಲ ಬಿಡಿ! (3)
3.ಹಾರವಿಟ್ಟುಕೊಂಡು ಮಾಡಿದ ವ್ಯಾಪಾರ(4)
4.ಸುಗಂಧಯುಕ್ತ ನೀರು (3)
6.ನಕ್ಷತ್ರಗಳ ಗುಂಪು (4)
7.ಉತ್ತರದವರು ಪಡೆದುಕೊಳ್ಳುವ ವೇತನ(3)
8.ಅದೇ ತಾನೆ ಹುಟ್ಟಿದುದು (4)
12.ಮಾತಿನೊಡೆಯಾಗಿರುವ ಸೃಷ್ಟಿಕರ್ತ (4)
13.ಕಡಿದಾದ ಕೊರಕಲು (3)
14.ಜೊತೆಯಲ್ಲಿ ಇರುವ ವ್ಯಕ್ತಿ (3)
15.ಅಂಧಕಾರದಲ್ಲಿ ಕಾಣಿಸಿದ ಅಜ್ಞಾನ (3)



5274ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಶಾಕಾಹಾರಿ 2.ಆದರಣೆ
4.ಮಾನಸಿಕ 6.ವ್ಯಾಸಂಗ
7.ಕಸ 9.ಪರಶು
11.ರವ
13.ವಿಲೋಮ 14.ಕನ್ನಡಕ
16.ಮಕರಂದ 17.ಪ್ರಕರಣ
ಮೇಲಿಂದ ಕೆಳಕ್ಕೆ:
1.ಶಾಖಮಾಪಕ
2.ಆಸ್ತಿ
3.ರಕ್ತಸಂಚಾರ 5.ಕದಪ
8.ಸಮಾಲೋಚಕ
10.ಶುನಕ
12.ವಶೀಕರಣ 15.ಮೋದ

ಸುಡೊಕು 5661

			4		3		6	
	9							5
			5		8	7		
		9		3				7
	3				6		5	
8		6		4		2		3
		5		2			3	4
3						5	9	
	8	2		5			7	6

5660 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಏಪ್ರಿಲ್ 1, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಶುದ್ಧ ಏಕಾದಶಿ ಗಂ. 28-20, ಮಳೆನಕ್ಷತ್ರ: ರೇವತಿ 1, ನಿತ್ಯನಕ್ಷತ್ರ: ಆಶ್ಲೇಷ ಗಂ. 28-48 ಯೋಗ: ಧೃತಿ ಗಂ. 26-44, ಕರಣ: ವಣಿಜ, ಗಂ. 15-11, ಮೀನ ಮಾಸದ 17 ನೇ ದಿನ. ರಾಹುಕಾಲ : ಬೆಳಿಗ್ಗೆ 09-00 –10-30, ಸೂರ್ಯೋದಯ : 06-30 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ : 09 ರಂಜಾನ್
ದಿನ ವಿಶೇಷ : ಕಾಮದ ಏಕಾದಶಿ
ಅದೃಷ್ಟ ಸಂಖ್ಯೆ : 8, 11

ಮೇಷ: ಪೊಲೀಸ್ ವಿಭಾಗದಲ್ಲಿದ್ದು ಮಾಹಿತಿ ಕಲೆ ಹಾಕುವಲ್ಲಿ ನೀವು ವಹಿಸಿದ ಮುಂಜಾಗ್ರತಾ ಕ್ರಮ ಕಡಿಮೆಯಾಗಬಹುದು. ಸ್ವಸಾಮರ್ಥ್ಯದಿಂದ ಆಗುವ ಕೆಲಸಗಳಿಗೆ ಇತರರ ಸಹಾಯ ಅಪೇಕ್ಷಿಸದೆ ಮಾಡಿ.

ವೃಷಭ: ಜೀವನದಲ್ಲಿ ನಡೆದ ಹಲವು ಹಾಸ್ಯ ಪ್ರಸಂಗಗಳನ್ನು ಇಂದು ಸ್ನೇಹಿತರೊಂದಿಗೆ ನೆನೆಯುವಿರಿ. ಭಾವನೆಗಳಿಗೆ ಬೆಲೆ ಕೊಡದವರ ಎದುರು ದುಃಖಗಳನ್ನು ಹೇಳಿಕೊಳ್ಳುವುದರಿಂದ ಪ್ರಯೋಜನವಿರುವುದಿಲ್ಲ.

ಮಿಥುನ: ಸ್ವಭಾವತಃ ಖುಷಿಯಾಗಿ ಇರುವುದನ್ನು ಬಯಸುವ ನೀವು ಪರಜನರ ಮಾತುಗಳಿಗೆ ಕಿವಿ ಕೊಟ್ಟು ಬೇಸರಿಸಿಕೊಳ್ಳಬೇಡಿ. ಕೆಲಸದ ಗುಣಮಟ್ಟ ಕಡಿಮೆ ಆಗುತ್ತಿರುವುದಕ್ಕೆ ಕಾರಣ ನಿರಾಸಕ್ತಿಯೇ ಆಗಿರುತ್ತದೆ.

ಕರ್ಕಾಟಕ: ಕಾರ್ಯದ ನಿಮಿತ್ತ ಕುಟುಂಬದ ಸದಸ್ಯರನ್ನು ಎದುರು ಹಾಕಿಕೊಳ್ಳಬೇಕಾದ ಪರಿಸ್ಥಿತಿಗಳು ಎದುರಾಗಬಹುದು. ಮನಸ್ತಾಪಗಳು ಸರಿಯಾಗದ ಹೊರತು ಅಭಿವೃದ್ಧಿಗೆ ತೊಡಕು ಉಂಟಾಗಬಹುದು.

ಸಿಂಹ: ಇತರರನ್ನು ನೋಯಿಸಲೆಂದು ಮಾತನ್ನಾಡದಿದ್ದರು ನಿಮ್ಮ ಮಾತು ಇತರರ ಬೇಸರಕ್ಕೆ ಕಾರಣವಾಗಬಹುದು. ನಿರಂತರ ಸೇವೆಗಾಗಿ ಮಕ್ಕಳ ಪ್ರತಿಜ್ಞೆಗಳು ಬಹಳ ಹೆಮ್ಮೆ ಪಡುವಂತೆ ಮಾಡುತ್ತದೆ.

ಕನ್ಯಾ: ವರಾನ್ವೇಷಣೆಯ ಹಂತದಲ್ಲಿರುವ ಕನ್ಯೆಗೆ ಬಂದ ಸಂಬಂಧದ ಬಗ್ಗೆ ಕೂಲಂಕಷವಾಗಿ ಯೋಚಿಸದೆ ಮದುವೆಯ ಮಾತುಕತೆ ಮಾಡದಿರಿ. ಇರುವ ಸಾಮರ್ಥ್ಯವನ್ನು ಸಂಪೂರ್ಣವಾಗಿ ಉಪಯೋಗಿಸಿ.

ತುಲಾ: ಸಾಮಾನ್ಯ ಪ್ರಜೆ ನೀವಾಗಿದ್ದಲ್ಲಿ ರಾಜಕೀಯ ತಿಕ್ಕಾಟಗಳಲ್ಲಿ ಭಾಗವಹಿಸಿ ಅಪರಾಧಿ ಸ್ಥಾನಕ್ಕೆ ತಲುಪದೆ ಇರುವುದು ಸೂಕ್ತಕರ. ಜಾನುವಾರುಗಳ ಆರೋಗ್ಯ ನಿರ್ವಹಣೆಗೋಸ್ಕರ ಹಣವನ್ನು ವಿನಿಯೋಗ ಮಾಡುವಿರಿ.

ವೃಶ್ಚಿಕ: ಕಾರಣವಿಲ್ಲದೆ ನಡೆಸಿಕೊಂಡು ಬರುತ್ತಿರುವ ಪದ್ಧತಿ ಎಂದು ನೀವಂದುಕೊಂಡ ಆಚರಣೆಗೆ ಕಾರಣಗಳು ದೊರೆಯುತ್ತವೆ. ಒಪ್ಪತ್ತಿನ ಊಟ ಮಾಡುವುದರಿಂದ ಅಜೀರ್ಣಾದಿ ಸಮಸ್ಯೆ ನಿವಾರಿಸಿಕೊಳ್ಳಬಹುದು.

ಧನು: ಕೆಲಸಗಳು ಬೇಡವೆಂದುಕೊಂಡರು ಹೆಗಲೇರುವ ಸಾಧ್ಯತೆ ಇದೆ. ವನವಿಹಾರದಿಂದ ನಿಮ್ಮ ಮನಸ್ಸನ್ನು ತಿಳಿಗೊಳಿಸಬಹುದು. ಸಮಸ್ಯೆಗಳ ಸರಮಾಲೆಯಿಂದ ನಿದ್ರಾಹೀನತೆ ಕಾಡಬಹುದು.

ಮಕರ: ಜನರ ಬಳಕೆ ಮಾಡಿಕೊಳ್ಳುವ ಸಲುವಾಗಿ ಕುಟುಂಬದ ವ್ಯಕ್ತಿಗಳನ್ನು ಬಿಟ್ಟು ಹೋಗುವುದು ಮನಸ್ತಾಪಗಳಿಗೆ ಕಾರಣವಾಗಬಹುದು. ವಿದ್ಯಾರ್ಥಿಗಳು ಉದಾಸೀನ ಮಾಡದೆ ಶಾಲಾ ಕಾರ್ಯಕ್ರಮದಲ್ಲಿ ಭಾಗವಹಿಸಿ.

ಕುಂಭ: ಯಂತ್ರಗಳ ಕೆಲಸ ಮಾಡುವಾಗ ಜಾಗರೂಕತೆ ವಹಿಸಿ ನಿರ್ವಹಣೆ ಮಾಡುವುದು ಸೂಕ್ತ. ಜಗಳ ಸರಿಪಡಿಸಲು ಹೋಗಿ ನೀವೆ ಜಗಳದಲ್ಲಿ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ ಇದೆ. ಲೇವಾದೇವಿ ನಡೆಸುವವರು ಲಾಭ ಹೊಂದುವಿರಿ.

ಮೀನ: ಹೊಸ ಪರಿಚಯವು ಯಾವುದೋ ಒಂದು ತರಹದಿಂದ ಪ್ರಯೋಜನಕ್ಕೆ ಬರಲಿದೆ. ಸಕುಟುಂಬ ಸಮೇತರಾಗಿ ಯಾವುದಾದರು ಶಕ್ತಿಪೀಠಕ್ಕೆ ಭೇಟಿ ನೀಡುವಂತಹ ಯೋಚನೆ ಮಾಡಿ.

ಷೇರುಪೇಟೆ ವಹಿವಾಟು 1031



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,080
ಇಂದಿನ ಅಂತ್ಯ	17,359
▲	279
ದಿನದ ಗರಿಷ್ಠ	17,381

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹450

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1680 (1690)
ಸೋಯಾ (ರಿಫೈನ್ಡ್)	₹1050 (1050)
ಸೂರ್ಯಕಾಂತಿ (ರಿಫೈನ್ಡ್)	₹1080 (1090)
ಪಾಮೋಲಿನ್	₹955 (955)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146.50
ಆರ್‌ಎಸ್‌ಎಸ್-5	₹139.50
ಗುಡ್ ಲಾಟ್	₹131.50

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹14300
ಎಸಿ	₹7560
ಆರ್‌ಪಿ	₹10250
ಆರ್‌ಸಿ	₹5275

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹440-570
ದ್ವಿತಳಿ (ಬಿ.ವಿ)	₹388-669

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹9000-9550
ಕೆ.ಆರ್. ಪೇಟೆ	₹8068-8068
ಮಂಗಳೂರು	6000–9000

ಜಾಗತಿಕ ಮಾರುಕಟ್ಟೆಗಳಲ್ಲಿ ಸ್ಥಿರ ವಹಿವಾಟು

ಸೆನ್ಸೆಕ್ಸ್ 1,031 ಅಂಶ ಜಿಗಿತ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು 2022–23ನೇ ಹಣಕಾಸು ವರ್ಷದ ಕೊನೆಯ ದಿನವಾದ ಶುಕ್ರವಾರ ಭರ್ಜರಿ ಜಿಗಿತ ಕಂಡವು.

ರಿಲಯನ್ಸ್ ಇಂಡಸ್ಟ್ರೀಸ್‌ನ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದ್ದು ಹಾಗೂ ಜಾಗತಿಕ ಷೇರುಪೇಟೆಗಳ-ಲ್ಲಿ ನಡೆದ ಸಕಾರಾತ್ಮಕ ವಹಿವಾಟು ಸೂಚ್ಯಂಕಗಳ ಏರಿಕೆಗೆ ನೆರವಾದವು. ವಿದೇಶಿ ಬಂಡವಾಳ ಒಳಹರಿವು ಸಹ ವಹಿವಾಟಿನ ಮೇಲೆ ಪ್ರಭಾವ ಬೀರಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,031 ಅಂಶ ಜಿಗಿತ ಕಂಡು 58,991 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 279 ಅಂಶ ಹೆಚ್ಚಾಗಿ 17,359 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಅಮೆರಿಕದ ಬಾಂಡ್ ಗಳಿಕೆ ಕಡಿಮೆ ಆಗಿರುವುದು ಹಾಗೂ ವಿದೇಶಿ ಸಾಂಸ್ಥಿಕ ಬಂಡವಾಳ ಒಳಹರಿವಿನ ಕಾರಣಗಳಿಂದಾಗಿ ಮಾರುಕಟ್ಟೆಗಳಲ್ಲಿ ಉತ್ತಮ ವಹಿವಾಟು ನಡೆಯಿತು ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ತಾಂತ್ರಿಕ ಸಂಶೋಧನೆಯ ಡೆಪ್ಯುಟಿ ಉಪಾಧ್ಯಕ್ಷ ಅಮೋಲ್ ಅಠಾವಳೆ ತಿಳಿಸಿದ್ದಾರೆ.

ಸೆನ್ಸೆಕ್ಸ್‌ನಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಷೇರು ಮೌಲ್ಯ ಶೇ 4ರಷ್ಟು ಹೆಚ್ಚಾಯಿತು.

ಬ್ರೆಂಟ್ ತೈಲ ದರ ಶೇ 0.11ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 79.18 ಡಾಲರ್‌ಗೆ ತಲುಪಿತು. ವಿದೇಶಿ ಬಂಡವಾಳ ಹೂಡಿಕೆದಾರರು ಶುಕ್ರವಾರ ₹ 358 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ವಲಯವಾರು ಗಳಿಕೆ (%)

ಐ.ಟಿ.	2.52
ತಂತ್ರಜ್ಞಾನ	2.21
ಬ್ಯಾಂಕಿಂಗ್	1.72
ರಿಯಾಲ್ಟಿ	1.64
ಇಂಧನ	1.61
ಹಣಕಾಸು ಸೇವೆಗಳು	1.45

2022–23ರಲ್ಲಿ ₹ 5.86 ಲಕ್ಷ ಕೋಟಿ ನಷ್ಟ

ನವದೆಹಲಿ: 2022–23ನೇ ಹಣಕಾಸು ವರ್ಷದಲ್ಲಿ ಮುಂಬೈ ಷೇರುಪೇಟೆಯಲ್ಲಿ (ಬಿಎಸ್ಇ) ಹೂಡಿಕೆದಾರರ ಸಂಪತ್ತು ₹ 5.86 ಲಕ್ಷ ಕೋಟಿಯಷ್ಟು ಕಡಿಮೆ ಆಗಿದೆ. ಇದರಿಂದಾಗಿ ಮುಂಬೈ ಷೇರುಪೇಟೆಯ ಒಟ್ಟು ಬಂಡವಾಳ ಮೌಲ್ಯ ₹ 258.19 ಲಕ್ಷ ಕೋಟಿಗೆ ಇಳಿಕೆ ಕಂಡಿದೆ.

ಹಣದುಬ್ಬರ ಹೆಚ್ಚಳ, ರಷ್ಯಾ–ಉಕ್ರೇನ್ ಸಂಘರ್ಷ, ವಿದೇಶಿ ಬಂಡವಾಳದ ಹೊರಹರಿವು, ಬಡ್ಡಿದರ ಗರಿಷ್ಠ ಮಟ್ಟದಲ್ಲಿ ಇರುವುದು ಹಾಗೂ ಜಾಗತಿಕ ಬ್ಯಾಂಕಿಂಗ್ ವಲಯದಲ್ಲಿ ಈಚೆಗೆ ಕಂಡುಬಂದ ಬಿಕ್ಕಟ್ಟಿನ ಪರಿಣಾಮವಾಗಿ ಹೂಡಿಕೆದಾರರು ನಷ್ಟ ಅನುಭ-ವಿಸುವಂತಾಗಿದೆ.

2022–23ನೇ ಹಣಕಾಸು ವರ್ಷದಲ್ಲಿ ಬಿಎಸ್ಇ ಸೆನ್ಸೆಕ್ಸ್ ಒಟ್ಟಾರೆ 423 ಅಂಶಗಳಷ್ಟೇ (ಶೇ 0.82) ಏರಿಕೆ ಕಂಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಸರಕು	68500-68500	**ಯಲ್ಲಾಪುರ**	
ಕೋಕ	12500-25000	**ಶಿರಸಿ**		ಬಿಳಿಗೋಟು	25490-32012
ಹೊಸತು	22500-40000	ಬೆಟ್ಟೆ	33609-42119	ಚಾಲಿ	33420-36430
ಹಳತು	48000-54500	ಬಿಳಿಗೋಟು	22199-31272	ಕೋಕ	15701-27412
ಶಿವಮೊಗ್ಗ		ಚಾಲಿ	33018-35408	ಕೆಂಪುಗೋಟು	24059-33599
ಗೊರಬಲು	26119-30700	ಕೆಂಪುಗೋಟು	24199-35109	ರಾಶಿ	41370-49190
ರಾಶಿ	42500-44500	ರಾಶಿ	42208-44266	ತಟ್ಟಿಬೆಟ್ಟೆ	36325-42830

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

2030ರ ವೇಳೆಗೆ ₹164 ಲಕ್ಷ ಕೋಟಿ ಮೊತ್ತದ ರಫ್ತು ವಹಿವಾಟು ಗುರಿ

ಹೊಸ ವಿದೇಶ ವ್ಯಾಪಾರ ನೀತಿ ಅನಾವರಣ

ನವದೆಹಲಿ: ಕೇಂದ್ರ ಸರ್ಕಾರವು ಹೊಸ ವಿದೇಶ ವ್ಯಾಪಾರ ನೀತಿಯನ್ನು ಶುಕ್ರವಾರ ಅನಾವರಣಗೊಳಿಸಿದೆ. 2030ರ ವೇಳೆಗೆ ದೇಶದ ಸರಕು ಮತ್ತು ಸೇವೆಗಳ ರಫ್ತು ಮೊತ್ತವನ್ನು 2 ಟ್ರಿಲಿಯನ್ ಡಾಲರ್‌ಗೆ (₹ 164 ಲಕ್ಷ ಕೋಟಿ) ತಲುಪಿಸುವ ಉದ್ದೇಶವನ್ನು ಇದು ಹೊಂದಿದೆ. ದೇಶದ ಸರಕು ಮತ್ತು ಸೇವೆಗಳ ರಫ್ತು ಮೊತ್ತವು ಈಗ 760 ಬಿಲಿಯನ್ ಡಾಲರ್ (₹ 62 ಲಕ್ಷ ಕೋಟಿ). ವಿಶೇಷ ಎಂದರೆ, ಈ ನೀತಿಯು ಯಾವಾಗ ಕೊನೆಗೊಳ್ಳುತ್ತದೆ ಎಂಬ ಉಲ್ಲೇಖ ಇಲ್ಲ.

ಹೊಸ ನೀತಿಯು ಶನಿವಾರದಿಂದ ಜಾರಿಗೆ ಬರುತ್ತಿದೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರವು ವಿದೇಶ ವ್ಯಾಪಾರ ನೀತಿಯನ್ನು ಐದು ವರ್ಷಗಳ ಅವಧಿಗೆ ಜಾರಿಗೊಳಿಸುವ ಪದ್ಧತಿಯನ್ನು ಈ ನೀತಿಯ ಮೂಲಕ ಕೊನೆಗೊಳಿಸಿದಂ-ತಾಗಿದೆ. ಹೊಸ ನೀತಿಯನ್ನು ಅಗತ್ಯ ಎದುರಾದಾಗಲೆಲ್ಲ ಪರಿಷ್ಕರಿಸಲಾಗುತ್ತದೆ ಎಂದು ಇದನ್ನು ಅನಾವರಣ ಮಾಡಿದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದರು.

ಹೊಸ ನೀತಿಯು ಭಾರತದಿಂದ ಆಗುವ ರಫ್ತುಗಳು ಡಬ್ಲ್ಯುಟಿಒ ನಿರ್ದೇಶನಗಳಿಗೆ ಅನುಗುಣವಾಗಿ-ರುವಂತೆ ಮಾಡಲಿದೆ. ವ್ಯಾಪಾರಕ್ಕೆ ಸಂಬಂಧಿಸಿದ ವ್ಯಾಜ್ಯಗಳನ್ನು ತಗ್ಗಿಸಲು ಸಹಾಯ ಮಾಡುತ್ತದೆ ಎಂದು ಸಿರಿಲ್ ಅಮರ್‌ಚಂದ್ ಮಂಗಲದಾಸ್ ಕಂಪನಿಯ ಪಾಲುದಾರ ವಿಜಯ್ ಪ್ರತಾಪ್ ಸಿಂಗ್ ಚೌಹಾಣ್ ಹೇಳಿದ್ದಾರೆ.

‘ಅಭಿವೃದ್ಧಿ ಹೊಂದಿದ ದೇಶಗಳು ಹಾಗೂ ಅಭಿವೃದ್ಧಿ ಹೊಂದಿದ ಪ್ರದೇಶಗಳ ಜೊತೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಭಾರತ ನಡೆಸುತ್ತಿರುವ ಪ್ರಯತ್ನಗಳಿಗೆ ಈ ನೀತಿಯು ಪೂರಕವಾಗಿದೆ’ ಎಂದು ಕೂಡ ಚೌಹಾಣ್ ಹೇಳಿದ್ದಾರೆ.

ವಿದೇಶ ವ್ಯಾಪಾರ ನೀತಿಯ ಅಡಿಯಲ್ಲಿ ನೀಡುವ ಪ್ರಯೋಜನಗಳ-ನ್ನು ಇ-ವಾಣಿಜ್ಯ ವೇದಿಕೆಗಳ ಮೂಲಕ ಆಗುವ ರಫ್ತುಗಳಿಗೂ ವಿಸ್ತರಿಸಲಾಗಿದೆ. ‘ರಫ್ತು ವಹಿವಾಟಿನಲ್ಲಿ ಹೆಚ್ಚು ಅವಕಾ-ಶಗಳಿರುವ ಇ-ವಾಣಿಜ್ಯ ಮತ್ತು ಹಸಿರು ಇಂಧನ ವಲಯಗಳ ಮೇಲೆ ನೀತಿಯು ಹೆಚ್ಚು ಆದ್ಯತೆ ನೀಡಿದೆ’ ಎಂದು ಇಇಪಿಸಿ ಇಂಡಿಯಾ ಅಧ್ಯಕ್ಷ ಅರುಣ್ ಕುಮಾರ್ ಗರೋಡಿಯಾ ಹೇಳಿದ್ದಾರೆ.

ವಾಣಿಜ್ಯ ಇಲಾಖೆಯನ್ನು ಪುನ-ರ್‌ರಚಿಸಬೇಕು ಹಾಗೂ ಭವಿಷ್ಯದ ಸವಾಲುಗಳನ್ನು ಎದುರಿಸಲು ಅದು ಸಜ್ಜಾಗಿರುವಂತೆ ಮಾಡಬೇಕು ಎಂದು ನೀತಿಯು ಶಿಫಾರಸು ಮಾಡಿದೆ.

ರೂಪಾಯಿ ವಹಿವಾಟಿಗೆ ಉತ್ತೇಜನ

ನವದೆಹಲಿ (ಪಿಟಿಐ): ಹೊಸ ನೀತಿಯು ಭಾರತದ ರೂಪಾಯಿಯಲ್ಲಿ ವಹಿವಾಟು ನಡೆಯುವುದು ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕವಾಗಬೇ-ಕು ಎಂಬ ಉದ್ದೇಶವನ್ನು ಹೊಂದಿದೆ.

‘ಡಾಲರ್‌ನ ಕೊರತೆ ಎದುರಿಸುತ್ತಿರುವ ದೇಶಗಳ ಜೊತೆಯಲ್ಲಿ ಅಥವಾ ತಮ್ಮ ಕರೆನ್ಸಿಗಳು ಸಂಪೂರ್ಣವಾಗಿ ಅಸ್ಥಿರಗೊಂಡಿರುವ ದೇಶಗಳ ಜೊತೆಯಲ್ಲಿ ರೂಪಾಯಿಯಲ್ಲಿ ವಹಿವಾಟು ನಡೆಸುವ ಉದ್ದೇಶವನ್ನು ನಾವು ಹೊಂದಿದ್ದೇವೆ’ ಎಂದು ವಾಣಿಜ್ಯ ಕಾರ್ಯದರ್ಶಿ ಸುನಿಲ್ ಭರ್ತ್‌ವಾಲ್ ಹೇಳಿದ್ದಾರೆ.

ಇಪಿಎಫ್‌ಒ: 60ರ ನಂತರ ಹೆಚ್ಚಿನ ಪಿಂಚಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೌಕರರ ಭವಿಷ್ಯನಿಧಿ ಸಂಘಟನೆಯು (ಇಪಿಎಫ್‌ಒ) ತನ್ನ ಸದಸ್ಯರಿಗೆ ನೀಡುವ ಪಿಂಚಣಿಯನ್ನು 58 ವರ್ಷ ವಯಸ್ಸು ಪೂರ್ಣಗೊಂಡ ತಕ್ಷಣವೇ ಪಡೆಯಬೇಕು ಎಂದೇನೂ ಇಲ್ಲ. ಬದಲಿಗೆ, ಸದಸ್ಯರು 59 ವರ್ಷ ವಯಸ್ಸು ಪೂರ್ಣಗೊಂಡ ನಂತರದಲ್ಲಿ ಅಥವಾ 60 ವರ್ಷ ಪೂರ್ಣಗೊಂಡ ನಂತರದಲ್ಲಿಯೂ ಅದನ್ನು ಪಡೆಯಬಹುದು.

59 ವರ್ಷ ವಯಸ್ಸು ಪೂರ್ಣಗೊಂಡ ನಂತರದಲ್ಲಿ ಪಿಂಚಣಿ ಪಡೆಯುವವರಿಗೆ ಸಿಗುವ ಮೊತ್ತವು ಮೂಲ ಪಿಂಚಣಿ ಮೊತ್ತಕ್ಕಿಂತ ಶೇಕಡ 4ರಷ್ಟು ಹೆಚ್ಚಿರುತ್ತದೆ.

60 ವರ್ಷ ಪೂರ್ಣಗೊಂಡ ನಂತರ ಪಿಂಚಣಿ ಪಡೆಯಲು ತೀರ್ಮಾನಿಸಿದರೆ ಸಿಗುವ ಮೊತ್ತವು ಮೂಲ ಪಿಂಚಣಿ ಮೊತ್ತಕ್ಕಿಂತ ಶೇ 8.16ರಷ್ಟು ಹೆಚ್ಚಾಗಿರುತ್ತದೆ.

ಈ ವಿಚಾರವಾಗಿ ಇಪಿಎಫ್‌ಒ 2016ರಲ್ಲಿಯೇ ಆದೇಶ ಹೊರಡಿಸಿದೆ.

ಸುಪ್ರೀಂ ಕೋರ್ಟ್ 2022ರಲ್ಲಿ ನೀಡಿದ ತೀರ್ಪಿಗೆ ಅನುಗುಣವಾಗಿ ಇಪಿಎಫ್‌ಒ ತನ್ನ ಸದಸ್ಯರಿಗೆ ಹೆಚ್ಚಿನ ಪಿಂಚಣಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದೆ. ಹೆಚ್ಚಿನ ಪಿಂಚಣಿಗೆ ಅರ್ಜಿ ಸಲ್ಲಿಸಲು ಮೇ 3ರವರೆಗೆ ಅವಕಾಶ ಇದೆ.

ಹೆಚ್ಚಿನ ಪಿಂಚಣಿ ಆಯ್ಕೆ ಬಯಸಿ ಅರ್ಜಿ ಸಲ್ಲಿಸುತ್ತಿರುವವ-ರಲ್ಲಿ ಈಗಷ್ಟೇ 58 ವರ್ಷ ವಯಸ್ಸು ಪೂರ್ಣಗೊಂಡವರು ಕೂಡ ಇದ್ದಾರೆ.

2016ರ ಆದೇಶದ ಅನ್ವಯ, 58 ವರ್ಷ ಪೂರ್ಣಗೊಂಡ ಹಾಗೂ ಪಿಂಚಣಿಗೆ ಅರ್ಹವಾಗಿರುವ ಪಿ.ಎಫ್. ಸದಸ್ಯರು ತಮಗೆ ಪಿಂಚಣಿಯು ಒಂದು ವರ್ಷ ಅಥವಾ ಎರಡು ವರ್ಷಗಳ ನಂತರವೇ ಸಿಗಲಿ (ಅಂದರೆ, 59 ವರ್ಷ ವಯಸ್ಸಾದಾಗ) ಎಂದು ಬಯಸಿದರೆ, ಅದಕ್ಕೆ ಸಂಬಂಧಿಸಿದಂತೆ ನಿಗದಿತ ನಮೂನೆಯಲ್ಲಿ ಪಿ.ಎಫ್. ಕಚೇರಿಗೆ ಅರ್ಜಿ ಸಲ್ಲಿಸಬೇಕಾಗುತ್ತದೆ.

‘ಹಲವು ಕಂಪನಿಗಳಲ್ಲಿ 58 ವರ್ಷಕ್ಕೆ ನೌಕರರು ನಿವೃತ್ತ ರಾಗುವುದಿಲ್ಲ. 60 ವರ್ಷಕ್ಕೆ ನಿವೃತ್ತರಾಗುವವರು ಪಿಂಚಣಿ ಪಡೆಯುವುದನ್ನು ಎರಡು ವರ್ಷದ ಮಟ್ಟಿಗೆ ಮುಂದೂಡಿ, ತುಸು ಹೆಚ್ಚಿನ ಮೊತ್ತದ ಪಿಂಚಣಿ ಪಡೆಯಲು ಇದು ಅವಕಾಶ ಕಲ್ಪಿಸುತ್ತದೆ’ ಎಂದು ಪಿ.ಎಫ್. ಅಧಿ-ಕಾರಿಯೊಬ್ಬರು ವಿವರಿಸಿದರು.

ಸಣ್ಣ ಉಳಿತಾಯ: ಬಡ್ಡಿ ಹೆಚ್ಚಳ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಏಪ್ರಿಲ್–ಜೂನ್ ತ್ರೈಮಾಸಿಕಕ್ಕೆ ಅನ್ವಯವಾಗುವಂ-ತೆ, ಅಂಚೆ ಕಚೇರಿ ಉಳಿತಾಯ ಯೋಜನೆಗಳ ಬಡ್ಡಿ ದರವನ್ನು ಶೇಕಡ 0.70ವರೆಗೆ ಹೆಚ್ಚಿಸಿದೆ. ಹಿಂದಿನ ತ್ರೈಮಾಸಿಕದಲ್ಲಿಯೂ ಕೆಲವು ಸಣ್ಣ ಉಳಿತಾಯ ಯೋಜನೆಗಳ ಬಡ್ಡಿ ದರ ಹೆಚ್ಚಿಸಲಾಗಿತ್ತು.

ಆದರೆ ಜನಪ್ರಿಯ ಉಳಿತಾಯ ಯೋಜನೆಗಳಲ್ಲಿ ಒಂದಾಗಿರುವ ಪಿಪಿಎಫ್ ಠೇವಣಿ ಮೇಲಿನ ಬಡ್ಡಿ ದರವನ್ನು ಶೇ 7.1ರ ಮಟ್ಟದಲ್ಲಿಯೇ ಉಳಿಸಿಕೊಳ್ಳಲಾಗಿದೆ.

ರಾಷ್ಟ್ರೀಯ ಉಳಿತಾಯ ಪತ್ರಕ್ಕೆ (ಎನ್‌ಎಸ್‌ಸಿ) ನೀಡುವ ಬಡ್ಡಿಯನ್ನು ಶೇ 7.7ಕ್ಕೆ ಹೆಚ್ಚಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ. ಕಿಸಾನ್ ವಿಕಾಸ ಪತ್ರಕ್ಕೆ (ಕೆವಿಪಿ) ನೀಡುವ ಬಡ್ಡಿಯನ್ನು ಹೆಚ್ಚಿಸಲಾಗಿ-ದ್ದು, ಅದರ ಅವಧಿಯು ಇನ್ನು 115 ತಿಂಗಳಿಗೆ ಇಳಿಕೆಯಾಗಲಿದೆ.

ಹಣದುಬ್ಬರ ನಿಯಂತ್ರಿಸುವ ಉದ್ದೇಶದಿಂದ ಆರ್‌ಬಿಐ ರೆಪೊ ದರ ವನ್ನು ಒಂದು ವರ್ಷದಲ್ಲಿ ಶೇ 2.5ರಷ್ಟು ಹೆಚ್ಚಿಸಿದೆ. ಬ್ಯಾಂಕ್‌ಗಳು ಕೂಡ ಠೇವಣಿ ಮೇಲಿನ ಬಡ್ಡಿ ದರವನ್ನು ಹೆಚ್ಚಿಸಿವೆ.

ಬಡ್ಡಿ ಹೆಚ್ಚಳ: ಯಾವುದಕ್ಕೆ? ಎಷ್ಟು?

ಯೋಜನೆ	ಹಳೆಯ ಬಡ್ಡಿ (%)	ಹೊಸ ಬಡ್ಡಿ (%)
1 ವರ್ಷದ ಅವಧಿ ಠೇವಣಿ	6.6	6.8
2 ವರ್ಷದ ಅವಧಿ ಠೇವಣಿ	6.8	6.9
3 ವರ್ಷದ ಅವಧಿ ಠೇವಣಿ	6.9	7.0
5 ವರ್ಷದ ಅವಧಿ ಠೇವಣಿ	7.0	7.5
5 ವರ್ಷದ ಆರ್.ಡಿ	5.8	6.2
ಹಿರಿಯ ನಾಗರಿಕರ ಉಳಿತಾಯ ಯೋಜನೆ	8.0	8.2
ಮಾಸಿಕ ಆದಾಯ ಯೋಜನೆ	7.1	7.4
ರಾಷ್ಟ್ರೀಯ ಉಳಿತಾಯ ಪತ್ರ (ಎನ್‌ಎಸ್‌ಸಿ)	7.0	7.7
ಕಿಸಾನ್ ವಿಕಾಸ ಪತ್ರ	7.2 (120 ತಿಂಗಳ ಅವಧಿ)	7.5 (115 ತಿಂಗಳ ಅವಧಿ)
ಸುಕನ್ಯಾ ಸಮೃದ್ಧಿ ಯೋಜನೆ	7.6	8.0

ಮೂಲಸೌಕರ್ಯ ವಲಯಗಳ ಬೆಳವಣಿಗೆ ಅಲ್ಪ ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ಪ್ರಮುಖ ಎಂಟು ಮೂಲಸೌಕರ್ಯ ವಲಯಗಳ ಬೆಳವಣಿಗೆಯು ಫೆಬ್ರುವರಿಯಲ್ಲಿ ಶೇಕಡ 6ರಷ್ಟು ಆಗಿದೆ. ಕಳೆದ ವರ್ಷದ ಫೆಬ್ರು-ವರಿಯಲ್ಲಿ ಇದು ಶೇ 5.9ರಷ್ಟು ಇತ್ತು. ಇದಕ್ಕೆ ಹೋಲಿಸಿದರೆ ಶೇ 0.1ರಷ್ಟು ಅಲ್ಪ ಏರಿಕೆ ಕಂಡಿದೆ.

2023ರ ಜನವರಿಯಲ್ಲಿ ಈ ವಲಯಗಳ ಬೆಳವಣಿಗೆಯು ಶೇ 8.9ರಷ್ಟು ಆಗಿತ್ತು.

ಸರ್ಕಾರ ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ಕಚ್ಚಾ ತೈಲ ಹೊರತುಪಡಿಸಿ, ಉಳಿದೆಲ್ಲ ವಲಯ ಗಳಲ್ಲಿ ಬೆಳವಣಿಗೆ ಹೆಚ್ಚಾಗಿದೆ.

ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ಸಂಸ್ಕರಣಾ ಉತ್ಪನ್ನಗಳು, ರಾಸಾಯನಿಕ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ವಲಯಗಳ ಬೆಳವಣಿಗೆಯು 2022–23ರ ಏಪ್ರಿಲ್–ಫೆಬ್ರುವರಿ ಅವಧಿಯಲ್ಲಿ ಶೇ 7.8ರಷ್ಟು ಆಗಿದೆ. ಹಿಂದಿನ ಹಣಕಾಸು ವರ್ಷದಲ್ಲಿ ಶೇ 11.1ರಷ್ಟು ಇತ್ತು.

ಮುಂಬೈ ಧಾರಣೆ

ಶೇಂಗಾ

31-3-2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	11100-11150
ದಪ್ಪ ಗುಜರಾತ್(ಹೊಸ)	12000-12050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690 (1700)
ಒಂದು ವಾರದ ಡೆಲಿವರಿ	1685 (1695)
ಸೋಯಾ ಕಚ್ಚಾ	950 (950)
ಪಾಮ್ ವಾರದ ಡೆಲಿವರಿ	953 (953)
ಸೂರ್ಯಕಾಂತಿ ಎಣ್ಣೆ ಕಚ್ಚಾ	940 (940)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	59,550 (59,100)
ಬೆಳ್ಳಿ ಕೆ.ಜಿ	71,600 (71,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land

Out-Station

AGRICULTURAL LAND For Sale 6 Acres 22 Guntas Madhugiri Taluk 4 Kms from Byrenahalli Cross Clear Title with Hudbust Borewell Barbed wire Fence with Two RCC House Units. Contact Owner : 9901955551

ಉದ್ಯೋಗಾವಕಾಶ

Marketing & Sales

WANTED SALES Representative for Surgical Industry, Must Travel across the state. Ph: +91 -9560096877 / 9448992997 Email: info.albat@gmail.com

Part-Time Jobs

✓ ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611221244

✓ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

General

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH DECCAN HERALD ಪ್ರಜಾವಾಣಿ

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ಬೆಂಗಳೂರು -54 ಸಂಪರ್ಕಿಸಿ: ಹೆಚ್ಚಿನ ಮಾಹಿತಿಗಾಗಿ 9148525233, 7899235388

ವಾಹನ

Four Wheelers Selling

Others

RC CANCELLED Volkswagen AMEO 1.5 TDI 2016 Dec Model Accident Vehicle For Sale. Interested Wreck Buyers Contact within 10 Days 9036007743 srikanthpacharya@gmail.com, ch67@newindia.co.in

ವೈವಾಹಿಕ

Brides Wanted

Bride Required Others

RET NRI active healthy in his 60s seeking LT Relationship with widow/divorcee. No bar. Send full recent pictures, details kngowda65@gmail.com

ಪ್ರವಾಸ

Travel

03.05.2023 21.05.2023 22.06.2023 ಸಿಂಗಾಪುರ್,ಮಲೇಶಿಯಾ, ಥೈಲ್ಯಾಂಡ್ 7/11 ದಿನಗಳು. 16.05.2023 20.06.2023 ನೇಪಾಳ 9 ದಿನಗಳು. 18.05.2023 13.06.2023 ಭೂತಾನ್ 8 ದಿನಗಳು. 29.04.2023 25.05.2023 12.06.2023 ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ 6 ದಿನಗಳು. 27.04.2023 16.05.2023 06.06.2023 ಶಿಮ್ಲಾ,ಮನಾಲಿ 8 ದಿನಗಳು. ಜೈನ್ ಟ್ರಾವಲ್ಸ್ ಮಲ್ಲೇಶ್ವರಂ. ಬೆಂಗಳೂರು.03 9448402248 7022547922

07/05/2023ರಿಂದ 16ದಿನಗಳ ನೇಪಾಳ,ಮುಕ್ತಿನಾಥ್,ಕಾಶಿ, ನೈಮಿಷಾರಣ್ಯ ಹಾಗೂ ಚಾರಧಾಮ್ ಸಮೇತ ಹರಿದ್ವಾರ, ಮಸ್ಸೂರಿ,ಋಷಿಕೇಶ,ಇತ್ಯಾದಿ 30/6/2023ರಿಂದ ಅಮರ ನಾಥ್ ವೈಷ್ಣೋದೇವಿ,ಕಾಶ್ಮೀರ, ಅಮೃತಸರ,ವಾಘಾಬಾರ್ಡರ್ ಇತ್ಯಾದಿ.ಏಷ್ಯನ್ ಟ್ರಾವೆಲ್ ಲೈನ್ಸ್ 164/3.ಅರ್.ವಿ.ರಸ್ತೆ ಬೆಂಗಳೂರು-4. 8105657052/ 9480182865 (ಷಣ್ಮುಗಾನಂದ)

6.4.2023 ನೇಪಾಳ, ಮುಕ್ತಿನಾಥ, ಕಾಶಿ 13.4.2023 ಕೇರಳ, ತಮಿಳುನಾಡು 14.5.2023 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9482435755, 9845035349

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವೆನಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಅನೈತಿಕ ಸಂಬಂಧ ಬಹಿರಂಗಪಡಿಸದಿರಲು ನೀಲಿ ಚಿತ್ರ ತಾರೆ ಸ್ಟಾರ್ಮಿ ಡೇನಿಯಲ್ಸ್‌ಗೆ ಹಣ

ಟ್ರಂಪ್ ವಿರುದ್ಧ ದೋಷಾರೋಪ

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 2016ರಲ್ಲಿ ಅಧ್ಯಕ್ಷೀಯ ಚುನಾವಣಾ ಪ್ರಚಾರದ ವೇಳೆ ನೀಲಿಚಿತ್ರ ತಾರೆ ಸ್ಟಾರ್ಮಿ ಡೇನಿಯಲ್ಸ್ ಅವರಿಗೆ ತಮ್ಮಿಬ್ಬರ ನಡುವಿನ ಅನೈತಿಕ ಸಂಬಂಧದ ಗುಟ್ಟು ರಟ್ಟುಪ-ಡಿಸದಂತೆ ಹಣ ಪಾವತಿಸಿರುವ ಆರೋಪ ಸಂಬಂಧ ಮ್ಯಾನ್ಹಟನ್‌ನ ಗ್ರ್ಯಾಂಡ್ ಜ್ಯೂರಿಯು ಟ್ರಂಪ್ ವಿರುದ್ಧ ದೋಷಾರೋಪ ಹೊರಿಸಿದೆ.

ಡೊನಾಲ್ಡ್ ಟ್ರಂಪ್

‘ಸುಪ್ರೀಂನಿರ್ದೇಶನದಅನುಸಾರ ಟ್ರಂಪ್ ಶರಣಾಗತಿಗೆ ವ್ಯವಸ್ಥೆ ಮಾಡಲು ಟ್ರಂಪ್ ಅವರ ವಕೀಲರನ್ನು ಸಂಪರ್ಕಿಸಲಾಗಿದೆ. ಶರಣಾಗತಿಗೆ ದಿನಾಂಕ ಆಯ್ಕೆ ಮಾಡಿಕೊಂಡರೆ ಆ ಪ್ರಕ್ರಿಯೆಗೆ ಸೂಕ್ತ ಮಾರ್ಗದರ್ಶನ ನೀಡಲಾಗುವುದು’ ಎಂದು ಜಿಲ್ಲಾ ಅಟಾರ್ನಿ ಬ್ರಾಗ್ ಅವರ ವಕ್ತಾರರು ತಿಳಿಸಿದ್ದಾರೆ.

ಟ್ರಂಪ್ ಅವರ ಮೇಲೆ ದೋಷಾರೋಪ ಹೊರಿಸಲು ಗ್ರ್ಯಾಂಡ್ ಜ್ಯೂರಿ ಮತ ಚಲಾಯಿಸಿದೆ ಎಂದು ನಂಬಲರ್ಹ ಮೂಲಗಳನ್ನು ಉಲ್ಲೇಖಿಸಿ ‘ನ್ಯೂಯಾರ್ಕ್ ಟೈಮ್ಸ್’ ಪತ್ರಿಕೆ ಗುರುವಾರ ವರದಿ ಮಾಡಿತ್ತು.

ಟ್ರಂಪ್ ಅವರು ಫ್ಲಾರಿಡಾದ ತಮ್ಮ ನಿವಾಸದಿಂದ ನ್ಯೂಯಾರ್ಕ್‌ಗೆ ಸೋಮವಾರ ಪ್ರಯಾಣಿಸುವ ನಿರೀಕ್ಷೆಯಿದೆ. ಮಂಗಳವಾರ ಅವರು ನ್ಯಾಯಾಲಯಕ್ಕೆ ಹಾಜರಾಗಬಹುದು ಎಂದು ಮೂಲಗಳು ತಿಳಿಸಿರುವುದಾಗಿ ‘ಸಿಬಿಎಸ್ ನ್ಯೂಸ್’ ವರದಿ ಮಾಡಿದೆ.

ಗ್ರ್ಯಾಂಡ್ ಜ್ಯೂರಿ ಅವರು ಟ್ರಂಪ್ ಮೇಲೆ ದೋಷಾರೋಪ ಹೊರಿಸಿದ ನಂತರ, 44ರ ಹರೆಯದ ನಟಿ ಸ್ಟಾರ್ಮ್ ಡೇನಿಯಲ್ಸ್ ಅವರು ಟ್ರಂಪ್ ವಿರುದ್ಧದ ತಮ್ಮ ಹೋರಾಟ ಬೆಂಬಲಿಸಿದವರಿಗೆ ‘ನಿಮ್ಮ ಬೆಂಬಲ ಮತ್ತು ಪ್ರೀತಿಗೆ ಧನ್ಯವಾದಗಳು’ ಎಂದು ಕೃತಜ್ಞತೆ ಸಲ್ಲಿಸಿದ್ದಾರೆ.

ಈ ಬೆಳವಣಿಗೆಯ ನಂತರ ಪ್ರತಿಕ್ರಿಯಿಸಿರುವ ಡೊನಾಲ್ಡ್ ಟ್ರಂಪ್, ‘ಇದು ಇತಿಹಾಸದಲ್ಲೇ ಭಾರಿ ದೊಡ್ಡ ರಾಜಕೀಯ ಕಿರುಕುಳ ಮತ್ತು ಚುನಾವಣಾ ಹಸ್ತಕ್ಷೇಪವೆ-ನಿಸಿದೆ. ರಾಜಕೀಯ ಎದುರಾಳಿ ಹಣಿಯಲು ಡೆಮಾಕ್ರಟಿಕ್ ಪಕ್ಷದ ನಾಯಕರು ನಮ್ಮ ಕಾನೂನು ವ್ಯವ-ಸ್ಥೆಯನ್ನು ಅಸ್ತ್ರ ಮಾಡಿಕೊಂಡಿದ್ದಾರೆ’ ಎಂದು ಆರೋಪಿಸಿದ್ದಾರೆ.

ಕ್ರಿಮಿನಲ್ ಅಪರಾಧದ ಆರೋಪ ಹೊತ್ತಿರುವ ಅಮೆರಿಕದ ಮೊದಲ ಮಾಜಿ ಅಧ್ಯಕ್ಷ ಎನಿಸಿಕೊಂಡ ಟ್ರಂಪ್ ಅವರು 2024ರಲ್ಲಿ ಶ್ವೇ-ತಭವನಕ್ಕೆ ಮರು ಪ್ರವೇಶಿಸುವ ಪ್ರಯತ್ನದಲ್ಲಿದ್ದು, ಮುಂಬರುವ ಅಧ್ಯಕ್ಷೀಯ ಚುನಾವಣೆಯ ಪ್ರಬಲ ಅಭ್ಯರ್ಥಿ ಆಕಾಂಕ್ಷಿಯಾಗಿದ್ದಾರೆ.

ಟ್ರಂಪ್ ಅವರ ಮೇಲೆ ಈ ಮೊದಲು ಜನಪ್ರತಿನಿಧಿಗಳ ಸಭೆ ಎರಡು ಬಾರಿ ದೋಷಾರೋಪ ಹೊರಿಸಿತ್ತು. ಆದರೆ, ಎರಡೂ ಬಾರಿಯು ಅವರನ್ನು ಸೆನೆಟ್ ಖುಲಾಸೆಗೊಳಿಸಿದೆ.

ಅಮೆರಿಕ: ರಿಚರ್ಡ್ ವರ್ಮಾ ಉಪ ಕಾರ್ಯದರ್ಶಿ

ವಾಷಿಂಗ್ಟನ್ (ಪಿಟಿಐ): ಭಾರತೀಯ ಮೂಲದ ಅಮೆರಿಕದ ರಾಜತಾಂತ್ರಿಕ ಅಧಿಕಾರಿ ರಿಚರ್ಡ್ ವರ್ಮಾ ಅವರನ್ನು ಅಮೆರಿಕದ ವಿದೇಶಾಂಗ ಸಚಿವಾಲಯದ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗದ ಉಪ ಕಾರ್ಯದ-ರ್ಶಿಯಾಗಿ ನೇಮಕ ಮಾಡಿರುವುದನ್ನು ಅಮೆರಿಕದ ಸೆನೆಟ್ ಖಚಿತಪಡಿಸಿದೆ.

ಗುರುವಾರ ಸೆನೆಟ್‌ನಲ್ಲಿ ವರ್ಮಾ ಪರವಾಗಿ 67 ಹಾಗೂ ವಿರೋಧವಾಗಿ 27 ಮತಗಳು ದೊರೆತಿದ್ದವು.

ವರ್ಮಾ ಅವರು 2015ರ ಜ. 16ರಿಂದ 2017ರ ಜ.20ವರೆಗೆ ಭಾರತದಲ್ಲಿ ಅಮೆರಿಕದ ರಾಯಭಾರಿ ಯಾಗಿ ಕೆಲಸ ಮಾಡಿದ್ದರು. ಪ್ರಸ್ತುತ ಅವರು ಮಾಸ್ಟರ್ ಕಾರ್ಡ್‌ನಲ್ಲಿ ಜಾಗತಿಕ ಸಾರ್ವಜನಿಕ ನೀತಿಯ ಮುಖ್ಯಸ್ಥ ಹಾಗೂ ಕಾನೂನು ಅಧಿಕಾರಿಯಾಗಿ ಕಾರ್ಯನಿ-ರ್ವಹಿಸುತ್ತಿದ್ದಾರೆ.

ರಾಜತಾಂತ್ರಿಕರ ಭದ್ರತೆಗೆ ಆದ್ಯತೆ: ಅಮೆರಿಕ

ವಾಷಿಂಗ್ಟನ್ (ಪಿಟಿಐ): ದೇಶದಲ್ಲಿರುವ ರಾಜತಾಂತ್ರಿಕರ ಸುರಕ್ಷತೆ ಹಾಗೂ ಭದ್ರತೆಯನ್ನು ಅಮೆರಿಕವು ಸಾಕಷ್ಟು ಗಂಭೀರವಾಗಿ ಪರಿಗಣಿಸುತ್ತದೆ ಎಂದು ಗೃಹ ಇಲಾ ಖೆಯ ಹಿರಿಯ ಅಧಿಕಾರಿ ಹೇಳಿದ್ದಾರೆ.

ಖಾಲಿಸ್ತಾನ ಬೆಂಬಲಿಗರ ಗುಂಪೊಂದು ಸ್ಯಾನ್‌ಫ್ರಾನ್ಸಿಸ್ಕೋದ-ಲ್ಲಿರುವ ಭಾರತೀಯ ರಾಯಭಾರ ಕಚೇರಿ ಮೇಲೆ ದಾಳಿ ನಡೆಸಿ, ಭಾರತದ ಧ್ವಜ ತೆಗೆದು ತನ್ನ ಧ್ವಜ ಹಾರಿಸಿತ್ತು. ಇದರ ಬೆನ್ನಲ್ಲೇ ಗೃಹ ಇಲಾಖೆ ಉಪ ವಕ್ತಾರ ವೇದಾಂತ್ ಪಟೇಲ್ ಅವರು ಸ್ಪಷ್ಟನೆ ನೀಡಿದ್ದಾರೆ.

‘ನಾವು ಭಾರತೀಯ ಅಧಿಕಾರಿ-ಗಳೊಂದಿಗೆ ಈ ವಿಷಯವೂ ಸೇರಿ ಹಲವು ವಿಷಯಗಳ ಬಗ್ಗೆ ಸಂಪರ್ಕ-ದಲ್ಲಿದ್ದೇವೆ ಎಂದರು.

ಹಿಂಸಾಚಾರಕ್ಕೆ ಸಿಖ್ಖರ ಖಂಡನೆ

ಸ್ಯಾನ್‌ಫ್ರಾನ್ಸಿಸ್ಕೋದ ಭಾರತೀಯ ರಾಯಭಾರ ಕಚೇರಿ ಮೇಲಿನ ದಾಳಿ ಮತ್ತು ರಾಜತಾಂತ್ರಿಕರ ವಿರುದ್ಧದ ಇತ್ತೀಚಿನ ಹಿಂಸಾಚಾರ ಖಂಡಿಸಿ, ಸಿಲಿಕಾನ್ ವ್ಯಾಲಿಯ ಸಿಖ್ ಸಮುದಾಯದ ಸದಸ್ಯರು ಸೇರಿ ಭಾರತೀಯ ಅಮೆರಿಕನ್ನರು ಈಚೆಗೆ ಅಮೆರಿಕ ನ್ಯಾಯಾಂಗ ಇಲಾಖೆಯ ಅಧಿಕಾರಿಗ-ಳನ್ನು ಭೇಟಿ ಮಾಡಿದರು.

ಇಂತಹ ಹಿಂಸಾತ್ಮಕ ಕೃತ್ಯಗಳನ್ನು ಸಿಖ್ ಸಮುದಾಯ ಬೆಂಬಲಿಸುವುದಿಲ್ಲ. ಇವು ಸಮುದಾಯಕ್ಕೆ ಕೆಟ್ಟ ಹೆಸರು ತರುತ್ತವೆ ಎಂದು ಸಮುದಾಯದ ಮುಖಂಡರು ಮತ್ತು ಭಾರತೀಯ ಅಮೆರಿಕನ್ ಪ್ರಮುಖರು ಅಧಿಕಾರಿಗಳ ಭೇಟಿ ಮಾಡಿದ ವೇಳೆ ಕಳವಳ ವ್ಯಕ್ತಪಡಿ-ಸಿದರು.

ಸ್ಯಾನ್ ಫ್ರಾನ್ಸಿಸ್ಕೋದಲ್ಲಿನ ರಾಯಭಾರ ಕಚೇರಿ ಅಸುರಕ್ಷಿತವಾಗಿದೆ. ಹಿಂಸಾಚಾರದ ಘಟನೆಗೆ ಪೊಲೀಸರ ನಿಷ್ಕ್ರಿಯತೆಯೂ ಕಾರಣವಾಗಿದೆ. ಘಟನೆಯ ನಂತರ ಸಮುದಾಯದವರಿಗೆ ವೈಯಕ್ತಿಕ ಸುರಕ್ಷತೆಯ ಬಗ್ಗೆಯೂ ಆತಂಕ ಎದುರಾಗಿದೆ ಎಂದು ಅಧಿಕಾರಿಗಳಿಗೆ ವಿವರಿಸಿದ್ದಾರೆ.

ಬಲವಂತದ ಮತಾಂತರ ವಿರೋಧಿಸಿ ಹಿಂದೂಗಳ ಪ್ರತಿಭಟನೆ

ಕರಾಚಿ (ಪಿಟಿಐ): ಹಿಂದೂ ಹೆಣ್ಣುಮಕ್ಕಳು ಮತ್ತು ಮಹಿಳೆಯರನ್ನು ಬಲವಂತವಾಗಿ ಮತಾಂತರಗೊಳಿಸಿ ವಿವಾಹ ಮಾಡುತ್ತಿರುವುದನ್ನು ಖಂಡಿಸಿ ಪಾಕಿಸ್ತಾನದ ಅಲ್ಪಸಂಖ್ಯಾತ ಹಿಂದೂ ಸಮುದಾಯದ ಸದಸ್ಯರು ಪ್ರತಿಭಟನೆ ನಡೆಸಿದರು.

ಕರಾಚಿ ಪ್ರೆಸ್ ಕ್ಲಬ್‌ನ ಹೊರಗೆ ಮತ್ತು ಸಿಂಧ್ ಅಸೆಂಬ್ಲಿ ಕಟ್ಟಡದ ಪ್ರವೇ-ಶದ್ವಾರದಲ್ಲಿ ಗುರುವಾರ ನಡೆದ ಪ್ರತಿಭ-ಟನೆಯನ್ನು ಹಿಂದೂ ಸಂಘಟನೆಯಾದ ಪಾಕಿಸ್ತಾನ್ ದಾರಾವರ್ ಇತ್ತೆಹಾದ್ (ಪಿಡಿಐ) ಆಯೋಜಿಸಿತ್ತು.

‘ಸಿಂಧಿ ಹಿಂದೂಗಳು ಎದುರಿ-ಸುತ್ತಿರುವ ಈ ಸಮಸ್ಯೆಯನ್ನು ನಾವು ಮುನ್ನೆಲೆಗೆ ತರಲು ಇಚ್ಛಿಸಿದ್ದೇವೆ. ಗ್ರಾಮೀಣ ಪ್ರದೇಶಗಳಲ್ಲಿ 12–13 ವರ್ಷದ ಯುವತಿಯರನ್ನು ಅಪಹರಿಸಿ, ಬಲವಂತವಾಗಿ ಇಸ್ಲಾಂಗೆ ಮತಾಂ-ತರಗೊಳಿಸಲಾಗುತ್ತದೆ. ಬಳಿಕ ವಯಸ್ಸಾದ ಮುಸ್ಲಿಂ ಪುರುಷರೊಂದಿಗೆ ಮದುವೆ ಮಾಡಿಸಲಾಗುತ್ತಿದೆ’ ಪಿಡಿಐ ಸದಸ್ಯರೊಬ್ಬರು ಹೇಳಿದರು.

ಹಿಂದೂ ಯುವತಿಯರು ಮತ್ತು ಮಹಿಳೆಯರ ಬಲವಂತದ ಮತಾಂತರ ಮತ್ತು ವಿವಾಹವನ್ನು ತಡೆಯಲು ಮಸೂದೆಯನ್ನು ಜಾರಿಗೊಳಿಸ ಬೇಕು ಎಂದು ಒತ್ತಾಯಿಸುವ ಭಿತ್ತಿ-ಪತ್ರಗಳನ್ನು ಪ್ರತಿಭಟನಕಾರರು ಹಿಡಿದಿದ್ದರು.

ಪತ್ರಕರ್ತನ ಬಿಡುಗಡೆ ಮಾಡಲು ರಷ್ಯಾಗೆ ಬೈಡನ್ ಆಗ್ರಹ

ವಾಷಿಂಗ್ಟನ್ (ಎಪಿ): ‘ವಾಲ್ ಸ್ಟ್ರೀಟ್ ಜರ್ನಲ್’ ಪತ್ರಕರ್ತ ಇವಾನ್ ಗೆರ್ಶ್‌ಕೋವಿಚ್ ಅವರನ್ನು ಬಿಡುಗಡೆ ಮಾಡುವಂತೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಶುಕ್ರವಾರ ರಷ್ಯಾವನ್ನು ಆಗ್ರಹಿಸಿದ್ದಾರೆ.

ಬೇಹುಗಾರಿಕೆ ಆರೋಪದ ಮೇಲೆ ರಷ್ಯಾದ ಭದ್ರತಾ ಸೇವೆ ಇವಾನ್ ಅವರನ್ನು ಬಂಧಿಸಿದೆ. ಆದರೆ ಪತ್ರಿಕೆಯು ಆರೋಪವನ್ನು ತಳ್ಳಿಹಾಕಿದೆ. ಶ್ವೇತಭವನದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಪ್ರತಿಕ್ರಿಯಿ-ಸಿದ ಬೈಡನ್, ‘ಅವರನ್ನು ಬಿಡಿ’ ಎಂದು ಹೇಳಿದರು.

ರಷ್ಯಾದ ರಾಜತಾಂತ್ರಿಕ ಅಧಿಕಾರಿಗಳು ಅಥವಾ ಪತ್ರಕರ್ತರನ್ನು ಅಮೆರಿಕದಿಂದ ಹೊರಹಾಕುತ್ತೀರಾ ಎಂಬ ಪ್ರಶ್ನೆಗೆ ‘ಸದ್ಯಕ್ಕೆ ಅಂಥ ಯೋಚನೆ ಇಲ್ಲ’ ಎಂದು ಹೇಳಿದರು.

ಈ ಮಧ್ಯೆ ರಷ್ಯಾಗೆ ಪ್ರವಾಸ ಕೈಗೊಳ್ಳದಂತೆ ಹಾಗೂ ರಷ್ಯಾದಲ್ಲಿ ಇರುವವರು ಕೂಡಲೇ ಅಲ್ಲಿಂದ ಹೊರಡುವಂತೆ ಅಮೆರಿಕ ತನ್ನ ಪ್ರಜೆಗಳಿಗೆ ಸೂಚಿಸಿದೆ.

ನಾಸಾದ ಯೋಜನೆ ಮುಖ್ಯಸ್ಥರಾಗಿ ಭಾರತೀಯ ಮೂಲದ ಟೆಕಿ ನೇಮಕ

ವಾಷಿಂಗ್ಟನ್ (ಪಿಟಿಐ): ನಾಸಾ ಹೊಸದಾಗಿ ಆರಂಭಿಸಿರುವ ‘ಚಂದ್ರನಿಂದ– ಮಂಗಳ’ಕ್ಕೆ ಮಾನವ ಸಹಿತ ಮೊದಲ ಗಗನಯಾನ ಯೋಜನೆಯ ಮುಖ್ಯಸ್ಥರಾಗಿ ಭಾರತೀಯ ಮೂಲದ ಅಮೆರಿಕದ ಸಾಫ್ಟ್‌ವೇರ್ ಮತ್ತು ರೊಬೊಟಿಕ್ ಎಂಜಿನಿಯರ್ ಅಮಿತ್ ಕ್ಷತ್ರಿಯಾ ಅವರನ್ನು ನೇಮಿಸಲಾಗಿದೆ.

ಮನುಕುಲದ ಒಳಿತಿಗೆ ಚಂದ್ರ ಮತ್ತು ಮಂಗಳನ ಅಂಗಳದಲ್ಲಿ ಸಂಸ್ಥೆಯ ಮಾನವ ಪರಿಶೋಧನಾ ಚಟುವಟಿ-ಕೆಗಳನ್ನು ಕೈಗೊಳ್ಳುವ ಗುರಿಯನ್ನು ಈ ಹೊಸ ಯೋಜನೆ ಹೊಂದಿದೆ ಎಂದು ನಾಸಾ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಹೌರಾ: ಮತ್ತೆ ಭುಗಿಲೆದ್ದ ಹಿಂಸಾಚಾರ –ಸ್ಥಳದಲ್ಲಿ ಬಿಗುವಿನ ಪರಿಸ್ಥಿತಿ ● ಗುಂಪು ಚದುರಿಸಲು ಲಘು ಲಾಠಿ ಪ್ರಹಾರ

ಪೊಲೀಸರ ಮೇಲೆ ಕಲ್ಲು ತೂರಾಟ: ನಿಷೇಧಾಜ್ಞೆ

ಹೌರಾ, ಪಶ್ಚಿಮ ಬಂಗಾಳ (ಪಿಟಿಐ): 'ರಾಮನವಮಿ ನಿಮಿತ್ತ ಇಲ್ಲಿನ ಕಾಜಿಪಾಡಾ ಪ್ರದೇಶದಲ್ಲಿ ಗುರುವಾರ ಶುರುವಾಗಿದ್ದ ಹಿಂಸಾಚಾರ ಶುಕ್ರವಾರವೂ ಭುಗಿಲೆದ್ದಿದ್ದು, ದುಷ್ಕರ್ಮಿಗಳು ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಹೀಗಾಗಿ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ' ಎಂದು ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

'ಸ್ಥಳದಲ್ಲಿ ಗುಂಪು ಸೇರಿದ್ದವರನ್ನು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದು, ಸಿಆರ್‌ಪಿಸಿಯ ಕಲಂ 144ರ ಅಡಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ' ಎಂದು ಹೇಳಿದ್ದಾರೆ.

'ಗಲಭೆ ಸಂಬಂಧ ಈವರೆಗೆ ಒಟ್ಟು 45 ಮಂದಿಯನ್ನು ಬಂಧಿಸಲಾಗಿದೆ. ಶುಕ್ರವಾರ ಮಧ್ಯಾಹ್ನದವರೆಗೂ ಪರಿಸ್ಥಿತಿ ಶಾಂತವಾಗಿತ್ತು. ಅನಂತರ ದುಷ್ಕರ್ಮಿಗಳು ಪೊಲೀಸ್ ಸಿಬ್ಬಂದಿ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಕೂಡಲೇ ಕಾರ್ಯಪ್ರವೃತ್ತರಾದ ಸಿಬ್ಬಂದಿ ಗಲಭೆಕೋರರ ಪೈಕಿ ಕೆಲವರನ್ನು ಬಂಧಿಸಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

'ಪರಿಸ್ಥಿತಿ ವಿಕೋಪಕ್ಕೆ ತಿರುಗುವುದನ್ನು ಅರಿತ ವ್ಯಾಪಾರಿಗಳು ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿದ್ದಾರೆ. ಸ್ಥಳೀಯರು ಮನೆ ಬಿಟ್ಟು ಹೊರ ಬಂದಿಲ್ಲ. ಕಲ್ಲು ತೂರಾಟದಿಂದಾಗಿ ವಾಹನ ಸಂಚಾರ ಅಸ್ತವ್ಯಸ್ತಗೊಂಡಿದ್ದು, ಘಟನೆಯಲ್ಲಿ ಮೂವರು ಪೊಲೀಸ್ ಸಿಬ್ಬಂದಿ ಗಾಯಗೊಂಡಿದ್ದಾರೆ. ಅವರನ್ನು ಚಿಕಿತ್ಸೆಗಾಗಿ ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. ಪರಿಸ್ಥಿತಿ ತಿಳಿಯಾಗುವವರೆಗೂ ರಸ್ತೆಗಿಳಿಯದಂತೆ ಪೊಲೀಸರು ಧ್ವನಿವರ್ಧಕದ ಮೂಲಕ ಸ್ಥಳೀಯರಲ್ಲಿ ಮನವಿ ಮಾಡಿದ್ದಾರೆ. ಒಂದೊಮ್ಮೆ ಮನೆಯಿಂದ ಹೊರಗೆ ಬಂದರೆ ಅಂತಹವರನ್ನು ಕಾನೂನಿನ ಅಡಿಯಲ್ಲಿ ಕಠಿಣ ಶಿಕ್ಷೆಗೆ ಗುರಿಪಡಿಸುವ ಎಚ್ಚರಿಕೆಯನ್ನೂ ನೀಡಿದ್ದಾರೆ' ಎಂದು ವಿವರಿಸಿದ್ದಾರೆ.

'ಗಲಭೆ ಪೀಡಿತ ಪ್ರದೇಶದಲ್ಲಿ ಕ್ಷಿಪ್ರ ಕಾರ್ಯಪಡೆ (ಆರ್‌ಎಎಫ್) ತುಕಡಿ ಹಾಗೂ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಆರ್‌ಎಎಫ್ ಸಿಬ್ಬಂದಿ ಪ್ರಮುಖ ರಸ್ತೆಗಳಲ್ಲಿ ಪಥ ಸಂಚಲನ ನಡೆಸಿದ್ದಾರೆ' ಎಂದು ಹೇಳಿದ್ದಾರೆ.

'ರಾಮನವಮಿ ಅಂಗವಾಗಿ ಬಿ.ಇ. ಕಾಲೇಜಿನಿಂದ ರಾಮಕೃಷ್ಣಾಪುರ ಘಾಟ್‌ವರೆಗೂ ಶೋಭಾ ಯಾತ್ರೆ ಕೈಗೊಳ್ಳಲು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಅನುಮತಿ ಪಡೆದಿತ್ತು. ಅನುಮತಿ ದೊರೆತ ಮಾರ್ಗದಲ್ಲಿಯೇ ಕಾರ್ಯಕರ್ತರು ಯಾತ್ರೆ ಕೈಗೊಂಡಿದ್ದರು. ವಿಎಚ್‌ಪಿಯವರು ಯಾತ್ರೆಯ ಮಾರ್ಗ ಬದಲಿಸಿದ್ದರಿಂದಲೇ ಈ ಘಟನೆ ನಡೆದಿದೆ ಎಂದು ಮಮತಾ ಸುಳ್ಳು ಹೇಳುತ್ತಿದ್ದಾರೆ' ಎಂದು ಪಶ್ಚಿಮ ಬಂಗಾಳದ ಬಿಜೆಪಿ ಸಹ ಉಸ್ತುವಾರಿ ಅಮಿತ್ ಮಾಳವೀಯ ಆರೋಪಿಸಿದ್ದಾರೆ. ಘಟನೆ ಸಂಬಂಧ ಮಮತಾ ಅವರು ರಾಜ್ಯಪಾಲರೊಂದಿಗೆ ಶುಕ್ರವಾರ ಚರ್ಚಿಸಿದ್ದಾರೆ.

ಗಲಭೆಪೀಡಿತ ಕಾಜಿಪಾಡಾ ಪ್ರದೇಶದಲ್ಲಿ ಕ್ಷಿಪ್ರ ಕಾರ್ಯಪಡೆ (ಆರ್‌ಎಎಫ್) ಸಿಬ್ಬಂದಿ ಶುಕ್ರವಾರ ಪಥಸಂಚಲನ ನಡೆಸಿದರು –ಪಿಟಿಐ ಚಿತ್ರ

ಔರಂಗಾಬಾದ್ ಗಲಭೆ: ಗಾಯಗೊಂಡಿದ್ದ ವ್ಯಕ್ತಿ ಸಾವು

ಔರಂಗಾಬಾದ್: 'ಔರಂಗಾಬಾದ್‌ನ ಕಿರಾದ್‌ಪುರ ಪ್ರದೇಶದಲ್ಲಿರುವ ರಾಮ ಮಂದಿರದ ಬಳಿ ಬುಧವಾರ ತಡರಾತ್ರಿ ನಡೆದಿದ್ದ ಗಲಭೆಯಲ್ಲಿ ಗಾಯಗೊಂಡಿದ್ದ ವ್ಯಕ್ತಿ ಶುಕ್ರವಾರ ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ. ಪೊಲೀಸ್ ಠಾಣೆ ಮೇಲೆ ನಡೆದಿದ್ದ ದಾಳಿ ಸಂಬಂಧ ಈವರೆಗೆ ಒಟ್ಟು 7 ಮಂದಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಘಟನಾ ಸ್ಥಳದಲ್ಲಿ ಮೀಸಲು ಪೊಲೀಸ್ ಪಡೆಯ (ಎಸ್‌ಆರ್‌ಪಿಎಫ್) ಐದು ತುಕಡಿಗಳನ್ನು ನಿಯೋಜಿಸಲಾಗಿದ್ದು, ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಿದೆ. ಘಟನೆಯಲ್ಲಿ 10 ಮಂದಿ ಪೊಲೀಸ್ ಸಿಬ್ಬಂದಿ ಸೇರಿ ಒಟ್ಟು 12 ಜನ ಗಾಯಗೊಂಡಿದ್ದಾರೆ. ಘಟನಾ ಸ್ಥಳದ ಸುತ್ತಮುತ್ತಲಿನ ಅತಿ ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸ್ ಬಂದೋಬಸ್ತ್ ಹೆಚ್ಚಿಸಲಾಗಿದೆ' ಎಂದು ಹೇಳಿದ್ದಾರೆ.

'ಗಲಭೆ ಹಿಂದೆ ಬಿಜೆಪಿ ಕೈವಾಡ'

'ಹಿಂಸಾಚಾರದ ಹಿಂದೆ ಬಿಜೆಪಿ ಹಾಗೂ ಇತರೆ ಹಿಂದೂಪರ ಸಂಘಟನೆಗಳ ಕೈವಾಡವಿದೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ಶಾಂತಿ ಮತ್ತು ಸಂಯಮದಿಂದ ವರ್ತಿಸುವಂತೆ ಅವರು ನಾಗರಿಕರಲ್ಲಿ ಮನವಿ ಮಾಡಿದ್ದಾರೆ. 'ಹೌರಾದಲ್ಲಿ ನಡೆದಿರುವ ಘಟನೆಯು ದುರದೃಷ್ಟಕರ. ಗಲಭೆಯ ಹಿಂದೆ ಹಿಂದೂಗಳು ಅಥವಾ ಮುಸ್ಲಿಂ ಸಮುದಾಯದವರ ಕೈವಾಡವಿಲ್ಲ. ಬಿಜೆಪಿ, ಬಜರಂಗ ದಳ ಹಾಗೂ ಇತರ ಹಿಂದೂಪರ ಸಂಘಟನೆಗಳು ಇದಕ್ಕೆ ಹೊಣೆಯಾಗಿವೆ' ಎಂದು ದೂರಿದ್ದಾರೆ.

'ಇದು ಪೂರ್ವಯೋಜಿತ ಕೃತ್ಯ. ಪಿಸ್ತೂಲ್ ಹಾಗೂ ಪೆಟ್ರೋಲ್ ಬಾಂಬ್‌ಗಳನ್ನು ಹಿಡಿದಿದ್ದ ಗಲಭೆಕೋರರು ಉದ್ದೇಶಪೂರ್ವಕವಾಗಿಯೇ ಮತ್ತೊಂದು ಗುಂಪಿನ ಮೇಲೆ ದಾಳಿ ನಡೆಸಿ ಅಂಗಡಿ ಮುಂಗಟ್ಟುಗಳನ್ನು ಧ್ವಂಸಗೊಳಿಸಿದ್ದಾರೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಹಾನಿಗೊಳಗಾದವರಿಗೆ ಅಗತ್ಯ ನೆರವು ನೀಡಲಾಗುತ್ತದೆ' ಎಂದು ಹೇಳಿದ್ದಾರೆ.

ರಾಜ್ಯಪಾಲರ ಜೊತೆ ಶಾ ಮಾತುಕತೆ

'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ.ಆನಂದ್ ಬೋಸ್ ಜೊತೆ ಶುಕ್ರವಾರ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದು, ಗಲಭೆ ಪೀಡಿತ ಪ್ರದೇಶದಲ್ಲಿನ ಸದ್ಯದ ಪರಿಸ್ಥಿತಿ ಕುರಿತು ಮಾಹಿತಿ ಪಡೆದಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ರಾಮಭಕ್ತರ ಮೇಲೆ ದಾಳಿ ನಡೆಯುತ್ತಿದ್ದಾಗ ಪಶ್ಚಿಮ ಬಂಗಾಳ ಸರ್ಕಾರವು ಮೂಕ ಪ್ರೇಕ್ಷಕನಂತೆ ನೋಡುತ್ತಿತ್ತು. ಘಟನೆ ಕುರಿತು ಸರ್ಕಾರ ನೀಡಿರುವ ಹೇಳಿಕೆ ನಾಚಿಕೆಗೇಡಿನದ್ದು

ಅನುರಾಗ್ ಠಾಕೂರ್, ಕೇಂದ್ರ ಸಚಿವ

ಅಡುಗೆ ಅನಿಲ ಸಿಲಿಂಡರ್ ಸ್ಫೋಟ: 7 ಕಾರ್ಮಿಕರ ಸಾವು

ಹೊಸಕೋಟೆ: ತಾಲ್ಲೂಕಿನ ಮೇಡಿಹಳ್ಳಿಯಲ್ಲಿ ಮಾರ್ಚ್ 26ರಂದು ಸಂಭವಿಸಿದ್ದ ಅಡುಗೆ ಅನಿಲ ಸಿಲಿಂಡರ್ ಸ್ಫೋಟದಲ್ಲಿ ಗಾಯಗೊಂಡಿದ್ದ ಕಟ್ಟಡ ಕಾರ್ಮಿಕರ ಪೈಕಿ ಏಳು ಮಂದಿ ಮೃತಪಟ್ಟಿದ್ದು, ಒಬ್ಬರು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಉತ್ತರ ಪ್ರದೇಶ ಹಾಗೂ ಬಿಹಾರ ಮೂಲದ ಅಮಿತ್, ಸನೋಜ್, ನೀರಜ್, ಸೋಮಯ್ ಗುಪ್ತಾ, ತಿಲಕ್ ರಾಮ್, ಲಕ್ಷ್ಮಣ್ ಮತ್ತು ಚಂದ್ರಭಾನ್ ಮೃತಪಟ್ಟವರು. ಈ ಕಾರ್ಮಿಕರನ್ನು ಕಟ್ಟಡ ನಿರ್ಮಾಣಕ್ಕೆ ಕರೆ ತರಲಾಗಿತ್ತು. ಎಲ್ಲರಿಗೂ ಅಂಗಡಿ ಶೆಡ್‌ವೊಂದರಲ್ಲಿ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಎಲ್ಲರೂ ರಾತ್ರಿ ಮಲಗಿದ್ದ ವೇಳೆ ಅಡುಗೆ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸಿತ್ತು. ತೀವ್ರ ಗಾಯಗೊಂಡಿದ್ದ ಎಲ್ಲರನ್ನೂ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗುರುವಾರ ಮೂವರು ಮೃತಪಟ್ಟಿದ್ದಾರೆ. ಶುಕ್ರವಾರ ಮತ್ತೆ ನಾಲ್ವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರ್ಮಿಕರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸದೆ ನಿರ್ಲಕ್ಷ್ಯ ತೋರಿದ ಆರೋಪದ ಹಿನ್ನೆಲೆಯಲ್ಲಿ ಗುತ್ತಿಗೆದಾರರಾದ ಅರವಿಂದ ಗುಪ್ತ ಮತ್ತು ಭಾಸ್ಕರ್ ಎಂಬುವರ ವಿರುದ್ಧ ಅನುಗೊಂಡನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದೇ ಕುಟುಂಬದ ನಾಲ್ವರು ಸಾವು

ಮಂಗಳೂರು: ನಗರದ ಕೆ.ಎಸ್.ರಾವ್ ರಸ್ತೆಯ ವಸತಿ ಗೃಹವೊಂದರಲ್ಲಿ ಒಂದೇ ಕುಟುಂಬದ ನಾಲ್ವರು ಶುಕ್ರವಾರ ಮೃತಪಟ್ಟಿದ್ದಾರೆ.

ಮೃತರನ್ನು ಮೈಸೂರಿನ ವಿಜಯನಗರದ ದೇವೇಂದ್ರ (46), ಅವರ ಪತ್ನಿ ನಿರ್ಮಲಾ (46) ಹಾಗೂ ಅವರ ಅವಳಿ ಮಕ್ಕಳಾದ ಚೈತ್ರಾ (9) ಮತ್ತು ಚೈತನ್ಯ (9) ಎಂದು ಗುರುತಿಸಲಾಗಿದೆ.

ನಗರ ಪೊಲೀಸ್ ಕಮಿಷನರ್ ಕುಲದೀಪ್ ಕುಮಾರ್ ಆರ್. ಜೈನ್ ಮತ್ತು ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದಾಗ, ಕೊಠಡಿಯಲ್ಲಿ ಡೆತ್‌ನೋಟ್ ದೊರೆತಿದ್ದು, ಆರ್ಥಿಕ ಸಮಸ್ಯೆಯಿಂದ ಕಂಗೆಟ್ಟು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಅದರಲ್ಲಿ ಉಲ್ಲೇಖವಿದೆ ಎಂದು ಪೊಲೀಸರು ತಿಳಿಸಿದ್ದಾರೆ. 'ದೇವೇಂದ್ರ ಅವರು ಕತ್ತು ಹಿಸುಕಿ ಪತ್ನಿ ಮತ್ತು ಮಕ್ಕಳನ್ನು ಕೊಂದು, ತಾವು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆ ಇದೆ. ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಇದು ಸ್ಪಷ್ಟವಾಗಲಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ದೇವೇಂದ್ರ ಅವರು ಕುಟುಂಬ ಸಮೇತರಾಗಿ ಮಾ. 27ರಂದು ಮಂಗಳೂರಿಗೆ ಬಂದಿದ್ದು, ಒಂದು ದಿನದ ಮಟ್ಟಿಗೆ ವಸತಿಗೃಹದ ಕೊಠಡಿ ಪಡೆದಿದ್ದರು. ನಂತರ ತಮ್ಮ ವಾಸದ ಅವಧಿ ವಿಸ್ತರಿಸಿದ್ದರು' ಎಂದಿದ್ದಾರೆ.

ಮೋದಿ ವಿರುದ್ಧ ಪೋಸ್ಟರ್: 8 ಎಎಪಿ ಕಾರ್ಯಕರ್ತರ ಬಂಧನ

ಅಹಮದಾಬಾದ್ (ಪಿಟಿಐ): 'ಮೋದಿ ಹಠಾವೊ, ದೇಶ್ ಬಚಾವೊ' (ಮೋದಿಯನ್ನು ಇಳಿಸಿ, ದೇಶ ಉಳಿಸಿ) ಎಂದು ಬರೆದಿದ್ದ ಪೋಸ್ಟರ್‌ಗಳನ್ನು ಹಚ್ಚಿದ ಆರೋಪದಲ್ಲಿ ಎಎಪಿಯ ಎಂಟು ಕಾರ್ಯಕರ್ತರನ್ನು ಅಹಮದಾಬಾದ್ ನಗರ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಪ್ರಜಾಪ್ರಭುತ್ವವು ಅಪಾಯದಲ್ಲಿದೆ ಎಂಬುದನ್ನು ಈ ಬಂಧನವು ಸಾಬೀತು ಮಾಡಿದೆ ಎಂದು ಎಎಪಿಯ ಗುಜರಾತ್ ಘಟಕವು ಹೇಳಿದೆ.

'ಮೋದಿ ಹಠಾವೊ, ದೇಶ ಬಚಾವೊ' ಎಂದು ಬರೆದಿದ್ದ ಪೋಸ್ಟರ್‌ಗಳನ್ನು ಹಚ್ಚಿ ಸಾರ್ವಜನಿಕ ಸೊತ್ತಿಗೆ ಹಾನಿ ಮಾಡಿದ ಆರೋಪದಲ್ಲಿ ಎಂಟು ಮಂದಿಯನ್ನು ಬಂಧಿಸಲಾಗಿದೆ ಎಂದು ನಗರದ ಅಪರಾಧ ವಿಭಾಗದ ಪೊಲೀಸರು ಹೇಳಿದ್ದಾರೆ. ಎಎಪಿ ಕಾರ್ಯಕರ್ತರು ಗುರುವಾರ ಪೋಸ್ಟರ್‌ಗಳನ್ನು ಹಚ್ಚಿದ್ದರು.

ವಿವಿಧ ಪೊಲೀಸ್ ಠಾಣೆಗಳಲ್ಲಿ ಎಫ್‌ಐಆರ್ ದಾಖಲಾದ ಬಳಿಕ ಗುರುವಾರ ರಾತ್ರಿಯೇ ಈ ಕಾರ್ಯಕರ್ತರನ್ನು ಬಂಧಿಸಲಾಗಿದೆ.

ಬಂಧಿತರನ್ನು ನಟವರ್ ಠಾಕೂರ್, ಜತಿನ್ ಪಟೇಲ್, ಕುಲದೀಪ್ ಭಟ್, ಬಿಪಿನ್ ಶರ್ಮಾ, ಅಜಯ್ ಚೌಹಾಣ್, ಅರವಿಂದ ಚೌಹಾಣ್, ಜೀವನ್ ಮಾಹೇಶ್ವರಿ ಮತ್ತು ಪರೇಶ್ ತುಳಸಿಯಾನಿ ಎಂದು ಗುರುತಿಸಲಾಗಿದೆ.

ಪಕ್ಷವು ವಿವಿಧ ರಾಜ್ಯಗಳಲ್ಲಿ ಇಂತಹ ಪೋಸ್ಟರ್‌ಗಳನ್ನು ಹಚ್ಚಿದೆ. ಆದರೆ, ಎಲ್ಲಿಯೂ ಕಾರ್ಯಕರ್ತರನ್ನು ಬಂಧಿಸಲಾಗಿಲ್ಲ. ಆದರೆ, ಗುಜರಾತ್‌ನಲ್ಲಿ ಮಾತ್ರ ಬಂಧಿಸಲಾಗಿದೆ ಎಂದು ಗುಜರಾತ್ ಎಎಪಿ ಘಟಕದ ಉಪಾಧ್ಯಕ್ಷ ಸಾಗರ್ ರಬರಿ ಹೇಳಿದ್ದಾರೆ.

ಇಂದು ಸಿಧು ಬಿಡುಗಡೆ ಸಾಧ್ಯತೆ

ಚಂಡೀಗಢ (ಪಿಟಿಐ): 'ರಸ್ತೆಯಲ್ಲಿ ರೋಷದಿಂದ ತೋರಿದ ಪ್ರಕರಣದಲ್ಲಿ ಒಂದು ವರ್ಷ ಜೈಲು ಶಿಕ್ಷೆ ಅನುಭವಿಸುತ್ತಿರುವ ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ಅವರು ಏ.1ರಂದು ಸನ್ನಡತೆಯ ಆಧಾರದಲ್ಲಿ ಬಿಡುಗಡೆಯಾಗಲಿದ್ದಾರೆ' ಎಂದು ಸಿಧು ಪರ ವಕೀಲ ಎಚ್‌ಪಿಎಸ್ ವರ್ಮಾ ಶುಕ್ರವಾರ ತಿಳಿಸಿದರು.

59 ವರ್ಷದ ಸಿಧು ಅವರು ಸದ್ಯ ಪಟಿಯಾಲ ಜೈಲಿನಲ್ಲಿದ್ದಾರೆ. 1988ರಲ್ಲಿ ನಡೆದಿದ್ದ ಅಪಘಾತದಲ್ಲಿ 65 ವರ್ಷದ ಗುರ್ನಾಮ್ ಸಿಂಗ್ ಎಂಬುವವರು ಮೃತಪಟ್ಟಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಸಿಧು ಅವರಿಗೆ ಒಂದು ವರ್ಷ ಕಾರಾಗೃಹ ಶಿಕ್ಷೆ ನೀಡಿತ್ತು. ಇದರ ಅನುಸಾರ ಸಿಧು ಅವರು ಕಳೆದ ವರ್ಷ ಮೇ 20ರಂದು ಪಟಿಯಾಲ ನ್ಯಾಯಾಲಯಕ್ಕೆ ಶರಣಾಗಿದ್ದರು.

ಕೇಜ್ರಿವಾಲ್‌ಗೆ ₹ 25,000 ದಂಡ

ಮೋದಿ ಪದವಿ ಮಾಹಿತಿ: ಸಿಐಸಿ ಆದೇಶ ರದ್ದುಗೊಳಿಸಿದ ಗುಜರಾತ್ ಹೈಕೋರ್ಟ್

ಅಹಮದಾಬಾದ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಪದವಿ ಮಾಹಿತಿಯನ್ನು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ನೀಡುವಂತೆ ಕೇಂದ್ರ ಮಾಹಿತಿ ಆಯೋಗ (ಸಿಐಸಿ) ಏಳು ವರ್ಷಗಳ ಹಿಂದೆ ಹೊರಡಿಸಿದ್ದ ಆದೇಶವನ್ನು ಗುಜರಾತ್ ಹೈಕೋರ್ಟ್ ಶುಕ್ರವಾರ ರದ್ದುಗೊಳಿಸಿ, ಕೇಜ್ರಿವಾಲ್‌ಗೆ ದಂಡ ವಿಧಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಶೈಕ್ಷಣಿಕ ಮಾಹಿತಿಯನ್ನು ಆರ್‌ಟಿಐ ಕಾಯ್ದೆಯಡಿ ಬಹಿರಂಗಪಡಿಸುವುದರಿಂದ ವಿನಾಯಿತಿ ನೀಡಲಾಗಿದೆ ಎಂದು ಹೇಳಿದ ನ್ಯಾಯಮೂರ್ತಿ ಬಿರೇನ್ ವೈಷ್ಣವ್, ಆರ್‌ಟಿಐ ಮೂಲಕ ಮಾಹಿತಿ ಕೋರಿದ್ದಕ್ಕಾಗಿ ಕೇಜ್ರಿವಾಲ್ ಅವರಿಗೆ ₹25,000ದಂಡ ವಿಧಿಸಿ, ನಾಲ್ಕು ವಾರಗಳಲ್ಲಿ ಮೊತ್ತವನ್ನು ಗುಜರಾತ್ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ (ಜಿಎಸ್‌ಎಲ್‌ಎಸ್‌ಎ) ಜಮಾ ಮಾಡುವಂತೆ ಹೇಳಿದ್ದಾರೆ.

ಕೇಜ್ರಿವಾಲ್ ವಕೀಲ ಪರ್ಸಿ ಕವಿನಾ ಅವರು ಮನವಿ ಮಾಡಿದರೂ ನ್ಯಾಯಮೂರ್ತಿ ವೈಷ್ಣವ್ ಅವರು ತಮ್ಮ ಆದೇಶ ತಡೆಹಿಡಿಯಲು ನಿರಾಕರಿಸಿದರು.

ತೀರ್ಪಿನ ನಂತರ ಟ್ವೀಟ್ ಮಾಡಿರುವ ದೆಹಲಿ ಮುಖ್ಯಮಂತ್ರಿ, 'ಪ್ರಧಾನಿ ಎಷ್ಟು ಅಧ್ಯಯನ ಮಾಡಿದ್ದಾರೆಂದು ತಿಳಿಯುವ ಹಕ್ಕು ದೇಶಕ್ಕೆ ಇಲ್ಲವೇ? ಅವರ ಪದವಿ ಬಗ್ಗೆ ತಿಳಿದುಕೊಳ್ಳಲು ಬಯಸುವವರಿಗೆ ದಂಡ ವಿಧಿಸಲಾಗುತ್ತದೆಯೇ? ಏನು ನಡೆಯುತ್ತಿದೆ? ಅನಕ್ಷರಸ್ಥ ಅಥವಾ ಕಡಿಮೆ ವಿದ್ಯಾವಂತ ಪ್ರಧಾನಿ ದೇಶಕ್ಕೆ ತುಂಬಾ ಅಪಾಯಕಾರಿ' ಎಂದು ಹೇಳಿದ್ದಾರೆ.

2016 ರ ಏಪ್ರಿಲ್‌ನಲ್ಲಿ ಆಗಿನ ಸಿಐಸಿಯ ಎಂ. ಶ್ರೀಧರ್ ಆಚಾರ್ಯುಲು ಅವರು ದೆಹಲಿ ವಿಶ್ವವಿದ್ಯಾಲಯ ಮತ್ತು ಗುಜರಾತ್ ವಿಶ್ವವಿದ್ಯಾಲಯಕ್ಕೆ ಮೋದಿ ಪಡೆದ ಪದವಿಗಳ ಬಗ್ಗೆ ಕೇಜ್ರಿವಾಲ್ ಅವರಿಗೆ ಮಾಹಿತಿ ನೀಡುವಂತೆ ನಿರ್ದೇಶನ ನೀಡಿದ್ದರು.

ಮೂರು ತಿಂಗಳ ನಂತರ, ಸಿಐಸಿ ಆದೇಶದ ವಿರುದ್ಧ ವಿಶ್ವವಿದ್ಯಾಲಯ ಮೇಲ್ಮನವಿ ಸಲ್ಲಿಸಿದ ಬಳಿಕ ಗುಜರಾತ್ ಹೈಕೋರ್ಟ್ ಸಿಐಸಿ ಆದೇಶ ತಡೆಹಿಡಿದಿತ್ತು.

ಹಿನ್ನೆಲೆ: ಕೇಜ್ರಿವಾಲ್ ಅವರು ಆಚಾರ್ಯುಲು ಅವರಿಗೆ ಪತ್ರ ಬರೆದು, 'ಆಯೋಗವು ಮೋದಿ ಅವರ ಶೈಕ್ಷಣಿಕ ಅರ್ಹತೆಗಳ ಕುರಿತು ಮಾಹಿತಿಯನ್ನು ಮರೆಮಾಚಲು ಏಕೆ ಬಯಸಿದೆ' ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದರು.

ಪತ್ರದ ಆಧಾರದ ಮೇಲೆ ಆಚಾರ್ಯುಲು ಅವರು ಮೋದಿ ಅವರ ಶೈಕ್ಷಣಿಕ ಅರ್ಹತೆಯ ದಾಖಲೆಗಳನ್ನು ಕೇಜ್ರಿವಾಲ್ ಅವರಿಗೆ ನೀಡುವಂತೆ ಗುಜರಾತ್ ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿದ್ದರು. ಹಿಂದಿನ ವಿಚಾರಣೆಗಳಲ್ಲಿ ಗುಜರಾತ್ ವಿಶ್ವವಿದ್ಯಾಲಯ ಸಿಐಸಿ ಆದೇಶವನ್ನು ತೀವ್ರವಾಗಿ ಆಕ್ಷೇಪಿಸಿತ್ತು.

ಫೆಬ್ರುವರಿಯಲ್ಲಿ ನಡೆದ ಕೊನೆ ವಿಚಾರಣೆ ವೇಳೆ ವಿಶ್ವವಿದ್ಯಾಲಯ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಪ್ರಧಾನಿ ಅವರ ಪದವಿಗಳ ಬಗ್ಗೆ ಮಾಹಿತಿಯು ಈಗಾಗಲೇ ಸಾರ್ವಜನಿಕವಾಗಿ ಸಿಗುವಂತೆ ಇರುವುದರಿಂದ ಮುಚ್ಚಿಡಲು ಏನೂ ಇಲ್ಲ ಎಂದು ಪ್ರತಿಪಾದಿಸಿದ್ದರು

ಸಿಸೋಡಿಯಾ ಜಾಮೀನು ಅರ್ಜಿ ವಜಾ



ನವದೆಹಲಿ (ಪಿಟಿಐ): ಅಬಕಾರಿ ನೀತಿ ಅನುಷ್ಠಾನದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ದೆಹಲಿಯ ಮಾಜಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರ ಜಾಮೀನು ಅರ್ಜಿಯನ್ನು ನ್ಯಾಯಾಲಯ ಶುಕ್ರವಾರ ವಜಾಗೊಳಿಸಿದೆ.

ವಿಶೇಷ ನ್ಯಾಯಾಧೀಶ ಎಂ.ಕೆ ನಾಗಪಾಲ್ ಅವರು ಜಾಮೀನು ಅರ್ಜಿ ವಜಾಗೊಳಿಸಿದರು. ಮಾ. 24ರಂದು ದೆಹಲಿ ನ್ಯಾಯಾಲಯವು ತನ್ನ ಆದೇಶವನ್ನು ಕಾಯ್ದಿರಿಸಿತ್ತು. ದೆಹಲಿ ಅಬಕಾರಿ ನೀತಿ ಪ್ರಕರಣದಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಫೆ.26ರಂದು ಸಿಸೋಡಿಯಾರನ್ನು ಸಿಬಿಐ ಬಂಧಿಸಿತ್ತು.

ಇಂದೋರ್ ದುರಂತ: ಸಾವಿನ ಸಂಖ್ಯೆ 36ಕ್ಕೆ

ಇಂದೋರ್ (ಪಿಟಿಐ): 'ಇಲ್ಲಿನ ಪಟೇಲ್ ನಗರದ ಬೇಲೇಶ್ವರ ಮಹಾದೇವ ಝೂಲೇಲಾಲ್ ದೇವಸ್ಥಾನದ ಪುರಾತನ ಬಾವಿಯ ಚಾವಣಿ ಕುಸಿದ ಪ್ರಕರಣದಲ್ಲಿ ಸಾವಿಗೀಡಾದವರ ಸಂಖ್ಯೆ 36ಕ್ಕೆ ಏರಿದೆ. ಶುಕ್ರವಾರ ಮತ್ತೊಂದು ಮೃತದೇಹ ಹೊರತೆಗೆಯಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ದುರಂತದ ಸ್ಥಳಕ್ಕೆ ಶುಕ್ರವಾರ ಭೇಟಿ ನೀಡಿದ್ದರು. ಸಂತ್ರಸ್ತರ ಕುಟುಂಬದವರಿಗೆ ಸಾಂತ್ವನ ಹೇಳಲು ತೆರಳುತ್ತಿದ್ದಾಗ ಸ್ಥಳೀಯರ ಗುಂಪೊಂದು ಚೌಹಾಣ್ ವಿರುದ್ಧ ಧಿಕ್ಕಾರ ಕೂಗಿತು.

'ನಾಪತ್ತೆಯಾಗಿದ್ದ ವ್ಯಕ್ತಿಯೊಬ್ಬರ ಶವವನ್ನು ಶುಕ್ರವಾರ ಬಾವಿಯಿಂದ ಹೊರತೆಗೆಯಲಾಗಿದೆ. ಒಟ್ಟು 16 ಮಂದಿ ಗಾಯಗೊಂಡಿದ್ದು, ಅವ ರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಇಬ್ಬರಿಗೆ ಪ್ರಥಮ ಚಿಕಿತ್ಸೆ ನೀಡಿ ಮನೆಗೆ ಕಳುಹಿಸಲಾಗಿದೆ' ಎಂದು ಇಂದೋರ್ ವಿಭಾಗೀಯ ಕಮಿಷನರ್ (ಕಂದಾಯ) ಪವನ್ ಕುಮಾರ್ ಶರ್ಮಾ ಹೇಳಿದ್ದಾರೆ.

'ದೇವಾಲಯವು ಇಕ್ಕಟ್ಟಾಗಿರುವ ಸ್ಥಳದಲ್ಲಿ ನಿರ್ಮಾಣವಾಗಿರುವುದರಿಂದ ರಕ್ಷಣಾ ಕಾರ್ಯಾಚರಣೆಗೆ ತೊಡಕಾಗಿದೆ. ನೀರನ್ನೆಲ್ಲಾ ಹೊರತೆಗೆಯಲು ದೇಗುಲದ ಗೋಡೆಯೊಂದನ್ನು ಕೆಡವಬೇಕಾಗುತ್ತದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ಬರಲಿವೆ ವಂದೇ ಭಾರತ್ ಸ್ಲೀಪರ್ ರೈಲುಗಳು

ನವದೆಹಲಿ: ಲಾತೂರಿನಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್‌ನ 120 ಸ್ಲೀಪರ್ ರೇಕ್‌ಗಳನ್ನು ತಯಾರಿಸಲು ಅಗತ್ಯ ಸಿದ್ಧತೆಗಳನ್ನು ಆರಂಭಿಸಲು ರಷ್ಯನ್ ಕಂಪನಿ ಟ್ರಾನ್ಸ್‌ಮ್ಯಾಷ್ ಹೋಲ್ಡಿಂಗ್‌ಗೆ (ಟಿಎಂಎಚ್) ಭಾರತೀಯ ರೈಲ್ವೆ ಕಾರ್ಯಾದೇಶ ಪತ್ರ ನೀಡಿದೆ.

ರೈಲ್ವೆ ಸ್ಟೋರ್ಸ್‌ನ ಕಾರ್ಯನಿರ್ದೇಶಕರು ಮಾರ್ಚ್ 29ರಂದು ನೀಡಿದ ಪತ್ರದಲ್ಲಿ, ಇದರೊಂದಿಗೆ ಒಪ್ಪಂದ ಪೂರ್ಣಗೊಳ್ಳುತ್ತದೆ ಎಂದಿದ್ದಾರೆ.

200 ವಂದೇ ಭಾರತ್ ರೈಲುಗಳಿಗೆ ಸ್ಲೀಪರ್ ಕೋಚ್ ತಯಾರಿಸುವ ಹಾಗೂ ನಿರ್ವಹಿಸುವ ಯೋಜನೆಗೆ ರೈಲ್ವೆ ಸಾರ್ವಜನಿಕ ಸ್ವಾಮ್ಯದ ಕಂಪನಿ ರೈಲ್ ವಿಕಾಸ್ ನಿಗಮ್ ಲಿಮಿಟೆಡ್ (ಆರ್‌ವಿಎನ್‌ಎಲ್) ಹಾಗೂ ರಷ್ಯಾದ ಬಹುದೊಡ್ಡ ರೋಲಿಂಗ್ ಸ್ಟಾಕ್ ತಯಾರಕರ ಒಕ್ಕೂಟ ಟ್ರಾನ್ಸ್‌ಮ್ಯಾಷ್ ಹೋಲ್ಡಿಂಗ್ ₹58 ಸಾವಿರ ಕೋಟಿ ಮೊತ್ತದ ಅತಿ ಕಡಿಮೆ ಮೊತ್ತದ ಬಿಡ್ಡರ್ ಆಗಿ ಹೊರ ಹೊಮ್ಮಿದೆ. ಈ ಒಕ್ಕೂಟವು ಉಕ್ಕಿನ ಬಾಡಿ ಹೊಂದಿರುವ ಪ್ರತಿ ರೈಲಿಗೆ ₹120 ಕೋಟಿ ಬಿಡ್ ಮಾಡಿತ್ತು ಎಂದು ರೈಲ್ವೆ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಟೆಂಡರ್ ದಾಖಲೆಗಳ ಪ್ರಕಾರ, 120 ರೈಲುಗಳನ್ನು ಲಾತೂರಿನಲ್ಲಿರುವ ಭಾರತೀಯ ರೈಲ್ವೆಯ ಸೌಲಭ್ಯದಲ್ಲಿ ತಯಾರಿಸಲಾಗುವುದು. ಉಳಿದ 80 ರೈಲುಗಳನ್ನು ಚೆನ್ನೈನಲ್ಲಿ ತಯಾರಿಸಲಾಗುವುದು.

ದೌರ್ಜನ್ಯ ತಡೆ ಕಾಯ್ದೆ: ಲಿಂಗಪರಿವರ್ತಿತ ಮಹಿಳೆಯೂ ಪರಿಹಾರಕ್ಕೆ ಅರ್ಹಳು

ಮುಂಬೈ (ಪಿಟಿಐ): 'ಶಸ್ತ್ರಚಿಕಿತ್ಸೆಯ ಮೂಲಕ ಲಿಂಗಪರಿವರ್ತನೆಗೊಂಡ ಮಹಿಳೆಯು ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಪರಿಹಾರ ಪಡೆಯಲು ಅರ್ಹಳು' ಎಂದು ಹೇಳಿರುವ ಬಾಂಬೆ ಹೈಕೋರ್ಟ್, ಪತ್ನಿಯಿಂದ ದೂರವಾಗಿರುವ ಪತಿಯು ಜೀವನಾಂಶ ನೀಡಬೇಕು ಎಂಬ ಕೆಳಹಂತದ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿದಿದೆ.

ನ್ಯಾಯಮೂರ್ತಿ ಅಮಿತ್ ಬೋರ್ಕರ್ ಅವರ ನೇತೃತ್ವದ ಏಕಸದಸ್ಯ ಪೀಠವು ಮಾರ್ಚ್ 16ರಂದು ಈ ಆದೇಶ ನೀಡಿದ್ದು, ಆದೇಶದ ಪ್ರತಿ ಶುಕ್ರವಾರ ಲಭ್ಯವಾಗಿದೆ.

ಆರಂಭದಲ್ಲಿ ಪುರುಷನಾಗಿದ್ದ, ಶಸ್ತ್ರಚಿಕಿತ್ಸೆಯ ಬಳಿಕ ಮಹಿಳೆಯಾದ ಪತ್ನಿಗೆ ₹ 12 ಸಾವಿರ ಮಾಸಿಕ ಜೀವನಾಂಶವನ್ನು ಪಾವತಿಸುವಂತೆ ನಿರ್ದೇಶನ ನೀಡಿರುವ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ನಿರ್ದೇಶನವನ್ನು ಎತ್ತಿಹಿಡಿಯುವ ಸೆಷನ್ಸ್ ನ್ಯಾಯಾಲಯದ ಆದೇಶವನ್ನು (2021ರ ಅಕ್ಟೋಬರ್) ಅರ್ಜಿದಾರರು ಪ್ರಶ್ನಿಸಿದ್ದರು.

2016ರಲ್ಲಿ ಶಸ್ತ್ರಚಿಕಿತ್ಸೆಯ ಮೂಲಕ ಹೆಣ್ಣಾಗಿ ಪರಿವರ್ತನೆಯಾಗಿದ್ದ ಈಕೆ, ಅದೇ ವರ್ಷ ಮದುವೆಯಾಗಿದ್ದಳು. ಎರಡು ವರ್ಷಗಳ ನಂತರ ಗಂಡ–ಹೆಂಡತಿ ನಡುವೆ ಭಿನ್ನಾಭಿಪ್ರಾಯಗಳು ಉಂಟಾದ ನಂತರ ಅವರು ದೂರವಾಗಿದ್ದರು.

NMDC Limited
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad – 500 028
Corporate Identity Number (CIN) - L13100TG1958GOI001674

PRESS NOTIFICATION

Tender Enquiry No:HO(Contracts)/HMM/60 LT/DIOM/2022/876/171 Dated 01/04/2023

NMDC Limited, A "NAVARATNA" Public Sector Company under Ministry of Steel, Govt. of India, invites **online bids** through **MSTC Portal** from experienced domestic bidders for the work of ***Hiring of Mining Machineries for excavation of 45.00 LT (+/- 20%) of waste [25.00 LT (+/- 20%) of BHJ and 20.00 LT (+/- 20%) of Shale] and 15.00 LT (+/- 20%) of Ore per year for 2 years in North Block Deposits of Donimalai Iron Ore Mine (DIOM) and extendable by another year on same terms and conditions on mutual consent basis at Donimalai, Dist: Bellary, Karnataka state – 583 118***

The detailed NIT and Bid documents can be viewed and /or downloaded from **01/04/2023 to 01/05/2023** from following website links;

1. NMDC website – **https://nmdcportals.nmdc.co.in/nmdctender**
2. Central Public Procurement portal – **https://www.eprocure.gov.in/epublish/app** and search tender through tender enquiry number
3. MSTC Portal - portal **https://www.mstcecommerce.com/eprochome/nmdc/**

For accessing the bid document from MSTC portal, bidders to visit MSTC website (use Microsoft Edge browser for compatibility) and search Tender Event No. **NMDC/HO/2/23-24/ET/17**.

The bidders are requested to submit their bids online through MSTC Portal. The details of submission of bid through online are given in NIT. The Bidders on regular basis are required to visit the NMDC's website/CPP Portal/ MSTC Portal for corrigendum, if any, at a future date.

For further clarification, the following can be contacted –

Chief General Manager (Contracts), NMDC Limited, Hyderabad, Fax No. 040 – 2353 4746, Telephone No. 040 – 23532800, email: contracts@nmdc.co.in

For and on behalf of NMDC Ltd.
Chief General Manager (Contracts)

हर एक काम देश के नाम इस्पाती इरादा

'1975ರಲ್ಲಿ ಪ್ರಜಾಪ್ರಭುತ್ವದ ಹತ್ಯೆಯಾಗಿತ್ತು'

ನವದೆಹಲಿ (ಪಿಟಿಐ): '1975ರಲ್ಲಿ ನಿಜ ಅರ್ಥದಲ್ಲಿ ಪ್ರಜಾಪ್ರಭುತ್ವದ ಹತ್ಯೆ ಆಗಿತ್ತು. ಹಾಗಿದ್ದರೂ ವಿದೇಶಗಳ ಹಸ್ತಕ್ಷೇಪವನ್ನು ಯಾರೂ ಬೇಡಿಕೊಂಡು ಹೋಗಿರಲಿಲ್ಲ' ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಹೇಳಿದ್ದಾರೆ.

ರಾಹುಲ್ ಗಾಂಧಿ ವಿರುದ್ಧದ ತೀರ್ಪು ಮತ್ತು ಅವರ ಲೋಕಸಭಾ ಸದಸ್ಯತ್ವ ಅನರ್ಹತೆ ಕುರಿತು ಈಚೆಗೆ ಜರ್ಮನಿಯ ವಿದೇಶಾಂಗ ಸಚಿವಾಲಯದ ವಕ್ತಾರ ಹೇಳಿಕೆ ನೀಡಿದ್ದರು. ಅದಕ್ಕೆ ಪ್ರತಿಕ್ರಿಯೆ ನೀಡಿದ್ದ ಕಾಂಗ್ರೆಸ್ ಹಿರಿಯ ನಾಯಕ ದಿಗ್ವಿಜಯ್ ಸಿಂಗ್, ಜರ್ಮನಿಗೆ ಧನ್ಯವಾದ ಹೇಳಿದ್ದರು. ದಿಗ್ವಿಜಯ್ ಅವರ ನಡೆಯನ್ನು ರಿಜಿಜು ಗುರುವಾರ ಟೀಕಿಸಿದ್ದರು. ಶುಕ್ರವಾರವೂ ಅವರು ಟೀಕೆಯನ್ನು ಮುಂದುವರಿಸಿದ್ದಾರೆ.

'1975ರಲ್ಲಿ ಯಾರೂ ವಿದೇಶಿ ಹಸ್ತಕ್ಷೇಪವನ್ನು ಬೇಡಿಕೊಂಡು ಹೋಗಿರಲಿಲ್ಲ. ಆಗ ಭಾರತೀಯರು ಹೋರಾಡಿದ್ದರು ಮತ್ತು ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸಿದ್ದರು. ಏಕೆಂದರೆ ಪ್ರಜಾಪ್ರಭುತ್ವವು ಜೀವಂತವಾಗಿರುವುದು ಭಾರತೀಯರ ಆತ್ಮಗಳಲ್ಲಿ' ಎಂದು ರಿಜಿಜು ಅವರು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ರಾಮನವಮಿ ವೇಳೆ ಘರ್ಷಣೆ: ಇಬ್ಬರಿಗೆ ಗಾಯ

ಹಾಸನ: 'ರಾಮನವಮಿ ಅಂಗವಾಗಿ ಗುರುವಾರ ಚನ್ನರಾಯಪಟ್ಟಣದ ಮೇಗಲಕೇರಿಯಲ್ಲಿ ಮೆರವಣಿಗೆ ನಡೆಯುವ ವೇಳೆ, ಹಿಂದೂ–ಮುಸ್ಲಿಂ ಯುವಕರ ಗುಂಪಿನ ನಡುವಿನ ಘರ್ಷಣೆಯಲ್ಲಿ ಚೂರಿ ಇರಿತದಿಂದ ಇಬ್ಬರು ಯುವಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ. 16 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಂ ಶಂಕರ್ ತಿಳಿಸಿದ್ದಾರೆ.

'ಜಾಮಿಯಾ ಮಸೀದಿ ಸಮೀಪ ಮೆರವಣಿಗೆ ನಡೆಯುವಾಗ ಗಾಣಿಗರ ಬೀದಿಯ ಕೆಲ ಯುವಕರು ಕೂಗಾಡಿದ್ದೇ ಘರ್ಷಣೆಗೆ ಕಾರಣ. ಆ ವೇಳೆ ಮುರುಳಿ ಹಾಗೂ ಚೇತನ ಎಂಬುವವರ ಮೇಲೆ ಚಾಕು ಹಾಗೂ ಕಲ್ಲಿನಿಂದ ಹಲ್ಲೆ ನಡೆಸಲಾಗಿದೆ. ಲಾರಿ, ಬೈಕ್‌ಗಳ ಮೇಲೂ ಕಲ್ಲು ತೂರಲಾಗಿದೆ. ಕೆಎಸ್‌ಆರ್‌ಪಿ ತುಕುಡಿ ಸೇರಿದಂತೆ ಪೊಲೀಸ್ ಬಂದೋಬಸ್ತ್ ಮಾಡಲಾಗಿದ್ದು, ಪರಿಸ್ಥಿತಿ ಹತೋಟಿಯಲ್ಲಿದೆ' ಎಂದು ಎಸ್ಪಿ ತಿಳಿಸಿದ್ದಾರೆ. ಈ ಸಂಬಂಧ ದೂರು–ಪ್ರತಿದೂರು ದಾಖಲಾಗಿವೆ.

ಪಾಕ್ ಜನರು ಸಂತೋಷದಿಂದ ಇಲ್ಲ: ಭಾಗವತ್

ಭೋಪಾಲ್ (ಪಿಟಿಐ): 'ಸ್ವಾತಂತ್ರ್ಯ ಲಭಿಸಿ ಏಳು ದಶಕಗಳು ಕಳೆದರೂ ಪಾಕಿಸ್ತಾನದ ಜನರು ಸಂತೋಷದಿಂದಿಲ್ಲ. ಭಾರತದ ವಿಭಜನೆಯು ಪ್ರಮಾದ ಎಂಬುದಾಗಿ ಅವರು ಈಗಲೂ ನಂಬಿದ್ದಾರೆ' ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಹೇಳಿದ್ದಾರೆ.

ಸ್ವಾತಂತ್ರ್ಯ ಹೋರಾಟಗಾರ ಹೇಮು ಕಲಾನಿ ಅವರ ಜನ್ಮ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಭಾರತವು ಪಾಕಿಸ್ತಾನದ ಮೇಲೆ ದಾಳಿ ನಡೆಸಬೇಕೆಂದು ನಾನು ಹೇಳುತ್ತಿಲ್ಲ. ಇತರರ ಮೇಲೆ ದಾಳಿಗೆ ಕರೆ ನೀಡುವ ಸಂಸ್ಕೃತಿಯನ್ನು ನಾವು ಹೊಂದಿಲ್ಲ' ಎಂಬುದನ್ನು ಒತ್ತಿ ಹೇಳಿದರು.

3,095 ಹೊಸ ಪ್ರಕರಣ ದಾಖಲು

ನವದೆಹಲಿ (ಪಿಟಿಐ): ದೇಶದಾದ್ಯಂತ ಶುಕ್ರವಾರ ಬೆಳಿಗ್ಗೆ ಕೊನೆಗೊಂಡ 24 ಗಂಟೆಗಳಲ್ಲಿ ಹೊಸದಾಗಿ 3,095 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಐದು ಮಂದಿ ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 15,208ಕ್ಕೆ ಏರಿಕೆಯಾಗಿದೆ. ದೇಶದಲ್ಲಿ ಇದುವರೆಗೆ 4.47 ಕೋಟಿ (4,47,15,786) ಮಂದಿಗೆ ಕೊರೊನಾ ಸೋಂಕು ತಗುಲಿದ್ದು, ಒಟ್ಟು 5,30,867 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ. ಈವರೆಗೆ ಒಟ್ಟು 4,41,69,711 ಮಂದಿ ಗುಣಮುಖರಾಗಿದ್ದಾರೆ.

ತಮಿಳುನಾಡು ಆಸ್ಪತ್ರೆಗಳಲ್ಲಿ ಇಂದಿನಿಂದ ಮಾಸ್ಕ್ ಕಡ್ಡಾಯ: ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಆಸ್ಪತ್ರೆಗಳಲ್ಲಿ ಮಾಸ್ಕ್ ಧರಿಸುವುದನ್ನು ತಮಿಳುನಾಡು ಸರ್ಕಾರ ಶನಿವಾರದಿಂದ ಕಡ್ಡಾಯಗೊಳಿಸಿದೆ.

ಕಾನ್ಪುರ: ವಾಣಿಜ್ಯ ಸಂಕೀರ್ಣದಲ್ಲಿ ಅಗ್ನಿ ಅವಘಡ

ಕಾನ್ಪುರ, ಉತ್ತರ ಪ್ರದೇಶ (ಪಿಟಿಐ): 'ಕಾನ್ಪುರದ ಬಾನ್ಸ್‌ಮಂಡಿ ಪ್ರದೇಶದ ಬಹುಮಹಡಿ ವಾಣಿಜ್ಯ ಸಂಕೀರ್ಣದಲ್ಲಿ ಸಂಭವಿಸಿದ ಭಾರಿ ಅಗ್ನಿ ಅವಘಡದಲ್ಲಿ ಕನಿಷ್ಠ 500 ಅಂಗಡಿಗಳು ಭಸ್ಮವಾಗಿವೆ. ಬೆಂಕಿಯು ಪಕ್ಕದ ಅಂಗಡಿಗಳಿಗೂ ವ್ಯಾಪಿಸಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದರು.

'ಗುರುವಾರ ಮಧ್ಯರಾತ್ರಿ 2 ಗಂಟೆಗೆ ಅಫಕ್ ರಸೂಲ್ ಟವರ್‌ನಲ್ಲಿ ಅವಘಡ ಸಂಭವಿಸಿದ್ದು, ಪಕ್ಕದಲ್ಲಿದ್ದ ಮಕ್ಸೂದ್, ಹಮ್ರಾಜ್ ಹಾಗೂ ನಫೀಸ್ ಟವರ್ ಎಂಬ ಸಂಕೀರ್ಣಗಳಿಗೂ ಬೆಂಕಿ ವ್ಯಾಪಿಸಿದೆ. ಈ ನಾಲ್ಕೂ ಸಂಕೀರ್ಣಗಳಲ್ಲಿದ್ದ ಸುಮಾರು 500 ಅಂಗಡಿಗಳು ಬೆಂಕಿಗೆ ಆಹುತಿಯಾಗಿವೆ' ಎಂದು ಅವರು ಹೇಳಿದರು

ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಪರಿಣಾಮ ಬೆಂಕಿ ಹೊತ್ತಿಕೊಂಡಿದೆ ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ.

'ಅಗ್ನಿ ಅವಘಡದಲ್ಲಿ ₹100 ಕೋಟಿಗೂ ಅಧಿಕ ಮೌಲ್ಯದ ವಸ್ತುಗಳು ಬೆಂಕಿಯಲ್ಲಿ ಸುಟ್ಟು ಕರಕಲಾಗಿವೆ' ಎಂದು ಜಂಟಿ ಪೊಲೀಸ್ ಆಯುಕ್ತ (ಕಾನೂನು ಮತ್ತು ಸುವ್ಯವಸ್ಥೆ) ಆನಂದ್ ಪ್ರಕಾಶ್ ತಿವಾರಿ ತಿಳಿಸಿದ್ದಾರೆ.

ಚಲಿಸುತ್ತಿದ್ದ ಕಾರಿನಲ್ಲಿ ಸಾಮೂಹಿಕ ಅತ್ಯಾಚಾರ

ಒಂದನೇ ಪುಟದಿಂದ...

'ಮಾ. 4ರಂದು ನಡೆದಿರುವ ಕೃತ್ಯದ ಸಂಬಂಧ ಯುವತಿ ದೂರು ನೀಡಿದ್ದಾರೆ. ಅದರನ್ವಯ ಆರೋಪಿಗಳನ್ನು ಬಂಧಿಸಲಾಗಿದೆ. ನಾಲ್ವರ ಹಿನ್ನೆಲೆ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ತಿಳಿಸಿವೆ. ಸ್ನೇಹಿತನನ್ನು ಹೆದರಿಸಿ ಯುವತಿ ಅಪಹರಣ: 'ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ 19 ವರ್ಷದ ಯುವತಿಯು ಸ್ನೇಹಿತನ ಜತೆ ರಾತ್ರಿ 10 ಗಂಟೆ ಸುಮಾರಿಗೆ ನ್ಯಾಷನಲ್ ಗೇಮ್ಸ್ ಉದ್ಯಾನಕ್ಕೆ ಹೋಗಿ ಕುಳಿತಿದ್ದರು. ಅದನ್ನು ನೋಡಿದ್ದ ಆರೋಪಿಯೊಬ್ಬ ಸ್ಥಳಕ್ಕೆ ಹೋಗಿದ್ದ. 'ರಾತ್ರಿ ಹೊತ್ತು ಏಕೆ ಕುಳಿತಿದ್ದೀರಾ' ಎಂಬುದಾಗಿ ಹೆದರಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಭಯಗೊಂಡಿದ್ದ ಸ್ನೇಹಿತ ಸ್ಥಳದಿಂದ ಹೊರಟುಹೋಗಿದ್ದ. ಯುವತಿ ಸ್ಥಳದಲ್ಲೇ ಕುಳಿತಿದ್ದರು. ತನ್ನ ಮೂವರು ಸ್ನೇಹಿತರನ್ನು ಸ್ಥಳಕ್ಕೆ ಕರೆಸಿದ್ದ ಆರೋಪಿ, ಯುವತಿಯನ್ನು ಎಳೆದೊಯ್ದು ಕಾರು ಹತ್ತಿಸಿದ್ದ.'

'ದೊಮ್ಮಲೂರು, ಇಂದಿರಾನಗರ, ಆನೇಕಲ್, ನೈಸ್ ರಸ್ತೆ ಹಾಗೂ ಇತರೆಡೆ ಕಾರಿನಲ್ಲಿ ಯುವತಿಯನ್ನು ಸುತ್ತಾಡಿಸಲಾಗಿತ್ತು. ಚಲಿಸುತ್ತಿದ್ದ ಕಾರಿನಲ್ಲೇ ನಾಲ್ವರು ಆರೋಪಿಗಳು ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದರು. ಮಾರ್ಚ್ 25ರಂದು ನಸುಕಿನ 4 ಗಂಟೆ ಸುಮಾರಿಗೆ ಯುವತಿಯನ್ನು ಅವರ ಮನೆ ಬಳಿ ಬಿಟ್ಟು ಆರೋಪಿಗಳು ಪರಾರಿಯಾಗಿದ್ದರು' ಎಂದು ತಿಳಿಸಿವೆ.

'ಕೃತ್ಯದಿಂದ ತೀವ್ರ ಅಸ್ವಸ್ಥಗೊಂಡಿದ್ದ ಯುವತಿಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರು. ಮಾರ್ಚ್ 26ರಂದು ಠಾಣೆಗೆ ದೂರು ನೀಡಿದ್ದರು. ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಹೇಳಿವೆ.

ಧರ್ಮಪ್ರಕಾಶ ಡಿ. ಬನುಮಯ್ಯ ವಿದ್ಯಾಸಂಸ್ಥೆ
ಡಿ. ಬನುಮಯ್ಯ ವಾಣಿಜ್ಯ ಮತ್ತು ಕಲಾ ಕಾಲೇಜು
ಹೊಸ ಸಯ್ಯಾಜಿ ರಾವ್ ರಸ್ತೆ, ಮೈಸೂರು–570004, ದೂರವಾಣಿ: 0821–2420325, 0821–2426043
ಮಿಂಚಂಚೆ: bcmys@yahoo.com

ಬೋಧಕ ಹುದ್ದೆಗಳ ನೇಮಕಾತಿ ಪ್ರಕಟಣೆ

ಧರ್ಮಪ್ರಕಾಶ ಡಿ. ಬನುಮಯ್ಯ ವಿದ್ಯಾಸಂಸ್ಥೆ, ಹೊಸ ಸಯ್ಯಾಜಿ ರಾವ್ ರಸ್ತೆ, ಮೈಸೂರು, ಇದರ ಅಂಗಸಂಸ್ಥೆ ಡಿ. ಬನುಮಯ್ಯ ವಾಣಿಜ್ಯ ಮತ್ತು ಕಲಾ ಕಾಲೇಜಿನಲ್ಲಿ ಈ ಕೆಳಕಂಡ ಅನುದಾನಿತ (ಪಿಂಚಣಿರಹಿತ) ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಕಾಲೇಜು ಹಾಗೂ ತಾಂತ್ರಿಕ ಶಿಕ್ಷಣ ಆಯುಕ್ತರು, ಬೆಂಗಳೂರು ಅವರ ಆದೇಶ ಸಂಖ್ಯೆ ಕಾಶಿಇ237/ಖಾಹುಭ/ಮೈವಿ/2018–19/ನೇವಿ–2 ದಿನಾಂಕ 21–03–2023 ಹಾಗೂ ಮೈಸೂರಿನ ಪ್ರಾದೇಶಿಕ ಜಂಟಿ ನಿರ್ದೇಶಕರ ಪರಿಚಲನಾದೇಶ ಸಂಖ್ಯೆ RJDM/APTS/APT/3/2022/GSI (C No. 88985) ದಿನಾಂಕ 21–3–2023ರನ್ವಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ವಿಷಯ	ಭರ್ತಿ ಮಾಡಲು ಅನುಮತಿ ನೀಡಿರುವ ಹುದ್ದೆಗಳ ಸಂಖ್ಯೆ	ಮೀಸಲಾತಿ
1	ಆಂಗ್ಲ ಭಾಷೆ	01	ಪ.ಜಾ.–01
2	ವಾಣಿಜ್ಯಶಾಸ್ತ್ರ	01	ಪ.ಜಾ.–01
3	ದೈಹಿಕ ಶಿಕ್ಷಣ ಬೋಧಕ	01	ಏಕವ್ಯಕ್ತಿ ವಿಭಾಗ–ಮೀಸಲಾತಿ ಅನ್ವಯಿಸುವುದಿಲ್ಲ

1. ಅಭ್ಯರ್ಥಿಗಳು ಅರ್ಜಿಯನ್ನು ತಮ್ಮ ಪೂರ್ಣ ಸ್ವವಿವರ ಮತ್ತು ವಿದ್ಯಾರ್ಹತೆಗೆ ಸಂಬಂಧಿಸಿದಂತೆ ದೃಢೀಕೃತ ಪ್ರತಿಗಳು ಹಾಗೂ ಮೀಸಲಾತಿಗೆ ಸಂಬಂಧಿಸಿ ಸಕ್ಷಮ ಪ್ರಾಧಿಕಾರಿಗಳಿಂದ ಪಡೆದಿರುವ ಪ್ರಮಾಣಪತ್ರದ ದೃಢೀಕೃತ ಪ್ರತಿಗಳೊಂದಿಗೆ ರೂ. 2000/–ಕ್ಕೆ (ಪ.ಜಾ./ಪ.ವ./ಪ್ರವರ್ಗ–1 ಅಭ್ಯರ್ಥಿಗಳಿಗೆ ರೂ. 1000/–) ರಾಷ್ಟ್ರೀಕೃತ ಬ್ಯಾಂಕಿನಲ್ಲಿ "D. Banumaiah's Educational Institution, Mysuru" ಈ ಹೆಸರಿನಲ್ಲಿ ತೆಗೆದ ಡಿಡಿ ಲಗತ್ತಿಸಿ, ಗೌರವ ಕಾರ್ಯದರ್ಶಿಗಳು, ಧರ್ಮಪ್ರಕಾಶ ಡಿ. ಬನುಮಯ್ಯ ವಿದ್ಯಾಸಂಸ್ಥೆ, ಹೊಸ ಸಯ್ಯಾಜಿ ರಾವ್ ರಸ್ತೆ, ಮೈಸೂರು–570004, ಇವರಿಗೆ ಈ ಜಾಹೀರಾತು ಪ್ರಕಟವಾದ 21 ದಿನಗಳೊಳಗೆ ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ಸಲ್ಲಿಸತಕ್ಕದ್ದು.
2. ವಯೋಮಿತಿ: ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ಕನಿಷ್ಠ ವಯೋಮಿತಿ 22 ವರ್ಷಗಳು. ಪ.ಜಾ./ಪ.ವ./ಪ್ರವರ್ಗ–1ರ ಅಭ್ಯರ್ಥಿಗಳಿಗೆ ಗರಿಷ್ಠ 45 ವರ್ಷಗಳು, II(A), II(B), III(A), III(B) ಮತ್ತು ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಗರಿಷ್ಠ 43 ವರ್ಷಗಳು ಹಾಗೂ ಸಾಮಾನ್ಯ ಅಭ್ಯರ್ಥಿಗಳಿಗೆ ಗರಿಷ್ಠ 40 ವರ್ಷಗಳಿಗೆ ಮೀರಿರಬಾರದು. ಸರ್ಕಾರಿ ಆದೇಶ ಸಂಖ್ಯೆ ಇಡಿ/87/ಯುಪಿಸಿ/2016 ದಿನಾಂಕ 13–12–2018ರ ಪ್ರಕಾರ ಸರ್ಕಾರಿ/ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪೂರ್ಣಕಾಲಿಕ ಬೋಧನಾನುಭವ ಹೊಂದಿರುವ ಸೇವಾವಧಿ ಅಥವಾ 5 ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಅವಧಿಗೆ ಗರಿಷ್ಠ ವಯೋಮಿತಿಯಲ್ಲಿ ವಿನಾಯಿತಿಯನ್ನು ಪರಿಗಣಿಸಲಾಗುವುದು.
3. **ವಿದ್ಯಾರ್ಹತೆ:** ಸಂಬಂಧಪಟ್ಟ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯನ್ನು– ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಮತ್ತು ಅಂಗವಿಕಲ ಅಭ್ಯರ್ಥಿಗಳು ಕನಿಷ್ಠ 50% ಮತ್ತು ಸಾಮಾನ್ಯ ವರ್ಗದ ಅಭ್ಯರ್ಥಿಗಳು ಕನಿಷ್ಠ 55% ಅಂಕ ಪಡೆದು– ತೇರ್ಗಡೆಯಾಗಿರಬೇಕು ಹಾಗೂ ಎನ್‌ಇಟಿ ಅಥವಾ ಎಸ್‌ಎಲ್‌ಇಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಕೋರ್ಸ್ ವರ್ಕ್ ಮೂಲಕ ಪಿಎಚ್.ಡಿ. ಪದವಿ ಪಡೆದ ಅಭ್ಯರ್ಥಿಗಳಿಗೆ ಎನ್‌ಇಟಿ/ ಎಸ್‌ಎಲ್‌ಇಟಿ ಪರೀಕ್ಷೆ ತೇರ್ಗಡೆಯಿಂದ ವಿನಾಯಿತಿ ನೀಡಲಾಗುವುದು. ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಯುಜಿಸಿ ನಿಯಮ/ಮಾರ್ಗದರ್ಶನದ ಪ್ರಕಾರ ಅರ್ಹತೆಯನ್ನು ನಿರ್ಧರಿಸಲಾಗುವುದು.
4. ವೇತನ ಶ್ರೇಣಿ ಮತ್ತು ಇತರ ನಿಬಂಧನೆಗಳು: ಯುಜಿಸಿ ನಿಯಮಾವಳಿ ಮತ್ತು ಕರ್ನಾಟಕ ಸರ್ಕಾರದ ನಿಯಮಾವಳಿಗಳನ್ವಯ.
5. ಈಗಾಗಲೇ ಸರ್ಕಾರಿ/ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಅವರು ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಯಿಂದ ಪಡೆದ ನಿರಾಕ್ಷೇಪಣಾ ಪತ್ರವನ್ನು ಲಗತ್ತಿಸಬೇಕು.
6. ಅಪೂರ್ಣವಾದ ಹಾಗೂ ಕೊನೆಯ ದಿನಾಂಕದನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
7. ಆಯ್ಕೆ ಪ್ರಕ್ರಿಯೆಯ ಯಾವುದೇ ಹಂತದಲ್ಲಾದರೂ ಸದರಿ ಹುದ್ದೆಯ ಅನುಮತಿ ಹಾಗೂ ಆಯ್ಕೆಯನ್ನು ರದ್ದುಪಡಿಸುವ ಅಧಿಕಾರವನ್ನು ಇಲಾಖೆ/ಸರ್ಕಾರವು ಹೊಂದಿರುತ್ತದೆ. ಅರ್ಜಿ ಸಲ್ಲಿಸಿರುವುದು ನೇಮಕಾತಿಗೆ ಹಕ್ಕೆಂದು ಪರಿಗಣಿಸಲಾಗುವುದಿಲ್ಲ.
8. ಅರ್ಜಿದಾರರು ಅರ್ಜಿಯ ಒಂದು ಪ್ರತಿಯನ್ನು ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು–570005 ಇವರಿಗೆ ಕಳುಹಿಸಬೇಕು.
9. ಸಂದರ್ಶನದ ದಿನಾಂಕವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. ಸಂದರ್ಶನಕ್ಕೆ ಹಾಜರಾದವರಿಗೆ ಯಾವುದೇ ಪ್ರಯಾಣಭತ್ಯೆ/ದಿನಭತ್ಯೆ ನೀಡಲಾಗುವುದಿಲ್ಲ.

ಸಹಿ/– ಡಾ. ವಿ.ಬಿ. ಜಯದೇವ ಅಧ್ಯಕ್ಷರು | **ಸಹಿ/– ಡಾ. ಕೆ.ಎನ್. ತಿಮ್ಮಯ್ಯ** ಉಪಾಧ್ಯಕ್ಷರು | **ಸಹಿ/– ಡಾ. ಎನ್. ತಿಮ್ಮಯ್ಯ** ಆಡಳಿತಾಧಿಕಾರಿಗಳು | **ಸಹಿ/– ಶ್ರೀಮತಿ ವಿ.ಸಿ. ಕೋಮಲ** ಗೌ. ಕಾರ್ಯದರ್ಶಿಗಳು



ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಉದ್ಘಾಟನಾ ಸಮಾರಂಭದಲ್ಲಿ ಕಾರ್ಯಕ್ರಮ ನೀಡಿದ ಗಾಯಕ ಅರಿಜೀತ್ ಸಿಂಗ್ ಅವರು ಮಹೇಂದ್ರ ಸಿಂಗ್ ದೋನಿ ಅವರ ಕಾಲು ಮುಟ್ಟಿ ನಮಸ್ಕರಿಸಿದರು. ನಟಿಯರಾದ ರಶ್ಮಿಕಾ ಮಂದಣ್ಣ ಮತ್ತು ತಮನ್ನಾ ಭಾಟಿಯಾ ಇದ್ದಾರೆ (ಎಡಚಿತ್ರ) ಗುಜರಾತ್ ಟೈಟನ್ಸ್ ತಂಡದ ಶುಭಮನ್ ಗಿಲ್ ಬ್ಯಾಟಿಂಗ್ –ಪಿಟಿಐ/ ಎಎಫ್‌ಪಿ ಚಿತ್ರ

ಚೆನ್ನೈ ಸೂಪರ್ ಕಿಂಗ್ಸ್‌ಗೆ ನಿರಾಸೆ: ಋತುರಾಜ್ ಆಟ ವ್ಯರ್ಥ; ಐಪಿಎಲ್‌ಗೆ ಅದ್ದೂರಿ ಆರಂಭ

ಗಿಲ್ ಮಿಂಚು; ಟೈಟನ್ಸ್ ಶುಭಾರಂಭ

ಅಹಮದಾಬಾದ್ (ಪಿಟಿಐ/ ಎಎಫ್‌ಪಿ): ಶುಭಮನ್ ಗಿಲ್ ಅವರ ಭರ್ಜರಿ ಅರ್ಧಶತಕದ ನೆರವಿನಿಂದ ಗುಜರಾತ್ ಟೈಟನ್ಸ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶುಕ್ರವಾರ ನೆರೆದಿದ್ದ 1 ಲಕ್ಷ ಪ್ರೇಕ್ಷಕರ ಮುಂದೆ ನಡೆದ ಉದ್ಘಾಟನಾ ಪಂದ್ಯದಲ್ಲಿ ಹಾರ್ದಿಕ್ ಪಾಂಡ್ಯ ಬಳಗ ಐದು ವಿಕೆಟ್‌ಗಳಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ಚೆನ್ನೈ ತಂಡ, ಒಂಬತ್ತು ಸಿಕ್ಸರ್‌ಗಳನ್ನು ಸಿಡಿಸಿದ ಯುವಬ್ಯಾಟರ್ ಋತುರಾಜ್ ಗಾಯಕವಾಡ (92 ರನ್, 50 ಎ.) ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 178 ರನ್ ಗಳಿಸಿತು.

ಕಳೆದ ಬಾರಿಯ ಚಾಂಪಿಯನ್ ಟೈಟನ್ಸ್ ತಂಡ ಇನ್ನೂ ನಾಲ್ಕು ಎಸೆತಗಳು ಇರುವಂತೆಯೇ ಐದು ವಿಕೆಟ್ ಕಳೆದುಕೊಂಡು ಗೆಲುವಿನ ಗಡಿ ದಾಟಿತು. 36 ಎಸೆತಗಳಲ್ಲಿ 63 ರನ್ ಗಳಿಸಿದ ಗಿಲ್ ಅವರು ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ವಿಜಯ್ ಶಂಕರ್, ರಾಹುಲ್ ತೆವಾಟಿಯಾ ಮತ್ತು ರಶೀದ್ ಖಾನ್ ಅವರು ಕೊನೆಯ ಓವರ್‌ಗಳಲ್ಲಿ ಬಿರುಸಿನ ಆಟವಾಡಿ ತಂಡದ ಗೆಲುವಿನ ಹಾದಿ ಸುಗಮಗೊಳಿಸಿದರು. ಟೈಟನ್ಸ್ ಗೆಲುವಿಗೆ ಕೊನೆಯ ಓವರ್‌ನಲ್ಲಿ ಎಂಟು ರನ್‌ಗಳು ಬೇಕಿದ್ದವು. ರಾಹುಲ್ ಅವರು ಸಿಕ್ಸರ್ ಮತ್ತು ಬೌಂಡರಿ ಹೊಡೆದು ಜಯ ತಂದಿತ್ತರು.

ಋತುರಾಜ್ ಮಿಂಚು: ಟಾಸ್ ಗೆದ್ದ ಟೈಟನ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊಹಮ್ಮದ್ ಶಮಿ ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿಯೇ ಡೆವೊನ್ ಕಾನ್ವೆ ವಿಕೆಟ್ ಕಬಳಿಸಿದರು.

ಆದರೆ ಇನ್ನೊಂದು ಬದಿಯಲ್ಲಿದ್ದ ಋತುರಾಜ್ ಮಾತ್ರ ಬೀಸಾಟವಾಡಿದರು. ಕೇವಲ 50 ಎಸೆತಗಳಲ್ಲಿ 92 ರನ್ ಗಳಿಸಿದರು. ಅದರಲ್ಲಿ ನಾಲ್ಕು ಬೌಂಡರಿ ಮತ್ತು ಒಂಬತ್ತು ಸಿಕ್ಸರ್‌ಗಳು ಇದ್ದವು. ಅವರೊಂದಿಗೆ ಮೋಯಿನ್ ಅಲಿ (23; 17ಎ) ಎರಡನೇ ವಿಕೆಟ್ ಜೊತೆಯಾಟದಲ್ಲಿ 36 ರನ್ ಸೇರಿಸಿದರು. ಮೋಯಿನ್ ಔಟಾದ ನಂತರ ಬಂದ ಸ್ಟೋಕ್ಸ್ ನಿರೀಕ್ಷೆ ಹುಸಿಗೊಳಿಸಿದರು. ಕೇವಲ ಏಳು ರನ್ ಗಳಿಸಿ ಔಟಾದರು. ಇವರಿಬ್ಬರ ವಿಕೆಟ್‌ಗಳನ್ನೂ ರಶೀದ್ ಕಬಳಿಸಿದರು.

ಈ ಹಂತದಲ್ಲಿ ಋತುರಾಜ್ ತಮ್ಮ ರನ್ ಗಳಿಕೆಯ ವೇಗವನ್ನು ಮತ್ತಷ್ಟು ಹೆಚ್ಚಿಸಿದರು. ಅವರು ಅಂಬಟಿ ರಾಯುಡು (12 ರನ್) ಅವರೊಂದಿಗೆ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 51 ರನ್ ಸೇರಿಸಿದರು. 13ನೇ ಓವರ್‌ನಲ್ಲಿ ಜೋಸೆಫ್ ಎಸೆತವನ್ನು ಸಿಕ್ಸರ್‌ಗೆತ್ತುವ ಭರದಲ್ಲಿ ಋತುರಾಜ್ ಅವರು ಶುಭಮನ್ ಗಿಲ್ ಅವರಿಗೆ ಕ್ಯಾಚಿತ್ತರು.

ಧೋನಿ ಸಿಕ್ಸರ್: ಸತತ 16ನೇ ಐಪಿಎಲ್ ಆಡುತ್ತಿರುವ ಮಹೇಂದ್ರಸಿಂಗ್ ಧೋನಿ (ಔಟಾಗದೆ 14) ಎಂಟನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದರು. ಪ್ರೇಕ್ಷಕರ ಗ್ಯಾಲರಿಯಲ್ಲಿ ಮಿಂಚಿನ ಸಂಚಲನ ಮೂಡಿತು. ಅಭಿಮಾನಿಗಳು ಪ್ಲೆಕಾರ್ಡ್‌ಗಳನ್ನು ತೋರಿ ಧೋನಿಗೆ ಸ್ವಾಗತ ಕೋರಿದರು. ಅವರನ್ನು ಮಹಿ ನಿರಾಶೆಗೊಳಿಸಲಿಲ್ಲ. ಒಂದು ಬೌಂಡರಿ, ಸಿಕ್ಸರ್ ಹೊಡೆದರು.

ಕೇನ್‌ಗೆ ಗಾಯ: ಮಿಡ್‌ವಿಕೆಟ್ ಬೌಂಡರಿಲೈನ್‌ನಲ್ಲಿ ಫೀಲ್ಡಿಂಗ್ ಮಾಡುತ್ತಿದ್ದ ಕೇನ್ ವಿಲಿಯಮ್ಸನ್ ಅವರು ಋತುರಾಜ್ ಹೊಡೆದ ಚೆಂಡನ್ನು ಕ್ಯಾಚ್ ಮಾಡುವ ಪ್ರಯತ್ನ ಮಾಡಿದಾಗ ಗಾಯಗೊಂಡರು.

ಇಂಪ್ಯಾಕ್ಟ್ ಪ್ಲೇಯರ್ ಬಳಕೆ: ಗುಜರಾತ್ ತಂಡ ಗಾಯಗೊಂಡ ಕೇನ್ ಬದಲು ಸಾಯ್ ಸುದರ್ಶನ್ ಅವರನ್ನು ಹಾಗೂ ಚೆನ್ನೈ ತಂಡ ಅಂಬಟಿ ರಾಯುಡು ಬದಲು ಬೌಲರ್ ತುಷಾರ್ ದೇಶಪಾಂಡೆ ಅವರನ್ನು 'ಇಂಪ್ಯಾಕ್ಟ್ ಪ್ಲೇಯರ್' ಆಗಿ ಕಣಕ್ಕಿಳಿಸಿತು.

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 7ಕ್ಕೆ178 (20 ಓವರ್‌ಗಳಲ್ಲಿ)
ಕಾನ್ವೆ ಬಿ ಶಮಿ 1 (6ಎ)
ಋತುರಾಜ್ ಸಿ ಗಿಲ್ ಬಿ ಜೋಸೆಫ್ 92 (50ಎ, 4X4, 6X9), ಮೋಯಿನ್ ಸಿ ಸಹಾ ಬಿ ರಶೀದ್ 23 (17ಎ, 4X4, 6X1), ಸ್ಟೋಕ್ಸ್ ಸಿ ಸಹಾ ಬಿ ರಶೀದ್ 7 (6ಎ, 4X1), ರಾಯುಡು ಬಿ ಜೊಶುವಾ 12 (12ಎ, 6X1), ಶಿವಂ ಸಿ ರಶೀದ್ ಬಿ ಶಮಿ 19 (18ಎ, 4X1), ಜಡೇಜ ಸಿ ವಿಜಯ್ ಬಿ ಜೋಸೆಫ್ 1 (2ಎ)
ಧೋನಿ ಔಟಾಗದೆ 14 (7ಎ, 4X1, 6X1), ಸ್ಯಾಂಟನರ್ ಔಟಾಗದೆ 1 (3ಎ)
ಇತರೆ: 8 (ಬೈ 1, ಲೆಗ್‌ಬೈ 6, ನೋಬಾಲ್ 1) **ವಿಕೆಟ್ ಪತನ:** 1–14 (ಡೆವೊನ್ ಕಾನ್ವೆ;2.2), 2–50 (ಮೋಯಿನ್ ಅಲಿ; 5.5), 3–70 (ಬೆನ್ ಸ್ಟೋಕ್ಸ್; 7.4), 4–121 (ಅಂಬಟಿ ರಾಯುಡು;12.5), 5–151 (ಋತುರಾಜ್ ಗಾಯಕವಾಡ; 17.1), 6–153 (ರವೀಂದ್ರ ಜಡೇಜ; 17.4), 7–163 (ಶಿವಂ ದುಬೆ; 18.3)
ಬೌಲಿಂಗ್: ಮೊಹಮ್ಮದ್ ಶಮಿ 4–0–29–2, ಹಾರ್ದಿಕ್ ಪಾಂಡ್ಯ 3–0–28–0, ಜೋಶುವಾ ಲಿಟಲ್ 4–0–41–1, ರಶೀದ್ ಖಾನ್ 4–0–26–2, ಅಲ್ಜರಿ ಜೋಸೆಫ್ 4–0–33–2, ಯಶ್ ದಯಾಳ್ 1–0–14–0

ಟೈಟನ್ಸ್ 5ಕ್ಕೆ 182 (19.2 ಓವರ್)
ಸಹಾ ಸಿ ದುಬೆ ಬಿ ರಾಜವರ್ಧನ್ 25 (16 ಎ., 4X2, 6X2), ಗಿಲ್ ಸಿ ಗಾಯಕವಾಡ ಬಿ ದೇಶಪಾಂಡೆ 63 (36 ಎ., 4X6, 6X3)
ಸುದರ್ಶನ್ ಸಿ ದೋನಿ ಬಿ ರಾಜವರ್ಧನ್ 22 (17 ಎ., 4X3)
ಹಾರ್ದಿಕ್ ಬಿ ಜಡೇಜ 8 (11 ಎ.)
ವಿಜಯ್ ಸಿ ಸ್ಯಾಂಟನರ್ ಬಿ ರಾಜವರ್ಧನ್ 27 (21 ಎ., 4X2, 6X1), ರಾಹುಲ್ ಔಟಾಗದೆ 15 (14 ಎ., 4X1, 6X1), ರಶೀದ್ ಔಟಾಗದೆ 10 (3 ಎ., 4X1, 6X1)
ಇತರೆ: 12 (ಲೆಗ್‌ಬೈ6, ನೋಬಾಲ್ 2, ವೈಡ್ 4) **ವಿಕೆಟ್ ಪತನ:** 1–37 (ವೃದ್ಧಿಮನ್ ಸಹಾ; 3.5), 2–90 (ಸಾಯ್ ಸುದರ್ಶನ್; 9.3), 3–111 (ಹಾರ್ದಿಕ್ ಪಾಂಡ್ಯ; 12.1), 4–138 (ಶುಭಮನ್ ಗಿಲ್; 14.6), 5–156 (ವಿಜಯ್ ಶಂಕರ್; 17.6)
ಬೌಲಿಂಗ್: ದೀಪಕ್ ಚಾಹರ್ 4–0–29–0, ತುಷಾರ್ ದೇಶಪಾಂಡೆ 3.2–0–51–1, ರಾಜವರ್ಧನ್ ಹಂಗರ್‌ಗೇಕರ್ 4–0–36–3, ಮಿಷೆಲ್ ಸ್ಯಾಂಟನರ್ 4–0–32–0, ರವೀಂದ್ರ ಜಡೇಜ 4–0–28–1
ಫಲಿತಾಂಶ: ಟೈಟನ್ಸ್‌ಗೆ 5 ವಿಕೆಟ್ ಗೆಲುವು

ಮಿಚೆಲ್ ಮಾರ್ಷ್ ಮೇಲೆ ಎಲ್ಲರ ಚಿತ್ತ

ರಾಹುಲ್ –ವಾರ್ನರ್ ಪೈಪೋಟಿ

ಲಖನೌ (ಪಿಟಿಐ): ಕೆ.ಎಲ್.ರಾಹುಲ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ತಂಡ ಐಪಿಎಲ್ ಟೂರ್ನಿಯಲ್ಲಿ ಪ್ರಶಸ್ತಿಯೆಡೆಗಿನ ಅಭಿಯಾನವನ್ನು ಶನಿವಾರ ಆರಂಭಿಸಲಿದೆ.

ಇಲ್ಲಿನ ಇಕಾನಾ ಕ್ರೀಡಾಂಗಣದಲ್ಲಿ ನಡೆಯಲಿರುವ ಮೊದಲ ಪಂದ್ಯದಲ್ಲಿ ಲಖನೌ ತಂಡ ಡೇವಿಡ್ ವಾರ್ನರ್ ನೇತೃತ್ವದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಸವಾಲು ಎದುರಿಸಲಿದ್ದು, ಶುಭಾರಂಭದ ನಿರೀಕ್ಷೆಯಲ್ಲಿದೆ.

ಬ್ಯಾಟಿಂಗ್‌ನಲ್ಲಿ ಲಯ ಕಳೆದುಕೊಂಡಿರುವ ರಾಹುಲ್ ಅವರು ಒತ್ತಡವನ್ನು ಹೇಗೆ ನಿಭಾಯಿಸುವರು ಎಂಬ ಪ್ರಶ್ನೆ ಅಭಿಮಾನಿಗಳನ್ನು ಕಾಡುತ್ತಿದೆ. ಹಳೆಯ ಫಾರ್ಮ್‌ಗೆ ಮರಳುವ ಜತೆಯಲ್ಲೇ ತಂಡವನ್ನು ಗೆಲುವಿನತ್ತ ಮುನ್ನಡೆಸುವ ಸವಾಲು ಅವರ ಮುಂದಿದೆ.

ದಕ್ಷಿಣ ಆಫ್ರಿಕಾದ ಕ್ವಿಂಟನ್ ಡಿ ಕಾಕ್ ಅವರು ಈ ಪಂದ್ಯಕ್ಕೆ ಲಭ್ಯರಿಲ್ಲ. ಆದ್ದರಿಂದ ನಾಯಕ ರಾಹುಲ್ ಅವರು ನಿಕೋಲಸ್ ಪೂರನ್, ಆಲ್‌ರೌಂಡರ್‌ಗಳಾದ ದೀಪಕ್ ಹೂಡಾ, ಕೃಣಾಲ್ ಪಾಂಡ್ಯ, ಕನ್ನಡಿಗ ಕೆ.ಗೌತಮ್, ಕೈಲ್ ಮೇಯರ್ಸ್ ಅವರಂತಹ ಆಟಗಾರರನ್ನು ನೆಚ್ಚಿಕೊಂಡು ಗೆಲುವಿಗೆ ತಂತ್ರ ರೂಪಿಸಬೇಕಿದೆ. ಡಿ ಕಾಕ್ ಅನುಪಸ್ಥಿತಿಯಲ್ಲಿ ಮೇಯರ್ಸ್ ಅವರ ಜವಾಬ್ದಾರಿ ಹೆಚ್ಚಿದೆ.

ವಾರ್ನರ್– ಮಾರ್ಷ್ ಮೇಲೆ ಚಿತ್ತ: ಮತ್ತೊಂದೆಡೆ ಡೆಲ್ಲಿ ತಂಡ ಆಸ್ಟ್ರೇಲಿಯಾದ ಇಬ್ಬರು ಆಟಗಾರರಾದ ವಾರ್ನರ್ ಮತ್ತು ಆಲ್‌ರೌಂಡರ್ ಮಿಚೆಲ್ ಮಾರ್ಷ್ ಮೇಲೆ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದೆ. ಮಾರ್ಷ್ ಅತ್ಯುತ್ತಮ ಫಾರ್ಮ್‌ನಲ್ಲಿರುವುದು ತಂಡದ ಬಲ ಹೆಚ್ಚಿಸಿದೆ.

ಪೃಥ್ವಿ ಶಾ, ರೊವ್ಮನ್ ಪೊವೆಲ್ ಮತ್ತು ಸರ್ಫರಾಜ್ ಖಾನ್ ಅವರೂ ಅಬ್ಬರದ ಆಟವಾಡುವ ತಾಕತ್ತು ಹೊಂದಿದ್ದಾರೆ. ಬೌಲಿಂಗ್‌ನಲ್ಲಿ ಅಕ್ಷರ್ ಪಟೇಲ್ ಮತ್ತು ಕುಲದೀಪ್ ಯಾದವ್ ಪ್ರಮುಖ ಪಾತ್ರ ವಹಿಸಲಿದ್ದಾರೆ. ಆಸ್ಟ್ರೇಲಿಯಾ ವಿರುದ್ಧದ ಸರಣಿಯಲ್ಲಿ ಬ್ಯಾಟಿಂಗ್‌ನಲ್ಲೂ ಮಿಂಚಿದ್ದ ಅಕ್ಷರ್, ಅದೇ ಫಾರ್ಮ್‌ಅನ್ನು ಇಲ್ಲೂ ಮುಂದುವರಿಸುವ ವಿಶ್ವಾಸದಲ್ಲಿದ್ದಾರೆ.

ಇಶಾಂತ್ ಶರ್ಮ ಫಾರ್ಮ್ ಕಳೆದುಕೊಂಡಿರುವುದು ಮತ್ತು ಪ್ರಮುಖ ವೇಗದ ಬೌಲರ್‌ಗಳು ಇಲ್ಲದಿರುವುದು ಡೆಲ್ಲಿ ತಂಡಕ್ಕೆ ಅಲ್ಪ ಹಿನ್ನಡೆ ಉಂಟುಮಾಡಿದೆ.

ಪಂದ್ಯ ಆರಂಭ: ರಾತ್ರಿ 7.30

ಕೆ.ಎಲ್‌.ರಾಹುಲ್

ಡೇವಿಡ್ ವಾರ್ನರ್

ನಾಯಕರ ಐಪಿಎಲ್ ಸಾಧನೆ	
ಕೆ.ಎಲ್.ರಾಹುಲ್ (ಲಖನೌ)	
ಪಂದ್ಯ	109
ರನ್	3,889
ಶ್ರೇಷ್ಠ	132
ಸರಾಸರಿ	48.01
ಸ್ಟ್ರೈಕ್‌ರೇಟ್	136.21
ಶತಕ	4
ಅರ್ಧಶತಕ	31
ಡೇವಿಡ್ ವಾರ್ನರ್ (ಡೆಲ್ಲಿ)	
ಪಂದ್ಯ	162
ರನ್	5,881
ಶ್ರೇಷ್ಠ	126
ಸರಾಸರಿ	42
ಸ್ಟ್ರೈಕ್‌ರೇಟ್	140.69
ಶತಕ	4
ಅರ್ಧಶತಕ	55

ಎದ್ದು ಬಿದ್ದು ಟಿಕೆಟ್ ಖರೀದಿಸಿದರು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿರುವ ರಾಯಲ್ ಚಾಲೆಂಜರ್ಸ್ ಮತ್ತು ಮುಂಬೈ ಇಂಡಿಯನ್ಸ್ ನಡುವಣ ಐಪಿಎಲ್ ಪಂದ್ಯದ ಗ್ಯಾಲರಿ ಟಿಕೆಟ್‌ಗಳಿಗೆ ಶುಕ್ರವಾರ ಭಾರಿ ನೂಕುನುಗ್ಗಲು ಉಂಟಾಗಿತ್ತು.

ಮಧ್ಯಾಹ್ನ 12 ಗಂಟೆಯಿಂದಲೇ ಕ್ರೀಡಾಂಗಣ ಸಮೀಪದ ಕಬ್ಬನ್ ರಸ್ತೆಯಲ್ಲಿರುವ ಬಾಕ್ಸ್‌ಆಫೀಸ್ (ಕೌಂಟರ್)ಗಳಲ್ಲಿ ಜನರು ಸಾಲುಗಟ್ಟಿದ್ದರು.

ಈ ಸಂದರ್ಭದಲ್ಲಿ ನೂಕಾಟ ಆರಂಭವಾಗಿ ಕಬ್ಬಿಣದ ಕಟಾಂಜನವೂ ಮುರಿದುಬಿತ್ತು. ಇದರಿಂದಾಗಿ ನಿಯಂತ್ರಣ ಕಳೆದುಕೊಂಡ ಕೆಲವು ಜನರು ಒಬ್ಬರ ಮೇಲೆ ಒಬ್ಬರು ಬಿದ್ದರು. ಇದರಿಂದಾಗಿ ಕೆಲವರಿಗೆ ಸಣ್ಣಪುಟ್ಟ ಗಾಯಗಳೂ ಆದವು. ಜನರನ್ನು ನಿಯಂತ್ರಿಸಲು ಪೊಲೀಸರು ಲಘು ಲಾಠಿಪ್ರಹಾರ ನಡೆಸಿದರು.

'ಗ್ಯಾಲರಿ ಆಸನಗಳಿಗಾಗಿ ಟಿಕೆಟ್‌ಗಳ ಮಾರಾಟ ನಡೆಯಿತು. ₹ 1250 ಬೆಲೆಯ ಟಿಕೆಟ್‌ಗಳನ್ನು ಮಾರಾಟ ಮಾಡಲಾಯಿತು. ಟಿಕೆಟ್ ಮಾರಾಟ ಪ್ರಕ್ರಿಯೆಯನ್ನು ಆರ್‌ಸಿಬಿಯೇ ನಿರ್ವಹಿಸುತ್ತಿದೆ' ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಮೂಲಗಳು ತಿಳಿಸಿವೆ. ಒಂದು ವಾರದ ಹಿಂದೆ ಆನ್‌ಲೈನ್ ಮತ್ತು ಕೌಂಟರ್‌ನಲ್ಲಿ ದೊಡ್ಡ ಮೊತ್ತದ ಮೌಲ್ಯದ ಟಿಕೆಟ್‌ಗಳನ್ನು ಮಾರಾಟ ಮಾಡಲಾಗಿತ್ತು. ಕಳೆದ 26ರಂದು ನಡೆದಿದ್ದ ಆರ್‌ಸಿಬಿ ತಂಡದ ಅಭ್ಯಾಸ 'ಅನ್‌ಬಾಕ್ಸ್' ಟಿಕೆಟ್‌ಗಳಿಗೂ ಅಪಾರ ಬೇಡಿಕೆ ಕುದುರಿತ್ತು. ಆ ದಿನವೂ ಟಿಕೆಟ್‌ಗಳು ಕಾಳಸಂತೆಯಲ್ಲಿ ದುಪ್ಪಟ್ಟು ಬೆಲೆಗೆ ಮಾರಾಟವಾಗಿದ್ದವು.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಕೌಂಟರ್‌ಗಳಲ್ಲಿ ಐಪಿಎಲ್ ಪಂದ್ಯದ ಟಿಕೆಟ್‌ಗಾಗಿ ಶುಕ್ರವಾರ ಜನರ ನೂಕುನುಗ್ಗಲು ಉಂಟಾಯಿತು. ಈ ಕೆಲವರು ಆಯ ತಪ್ಪಿ ಬಿದ್ದರು –ಪ್ರಜಾವಾಣಿ ಚಿತ್ರ/ ಕೃಷ್ಣಕುಮಾರ್ ಪಿ.ಎಸ್.

ಟೆನಿಸ್: ಸೆಮಿಫೈನಲ್‌ಗೆ ಪ್ರಜ್ವಲ್ ಲಗ್ಗೆ

ಐಟಿಎಫ್– ಮೈಸೂರು ಓಪನ್: ಮುಕುಂದ್ ಶಶಿಕುಮಾರ್‌ಗೆ ನಿರಾಸೆ

● ಮೋಹನ್ ಕುಮಾರ ಸಿ.

ಮೈಸೂರು: ತಾಳ್ಮೆಯಿಂದ ಆಡಿದ ಎಸ್.ಡಿ.ಪ್ರಜ್ವಲ್ ದೇವ್ ತಮ್ಮ ತವರೂರಿನ ಅಂಗಳದಲ್ಲಿ ನಡೆಯುತ್ತಿರುವ ಐಟಿಎಫ್- ಮೈಸೂರು ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು.

ಚಾಮರಾಜಪುರಂನ ಮೈಸೂರು ಟೆನಿಸ್ ಕ್ಲಬ್ (ಎಂಟಿಸಿ)ನಲ್ಲಿ ಶುಕ್ರವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಪ್ರಜ್ವಲ್ 1-6, 7-5, 7-6ರಿಂದ ಭಾರತದವರೇ ಆದ ಮುಕುಂದ್ ಶಶಿಕುಮಾರ್ ಅವರನ್ನು ಮಣಿಸಿದರು.

ಆಕ್ರಮಣಕಾರಿಯಾಗಿ ಆಟವಾಡಿದ ನಾಲ್ಕನೇ ಶ್ರೇಯಾಂಕದ ಆಟಗಾರ ಮುಕುಂದ್, ಮೊದಲ ಸೆಟ್ ಅನ್ನು ಸುಲಭವಾಗಿ ಗೆದ್ದರು. ಪ್ರಜ್ವಲ್ ಅವರ ಬಲವಾದ ಸರ್ವ್‌ಗಳನ್ನು ಮುರಿದ ಅವರು ಪಾರಮ್ಯ ಮೆರೆದರು. ಎರಡನೇ ಸೆಟ್‌ನಲ್ಲೂ ಮುನ್ನಡೆ ಕಾಯ್ದುಕೊಂಡಿದ್ದರು, ಈ ವೇಳೆ ತಿರುಗೇಟು ನೀಡಿದ ಪ್ರಜ್ವಲ್ ತಮ್ಮ ನೆಚ್ಚಿನ ಫೋರ್‌ಹ್ಯಾಂಡ್, ಗ್ರೌಂಡ್‌ಸ್ಟ್ರೋಕ್ ಹೊಡೆತಗಳಿಂದ ಪಾಯಿಂಟ್‌ಗಳನ್ನು ಗಳಿಸಿದರು. ಟ್ರೈಬ್ರೇಕರ್‌ನಲ್ಲಿ ಗೆದ್ದಾಗ ಚಪ್ಪಾಳೆಗಳ ಸದ್ದು ಪ್ರತಿಧ್ವನಿಸಿತು.

ಮೂರನೇ ಸೆಟ್‌ನಲ್ಲಿ ಆತ್ಮವಿಶ್ವಾಸದಿಂದ ಆಡಿದ ಪ್ರಜ್ವಲ್, 3 ಗಂಟೆಯಲ್ಲಿ ಗೆಲುವು ತಮ್ಮದಾಗಿಸಿದರು. ಮಧ್ಯಾಹ್ನದ ಬಿರುಬಿಸಿಲಿನಲ್ಲಿ ಬೆವರು ಹರಿಸಿದ ಇಬ್ಬರನ್ನೂ ಟೆನಿಸ್‌ಪ್ರಿಯರು ಹುರಿದುಂಬಿಸಿದರು.

ಕರಣ್‌ಗೆ ನಿರಾಸೆ: ಮತ್ತೊಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭರವಸೆ ಮೂಡಿಸಿದ್ದ ಭಾರತದ ಕರಣ್ ಸಿಂಗ್ ಅವರು 6-7, 3-6ರಲ್ಲಿ ಬ್ರಿಟನ್‌ನ ಜಾರ್ಜ್ ಲ್ಫೊಫಗೆನ್ ಅವರಿಗೆ ಮಣಿದರು.

ಆಸ್ಟ್ರೇಲಿಯಾದ ಬ್ಲೇಕ್ ಎಲಿಸ್ ಅವರು 7-6, 6-4ರಲ್ಲಿ ಉಕ್ರೇನ್‌ನ ವ್ಲಾಡಿಸ್ಲಾವ್ ಆರ್ಲವ್ ವಿರುದ್ಧ, ಅಮೆರಿಕದ ಆಲಿವರ್ ಕ್ರಾಫರ್ಡ್ 6-4, 6-0ರಲ್ಲಿ ಫ್ರಾನ್ಸ್‌ನ ಫ್ಲಾರೆಂಟ್ ಬಾಕ್ಸ್ ವಿರುದ್ಧ ಗೆದ್ದು ನಾಲ್ಕರ ಘಟ್ಟಕ್ಕೆ ಲಗ್ಗೆ ಇಟ್ಟರು.

ಡಬಲ್ಸ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮುಕುಂದ್ ಶಶಿಕುಮಾರ್– ವಿಷ್ಣುವರ್ಧನ್ ಜೋಡಿ 7-6, 3-6, 10-7ರಲ್ಲಿ ಫರ್ದೀನ್ ಖಮರ್– ಫೈಸಲ್ ಖಮರ್ ಜೋಡಿಯನ್ನು ಮಣಿಸಿ ನಾಲ್ಕರ ಘಟ್ಟ ಪ್ರವೇಶಿಸಿತು. ಸಂಜೆ ನಡೆದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಋತ್ವಿಕ್ ಚೌಧರಿ–ನಿಕಿ ಪೂಣಚ್ಚ ಜೋಡಿ 6-3, 6-3ರಲ್ಲಿ ಭಾರತದವರೇ ಆದ ಪರೀಕ್ಷಿತ್ ಸೋಮಾನಿ– ಮನಿಷ್ ಸುರೇಶ್ ಕುಮಾರ್ ವಿರುದ್ಧ ಗೆದ್ದರು.

ಎಸ್‌.ಡಿ.ಪ್ರಜ್ವಲ್ ದೇವ್ ಆಟದ ವೈಖರಿ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಬೂಮ್ರಾ ಬದಲು ಸಂದೀಪ್‌ಗೆ ಸ್ಥಾನ

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ತಂಡವು ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಬದಲು ಸಂದೀಪ್ ವಾರಿಯರ್ ಅವರನ್ನು ತಂಡಕ್ಕೆ ಸೇರಿಸಿಕೊಂಡಿದೆ.

ಬೆನ್ನು ನೋವಿನಿಂದ ಚೇತರಿಸಿಕೊಳ್ಳದ ಕಾರಣ ಬೂಮ್ರಾ ಅವರು ಈ ಬಾರಿಯ ಟೂರ್ನಿಯಲ್ಲಿ ಆಡುತ್ತಿಲ್ಲ.

'ಬೂಮ್ರಾ ಅವರ ಬದಲಿ ಆಟಗಾರನಾಗಿ ಬಲಗೈ ವೇಗದ ಬೌಲರ್ ಸಂದೀಪ್ ವಾರಿಯರ್ ತಂಡವನ್ನು ಸೇರಿಕೊಳ್ಳಲಿದ್ದಾರೆ. ಸಂದೀಪ್ ದೇಸಿ ಕ್ರಿಕೆಟ್‌ನಲ್ಲಿ 69 ಟಿ20 ಸೇರಿದಂತೆ 200ಕ್ಕೂ ಅಧಿಕ ಪಂದ್ಯಗಳನ್ನು ಆಡಿದ್ದಾರೆ. 362 ವಿಕೆಟ್‌ಗಳಿಸಿದ್ದಾರೆ' ಎಂದು ತಂಡದ ಪ್ರಕಟಣೆ ತಿಳಿಸಿದೆ.

ಎಂಐಗೆ ರಿಲಯನ್ಸ್ ಡಿಜಿಟಲ್ ಪಾರ್ಟನರ್

ಐಪಿಎಲ್‌ನಲ್ಲಿ ಆಡುತ್ತಿರುವ ಮುಂಬೈ ಇಂಡಿಯನ್ಸ್ (ಎಂಐ) ತಂಡಕ್ಕೆ ರಿಲಯನ್ಸ್ ಡಿಜಿಟಲ್ ಕಂಪೆನಿಯು ಪಾರ್ಟನರ್ ಆಗಿದೆ. ತಂಡದ ಆಟಗಾರರ ಕಿಟ್ ಮತ್ತು ಟ್ರೌಸರ್ ಪ್ರಾಯೋಜಕತ್ವವನ್ನು ನೀಡಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮುಂಬೈ ತಂಡವು ಐದು ಬಾರಿ ಪ್ರಶಸ್ತಿ ಗೆದ್ದಿದೆ. ರೋಹಿತ್ ಶರ್ಮಾ ನಾಯಕತ್ವದ ತಂಡವು ಈ ಬಾರಿಯ ಲೀಗ್‌ನಲ್ಲಿ 14 ಪಂದ್ಯಗಳನ್ನು ಆಡಲಿದೆ.

ಕೆಕೆಆರ್‌ಗೆ ಪಂಜಾಬ್ ಕಿಂಗ್ಸ್ ಸವಾಲು

ಮೊಹಾಲಿ (ಪಿಟಿಐ): ಆಟಗಾರರ ಗಾಯದ ಸಮಸ್ಯೆ ಮತ್ತು ಪ್ರಮುಖ ವಿದೇಶಿ ಆಟಗಾರರ ಅಲಭ್ಯತೆಯಿಂದ ಹಿನ್ನಡೆ ಅನುಭವಿಸಿರುವ ಕೋಲ್ಕತ್ತ ನೈಟ್ ರೈಡರ್ಸ್ ಹಾಗೂ ಪಂಜಾಬ್ ಕಿಂಗ್ಸ್ ತಂಡಗಳು ಐಪಿಎಲ್ ಟೂರ್ನಿಯ ಪಂದ್ಯದಲ್ಲಿ ಶನಿವಾರ ಎದುರಾಗಲಿವೆ.

ಇವೆರಡು ತಂಡಗಳು ಈಚೆಗಿನ ಕೆಲ ಟೂರ್ನಿಗಳಲ್ಲಿ ಸ್ಥಿರತೆ ಕಾಪಾಡಿಕೊಳ್ಳುವಲ್ಲಿ ವಿಫಲವಾಗಿದ್ದವು. ಕಳೆದ ಆವೃತ್ತಿಯಲ್ಲಿ ಪಂಜಾಬ್ ಆರನೇ ಸ್ಥಾನ ಪಡೆದುಕೊಂಡಿದ್ದರೆ, ಕೆಕೆಆರ್ ಏಳನೇ ಸ್ಥಾನ ಗಳಿಸಿತ್ತು.

ಈ ಬಾರಿ ಎರಡೂ ತಂಡಗಳು ನೂತನ ನಾಯಕರ ನೇತೃತ್ವದಲ್ಲಿ ಆಡಲಿವೆ. ಪಂಜಾಬ್ ತಂಡವನ್ನು ಶಿಖರ್ ಧವನ್ ಹಾಗೂ ಕೋಲ್ಕತ್ತ ತಂಡವನ್ನು ನಿತೀಶ್ ರಾಣಾ ಮುನ್ನಡೆಸಲಿದ್ದಾರೆ. ಶ್ರೇಯಸ್ ಅಯ್ಯರ್ ಗಾಯಗೊಂಡಿರುವ ಕಾರಣ ನಿತೀಶ್‌ಗೆ ನಾಯಕತ್ವದ ಹೊಣೆ ದೊರೆತಿದೆ.

ಜಾನಿ ಬೆಸ್ಟೊ ಅವರು ಗಾಯದ ಕಾರಣ ಟೂರ್ನಿಯಿಂದ ಹೊರಬಿದ್ದಿರುವುದು ಪಂಜಾಬ್‌ಗೆ ದೊಡ್ಡ ಹಿನ್ನಡೆ ಉಂಟುಮಾಡಿದೆ. ಲಿಯಾಮ್ ಲಿವಿಂಗ್‌ಸ್ಟೋನ್, ಕಗಿಸೊ ರಬಾಡ ಅವರ ಅನುಪಸ್ಥಿತಿ ಕೂಡಾ ಮೊದಲ ಪಂದ್ಯದಲ್ಲಿ ಕಾಡಲಿದೆ.

ಇದರಿಂದ ಆಲ್‌ರೌಂಡರ್ ಸ್ಯಾಮ್ ಕರನ್ ಮೇಲಿನ ಹೊರೆ ಹೆಚ್ಚಿದೆ. ಬೆಸ್ಟೊ ಬದಲು ತಂಡವನ್ನು ಸೇರಿರುವ ಮ್ಯಾಥ್ಯೂ ಶಾರ್ಟ್ ಅವರು ಧವನ್ ಜತೆ ಇನಿಂಗ್ಸ್ ಆರಂಭಿಸುವ ಸಾಧ್ಯತೆಯಿದೆ.

ಕೆಕೆಆರ್ ತಂಡಕ್ಕೂ ಪ್ರಮುಖ ಆಟಗಾರರ ಅಲಭ್ಯತೆ ಕಾಡುತ್ತಿದೆ. ಬೆನ್ನುನೋವಿನ ಕಾರಣ ಶ್ರೇಯಸ್ ಅವರು ಇಡೀ ಟೂರ್ನಿಯಲ್ಲಿ ಆಡುವುದು ಅನುಮಾನ. ಬಾಂಗ್ಲಾದೇಶದ ಶಕೀಲ್ ಅಲ್ ಹಸನ್ ಮತ್ತು ಲಿಟನ್ ದಾಸ್ ಕೂಡಾ ಶನಿವಾರದ ಪಂದ್ಯದಲ್ಲಿ ಆಡುತ್ತಿಲ್ಲ.

ಪಂದ್ಯ ಆರಂಭ: ಮಧ್ಯಾಹ್ನ 3.30

ಪಂಜಾಬ್ ಕಿಂಗ್ಸ್ ತಂಡದ ಸ್ಯಾಮ್ ಕರನ್ –ಪಿಟಿಐ ಚಿತ್ರ

ಬ್ಯಾಡ್ಮಿಂಟನ್: ನಾಲ್ಕರಘಟ್ಟಕ್ಕೆ ಸಿಂಧು

ಪಿ.ವಿ.ಸಿಂಧು

ಮ್ಯಾಡ್ರಿಡ್, ಸ್ಪೇನ್: ಚುರುಕಿನ ಆಟವಾಡಿದ ಭಾರತದ ಪಿ.ವಿ. ಸಿಂಧು ಅವರು ಮ್ಯಾಡ್ರಿಡ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು. ಆದರೆ ಕಿದಂಬಿ ಶ್ರೀಕಾಂತ್ ನಿರಾಶೆ ಅನುಭವಿಸಿದರು.

ಶುಕ್ರವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಹೈದರಾಬಾದ್‌ನ ಆಟಗಾರ್ತಿ 21-14, 21-17 ರಲ್ಲಿ ಡೆನ್ಮಾರ್ಕ್‌ನ ಮಿಯಾ ಬ್ಲಿಕ್‌ಫೆಲ್ಟ್ ಅವರನ್ನು ಮಣಿಸಿದರು.

ಇಲ್ಲಿ ಎರಡನೇ ಶ್ರೇಯಾಂಕ ಪಡೆದಿರುವ ಅವರು 40 ನಿಮಿಷಗಳಲ್ಲಿ ಪಂದ್ಯ ತಮ್ಮದಾಗಿಸಿಕೊಂಡರು. 27 ವರ್ಷದ ಸಿಂಧು ಈ ವರ್ಷದಲ್ಲಿ ತಾವಾಡಿದ ಟೂರ್ನಿಗಳಲ್ಲಿ ನಾಲ್ಕರಘಟ್ಟ ಪ್ರವೇಶಿಸಿದ್ದು ಇದೇ ಮೊದಲು.

ಶನಿವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ಅವರು ಸಿಂಗಪುರದ ಯಿಯೊ ಜಿಯಾ ಮಿನ್ ವಿರುದ್ಧ ಪೈಪೋಟಿ ನಡೆಸುವರು.

ಶ್ರೀಕಾಂತ್ ಪರಾಭವ: ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಶ್ರೀಕಾಂತ್ 18-21, 15-21 ರಲ್ಲಿ ಅಗ್ರಶ್ರೇಯಾಂಕದ ಆಟಗಾರ ಜಪಾನ್‌ನ ಕೆಂಟಾ ನಿಶಿಮೊಟೊ ಎದುರು ಪರಾಭವಗೊಂಡರು.

ಮೊದಲ ಗೇಮ್‌ನಲ್ಲಿ ಎದುರಾಳಿಗೆ ಪ್ರಬಲ ಪೈಪೋಟಿ ನೀಡಿದ ಶ್ರೀಕಾಂತ್, ಎರಡನೇ ಗೇಮ್‌ನಲ್ಲಿ ಸಾಕಷ್ಟು ಸ್ವಯಂಕೃತ ತಪ್ಪುಗಳನ್ನು ಮಾಡಿದರು.

ಕ್ರೀಡೆ ಇಂದಿಗೂ ಪಠ್ಯೇತರ: ಕೊಹ್ಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಲ್ಲಿಯೂ ಇತ್ತೀಚಿನ ವರ್ಷಗಳಲ್ಲಿ ಕ್ರೀಡಾಪಟುಗಳು ಉತ್ತಮ ಸಾಧನೆ ಮಾಡುತ್ತಿದ್ದಾರೆ. ಆದರೂ ಇವತ್ತಿಗೂ ಕ್ರೀಡೆಯು ಪಠ್ಯೇತರ ಚಟುವಟಿಕೆಯಾಗಿಯೇ ಪರಿಗಣಿತವಾಗುತ್ತಿದೆ. ಪಾಲಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಾರೆ ಎಂದು ಕ್ರಿಕೆಟಿಗ ವಿರಾಟ್ ಕೊಹ್ಲಿ ಹೇಳಿದರು.

ಶುಕ್ರವಾರ ಪೂಮಾ ಸಂಸ್ಥೆಯು ಏರ್ಪಡಿಸಿದ್ದ 'ಲೆಟ್ ದೇರ್ ಬಿ ಸ್ಪೋರ್ಟ್ಸ್' ಕಾನ್‌ಕ್ಲೇವ್‌ನಲ್ಲಿ ಅವರು ಮಾತನಾಡಿದರು.

'ಮಕ್ಕಳು ಕೂಡ ಇಲ್ಲಿ ಎಚ್ಚರ ವಹಿಸಬೇಕು. ಕ್ರೀಡೆಯಲ್ಲಿ ಭವಿಷ್ಯ ರೂಪಿಸಿಕೊಳ್ಳುವುದು ಸವಾಲಿನ ಕೆಲಸ. ಒಂದೊಮ್ಮೆ ಕ್ರೀಡಾಪಟುಗಳಾಗಿ ರೂಪುಗಳ್ಳುವಲ್ಲಿ ಸಾಧ್ಯವಾಗುವುದಿಲ್ಲವೆಂದು ತಮಗೇ ಅನಿಸಿದಾಗ ಮಕ್ಕಳು ಓದಿನ ಮೇಲೆ ಗಮನವನ್ನು ಸಂಪೂರ್ಣ ಕೇಂದ್ರಿಕರಿಸಬೇಕು' ಎಂದರು.

ಈ ಸಂದರ್ಭದಲ್ಲಿ ಹಾಜರಿದ್ದ ಭಾರತ ಫುಟ್‌ಬಾಲ್ ತಂಡದ ನಾಯಕ ಸುನೀಲ್ ಚೆಟ್ರಿ, 'ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಧ್ಯವಿದೆ. ಆಟವಾಡುವಾಗ ತ್ವರಿತ ನಿರ್ಧಾರಗಳನ್ನು ಕೈಗೊಳ್ಳುವ ಗುಣ ಬೆಳೆಸಿಕೊಳ್ಳುತ್ತೇವೆ. ಇದು ಜೀವನದ ಎಲ್ಲ ಹಂತಗಳಲ್ಲಿಯೂ ಉಪಯುಕ್ತವಾಗುತ್ತದೆ' ಎಂದರು.

ಪೂಮಾ ಇಂಡಿಯಾ ಮತ್ತು ಆಗ್ನೇಯ ಏಷ್ಯಾದ ವ್ಯವಸ್ಥಾಪಕ ನಿರ್ದೇಶಕ ಅಭಿಷೇಕ್ ಗಂಗೂಲಿ ಮತ್ತಿತರರು ಹಾಜರಿದ್ದರು.

ಸುನೀಲ್ ಚೆಟ್ರಿ ಹಾಗೂ ಕ್ರಿಕೆಟಿಗ ವಿರಾಟ್ ಕೊಹ್ಲಿ –ಪ್ರಜಾವಾಣಿ ಚಿತ್ರ

ಎಸ್‌ಎಐ ತನಿಖಾ ಸಮಿತಿ ನೇಮಕ

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿರುವ ಭಾರತೀಯ ಕ್ರೀಡಾ ಪ್ರಾಧಿಕಾರದ ಡಿಪ್ಲೊಮಾ ಬಾಲಕಿಯರ ಹಾಸ್ಟೆಲ್‌ನಲ್ಲಿ ನಡೆದಿದೆ ಎನ್ನಲಾದ ಅಶಿಸ್ತಿನ ಪ್ರಕರಣದ ಬಗ್ಗೆ ಆಂತರಿಕ ತನಿಖೆಗೆ ಪ್ರಾಧಿಕಾರವು ಸಮಿತಿಯೊಂದನ್ನು ನೇಮಕ ಮಾಡಿದೆ.

'ಎಸ್‌ಎಐ ಹಾಸ್ಟೆಲ್‌ನಲ್ಲಿ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿನಿಯೊಬ್ಬಳು ಮತ್ತೊಬ್ಬಳ ವಿಡಿಯೊ ಸೆರೆಹಿಡಿದಿರುವ ಆರೋಪ ಕೇಳಿಬಂದಿತ್ತು. ಈ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ನಿರ್ದೇಶಿಸಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

'ಮಾರ್ಚ್ 28 ರಂದು ನಡೆದ ಘಟನೆ ಬಗ್ಗೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಆರೋಪ ಎದುರಿಸುತ್ತಿರುವ ವಿದ್ಯಾರ್ಥಿನಿಯನ್ನು ಅಮಾನತು ಮಾಡಲಾಗಿದೆ' ಎಂದಿದೆ.

ಫುಟ್‌ಬಾಲ್: ಕರ್ನಾಟಕಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಂದಾಣಿಕೆಯ ಆಟವಾಡಿದ ಕರ್ನಾಟಕ ತಂಡದವರು 27ನೇ ಸೀನಿಯರ್ ಮಹಿಳೆಯರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವು ಸಾಧಿಸಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಆತಿಥೇಯ ತಂಡ 3–1 ಗೋಲುಗಳಿಂದ ಅಸ್ಸಾಂ ತಂಡವನ್ನು ಮಣಿಸಿತು.

ಮೈತ್ರೇಯಿ ಪಾಲಸಮುದ್ರಂ ಅವರು 9ನೇ ನಿಮಿಷದಲ್ಲಿ ಕರ್ನಾಟಕದ ಗೋಲಿನ ಖಾತೆ ತೆರೆದರೆ, 13ನೇ ನಿಮಿಷದಲ್ಲಿ ಸೋನಿಯಾ ಅವರು ಮುನ್ನಡೆ ಹೆಚ್ಚಿಸಿದರು. ಇನ್ನೊಂದು ಗೋಲನ್ನು ಸಂಜಿತಾ ನಿರೋಲಾ (48ನೇ ನಿ.) ಎರಡನೇ ಅವಧಿಯಲ್ಲಿ ತಂದುಕೊಟ್ಟರು.

ಅಸ್ಸಾಂ ತಂಡದ ಏಕೈಕ ಗೋಲನ್ನು ಯಾಂಗೊಜಾಮ್ ಕಿರಣ್ ಬಾಲಾ ಚಾನು 87ನೇ ನಿಮಿಷದಲ್ಲಿ ಗಳಿಸಿದರು.

ಖುಷ್ಬೂ ಸರೋಜ್ ಹ್ಯಾಟ್ರಿಕ್ ಸಾಧನೆ : ಬೆಳಿಗ್ಗೆ ನಡೆದ ಪಂದ್ಯದಲ್ಲಿ ಗುಜರಾತ್ 3-0 ಗೋಲುಗಳಿಂದ ಬಿಹಾರ ತಂಡವನ್ನು ಮಣಿಸಿತು. ವಿಜಯಿ ತಂಡದ ಖುಷ್ಬೂ ಸರೋಜ್, ಟೂರ್ನಿಯ ಮೊದಲ ಹ್ಯಾಟ್ರಿಕ್ ಸಾಧನೆ ಮಾಡಿದರು. ಅವರು 40, 50 ಮತ್ತು 66ನೇ ನಿಮಿಷಗಳಲ್ಲಿ ಗೋಲು ಗಳಿಸಿದರು.

ಭಾನುವಾರ ನಡೆಯಲಿರುವ ಪಂದ್ಯಗಳಲ್ಲಿ ಮಣಿಪುರ– ಗುಜರಾತ್ ಮತ್ತು ಅಸ್ಸಾಂ– ಬಿಹಾರ ತಂಡಗಳು ಎದುರಾಗಲಿವೆ.

ಮುಂಬೈ ರೇಸ್

ಐರನ್ ಏಜ್ ಗೆಲ್ಲುವ ನಿರೀಕ್ಷೆ

ಜವಾರೆ ಪೂನಾವಾಲ ಸ್ಪ್ರಿಂಟರ್ಸ್ ಚಾಲೆಂಜ್ ಶನಿವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಐರನ್ ಏಜ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 4:45ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಜಸ್ಟಿನ್ 2, ಜೆರುಸಲೆಮ್ 8, ಗ್ಯಾಂಗ್‌ಸ್ಟರ್ 4
2ನೇ ರೇಸ್: ಅಟಾಶ್ 1, ಕರೀನ 8, ಫ್ಯಾನ್ಸಿ ನ್ಯಾನ್ಸಿ 10
3ನೇ ರೇಸ್: ಡೇಂಜರಸ್ 1, ಇಟ್ಸ್‌ಮೈಟೈಮ್ 7, ಚಾರ್ಲಿ 3
4ನೇ ರೇಸ್: ಸೀ ದಿ ಸನ್ 5, ದಿ ಗಾಡ್‌ಫಾದರ್ 6, ಬಿಲೀವ್ 1
5ನೇ ರೇಸ್: ಮೊಯಿಟೊ 2, ಗೋಲ್ಡನ್ ನೀಲ್ 1, ಯುಕಾನ್ 5
6ನೇ ರೇಸ್: ಐರನ್ ಏಜ್ 1, ಈಸ್‌ನಾಟ್ ಶೀ ಬ್ಯೂಟಿಫುಲ್ 6, ಲಿಯೋಪಾರ್ಡ್ ರಾಕ್ 3
7ನೇ ರೇಸ್: ಸೂಪರ್‌ಇಂಪೋಸ್ 1, ಷಾಂಪೇನ್ ಸ್ಟೈಲ್ 2, ಚಾರ್ಮಿಂಗ್ ಸ್ಟಾರ್ 3

ಉತ್ತಮ ಬೆಟ್: ಡೇಂಜರಸ್

ಜಾಕ್‌ಪಾಟ್ 3,4,5,6,7   ಟ್ರಿಬಲ್ 4,5,6

ಹಾಕಿ: ಕುಲ್ಲೇಟಿರ ತಂಡಕ್ಕೆ ಭರ್ಜರಿ ಜಯ

ನಾಪೋಕ್ಲು (ಕೊಡಗು): ಕುಲ್ಲೇಟಿರ ತಂಡದವರು ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಶುಕ್ರವಾರದ ಪಂದ್ಯದಲ್ಲಿ 6–0 ಗೋಲುಗಳಿಂದ ಕರ್ತಮಾಡ ತಂಡದವರ ವಿರುದ್ಧ ಭರ್ಜರಿ ಜಯ ಸಾಧಿಸಿದರು.

ಸಮೀಪದ ಚೆರಿಯ ಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮಂಡೇಡ ತಂಡದವರು 1-0ರಿಂದ ಕುಂದತ್ ಮಾಳೇಟಿರ (ಕುಕ್ಕುಲೂರು) ತಂಡದವರ ವಿರುದ್ಧ ರೋಚಕ ಜಯ ಸಾಧಿಸಿದರೆ, ಮುಕ್ಕಾಟಿರ(-ಪುಲಿಕೋಟು) 4-0ರಲ್ಲಿ ಕೋಡಿರ ತಂಡದವರನ್ನು ಮಣಿಸಿದರು.

ಚೌರೀರ (ಹೊದ್ದೂರು) 3-0 ರಲ್ಲಿ ನೆರವಂಡ ವಿರುದ್ಧ, ಅಲ್ಲಂಡ 5-3 ರಲ್ಲಿ ಚೆರಿಯಪಂಡ ವಿರುದ್ಧ, ಮುರುವಂಡ 3-0 ರಲ್ಲಿ ಚೋಯಮಾಡಂಡ ತಂಡದ ವಿರುದ್ಧ, ಮಾರ್ಚಂಡ 5-2 ರಲ್ಲಿ ಚೆರುವಾಳಂಡ ವಿರುದ್ಧ, ಐನಂಡ 4-2 ರಲ್ಲಿ ಪರದಂಡ ವಿರುದ್ಧ, ಮೇಕೇರಿರ 4-0ರಲ್ಲಿ ಪೊನ್ನಚೆಟ್ಟೀರ ವಿರುದ್ಧ ಗೆದ್ದವು.

ನೆಲ್ಲಮಕ್ಕಡ 4-0 ರಲ್ಲಿ ಮೂಕಳೇರ ವಿರುದ್ಧ, ಚೆಕ್ಕೇರ 3-0 ರಲ್ಲಿ ಉದಿಯಂಡ ವಿರುದ್ಧ, ಕೋದಂಡ 1-0ರಲ್ಲಿ ಚೌರೀರ(ಹೊದವಾಡ) ವಿರುದ್ಧ, ಇಟ್ಟೀರ3-0 ರಲ್ಲಿ ಮಲ್ಲಮಾಡ ವಿರುದ್ಧ ಜಯ ಸಾಧಿಸಿದವು.

ಲೈಂಗಿಕ ಸಮಸ್ಯೆಗೆ ವಿಶ್ವದ ನಂಬರ್ 1 ಪರಿಹಾರ

ಶಿಶ್ನ ಚಿಕ್ಕಾದಾಗಿದೆಯೆ?, ವಕ್ರವಾಗಿದೆಯೆ? ಸೆಕ್ಸ ಸಮಯ ಹೆಚ್ಚಿಸಬೇಕೆ? ಚಿಂತಿಸಬೇಡಿ. ವಿಶ್ವದ ನಂಬರ 1 ಆಯುರ್ವೇದಿಕ ಔಷಧಿಯಿಂದ ಶಿಶ್ನದ ಗಾತ್ರ 7 ರಿಂದ 8 ಇಂಚು ಉದ್ದದಪ್ಪ ಹಾಗೂ ಲೈಂಗಿಕ ಸಮಯವನ್ನು ಹೆಚ್ಚಿಸಿಕೊಳ್ಳಿ. ಯಾವುದೇ ಅಡ್ಡಪರಿಣಾಮ ಇಲ್ಲ, ಲಕ್ಷಾಂತರ ಮಂದಿ ಸಂತುಷ್ಟರಾಗಿದ್ದಾರೆ.
ಸಂಪರ್ಕಿಸಿ
02262676816

ಪ್ರಜಾವಾಣಿ ಶನಿವಾರ • ಏಪ್ರಿಲ್ 1, 2023

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

RERA APPROVED NO.PRM/KA/RERA/1254/464/PR/191107/002991

AASTHA Properties

₹ 599 Sq.ft

RERA & DTCP APPROVED Sites

ದೇವನಹಳ್ಳಿ

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ

ಕೇವಲ 30 ನಿಮಿಷಗಳ ಪ್ರಯಾಣ

- 100% Legal Documents
- World Class Amenities
- Layout Plan Approved
- Govt. Department Approved

ನೋಂದಣಿಗೆ ಸಿದ್ಧವಾಗಿದೆ

ನಿರ್ಮಾಣಕ್ಕೆ ಸಿದ್ಧವಾಗಿದೆ

ಪ್ರತಿ ತಿಂಗಳು Rs. 4999*

ಹೂಡಿಕೆ ಮಾಡಿ ನಿವೇಶನ ನಿಮ್ಮದಾಗಿಸಿಕೊಳ್ಳಿ

ಸೈಟ್ ಭೇಟಿಗಾಗಿ ಕರೆ ಮಾಡಿ:

93411 18999

Available Dimensions 30x40 & ODD Sites

STP PROJECTS Trust is What We Build

Sri Thirumala Projects and Land Developers

www.srithirumalaprojects.com

Nisarga Home's

DC conversion

DC CONVERTED

ಫಾರಂ ಲ್ಯಾಂಡ್ ಸೈಟುಗಳು

NISARGA Residency

BMRDA APPROVAL

BMRDA ಅನುಮೋದನೆ ಆದ

ವಸತಿ ನಿವೇಶನಗಳು

750 ಎಕರೆ KHB ಲೇಔಟ್ ಹಿಂದೆ



Nandan Enclave A PLACE FOR PEACE

Nandan Enclave

BMICAPA

ಅನುಮೋದಿತ ನಿವೇಶನಗಳು

ಬಿಡದಿ

ಮೈಸೂರು ರಸ್ತೆ

ನೋಂದಣಿಗೆ ಸಿದ್ಧವಾಗಿದೆ | ನಿರ್ಮಾಣಕ್ಕೆ ಸಿದ್ಧವಾಗಿದೆ

ಸ್ಪಾಟ್ ಬುಕಿಂಗ್ ಆಫರ್

5 ಗ್ರಾಂ ಚಿನ್ನದ ನಾಣ್ಯ ಉಚಿತ

ಸೈಟು ನೋಡಲು ಉಚಿತ ಭೇಟಿಗಾಗಿ ಕರೆಮಾಡಿ

8546 8546 99

ಶರಣ್ಯ ಫಾರ್ಮ್ಸ್ Sharanya Farms Create your own Sunshine

www.sharanyafarms.com

AGRICULTURAL

FARM LAND

ಫಾರಂ ಲ್ಯಾಂಡ್ ಖರೀದಿಸಿ, ನಿರ್ವಹಣೆ ನಮ್ಮದು, ಲಾಭ ನಿಮ್ಮದು

ಶರಣ್ಯ ವೀಕೆಂಡ್ ವಿಲೇಜ್

ಶ್ರವಣಬೆಳಗೊಳ-ಕೆ.ಆರ್. ಪೇಟೆ ರಸ್ತೆ

ಫಾರ್ಮ್‌ಹೌಸ್ ಕಾಟೇಜ್‌ಗಳನ್ನು ನಿರ್ಮಿಸಲು ಉತ್ತಮ ಸ್ಥಳ

ಸೌಲಭ್ಯಗಳು: ಕ್ರೀಡಾ ಮತ್ತು ಫಿಟ್ನೆಸ್, ಹೊರಾಂಗಣ ಜಿಮ್, ಕ್ಲಬ್ ಹೌಸ್, ಸ್ವಿಮಿಂಗ್ ಪುಲ್, ಕಾಟೇಜ್‌ಗಳು, ಮಕ್ಕಳ ಆಟದ ಮೈದಾನ, ಧ್ಯಾನ ಕೇಂದ್ರ, ದೇವಾಲಯ, ವಿದ್ಯುತ್, ಪ್ರವೇಶ ದ್ವಾರ, 24/7 ಸೆಕ್ಯೂರಿಟಿ, ಇನ್ನೂ ಮುಂತಾದವು

0% EMI AVAILABLE

WEEKEND HOLIDAY IT PROFESSIONALS RETIREMENT HOME

ಫಾರಂ ಲ್ಯಾಂಡ್ ಖರೀದಿಸಿ, ನಿರ್ವಹಣೆ ನಮ್ಮದು, ಲಾಭ ನಿಮ್ಮದು

ಗಿಡ ನೆಡುವುದು, ಬೆಳೆಸುವುದು, ಗೊಬ್ಬರ, ನೀರು ಹಾಕುವುದು ಹಾಗೂ ಭದ್ರತೆ ನಮ್ಮ ಕೆಲಸ, ಆದಾಯವೂ ನಿಮ್ಮದೇ, ಭೂಮಿಯೂ ನಿಮ್ಮದೇ ಮತ್ತೇನು ಬೇಕು ಹೇಳಿ? ನಿವೃತ್ತಿಯ ಸಮಯದಲ್ಲಿ ಇದಕ್ಕಿಂತ ಒಳ್ಳೆಯ ಸುವರ್ಣಾವಕಾಶವಿಲ್ಲ, ಲಾಭದೊಂದಿಗೆ ನಿಸರ್ಗದಲ್ಲಿ ಹಲವು ಸೌಲಭ್ಯಗಳನ್ನು ಪಡೆದುಕೊಂಡು ನಿಮ್ಮದಿಯ ಜೀವನ ನಿಮ್ಮದಾಗಿಸಿಕೊಳ್ಳಿ. ನೀವು ಈ ಫಾರಂ ಲ್ಯಾಂಡಿನಲ್ಲಿ ಬಂಡವಾಳ ಹೂಡಿಕೆ ಮಾಡಿದರೆ ಸಾಕು. ಭೂಮಿ ಮತ್ತು ಆದಾಯ ಎರಡು ನಿಮ್ಮದಾಗುತ್ತದೆ.

ಶರಣ್ಯ ಹಿಲ್‌ವ್ಯೂ ಫಾರ್ಮ್ಸ್

ಮೈಸೂರು-ಮಳವಳ್ಳಿ ರಸ್ತೆ

ಪ್ಲಾಟ್‌ಗಳ ಅಳತೆ 5.5 ರಿಂದ 10 ಗುಂಟೆಗಳು ಲಭ್ಯವಿದೆ.

ಹೆಚ್ಚಿನ ವಿವರಗಳಿಗೆ ಕರೆ ಮಾಡಿ: 70 2626 2233

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

KANAKAPURA ROAD
BMRDA APPROVED PREMIUM
RESIDENTIAL Sites
Bank Loan Avbl Up to 90%
Ready for Registration & Construction
Starting From Rs.1749 Per Sqft
PRM/KA/RERA/1251/310/AG/201102/002105
MH PROMOTERS 95138 50029
www.mhpromoters.in

ಸೈಟುಗಳು ಮಾರಾಟಕ್ಕಿವೆ
ಚಿಕ್ಕಬಾಣಾವರದಿಂದ 10 ನಿಮಿಷ ಅಂತರದಲ್ಲಿದೆ
20x30 Rs.6 Lakhs
ಈಗ ಕೇವಲ 50% ಪಾವತಿಸಿ
ಸೈಟ್ ನೊಂದಣಿ ಮಾಡಿಸಿಕೊಳ್ಳಿ ಮತ್ತು
ಉಳಿಕೆ ಹಣವನ್ನು EMI ಮೂಲಕ ಪಾವತಿಸಿ
ಸಂಪರ್ಕಿಸಿ: 8880660099

PRM/KA/RERA/1251/310/PR/150223/005721
DS-MAX SAMYAK
BOOK YOUR DREAM HOME IN BANGALORE'S MOST HAPPENING LOCATION
MYSORE ROAD
NEAR R R DENTAL COLLEGE
LUXURIOUS 2 & 3-BHK APARTMENTS
Rs. 37.45 - 64.04 Lacs*
(Rs. 3,500 / Sq. Ft.)*
BDA APPROVED

*T & C Apply
8880 003 003
www.dsmaxproperties.com

PREMIUM LUXURY VILLAS
4BHK Villas @ Electronic City, Phase - 1

Ready to Use Clubhouse, Indoor - Outdoor Games & Other Facilities
CLOSE TO ALL COMFORTS OF LIFE
- 5 mins.from Infosys
- 3 mins. Apollo & Supermarkets
- 2 mins.Treamis World School
- 10 mins.from Narayana Hrudayalaya

NOW BOOKING OPEN FOR PHASE -2
RERA Reg.No : PRM/KA/RERA/1251/308/PR/211222/005548
7349242134 / 9972623278
CREDAI BENGALURU sales@vrrbuilders.com www.vrrbuilders.com
Scan QR CODE

REAL ESTATE SELLING

Agricultural Land

Out-Station

AGRICULTURAL LAND For Sale 6 Acres 22 Guntas Madhugiri Taluk 4 Kms from Byrenahalli Cross Clear Title with Hudbust Borewell Barbed wire Fence with Two RCC House Units. Contact Owner : 9901955551

Commercial Building

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram, Bangalore. Contact: 9663001940.

Commerical

Jayanagar

COMMERCIAL PROPERTY Jayanagar, Tilak`Nagar Main Road 36X60 North facing with house for Sale 25,000/-per sft. final, KRISHNA -9845059328.

JAYANAGAR 9TH Block Commercial PG Building 40x70 corner 5-floor Rental income 5.50Lakhs, price:9.50cr. Contact. 9945079777

BTM Layout

COMMERCIAL BTM Layout 2nd Stage Prime Location 40x61 old House Sale Contact Umesh: 9845069739 9380613718

Flat

Mahalakshmi Layout

3 BHK Flat Ready to Occupy Semi Furnished 2 Flats Available 1km Iskcon Temple, Metro 1.2Cr Negotiable: 9845014364/ 9513999423

Ulsoor

READY TO MOVE 2 BHK Semi-Furnished Flats For Sale Near Ulsoor Metro-Station Call: 9353077738 9739460476

House

Vidyaranyapura

DUPLEX HOUSE For Sale 60X40. North Facing 4 BHK BEL Layout vidyaranyapura Contact: 9902800702

Kengeri

READY TO Occupy Furnished Houses 2BHK 3Nos.1BHK 2Nos in`Bande Matt`Kengeri Satallite Town.`2year old. Car-parking, Borewell Cauvery`Lift: 9448106343.

Industrial & Factory

Hoskote

HOSKOTE INDUSTRIAL (KIADB) Land 50,000 Sqft. with RCC Building for SALE, Contact: Owner 9945062829

Sites

Anjanapura

SALE 30X40 Anjanapura 5th G Block 63 lakh also 40x60 2nd Block Commercial 1.80Cr and 20x30 6th Block 33 lakh 9945373839, 9620041313

Intl Airport Road

"PREMIUM PLOTS" for-Sale Gated Community with World-Class Amenities RERA Approved All Leading Banks funding, Ready-to Registration, near.Nandi Hills,Bang on State Highway. Contact: 9060185719/ 9060609166

J P Nagar

SALE 40X60 WEST FACING BDA APPROVED JP NAGAR 8th PHASE GOOD LOCATION RATE 8500/- NEGOTIABLE 9620041313, 9945373839

SALE 30x40 East Facing JP Nagar 9th phase 4th "A" Block 8500/- sqft also 30x40 South 7500/- Near Kanakapura Road 9945373839, 9620041313

J.P.NAGAR 6TH Phase K.R Layout 30x40, Plot For Sale Good Location Contact: 9845200099/ 9900107499

Kanakapura Road

10000 SQFT Residential Converted 30ft Road Approch Land, Rs. 3200/ Sqft Sale at Adjacent to Kaglipura Kanakapura Road Bangalore- 82 9342552428

Multiple Locations

PRE LAUNCHING SAI MERIDIAN Premium Sites for Sale BBMP limits A Khata, Yelahanka, Kogilu to Kannur Main Road (New Airport Road) close to Reva University & Delhi Public School, Ready for Registration and Bank loan available. Call: 9900008338, 9738150363

Out-Station

30X40 WEST facing Chikkabalapura, Rainbow residency, Gated community, from ISHA, 5 minutes walkable. Phone 9591959148.

Vishweshwariah Layout

AVAILABLE 30X40 BDA Site Vishweshwaraiah Layout 4th Block WF Good Location Near 100ft Road Genuine Buyers: 9743381719

SALE 30X40 VISHVESWARAIAH LAYOUT 4th Block South Facing 73 lakh Negotiable. 9945373839, 9620041313

BDA VISHWESHWARAYA Layout, 6th Block, Site #817, 40x60 NF, 8000/- Sft, Direct Owner. 9945266212, 7411101116.

REAL ESTATE BUYING

Sites

Anjanapura

WANTED BDA SITE ANY MEASUREMENT Anjanapura, Banashankari 6th Stage, JP Nagar 8th/ 9th Phase, Narayana Nagar, CONTACT: 9845298419

Banashankari

BDA SITESWANTED Anjanapura, Arkhavathy Banshankari 6th Stg, Vishweswaraiah Kempegowda Any BDA Layout Call: 9845062822, 8660751654

Multiple Locations

ANJANAPURA- ARKAVATHI, Banashankari 6th Stage, Vishweswaraiah Layout, Kempegowda Layout. Any BDA`Sites Wanted. Contact: SAPTHAGIRI. 9900268073, 9448068073.

BUILDERS ESSENTIAL

Water Proofing

'WE FIX' LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

PROPERTY
To Place your Classified Ads Contact
9845114560

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

1500 SFT office space partially furnished available for rent on 1st floor. Quiet area ideal for small office with 25 -30 persons. Brokers Pl excuse. Contact 9845012704

House

J.P.NAGAR DOLLARS Colony, Fully Furnished House For Rent. 5 Bedroom, 4 Car-parking. Vastu. 9945114693, 9632852947.

MATRIMONIAL

Brides Wanted

Bride Required Others

RET NRI active healthy in his 60s seeking LT Relationship with widow/divorcee. No bar. Send full recent pictures, details kngowda65@gmail.com

PERSONAL

Change of Name

NAME DECLARATION
I, **PRATHIMA NAIK,** age 39 years, residing at Flat No. B136, GRC Brundhavan Apartment, ITI Layout, Opp to RR Nagar Gate, Nayandahalli, Bengaluru-560039 hereby by declare that **PRATIMA SHYAMSUNDAR** and **PRATHIMA NAIK** both names belong to me only, vide affidavit dated 30.03.2023 before Notary Thulasikrishna, Bengaluru.

I, SURESH KUMAR, S/O MOHANLALJI R/a#64, Sannidhi Road, Basavanagudi, Bengaluru- 560004, have changed name to SURESH KUMAR, S/O MOHANLAL vide affidavit 23.03.2023 before Notary Hemalatha, Bangalore.

I, GIRISH GOWDA, residing at Bengaluru-97 have changed my name as GIRISH GOWDA N, vide affidavit dated 31/03/2023 before Notary P.C.Ramaiah, Bengaluru

DH Classifieds
More value, more impact
DECCAN HERALD
ಪ್ರಜಾವಾಣಿ

BOOK YOUR CLASSIFIED ADVERTISEMENT @ ANY OF OUR ADVERTISING AGENCIES

CENTRAL

SESHADRIPURAM: Vizdom Outlooks: 9845021250 | **CHICKPET:** Nagaraj Ads: 9448533327 | **GANDHI NAGAR :** Meghana Advertising : 9845494426 | United Ads : 9341233030 | Mpee Gee : 9880768108 | **KUMARA PARK:** Bronze Communications: 23310081 | Avanti Communications: 22205998 | **FRAZER TOWN:** Walk-Advertising: 9844001541 | **COX TOWN:** D. R. Associates: 9845120432 | Creative Eye: 9845014592 | **DICKENSON ROAD:** Manipal Advertising: 9738388316 | **VASANTH NAGAR :** Batha Advertising : 22269106 | Ad Point: 9845176901 | **HENNUR :** Jeevitha Creative Communications: 9886280456 | **KALYAN NAGAR:** L K Advertising : 8217484780 | **KORAMANGALA:** 365 Ads: 9343703463 | Pulse Advertising: 8197870039 | **INDIRANAGAR :** Kshama Communications: 9845067714 | Trinity Advertising: 9945571777 | Centigrade : 9902251683 | **St. JOHN'S ROAD:** Graphic Arts : 9844073437 | **JAI BHARATH NAGAR :** L C Communications : 9740324334 | **K R PURAM :** Sri Maruthi : 70195 98720 | **BELLANDUR:** Vivek Avenues: 98450 11892

SOUTH

JAYANAGAR : Redd Arrow: 26655705 | Spectrum Inc: 26761220 | Shastry Ventures : 9880660308 | Sneha Advertisers: 9844076925 | Surabhi Ads : 99455 87574 | **J. P. NAGAR :** Raksheenda Publicity : 9845064970 | **HANUMANTH NAGAR:** Avena Media: 9986934449 | OM Shree Ads: 94485 93438 | **BANASHANKARI :** Popular Enterprises : 9448672817 | Akpha Publicity : 26764536 | Popular Advertising: 9035775105 | Anand Communications : 9845511145 | | Sampoorna Advertising: 9986190744 | Reality Advertisers: 9742013378 | D.G Publicities : 9243402739 | **K. R. ROAD:** Streamline: 9880490672 | **YEDIYUR :** Ankit Communications: 9448001951 | **GANDHI BAZAAR:** Allied Publicity: 9343772964 | Ad Venture : 9886195457 | **CHAMARAJPET :** Bharathi Ads: 41503131 | **V.V Puram :** Nandana Ads : 9448493382 | **BASAVANAGUDI:** Pragathi Advertisers: 7353762673 | First Choice: 9845044148 | Cauvery Ads : 9886824737 | Subha Advertising: 9845533466 | MASS Designs: 9886287849 | Vinyas Advertising : 9845048414 | **KANAKAPURA ROAD :** Sagar Advertisers 9964652358 | **SRINAGAR :** Raksha Advertising 9844574789 | **NAYANDANAHALLI :** Drishya 360 : 9886774482 | **UTTARAHALLI:** Golden Ads: 9844424877

NORTH

R T NAGAR : AD6 Advertising: 9008999919 | Smart Media: 9590518900 | Madhu Ads : 9945072007 | **BENSON TOWN :** | Surekha Advertisers: 9342233097| Rounqh Publicity: 9845172646 | **YELAHANKA:** Chandu Ads : 9880690007 | Suresh Ad Communications : 9902059333 | **MATHIKERE:** A.A.Associates: 23378382 | **VIDYARANYAPURA :** Balaram Advertisers: 9880598082 | **MALLESHWARAM:** Media Options: 8147024605 | Sparkles Network : 9663984711 | Roopa Advertisers: 9845288832 | Prakurthi Ads: 9148917339 | Madhyama : 9886981719 | Pochi Advertisers: 9449059015 | Ads 360: 9739991752 | Nesara Advertisers : 9845030087 | A. A. Advertising: 9481428108 | **THANISANDRA (Jakkur) :** Blueeye Communications : 8431419754 | 08035006966

WEST

RAJAJINAGAR : Chiya's Advertising: 9632288867 | Patil Graphics: 9880359470 | Sri Sainath Enterprises: 9845642185 | S. R. Advertising : 9845269729 | Adz Corner: 9886245268 | Garden City: 9844423886 | Vijaya Publicities (V.R.Opticians): 9845359345 | S.D.Enterprises: 9845500301 | **MAHALAKSHMI LAYOUT :** Peepal Ads: 7975560055 | **NAGARABHAVI :** Damam Advertising 9900158293 | Roopa Communications : 9880877599 | Yashaswi Ads : 9980697155 | Bhargav Enterprises: 9880177773 | Shree Enterprises: 9901076272 | Vibini Media: 9880004702 | **VIJAYA NAGAR :** Pragati Advertisers: 9845542727 | Trupty Advertisers: 9845046667 | Topcopy: 9901255400 | **BASAVESHWAR NAGAR :** Omkar Advertising : 9972099398 | Ambar Communications : 9986879230 | Pravasthi Advertising: 9448325268 | **PEENYA:** Indira Advertising : 9980314247 | Shrusti Media trove : 98456 58993 | Praanjala Creation: 9844364829 | **YESWANTHPUR :** CreActive : 9845133368

For more information contact: Ph: 45557160 | 161 | 162 | 163 | 164
Mobile: 9731810277 | 9901641752 | 9845114560 | 9886213331
E-mail: dhclassifieds@deccanherald.co.in

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

JOB OPPORTUNITIES

Marketing & Sales

TELECALLERS (FEMALE) BUSINESS EXECUTIVE (Male) with Good English, Computer Skills For Advertising Company Basveswarnagar: 9845411113

Teachers/ Professors

EAST WEST GROUP OF INSTITUTIONS

WE ARE HIRING

PRINCIPAL

PRE-PRIMARY, PRIMARY AND HIGH SCHOOL TEACHERS

Inviting applications from experienced, passionate and stimulating educators with the tools and mindset to face the 21st century challenges keeping the "NEP" in view.

WALK IN INTERVIEW

9 am to 2 pm with resume and latest passport size photo.

Attractive Salary

Good communication skills, digital knowledge application is preferred. Any Graduate with B.Ed / M.Ed, Montessori / Nursery Training can apply.

VENUE / DATE:

St. John's High School,
Vijayanagar: 1st April 2023
Contact: 080-2335 0035 email: stjohnshighschool2022@gmail.com

East West Public School,
Subramanyanagar: 2nd April 2023
Contact : 080-23322909 email: eastwestschool1978@gmail.com

EW-22319

CAMLIN ENGLISH SCHOOL 6th 'C' Main 4th Cross Hampinagar Bangalore-104. WANTED TEACHERS for the year 2023-24 B.Sc., B.Ed. (Maths Science) B.A., B.Ed. (English, Kannada, Hindi, Social) N.T.T. TCH/ D.Ed. P.E. Computer, Drawing. Contact /Apply. 080-23301363

DH DECCAN HERALD
To Place your ad in Deccan Herald & Prajavani Classifieds
For details contact :
9901641752 : 9886213331
9845114560 : 9731810277
080 - 45557163 / 164

PUBLIC NOTICE

PUBLIC NOTICE

Notice is hereby given to the public at large that I **Mr.Srinivas.A**, S/o **Mr.K.Aanadan,** Is agreed to purchase property bearing Site No.40, formed out of survey No.104/2, Situated at Horamavu Agara Village, K.R.Puram Hobli, Bangalore East Taluk, Bangalore, measuring 63.3 + 60/2 feet X 70 + 59.9/2 feet, total measuring 3990 Sq.ft., bounded on **East by** 30 feet road, **West by** private property, **North by** Site No.39, **South by** 40 feet road, from its owner Mr.Shathish Shinde S/o Mr.Dhasharath Rao Shinde, all persons having any claim right, title, interest, in or against by way of inheritance, mortgage, possession, sale, gift, lease, tenancy, lien, charges, trust or easement or otherwise whosoever are hereby required to make the same known to undersigned is residing at No.10, 1st Main Road, Opposite Corporation Community Hall, Subramanya Nagar, Srirampuram, Bangalore-560021 within 15 days from the date of hereof failing which the claim of such persons will be deemed to have been waived and/or abandoned or given up and the same shall not be entertained thereafter and sale shall be completed between the owners and me.

Mr.Srinivas.A, S/o Mr.K.Aanadan,
No.10, 1 st Main Road, Opposite Corporation Community Hall,Subramanya Nagar, Srirampuram, Bangalore-560021.
Mob: 7019577053/9844048305
Bangalore Date: 01-04-2023

WEEKEND CORNER

First Time in BINNY MILL GROUND Under Water Aquarium Tunnel

ರಾಷ್ಟ್ರೀಯ ಗ್ರಾಹಕರ ಮೇಳ

NATIONAL CONSUMER FAIR

Binny Mill Ground, Near ETA Mall, Tank Bund Road, Bengaluru-23

AQUA TUNNEL SHOW

Daily : 4pm - 9pm | Call : 8904727123

ನ್ಯಾಷನಲ್ ಸಿಲ್ಕ್ ಎಕ್ಸ್‌ಪೋ

ಪ್ರದರ್ಶನ ಮತ್ತು ಮಾರಾಟ

1 ರಿಂದ 9 ಏಪ್ರಿಲ್

ವಿವಾಹ ಮತ್ತು ಬೇಸಿಗೆ ವಿಶೇಷ

ಕೈಮಗ್ಗದ ಸಿಲ್ಕ್ ಮತ್ತು ಕಾಟನ್ ಸೀರೆ, ಡಿಸೈನರ್, ಎಥ್ನಿಕ್ ಮತ್ತು ವೆಸ್ಟರ್ನ ಉಡುಪು, ಫ್ಯಾಷನ್ ಜ್ಯುವೆಲ್ಲರಿ ಮತ್ತು ಇನ್ನೂ ಅನೇಕ

ಭಾಗವಹಿಸುವ ರಾಜ್ಯಗಳು

ಬಿಹಾರ್, ಅಸ್ಸಾಮ್, ಉತ್ತರ ಪ್ರದೇಶ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ರಾಜಸ್ಥಾನ, ಕರ್ನಾಟಕ, ತಮಿಳನಾಡು , ಪಂಜಾಬ್, ತೆಲಂಗಾಣ, ಒಡಿಶಾ , ಚತ್ತೀಸ್‌ಘಢ್, ಜಮ್ಮು&ಕಾಶ್ಮೀರ, ಆಂಧ್ರಪ್ರದೇಶ ಮತ್ತು ಇನ್ನಿತರ ರಾಜ್ಯಗಳು

ಸ್ಥಳ: ಶಿಲ್ಪಕಲಾ ಮಂಟಪ

9ನೇ ಕ್ರಾಸ್, ಜೆಪಿ ನಗರ, 3ನೇ ಫೇಸ್, ಬನ್ನೇರಘಟ್ಟ ಮುಖ್ಯ ರಸ್ತೆ, ಶಾಪರ್ಸ್ ಸ್ಟಾಪ್ ಎದುರು, ಜಯದೇವ ಆಸ್ಪತ್ರೆಯ ಸಮೀಪ, ಬೆಂಗಳೂರು

CONTACT - 9412258826 | ALL DEBIT & CREDIT CARDS ACCEPTED | ENTRY FREE

EDUCATION

To Place your Classified Ads Contact:
9845114560

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

PREMIUM VILLA PLOTS

13 ACRES CONSISTING OF 179 PLOTS

Available sizes : 1200 Sq.Ft. I 1500 Sq.Ft. I 2400 Sq.Ft.

Starting From ₹67.2 L

BEST OPPORTUNITY TO OWN A PLOT

Scan for Location

AMENITIES: Entrance Gate, Asphalted Roads, Jogging Track, Children's Play Area, Overhead Water Tank, Underground Electrical Lines, Water Lines, Sewerage Lines, STP Tank Parks, Storm Water Drains

OWN IT BEFORE EVERYONE

Marketing Partner
Aashrithaa Properties Pvt. Ltd.
#785/10, 2nd Floor, 14th Cross, Jayanagar 7th Block, K.R. Road, Bangalore.

For more details call:
7676 88 9999

◂ Book Your Matrimonial ▸

Classifieds Ad in Deccan Herald & Prajavani

@ 1875/-*
(Ad size: 3cmx5cm)

Conditions Apply*

Contact:
9731810277 | 9901641752 | 9845114560 | 9886213331
080- 45557163 / 164

PLATFORM 65 THE TRAIN RESTAURANT

PLATFORM 65
Multicuisine Train Restaurant

Introducing
PALLE PATANAM KODI PULAO
Only at PLATFORM65

Food Served by Toy Train

USING
PLATFORM 65 APP
Get Food Delivered @ your HOME

FLAT 25% OFF + COMPLIMENTARY DESSERT

USE CODE
PLATFORM65LOVE

NO PACKAGING COST | CASH ON DELIVERY | ZERO DELIVERY FEES

Happy HOUR
MONDAY TO THURSDAY 12:00 NOON TO 7:00 PM
FLAT 15% off ON DINING

ABOVE RELIANCE DIGITAL, BANNERGHATTA ROAD
4TH FLOOR, 75/B, WINDSOR F4, CHRIST UNIVERSITY, BENGALURU
9606488859, 9606488860 WWW.PLATFORM65.IN
10+ BRANCHES TELANGANA ANDHRA PRADESH KARNATAKA

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331



Grand Flea Market Presents
ದ ಸೋಕ್ (ಮಾರ್ಕೆಟ್)
THE SOUQ (MARKET)
Art, Craft, Handlooms & Lifestyle Exhibition
Date : 31st March 2023 to 9th April 2023
Timings : 11:00 AM to 7:00 PM
10 DAYS EXHIBITION
Art & Crafts | Handicrafts | Clothings | Fashion Accessories | Home Decore & More

Entry Free
The Cartoon Show
1st April 2023
5.30 PM - 6.30 PM
Venue : Karnataka Chitrakala Parishath Kumara Krupa Road Bengaluru

ದಿ ಪಪ್ಪೆಟ್ ಶೋ
THE PUPPET SHOW
Live Performance
2nd April 2023
5 PM to 6.30 PM
Venue
Karnataka Chitrakala Parishath
Kumara Krupa Road, Bengaluru.
Free Entry!

Entry Free!
ದಿ ಶಾಡೋ ಶೋ
The Shadow Show
Live Performance
Date: 8th April 2023
Timings: 5.30 PM - 6.30 PM
Venue
Karnataka Chitrakala Parishath
Kumara Krupa Road, Near Shivananda Circle Bengaluru

Entry Free
ಚೆಂಡಮೇಲಂ
ChendaMelam
Rhythm Of Drums
Date:9th April 2023 | Timings: 5 PM to 7 PM
Karnataka Chitrakala Parishath
Kumara Krupa Road, Bengaluru

Organized By
Grand Flea Market
For Details Contact
9036658774 / 6364685716
Karnataka Chitrakala Parishath
Kumara Krupa Road, Bengaluru
10 DAYS EXHIBITION | 100+ STALLS | LIVE PERFORMANCE | FREE ENTRY

MUZIGAL
Partner with India's Largest Music Education Company
INVITING
FRANCHISEE PARTNERS
ADVANTAGES
- Cash flow positive from very 1st month.
- Easy to manage, even for first time entrepreneurs.

Together let's revolutionize the music education in India

Beginner & intermediate performance driven music classes for all age groups

Interested in a Life changing Franchisee Business ?
Are you raring to give yourself a chance to own a profitable business?
Are you passionate about music?
Are you willing to make a positive impact on the community?
Investment range of 26-36 lakhs based on size of academy

Connect with us to bring the GOLD STANDARD of Music education to your Locality
Scan to Connect
hardik.shah@muzigal.com 96866 82295 / 96863 28282
Muzigal Sarjapur Flagship Academy
No. 33/2, 2nd Floor, Sarjapur - Marathahalli Road, Doddakannelli, Bengaluru - 560035.

II VISHWA VIDYAPEETH II
GROUP OF SCHOOLS
Giving children a VISION to see every CHALLENGE as an OPPORTUNITY

Aditi Simha wins a very unique laurel for VVP!! The crown of Vishwa Vidyapeeth has acquired yet another feather of unique achievement.
A very gifted student of Vishwa Vidyapeeth, Aditi Simha, won the Gold Medal in the Bhagavad Geeta memorization competition, at the national level. The competition was held at Kashi Banaras Hindu University, where she has hoisted the flag of Vishwa Vidyapeeth, at the 60th National All India Sanskrit Competition, which was organized by the Central Sanskrit University New Delhi.

VIKRAMASHILA CAMPUS, YELAHANKA

TAKSHASHILA CAMPUS, YELAHANKA

MAGADHA CAMPUS, VARTHUR

ADMISSION OPEN
CLASS 11 WITH INTEGRATED COACHING FOR JEE/NEET/CET
CLASS 1 TO 10 ICSE / CBSE / IGCSE
PREPRIMARY – PLAYGROUP TO UKG

Winner of High Happiness Quotient Award 2022 from Education World
Yelahanka: 7022009731 / Varthur: 7022009757
www.vishwavidyapeeth.edu.in